ಕನ್ನಡ ಭಾಷಾ ಪಠ್ಯ

# ಕಲಾ ಸೌರಭ – ೨

ಬಿ.ಎ.

(ದ್ವಿತೀಯ ಸೆಮಿಸ್ಟರ್)


ಪ್ರಧಾನ ಸಂಪಾದಕರು

ಡಾ. ಪ್ರಶಾಂತ್ ಜಿ. ನಾಯಕ

ಪರಿಶೀಲಕರು

ಡಾ. ಬೆಳಕೆರೆ ಲಿಂಗರಾಜಯ್ಯ

ಸಂಪಾದಕರು

ಡಾ. ಎಚ್.ಕೆ. ಮಳಲೀಗೌಡ

ಡಾ. ಸತೀಶ್. ಎ.ಪಿ.

ಡಾ. ಡಿ. ಮುರಳೀಧರ



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

KANNADA BHASHA PATHYA – KALA  SOURABHA- 2:

A Prescribed Text Book for B.A. Degree Course (First and Second Semester);

**Chief Editor:** Prof. Prashanth G. Nayak (Professor of Kannada & Director, Kannada Bharathi, Kuvempu University, Shankaraghatta, B.R. Project. Shimoga Dist.)

**Edited By:** Dr. H.K. Malali Gowda, Dr. Sathish. A.P., Dr. D. Muralidhara

**Publishd by:** Bengaluru City University, BENGALURU

Pp: 000+ ix

© Bengaluru City University,

First Print: 2021

ಪ್ರಧಾನ ಸಂಪಾದಕರು

**ಡಾ. ಪ್ರಶಾಂತ ಜಿ. ನಾಯಕ**

ಸಲಹಾ ಸಮಿತಿ:

**ಡಾ. ಕೆ.ವೈ. ನಾರಾಯಣಸ್ವಾಮಿ**

**ಡಾ. ಎಂ.ಎಸ್. ಆಶಾದೇವಿ**

ಸಂಯೋಜಕರು:

**ಡಾ. ಬೆಳಕೆರೆ ಲಿಂಗರಾಜಯ್ಯ**

ಬೆಲೆ: ರೂ. ೦೦/–

ಪ್ರಕಾಶಕರು:

**ಬೆಂಗಳೂರು ನಗರ ವಿಶ್ವವಿದ್ಯಾಲಯ**

# ಕನ್ನಡ ಭಾಷಾ ಪಠ್ಯ

## ಬಿ.ಎ. ದ್ವಿತೀಯ ಸೆಮಿಸ್ಟರ್

## ಪರಿವಿಡಿ


**ಘಟಕ I. ಜಾಗತೀಕರಣ :**

1.1 ಚೀಲ – ಸಿದ್ಧಲಿಂಗ ಪಟ್ಟಣಶೆಟ್ಟಿ
1.2 ವೇಗಯುಗ – ಎಂ. ಕೆ. ಇಂದಿರಾ
1.3 ಕನಸು ಮಾರುವ ಮಾರಿ – ಎಸ್. ಜಿ. ಸಿದ್ಧರಾಮಯ್ಯ
1.4 ದೇಶೀ ಶಿಕ್ಷಣ ಪದ್ದತಿ ಮತ್ತು ಜಾಗತೀಕರಣ – ರಾಜೇಂದ್ರ ಚೆನ್ನಿ

**ಘಟಕ II. ಸಮಾಜ :**

2.1. ವಚನಗಳು – ವಿವಿಧ ವಚನಕಾರರು
2.2 ಅಪರಾಧಿ ಯಾರು – ಕೊಡಗಿನ ಗೌರಮ್ಮ
2.3 ಮಾ ನಿಷಾದ – ಗಿರೀಶ್ ಕಾರ್ನಾಡ್
2.4 ಅನಿಷ್ಟ ಪದ್ಧತಿಯ ವಿರುದ್ಧ – ಸಾರಾ ಅಬೂಬಕ್ಕರ್

**ಘಟಕ III. ಪ್ರೀತಿ :**

3.1 ಪ್ರೀತಿ ಇಲ್ಲದ ಮೇಲೆ – ಡಾ. ಜಿ.ಎಸ್. ಶಿವರುದ್ರಪ್ಪ.
3.2 ಲಹರಿ... ಲಹರಿ.. ಲಹರಿ – ನಾಗತಿಹಳ್ಳಿ ಚಂದ್ರಶೇಖರ್
3.3 ಕಮರಿ ಹೋಗುವ ಜನ – ಡಾ. ಗೀತಾ ನಾಗಭೂಷಣ
3.4 ತಂದೆ ತಾಯಿ ಮತ್ತು ಮಗುವಿನ ನಡುವಣ ಪ್ರೀತಿ – ಎರಿಕ್ ಫ್ರಾಂ. ಕನ್ನಡಕ್ಕೆ: ಕೆ.ವಿ.ಎನ್ ಮತ್ತು ಎಚ್.ಎಸ್. ರಾಘವೇಂದ್ರರಾವ್

**ಘಟಕ IV. ಸೃಜನ/ಸಂಕೀರ್ಣ :**

4.1. ಮೂರು ಮಂದಿ ಕುರುಡರು – ಎಚ್.ಎಸ್.ಶಿವಪ್ರಕಾಶ್
4.2 ರುದ್ರಪ್ಪನ ಖಡ್ಗ – ಕುಂ. ವೀರಭದ್ರಪ್ಪ
4.3 ಗಾದೆಗಳಲ್ಲಿ ಸಾಹಿತ್ಯ – ಎ.ಕೆ. ರಾಮಾನುಜನ್
4.4 ಮಾಧ್ಯಮಗಳಲ್ಲಿ ಅನುವಾದ ಸ್ವರೂಪ ಮತ್ತು ಭಾಷಾ ಆಧುನೀಕರಣದ ಪ್ರಕ್ರಿಯೆ – ಡಾ. ಬಸವರಾಜ ಕಲ್ಗುಡಿ

# 1. ಜಾಗತೀಕರಣ


1.1. ಚೀಲ – ಸಿದ್ಧಲಿಂಗ ಪಟ್ಟಣಶೆಟ್ಟಿ

1.2. ವೇಗಯುಗ – ಎಂ. ಕೆ. ಇಂದಿರಾ

1.3. ಕನಸು ಮಾರುವ ಮಾರಿ – ಎಸ್. ಜಿ. ಸಿದ್ದರಾಮಯ್ಯ

1.4. ದೇಶೀ ಶಿಕ್ಷಣ ಪದ್ದತಿ ಮತ್ತು ಜಾಗತೀಕರಣ – (ಓದುಪಠ್ಯ) – ರಾಜೇಂದ್ರ ಚೆನ್ನಿ

**ಆಶಯ :**

## ಸಂತೆ

ದೇವಮಾನವರೆಲ್ಲ ಮಾರಾಟವಾಗುವರು
ಪಡುವಣದ ಏಳೂರ ಸಂತೆಯಲ್ಲಿ
ಒಂದು ಹೊರೆ ಕಟ್ಟಿಗೆಯೆ ಅಂದು ಸಾಕಾಗಿತ್ತು
ಇಂದು ಇದು ಆತ್ಮಗಳ ಮಾರುಕಟ್ಟೆ

ಪ್ರೀತಿ ವಾತ್ಸಲ್ಯಗಳ ನೀತಿಮಮಕಾರಗಳ
ಮಾರಾಟಕಿಟ್ಟವರು ಹಲವು ಜನರು
ಹುಸಿನಗೆಯ ಬೀರುವರು ಕೈಸನ್ನೆ ಮಾಡುವರು
ಪಂಚಭೂತಗಳನ್ನು ಕೊಳ್ಳುವವರು

ಮೌಲ್ಯ ಆದರ್ಶಗಳ ಅಂಗಡಿಯ ಸಾಲಿನಲಿ
ನ್ಯಾಯ ಬೇಕೇ ಎಂಬ ದೊಡ್ಡ ಕೂಗು
ಜಾತಿಜಾಗಟೆಯನ್ನು ಬಾರಿಸುವ ಜಾತ್ರೆಯಲಿ
ದೇಶಭಕ್ತಿಯದೊಂದು ಸಣ್ಣ ಸೋಗು

ಹೆಸರು ಗುರುತುಗಳಿಲ್ಲ ಯಾರಿಗೂ ಮುಖವಿಲ್ಲ
ಎಲ್ಲರೂ ಒಂದೊಂದು ಹಣದ ಥೈಲಿ
ಹಣದ ಪಾವತಿ ಮಾಡಿ ಅಳಬಹುದು ನಗಬಹುದು
ಕನಸು ಬೀಳುವುದಿಲ್ಲ ಬರಿಗೈಯಲಿ

ಹಂಗಿನರಮನೆಯಿಂದ ಪಾರಿವಾಳವು ಹಾರಿ
ತುಂಬೆಹೂವರಳಿ ಫಲ ಕೊಡಲಿ ನಿಂಬೆ
ಮೂಡಿ ಕಾಮನ ಬಿಲ್ಲು ಜನವೆದ್ದು ಕುಣಿದು
ಹಬ್ಬವಾಗಲಿ ನೀಲಿ ಮುಗಿಲಿನಲಿ

– *ಸಿದ್ಧಲಿಂಗಯ್ಯ*

# ೧.೧. ಚೀಲ

- ಸಿದ್ಧಲಿಂಗ ಪಟ್ಟಣಶೆಟ್ಟಿ

**ಆಶಯ:** ಜಾಗತಿಕ ಇಸಂಗಳ ನಡುವೆ ಮನುಷ್ಯ ಸತ್ತು ಬದುಕಿದ ಪ್ರಸಂಗವನ್ನು ಈ ಕವಿತೆಯಲ್ಲಿ ಕಾಣಬಹುದಾಗಿದೆ. ಸತ್ತು ಬದುಕಿದ್ದಾನೆ. ಈ ನಿರಂತರ ಸಂಘರ್ಷ ಹುಡುಕಾಟ. ಆತ್ಮಶೋಧನೆ. ಬದುಕಿನ ಆಯಾಮಗಳು. ಅವುಗಳ ಅಭಿವ್ಯಕ್ತಿ ಸಾಹಿತ್ಯದ ತಾತ್ವಿಕತೆಯಾಗಿದೆ.

ನಾನು ಸತ್ತಿದ್ದೇನೆ.
ಹೌದು. ಈ ವಯ್ಸನಲ್ಲಿ ಯಾರು ಬದುಕುತ್ತಾರೆ
ಈ ದೇಶದಲ್ಲಿ ? ಬದುಕಿ ಮಾಡುವುದಾದರೂ ಏನು ?
ಅದಕ್ಕಾಗಿ ನಾನು ಸತ್ತಿದ್ದೇನೆ ಈ ದೇಶದಲ್ಲಿ.

ನನಗೀಗ ೩೩.

ರಾಷ್ಟ್ರೀಯ ಆರೋಗ್ಯ ಮಿತಿಗನುಸಾರ

ಸತ್ತವರ ಸಾಲಲ್ಲಿ ಎಂದೋ ಸಮಾಧಿಗೊಂಡಿದ್ದೇನೆ

ಬದುಕುವ ಹಕ್ಕು ನನಗೀಗ ಉಳಿದಿಲ್ಲ.
ಅದಕ್ಕಾಗಿ ಸತ್ತಿದ್ದೇನೆ.

೩-೪ ಮಹಾ ಚುನಾವಣೆಗಳ ವಿಚಿತ್ರ ಗತ್ತುಗಾರಿಕೆಯಲ್ಲಿ
ಮಸಿ ಬಳಸಿಕೊಂಡು
೧೦ ಹೆಜ್ಜೆ ಸಹ ಎದೆ ಸೆಟಿಸಿ ನಡೆಯುವುದು ಮರೆತು ಹೋದದ್ದು
ಮೊನ್ನೆ ಕಾಲೇಜಿಗೆ ಹೊರಟಾಗ ಸರಕ್ಕನೆ ನೆನಪಾಗಬೇಕೆ?
ಕೈಯಲ್ಲಿ ಹೊಸ ಚರ್ಮದ ಚೀಲ ಹಿಡಿದು
ದೊಡ್ಡವನಾದೆ
ಎಂದು ದೊಡ್ಡ ಹೆಜ್ಜೆ ಹಾಕಿ ಹೊರಟೆ

ಸುತ್ತಮುತ್ತ ಲಟಪಟ ಸುಡುವ ಬೇಗೆಯ ಕೆರೆಗಳನ್ನು
ಸವೆದ ಕೆರೆಗಳನ್ನು ಮಸಕು ಚಾಳೀಸುಗಳನ್ನು ಪಿಟಿಪಿಟಿ ಭಾಗಾಕಾರ
ವಜಾಬಾಕಿಗಳನ್ನು ದನದ ಹಿಂಗಾಲ ಧೂಳನ್ನು ಗುಣಿಸಿದೆ. ನೋಡಿದೆ
ನನ್ನ ಹೊಸ ಚರ್ಮಚಕ್ಷುಗಳಿಂದ.
ನನಗನ್ನಿತ್ತು : ನನಗೀಗ ಮಣ್ಣಿನ ಕನ್ನಡಕ ಬೇಕು.
ಎರಡೂ ಕಾಲು ಚೀಲದ ಗೋರಿಯಲ್ಲಿ ಬಿಟ್ಟು ಹೊರಟೆ
ಒಂದು ಎರಡು ಮೂರು... ಅಲ್ಲ
೫ ವರ್ಷಗಳಾಯ್ತು ಮದುವೆಯಾಗಿ.
ಅಂದೇ ಚರ್ಮದ ಚೀಲ ಹಿಡಿದಿದ್ದೇನೆ.
ಅಂದೇ ನನಗೆ ೩೩.
ನನ್ನ ಯಾನದ ಆರಂಭ ಕೊನೆಯಾಯಿತೆ?

ನಾ ಅನುಭವಸ್ಥ. ಯಾಕಂದರೆ ನಾ ಗೃಹಸ್ಥ. ವಯಸ್ಸಾಗಿದೆ
ಸೋತಿದ್ದೇನೆ ಸಂಜೆ ಪೇಟೆಯಲ್ಲಿ ದಿನಾ
ಪುಸ್ತಕ ತರಹೋಗಿ ತರಕಾರಿ ತರುತ್ತೇನೆ.
ಯೋಚನೆ ಮಾಡಹೋಗಿ ಸರಕಾರ ಸರಿಯುವುದ ಓದುತ್ತೇನೆ.
ಸಾಯುವುದಕ್ಕೆ ಇಷ್ಟು ಸಾಕಾಗದೆ
ಈ ದೇಶದಲ್ಲಿ ? ನಾ ನಗುತ್ತಿದ್ದದ್ದು ನನಗೇ ಒಂದು ಕತೆ.

ಎರಡು ಬೆಳ್ಳಿಯ ಕಣ್ಣು ನನಗಾಗಿ ಮಿಂಚಿದ್ದು
ನನ್ನ ಉಸಿರೆಲ್ಲ ಗಂಧದಮೃತ ಕವಿತೆಯಾದದ್ದು
ಸೆರಗುಗಾಳಿಗೆ ರೋಮಾಂಚನದ ಮತ್ತೇರಿ ಕುಣಿದದ್ದು
ಇತ್ಯಾದಿ ಎಲ್ಲ ನೆನಪಾದದ್ದೆ ಸಾಕ್ಷಿ
ಬದುಕುವ ಹಕ್ಕು ಉಳಿದಿಲ್ಲ ನನಗೆ
ನಾನು ಸಾವಿನ ಚೀಲ.

# ೧.೨. ವೇಗ ಯುಗ

**– ಎಂ.ಕೆ. ಇಂದಿರಾ**

**ಆಶಯ:** ಮಾನವನ ಬದುಕು ಸ್ಥಿತ್ಯಂತರಗಳಿಂದ ಕೂಡಿದ್ದಾಗಿದೆ. ಆಧುನಿಕ ವಿಜ್ಞಾನದ ಪ್ರಭಾವದಿಂದ ಅವನ ವಿಚಾರಗಳು ನಾಗಾಲೋಟದಂತೆ ಮುನ್ನುಗ್ಗುತ್ತಿವೆ. ಈಗಿರುವ ಸ್ಥಿತಿಯನ್ನು ಹಿಂದಿನದಕ್ಕೆ ಹೋಲಿಕೆ ಮಾಡುತ್ತ ನೋಡಿದಾಗ ಹಲವಾರು ಬದಲಾವಣೆಗಳಾಗಿರುವುದು ಕಂಡುಬರುತ್ತದೆ. ಈ ಬದಲಾವಣೆಗಳಿಗೆ ಮಾನವನು ಹೊಂದಿಕೊಂಡ ಬಗೆಯನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ.

ಸೋಂಭೇರಿ ಕ್ಲಬ್ಬಿನ ಸದಸ್ಯರೆಲ್ಲ ಒಂದಡಿ–ಮೂರಡಿ ಆಕಳಿಸಿ ಎರಡು ಗಜ ಮೈಮುರಿದು ಗಡಿಯಾರದ ಕಡೆ ನೋಡಿದರು. ಡುನ್–ಡುನ್–ಡುನ್ ಎಂದು ಅಪಸ್ವರದಲ್ಲಿ ಹನ್ನೆರಡು ಗಂಟೆ ಹಾಡಿತು. ಆ ಓಬೀರಾಯ ಗಡಿಯಾರ ಅತಿ ಸೋಂಭೇರಿ ಸದಸ್ಯ ಮೂಗು ಸೊಟ್ಟಮಾಡಿ ಒಡನುಡಿದ. "ಏನು ಅವಸರವೋ ಈ ಹಾಳು ಗಡಿಯಾರಕ್ಕೆ ಬೆಳಿಗ್ಗೆ ಕಣ್ಣು ಬಿಡೋದರಲ್ಲೆ ಹನ್ನೆರಡು ಗಂಟೆ ತೋರಿಸುತ್ತೆ". ಈ ಅನಭಿಜ್ಞ ಸದಸ್ಯನ ಆಜ್ಞಾನಕ್ಕೆ ಹೇಸಿ ಮತ್ತೊಬ್ಬ ಪ್ರಾಜ್ಞನ ಮರುನುಡಿ ಹೊರಡಿತು. "ಥೂ ಎಂಥ – ಬೂಸರು ಮನುಷ್ಯನೋ ನೀನು? ನೀನು ಎಲ್ಲೋ ಇನ್ನೂ ಕೃತಯುಗದಲ್ಲೇ ಕೂತಿದ್ದೀಂತ ಕಾಣುತ್ತೆ. ವೇಗಯುಗ ಇದು. ವಾಯುವೇಗ. ಮನೋವೇಗ. ಶರವೇಗ ಎಲ್ಲಾ ವೇಗಾನೂ ಮೀರಿಸುತ್ತೆ ಈ ಇಪ್ಪತ್ತನೇ ಶತಮಾನದ ವೇಗ.

ಸದಸ್ಯರೆಲ್ಲರ ಮೆದುಳು ಕೆದರಿತು. ಎಲ್ಲಾ ಕಣ್ಣುಜ್ಜಿ ಸರಿಯಾಗಿ ಕುಳಿತರು. ವೇಗಯುಗದ ಮಹಿಮೆ ಒಬ್ಬೊಬ್ಬರ ಅನುಭವದಲ್ಲಿಯೂ ಮೈತಾಳಿ ಬಂದಿತು. ಅಯ್ಯೋ ನಾಕಾಣದೆ ಇದ್ದದೇನೋ ಎಂಕು? ನಮ್ಮ ಮುತ್ತಜ್ಜಿ ಕಾಲು ನಡಿಗೇಲಿ ಕಾಶಿಯಾತ್ರೆ ಮಾಡಿ ಬಂದ್ರಂತೆ. ನಮ್ಮಜ್ಜಿ ರೈಲಿನಲ್ಲಿ ಹೋಗಿದ್ರಂತೆ. ತೌರುಮನೆ, ಅತ್ತೆಮನೆಗೆ ಎತ್ತಿನ ಗಾಡಿಲೆ ಓಡಾಡಿದ್ರಂತೆ. ಆಯ್ತಲ್ಲ ಈಗ ಬಸ್ಸು, ಸ್ಕೂಟರು, ಸೈಕಲ್ಲು, ಏರೋಪ್ಲೇನು, ಹಾರೋಪ್ಲೇನು, ಇಳಿಯೋಪ್ಲೇನು, ರೆಕ್ಕೆ, ಮಣ್ಣುಮಸಿ." 'ಬುಸ್ಸ್' ಎಂಬ ಕಟ್ಟುಸಿರಿನೊಂದಿಗೆ ಹೊರಟಿತು ಮತ್ತೊಂದು ಕಟು ಅನುಭವ. ನಿಜಾಪ್ಪ ನಿಜ. ನನ್ನ ಮರಿಯಜ್ಜಿ ಹೊಂಗೇಸೌದೆ, ಕಲ್ಲುಗಡಿಗೇಲಿ ಬಲು ರುಚಿಯಾಗಿ ಅಡಿಗೆ ಮಾಡಿದ್ರಂತೆ. ನಮ್ಮಜ್ಜಿ ಕಾಲಕ್ಕೆ ಸೌದೆಯಿಂದ ಇದ್ದಲಿಗೆ ಬಂತಂತೆ. ನಮ್ಮಮ್ಮ ಇದ್ದಲಿನಿಂದ ಪ್ರೀಮಿಯರ್ ಸ್ಟವ್‌ಗೆ ಇಳಿದಳು. ನನ್ನ ಹೆಂಡತಿ ಆ ಹಳೇ ಸಂಪ್ರದಾಯ ಎಲ್ಲಾ ನುಣ್ಣಗೆ ಗುಡಿಬಿಸಾಕಿ ಜನತಾ, ಎನುತ್ತಾ ಬತ್ತಿಯಿಂದ ಈಗ ಗ್ಯಾಸ್ ಹೀಟರ್, ಪ್ರಷರ್ ಕುಕ್ಕರಿಗೆ ಏರಿದ್ದಾಳೆ."

ಹೌದು. ಹೌದು ನಾವು ನಮ್ಮ ಹಳ್ಳೀಲಿದ್ದಾಗ ಮಧ್ಯಾಹ್ನ ಮೂರು ಗಂಟೆವರೆಗೂ ಧೋ....ಡ್ಡ ಹಂಡೇಲಿ ನೀರು ಕುದೀತಾನೇ ಇರ್ತಿತ್ತು. ಬಾವಿ ತುಂಬಾ ನೀರಿರ್ತಿತ್ತು. ಸ್ನಾನ ಮಾಡಿದ್ದೇ ಮಾಡಿದ್ದು. ಈಗೇನಿದೆ? ನನ್ನ ಹೆಂಡತಿ ಹುಣಸೆ ಸರ್ವೆಯಿಂದ ಹಂಚಿಕಡ್ಡಿಗಿಳಿದಿದ್ಲು: ಅವಳು ಹೋದ ಮೇಲೆ, ನನ್ನ ಸೊಸೆ ನ್ಯೂಸ್ ಪೇಪರ್‌ನಲ್ಲಿ ಈ ಕೊಳವೆ ನೀರು ಕಾಯಿಸಿ ತಾನು; ತನ್ನ ಮಕ್ಕಳು ಅಭಿಷೇಕ ಮಾಡ್ಕೊಂಡು, ನನಗೆ, ನನ್ನ ಮಗನಿಗೆ ಒಂದೊಂದು ಬೋಶಿ ತಣ್ಣೀರಿಟ್ಟಿರ್ತಾಳೆ ತಂಪಾಗಿ ಸ್ನಾನ ಮಾಡ್ಲಿಂತ. ವಾಟರ್ ವರ್ಕ್ಸ್‌ನೋರೂ ಆರೋಗ್ಯದ ದೃಷ್ಟಿಯಿಂದ ದಿನಕ್ಕೆ ಒಂದೇ ಗಂಟೆ ನೀರು ಬಿಡ್ತಾರೆ. " ಶ್ಶಿ ಹಾಗೇನಿಲ್ಲ. ಈಗ ವೇಗಯುಗ. ಕಾಗೆ ಕರ್ ಅನ್ನೊದ್ರಾಗಲೆ ಎಲ್ಲಾ ಎದ್ದು ಆಫೀಸು, ಫ್ಯಾಕ್ಟರಿಗೆ ಓಡಬೇಕು. ದಿನಾ ಗಂಟೆಗಟ್ಲೆ ನೀರು ಬಿಟ್ಟಿದ್ರೆ ಹೆಂಗಸರ ಕೆಲಸ ನಿಧಾನ ಆಗುತ್ತೆ. ಗೃಹಿಣಿಯರಿಗೆ ಚುರುಕು ಚೂಟಿ ಕಲಿಸೋದಕೋಸ್ಕರ ಸ್ವಲ್ಪ ಬೇಗ ನೀರು ನಿಲ್ಲಿಸ್ತಾರೆ ಅಷ್ಟೆ.

"ಸ್ವಾ.......ರಿ ಇದೇನು ಮಹಾವೇಗ? ಕಾಲು, ಗಾಡಿ, ಕುದುರೆ, ಬಸ್ಸು, ರೈಲು, ಪ್ಲೇನು ಎಲ್ಲಾ ವಾಹನ ವೇಗ ಆಯ್ತು. ಪ್ರಕೃತಿ ವೇಗ ಯಾಕೆ ಗಮನಿಸಿಲ್ಲ ನೀವು? ಮಕ್ಕಳು ಹುಟ್ಟಿದ ಕೂಡ್ಲೆ ಕಣ್ ಬಿಟ್ಟು; ಮೂರ್ ದಿನಕ್ಕೆ ನಕ್ಕು; ಒಂದು ತಿಂಗಳಿಗೆ ಮಾತಾಡಿ; ನಾಕ್ ತಿಂಗಳಿಗೆ ಓಡಾಡಿ; ಒಂದು ವರ್ಷಕ್ಕೆ ಕವನ ಕಟ್ಟಿ; ಮೂರು ವರ್ಷಕ್ಕೆ ಪ್ರಣಯ; ಪತ್ತೆದಾರಿ ಕಾದಂಬರಿ ಬರೆದು; ಆರು ವರ್ಷಕ್ಕೆ ನಾಟಕ ಆಡಿ; ಎಂಟ್ ವರ್ಷಕ್ಕೆ ಭಾಷಣ ಬಿಗಿದು... ಆಮೇಲೆ ಗೊತ್ತೇ ಇದೆಯಲ್ಲ ಪ್ರೇಮಿ. ಹೈಸ್ಕೂಲುಗಳಲ್ಲಿ ಕಾಲೇಜಿನಲ್ಲಿ ರ್‍ಯಾಂಕ್-ರ್‍ಯಾಂಕ್ ನೆಗೆತ. ಇಪ್ಪತ್ಮೂರು ವರ್ಷಕ್ಕೆ ಅಮೇರಿಕಾ. ಇಪ್ಪತ್ತೈದಕ್ಕೆ ಜರ್ಮನಿ. ಹಾಗೆ ಲೌವು; ನಂತ್ರ ಮ್ಯಾರೇಜು..." "ಲೇ! ಉಸುರು ಒಳಗೆ ತಗೊಂಡು ಮಾತಾಡೋ ಮಾರಾಯಾ! ಯಾಕೆ ಹಾಗೆ ಒಂದೇ ಉಸಿರಿಗೆ ಓಡ್ತಾ ಇದ್ದೀ?"

ಇಲ್ಲಪ್ಪಾ ವೇಗಯುಗದ ಅವಸರ ಹೇಳ್ತಾ ಇದೇನಿ. ಹೆಣ್ಣು ಮಕ್ಕಳು ಅಷ್ಟೇನೆ! ಹನ್ನೆರಡು ವರ್ಷದೊಳಗೆ ಸಂಗೀತ, ಸಾಹಿತ್ಯ, ನಾಟ್ಯ, ನಾಟಕ, ಸಿನಿಮಾ ಎಲ್ಲಾದರಲ್ಲೂ ಕಾಲಾಡಿಸಿ ಚಟ್ ಪಟ್ ಅಂತ ಡಿಗ್ರಿ ಎಲ್ಲಾ ಮುಗಿಸಿ; ಹೆಸರಾಂತ ಲೌಮ್ಯಾರೇಜ್ ಮಾಡ್ಕೊಂಡು ಬರ್ತ್ ಕಂಟ್ರೋಲಿರೋ ಈ ಕಾಲದಲ್ಲೂ ಪೂನೆ ಹಾಗೆ ಒಂದ್ ಸರ್ತಿಗೆ ಮೂರು ನಾಕರಂತೆ ಐದು ವರ್ಷಕ್ಕೆ ನಾಲಕ್ ಒಬ್ಬೆ ಮಕ್ಕಳ್ನ ಹೆತ್ತು, ಮೂವತ್ತು ವರ್ಷಕ್ಕೆ ಮುದುಕಿಯಾಗಿ ಹಲ್ ಕಟ್ಟಿಸಿಕೊಂಡು ಹಾಯಾಗಿ ಕೂಳ್ಕೊತಾರೆ."

"ಅಬ್ಬ.......ಬ್ಬ......ಬ್ಬ....! ಅದೇನು ಕೊರೀತಿಯೋ ಮಹರಾಯ!? ಏನು ಈ ಸ್ಪೀಡಿನ ವಿಷಯ ಎಲ್ಲಾ ನಿಂಗೊಬ್ಬನಿಗೇ ಗೊತ್ತಿರೋದು ಅಂತ ತಿಳಕೊಂಡಿದಿಯಾ?

"ಹಾಗೇನಿಲ್ಲ. ಇಲ್ಲಿರೋ ಮೆಂಬರ್ಗೆಲ್ಲಾ ಗೊತ್ತಿದೆಯೇನು ? ವಿಷಯ ನಂಗೂ ಗೊತ್ತು. ಹಾಗೆ ನಿಮ್ಮ ನಿಮ್ಮ ಅನುಭವ ಒಂದೊಂದು ಡೋಸ್ ಕೊಡಿ ನೋಡೋಣ?"

"ಮೆಂಬರ್೧!-ಇಸ್! ಇದ್ಯಾವ ಪುಟಕೊಸಿ ವಿಷಯ ಬಿಡು. ಈಗ ಮೂರು ತಿಂಗಳ ಹಿಂದೆ ನಮ್ಮನೆ ಹಿತ್ತಲ್ಲಿ ಒಂದು ಬೂದುಕುಂಬಳ ಬಳ್ಳಿ ಹಬ್ಬಿಸಿದೆ. ಹಾಳಾದ್ದು ಮೂರೇ ದಿನಕ್ಕೆ ಅಂಗಳ ತುಂಬಾ ಹಬ್ಬಿ ಎಂಟು ದಿನಕ್ಕೆ ಆನೆಗಾತ್ರ ಕಾಯಿಬಿಡ್ತು. ಮೊನ್ನೆ ಎಗ್ಜಿಬಿಷನ್ಗೆ ಕಳಿಸಿದ್ದೆ ಅದಕ್ಕೆ ಫಸ್ಟ್ ಪ್ರೈಜ್ ಬಂತೂಂತ ಇಟ್ಕೋಳ್ಳಿ: ಹಾಗೆ ಬಳ್ಳಿನೂ ಒಣಗೋಯ್ತು. ಕುಂಬಳಕಾಯ ಕೊಳೆತುಹೋಯ್ತು. ಎರಡೇ ತಿಂಗಳಲ್ಲಿ ಅದರ ಅವತಾರ ಸಮಾಪ್ತಿನೂ ಆಯ್ತು."

ನಂ–೨ ಅಂತೂ ಬಿಟ್ಟ ಒಂದು ಕುಂಬಳಕಾಯ್ನ! ಅದು ಎಲ್ಲಿ ಸುದ್ದಿ ಬಿಡು. ನಮ್ಮ ಗದ್ದೇಲಿ ವರ್ಷಕ್ಕೆ ನಾಲ್ಕು ಬೆಳೆ ಬತ್ತ ಬೆಳೆದು, ಹಾಲು ಹಸೀನೆ ಬಡುದಿ ಮೂರನೇ ದಿನಾನೇ ಮಿಲ್ ಮಾಡ್ಸಿ. ಮರುದಿನನೆ ಪೇಸ್ಟಿನಂಥ ಅನ್ನಮಾಡಿ ತಿಂದು ಹೊಟ್ಟೆನೋವು ಬರಿಸ್ಕೊಂಡು ಆಸ್ಪತ್ರೆಗೋಡಿ ಇಂಜಕ್ಷನ್ ತಗೊಂಡು..."

ನಂ.೩ "ಹೋ.... ಹೋ.... ಹೋ.... ನಿಲ್ಲಪ್ಪ ಸಾಕು! ಇದ್ಯಾವ ಮಹಾವೇಗ? ನೀವು ಅಕ್ಕಿ ಕಾಣಬೇಕಾದ್ರೆ ಮೂರು ತಿಂಗಳಾದ್ರೂ ಕಾಯಬೇಕು ನಮಗೆ ಹಾಗೇನೂ ಇಲ್ಲ. ನಾವು ಆಮೇರಿಕಾಕ್ಕೆ ಹೋಗೋದಕ್ಕೆ ಪಾಸ್‌ಪೋರ್ಟ್ ಸಿಗೋದು ಸ್ವಲ್ಪ ನಿಧಾನ ಆಯ್ತು ನೋಡಿ. ಎಷ್ಟಾದರೂ ಆಮೆರಿಕಾದವರು ಮುಂದುವರಿದ ಜನಾಂಗ. ಅವರು ನಮ್ಮ ಆಗಮನ ಕಾಯಲೇ ಇಲ್ಲ. 'ಜಂ...' ಅಂತ ಅಮೆರಿಕಾ ಅಕ್ಕಿ, ಮಿಲ್ಕ್ ಪೌಡ್ರು ನಾವು ಕೂತಲ್ಲಿಗೆ ಕಳಿಸ್ಬಿಟ್ಟು... ನಿಮಗಿಂತ ಮೊದ್ಲೇ ನಮಗೆ ಹೊಟ್ಟೆನೋವು ಬಂದದ್ದು ನಿಮಗಿಂತ ಮೊದಲೇ ನಾವು ಡಾಕ್ಟರಿಗೆ ದುಡ್ಡು ಕೊಟ್ಟಿದ್ದು."

ನಂ.೪–"ಎಲ್ಲಾ ಬರೀ ಸುಳ್ಳು. ಅಮೆರಿಕಾ ಅಕ್ಕಿ ಬರೋದಕ್ಕೆ ಮೊದಲೇನೇ ನಮ್ಮ ಕಾರ್ಡ್‌ನಲ್ಲಿ ಕಿಗ್ಗಲುನಾಮ ಸಂವತ್ಸರದ ಮುಗ್ಗಲ ಅಕ್ಕಿ ಕೊಟ್ಟಿದ್ರು. ನಿಮಗಿಂತ ಮೊದಲೇ ನಾವು ಡಾಕ್ಟರಿಗೆ ದುಡ್ಡೆ ಕೊಟ್ಟದ್ದು. ನಿಮಗಿಂತ ಮೊದ್ದೇ ನಮಗೆ ವಾಂತಿ. ಬೇದಿ ಇತ್ಯಾದಿ ಬಂದು ಹೋಗಿತ್ತು."

ನಂ.೫– "ನೀವು ಹೇಳೋದೆಲ್ಲ ತುಂಬಾ ನಿಧಾನದ ಮಾತು. ಮೊದಲು ಪುರಾಣ, ಪುಣ್ಯಕಥೆ ಎಲ್ಲಾ ಶಿಲಾಶಾಸನ ಕೆತ್ತಿದ್ದು. ಆಮೇಲೆ ವಾಲೇಗರಿ ಮೇಲೆ ಬರೆದ್ರು. ಅನಂತರ ಕಾಗದ ಬಂತು. ಈಗಂತೂ ದಿನ, ವಾರ, ಪಕ್ಷ, ಮಾಸ, ದ್ವಿಮಾಸ, ತ್ರೈಮಾಸ ಪತ್ರಿಕೆಗಳಂತೂ ಮಳೆಗಾಲ್ದಲ್ಲಿ ನಾಯಿಕೊಡೆ ಹುಟ್ಟಿದ ಹಾಗೆ ಹುಟ್ಟಿಕೋತಾವೆ. ಈಗಲೂ ರಾತ್ರಿ ಆಕಾಶವಾಣಿ ಆರಚಿಕೊಳ್ಳುತ್ತೆ. ಈ ಸುದ್ದಿ ಸಮಾಚಾರನೂ ಏಕಪೋಶನ

ತಗೊಂಡೋಳು ನನ್ನ ಹೆಂಡತಿ. ದಿನಪತ್ರಿಕೆಗೆ ತಿಳಿಯೋಕೆ ಮುಂಚೇನೆ ಅವಳಿಗೆ ತಿಳಿದಿರುತ್ತೆ. ಮನೆ ಒಳಗೆ ಕೂತುಕೊಂಡೇ ಇಡೀ ಬಡಾವಣೆಗೆ ತಿಳಿಸಿರ್ತಾಳೆ ಸುದ್ದೀನ. ಅವಳ ಬುದ್ದಿ ವೇಗದ ಮುಂದೆ ನಿಮ್ಮದೆಲ್ಲ ಎಲ್ಲಿ ವೇಗ?"

ನಂ.೬- "ನನ್ನವಳೂ ಏನು ಕಮ್ಮಿ ಅಂತ ತಿಳೀಬೇಡಪ್ಪ. ರೇಷನ್ನಿಗೆ ಕ್ಯೂ ನಿಂತು ಅಂಗಡೀಲಿ ಸಾಮಾನು ತಂದು ಅದನ್ನೆಲ್ಲ ಕ್ಲೀನ್ ಮಾಡಿ ಆಡಿಗೆ ಕಾಫಿ, ತಿಂಡಿ ಮಾಡಿ ಉಂಡು ಸಿನಿಮಾಕ್ಕೆ ಹೋಗೋದಕ್ಕೆ ಲೇಟಾಗುತ್ತದೆಂದು ಕ್ವಿಕ್ಕಾಗಿ ಎರಡು ಹೊತ್ತೂ ಹೋಟೆಲ್‌ನಿಂದ ಕಾಫಿ, ತಿಂಡಿ, ಕ್ಯಾರಿಯರ್‌ಲ್ಲಿ ತರಿಸಿಡ್ತಾಳೆ ಆರಾಮವಾಗಿ. ಕಾಲಸ್ಥಿತಿಗೆ ತಕ್ಕಹಾಗೆ ನಾವೂ ಇರಬೇಕಲ್ಲ."

ನಂ.೭– "ನಿಜಾಪ್ಪ ನಿಜ. ಇಂಥಾ ವಿಷಯದಲ್ಲಿ ನಮ್ಮ ಹೆಂಗಸು ತುಂಬಾ ಮುಂದುವರೆದಿದ್ದಾರೆ. ಪ್ರಪಂಚವೆಲ್ಲಾ ಅತಿ ವೇಗದಲ್ಲಿ ಓಡ್ತಾ ಇರೋವಾಗ ಅವರು ಹಿಂದುಳಿಯೇಕೆ ಸಾಧ್ಯಾನೆ? ವಾಹನಗಳಿಗೆಲ್ಲಾ ವಾಯುವೇಗ: ಉದ್ಯಮ ಎಲ್ಲ ಮನೋವೇಗ! ಸಂಗೀತ, ಸಾಹಿತ್ಯ, ಕಲೆ, ಸಂಸ್ಕೃತಿ ಎಲ್ಲಾ ಶರವೇಗ! ಎಲ್ಲವೂ ಓತಿಕೇತ ಬಣ ಬದಲಾಯಿಸಿದ ಹಾಗೆ ಗಳಿಗೆಗೊಂದು ರೂಪ ತಾಳಿಕೊಂಡು ದೌಡು ಕೀಳ್ತಾ ಇರೋವಾಗ ನಾವು ಆಮೆ ಹಾಗೆ ತೆವಳಿದರೆ ಏನು ಚೆಂದ? ನಮ್ಮ ಹುಡುಗರಂತೂ ಬಲುಚೂಟಿ. ಯಾರೂ ಎವರೆಸ್ಟ್ ಏರಿದರು! ಮತ್ಯಾರೋ ಚಂದ್ರಲೋಕಕ್ಕೆ ಹೋದರೂಂತ ದಿನಾ ಪತ್ರಿಕೇಲಿ ಓದಿ ಓದಿ ಚಿಕ್ಕ ಹುಡುಗ ಪುಟ್ಟಪಾಪ 'ನಾ ಸೂರ್ಯ ಲೋಕಕ್ಕೆ ಹೋಗ್ತೀನೀ ಅಂತ ಯಾವಾಗ್ಲೂ ಮನೆ ತಾರಸಿ ಮೇಲೆ ಹತ್ತಿ ಕೂತಿರ್ತಾನೆ."

ನಂ.೮- "ಸಾಕ್ರೋ ಏನು ವೇಗ ಯುಗಾನೋ ದೇವರೇ ಬಲ್ಲ.. ಶರ್ಮ ಹುಡುಗಿ ಒಂದಷ್ಟು ತಲೆಕೂದ್ಲು ಬೆಳೀಲಿಂತ 'ಕೇಶಭಂಜಿನಿ' 'ಕೇಶವರ್ಧಿನಿ' ಏನೇನೂ ಏಳೆಂಟು ಬಾಟ್ಲು ತಂದು ಬಳಕೊಂಡು ಇದ್ದದ್ದು ಮೂರು ಮತ್ತೊಂದು ಕೂದ್ಲು ಉದುರೇಹೋಯ್ತು. ಅವಳಿಗೂ ಈಗ ಬೇಜಾರಾಗಿ ಒಂದು ಚೌಲಿ ತಂದು ಜಡೆ ಎಣಕೊಂಡ್ಳು. ನಿಜವಾಗ್ಲೂ ವೇಗಯುಗ ಆಗಿದ್ರೆ ಆ ತಲೆಕೂದ್ಲು ಬೆಳೆಯೋಕೇನು ಧಾಡಿ?"

ನಂ.೯- ಛೇ ಛೇ ಯಾಕೋ ಹಾಗಂತಿ? ಅತ್ತಾಗಿ ನೋಡು ಆ ಸೋಂಭೇರಿ ಸುಬ್ಬನ ಗಡ್ಡಾನ, ಎಂಟು ಚೌಲಿಗಾಗೊ ಅಷ್ಟು ಬೆಳೆದಿದೆ. ಏನೋ ನಿನ್ನ ಹೆಂಡ್ತಿ... ಸ್ರಿಗಿಸ್ರಿನೇನೋ ಅಪಾಟಿ ಗಡ್ಡ ಬೆಳೆಸಿದ್ದಿ?" ಮೂಲೆಯಲ್ಲಿ ಕುಳಿತು ಹರಿಬಾಯಿ ಬೀಡಿ ಸೇದುತ್ತಾ ಸುಷುಪ್ತಾವಸ್ಥೆಯಲ್ಲಿ ಊಗರಿಸುತ್ತಿದ್ದ ಸುಬ್ಬು ಒಂದು

ಬಾರಿ ಮೂರು ಮಾರು ಮೈ ಮುರಿದು ಮೈಯೊಳಗಿನ ಬ್ರಹ್ಮಾಂಡವೆಲ್ಲಾ ಕಾಣುವಂತೆ ೨-೩ ಚದರಡಿ ಆಕಳಿಸಿ, ಶೀಗೆ ಮಟ್ಟನಂತೆ ಬೆಳೆದ ಗಡ್ಡವನ್ನು ಕರಪರ ಕೆರೆದು ಗೊಗ್ಗರ ವಾಯ್ಸಿನಿಂದ ಇಂತೆಂದ.

"ಇಲೋ ನನ್ನ ಹೆಂಡ್ತಿ ಗಿಸ್ರಿ ಪಸ್ರಿ ಏನೂ ಇಲ್ಲ. ಏನು ಮಾಡೋದು ಹಾಳು ವೇಗಯುಗ. ನಾನೂ ಈ ಗಡ್ಡ ಕೆರೆದೂ ಕೆರೆದು ಸುಸ್ತಾಗಿ ಹೋದೆ. ದಿನಾ ದಿನಾ ಲಂಟಾನಾ ಬೆಳೆದ್ಹಾಗೆ ಬೆಳೆಯುತ್ತೆ ಈ ಹಾಳಾದ ಗಡ್ಡ. ಬಲಗಡೆ ಒಂದು ಇಂಚು ಬೆಳೆದಿರುತ್ತೆ. ಮತ್ತೆ ಈ ಕಡೆ ಒಂದಿಂಚು! ನನಗೂ ಕತ್ತಿಹೊಡ್ದೂ ಹೊಡ್ದೂ ರೇಗಿಹೋಯ್ತು. ಈಗ ಬಿಟ್ಬಿಟ್ಟಿದೀನಿ ಎಷ್ಟ್ ಬೇಕಾದರೂ ಬೇಳೆಲಿ. ಮೂರು ತಿಂಗಳಿಗೊಂದು ಕಟಾವು ಕೊಟ್ರೆ ಕಡೇ ಪಕ್ಷ ಒಂದು ಹತ್ತು ಚೌಲಿ ಆಗುತ್ತೆ. ತಲಾ ಐದೈದು ರೂಪಾಯಿ ಆಯ್ತು. ಯಾರನ್ನ ಕೆಡಿಸ್ತು? ಇದಕ್ಕೆ ವೇಗ ಯುಗಾನ ಬೈತಿರೋ?"

# ೧.೩. ಕನಸು ಮಾರುವ ಮಾರಿ

**– ಎಸ್. ಜಿ. ಸಿದ್ಧರಾಮಯ್ಯ**

ಹವಿಗನ್ನವನಿಕ್ಕಿ ಅರಿವ ಬಿತ್ತಿ ಭರವಸೆಯ ಬೆಳೆವ
ಸುತ್ತಲಿನ ಹತ್ತಾರು ಹಳ್ಳಿಗಳ
ನೆಲದೊಡಲಿನ ದನಿಪದಗಳ ಕನ್ನಡಂಗಳ
ಉಕ್ಕಿ ಉಲಿಯುವ ನಕ್ಕು ಕಲಿಯುವ ಕನ್ನಡಶಾಲೆ
ಅರೆಬರೆಯಾಗುವ ಕರಕರಗುತ ಸೊರಸೊರಗುತ
ಆರಕ್ಕೆ ಏರದ ಮೂರಕ್ಕೆ ಇಳಿಯದ ಮೂಲ ಮಾಧ್ಯಮ ಬೋಧೆಯ ಕನ್ನಡ ಶಾಲೆ
ಹೆಸರಿಲ್ಲದೆ ಉಸಿರಾಡಿವೆ ಉಸಿರಿಲ್ಲದೆ ಹೆಸರಾಡಿವೆ ಶಾಲೆ

ಮಕ್ಕಳ ಶಿಕ್ಷಣ ಹಕ್ಕಿನ ಕಾಯ್ದೆಯ ನೆರಳಿನ ಗಿಡುಗ
ರವರವ ರವ್ವನೆ ಹಾರುತ ಬಂತು
ಕೂಲಿಕುಂಬಳಿಯವರ ಕನಸಿಗೆ ರೆಕ್ಕೆಯ ಕಟ್ಟಿತು

ಸೂಟುಬೂಟಿನ ಮಮ್ಮಿಡ್ಯಾಡಿಯ
ಗುಡ್ಮಾರ್ನಿಂಗು ಗುಡ್ ಈವಿನಿಂಗು
ಪಂಜರಗಿಳಿಗಳ ಕಂಠಪಾಠದ ದನಿಮೊಳಗು
ಹಬ್ಬಿತು ಹರಿಯಿತು ಹಳ್ಳಿಗಾಡಿನ ಮಕ್ಕಳಲಿ
ಹಳದಿಯ ಬಣ್ಣದ ಹಸಿರಿನ ಫಲಕದ
ಓಮ್ನಿಗಳಲ್ಲಿ ಕುರಿಗಳು ಸಾರ್ ಕುರಿಗಳು
ಕಿಕ್ಕಿರಿದೊಟ್ಟಿದ ವ್ಯಾನುಗಳಲ್ಲಿ ಮಕ್ಕಳು ಮರಿಗಳು
ಆಹಾ ಓಹೋ ಸಮವಸ್ತ್ರದ ಅಳುಮುಂಜಿಗಳು
ಮಾತಲಿ ನಗುವಲಿ ಗುಡ್ ಬಾಯ್ ಟಾಟಾ ಅವ್ವಗಳು

ಬಡವರ ಬಗ್ಗರ ಕನ್ನಡ ಮಕ್ಕಳ
ಬಡಶಾಲೆಗಳೆಲ್ಲ ಮುಚ್ಚಿದವು.
ಕುರುಡರು ಕುಂಟರು ಬಾಯಿಲ್ಲದ ಬಾಲೆಯರು
ಅವರು ಇವರು ಸೊಲ್ಲೆತ್ತದ ಸೂತಪುತ್ರರು
ಜೀತಕೆ ನಡೆದರು. ಕ್ವಾರಿಯ ಬಂಡೆಗೆ
ಇಟ್ಟಿಗೆ ಮಾಡುವ ಸುಟ್ಟುರಿಯುವ ಗೂಡಿಗೆ

ಕಾನ್ವೆಂಟ್ ಸೇರಿದ ಮಕ್ಕಳು ಮರೆತರು
ನಲಿಕಲಿ ಹಾಡಿನ ತುತ್ತೂರಿ
ಒಂದು ಎರಡು ಬಾಳೆಲೆ ಹರಡು
ಮೂರು ನಾಲ್ಕು ಅನ್ನ ಹಾಕು
ಹುಯ್ಯೋ ಹುಯ್ಯೋ ಮಳೆರಾಯ
ಹೂವಿನ ತೋಟಕೆ ನೀರಿಲ್ಲ
ಬಾರೋ ಬಾರೋ ಮಳೆರಾಯ
ಬಾಳೆಯ ತೋಟಕೆ ನೀರಿಲ್ಲ

ಸುತ್ತಮುತ್ತಲ ಬದುಕ ನೋಡುವ
ಇತಿಹಾಸದ ಗತ ಪುಟಗಳ ಎದೆಯ ಕಣ್ಣಲಿ ಕಾಣುವ
ಸರ್ವ ಜನಾಂಗದ ಶಾಂತಿಯ ತೋಟವ
ಹಾಡುತ ಅರಿಯುವ ಅರಿಯುತ ಬಾಳುವ
ಪದಗಳು ಮರೆತವು
ರೈನ್ ರೈನ್ ಗೋ ಅವೇ ಗೋ ಅವೇ
ಅರ್ಥವಾಗದ ರೈಮು ರೀಮಿಗೆ
ಲೆಪ್ಟು ರೈಟಿನ ಪಾದಪದಗಳು
ಉಸಿರು ಸಿಕ್ಕಿದ ಒನ್‌ಒನ್ ಝೂ ಒನ್‌ಗಳು
ಸಾವಿರವಿದ್ದೂ ಸೊಲ್ಲೇ ಇಲ್ಲದ ಸರೀಸೃಪಗಳು

ಕನ್ನಡದಲ್ಲಿ ಅತ್ತರೆ ಹತ್ತು
ತೂಕಡಿಸಿದರೆ ಐವತ್ತು
ಮರೆತು ಮಲಗಿದರೆ ನೂರು
ದಂಡ ತೆರುವ ದಂಡಗಾಡಿನ ಮಕ್ಕಳು
ನೂರು ಇನ್ನೂರಾಗಿ ಇನ್ನೂರು ನಾನ್ನೂರಾಗುವ
ಗುಣಾಕಾರದ ಲೆಕ್ಕಾಚಾರಿಗಳ ಕಾನ್ವೆಂಟುಗಳು
ಹೊರಗೆ ಬೃಂದಾವನ ಒಳಗೆ ಲೊಳಲೊಟ್ಟೆ
ತೋರಿಕೆಗೆ ಬಿಳಿತೊಗಲಿನ ವ್ಯವಹಾರ

ಒಳಗೆ ಸಾಮರಸ್ಯವಿಲ್ಲದ ಸಂಸಾರ
ಹಣಹೆಚ್ಚಿದಷ್ಟು ಗುಣಮರೆತ ಬಡಿವಾರ
ತೋರಿಕೆಯಲಿ ಗಂಡ ಹೆಂಡತಿ
ಕೂಡಿಕೆಯಲಿ ಮಿಂಡಗರತಿ

ಕಾಮಕಿಚ್ಚಾಗಿ ಕಿಚ್ಚು ಹುಚ್ಚಾಗಿ ಸ್ವೈರವೆಂಬುದು ಸ್ವರತಿ
ಶಿಕ್ಷಣದ ದಂದೆಯಲಿ ದಂದಾದುಂದಿಯ ಆತ್ಮರತಿ
ಅವಳ ತಿನ್ನದ ಇವನು ಇವನ ತಿನ್ನದ ಅವಳು
ಸೇಡಿಗೆ ಸೇಡು ಮಸೆದು ಮಕ್ಕಳಬಾಳಿಗೆ ಮೃತ್ಯುಕೂಪ

ತಿನ್ನುವ ಅನ್ನಕೆ ವಿಷವ ಹಾಕಿ ಮಕ್ಕಳ ಬಾಳು
ಉರಿನಂಜಿಗೆ ಧೂಪ
ಊರಿಗೆ ಮಾರಿ ಬಂದಂತೆ
ಹರಿದು ಬಂದಿತು ಮಕ್ಕಳ ಪಾಲಿಗೆ ಉರಿಮಾರಿ

**ಓದುಪತ್ಯ:**

## ೧.೪. ದೇಶಿ ಶಿಕ್ಷಣ ಪದ್ಧತಿ ಮತ್ತು ಜಾಗತೀಕರಣ

**- ರಾಜೇಂದ್ರ ಚೆನ್ನಿ**

ಒಂದು ಬಗೆಯ ಮರೆವು ಇಂದು ಹಲವರ ಆಲೋಚನಾಕ್ರಮವನ್ನೇ ಬದಲಾಯಿಸಿ ಬಿಟ್ಟಿದೆ. ಈ ಮರೆವಿನಿಂದಾಗಿ ನಮ್ಮ ನೆಲದ ಶಿಕ್ಷಣಕ್ರಮದ ಸತ್ವಪೂರ್ಣ ಬೇರುಗಳನ್ನು ಗುರುತಿಸಲಾಗದ ಕುರುಡು ವ್ಯಾಪಕವಾಗಿದೆ. ಜಾಗತೀಕರಣದ ಅಬ್ಬರದಲ್ಲಿ ನಮ್ಮದೇ ಆದಂಥ ಶಿಕ್ಷಣದ ನೆಲೆಗಳು ಹಿನ್ನಡೆ ಅನುಭವಿಸುತ್ತಲೇ ಇವೆ. ನಮ್ಮೊಳಗಿನ ಈ ಮರೆವಿನ ಕಾರಣಕ್ಕಾಗಿಯೇ ಸತ್ವಪೂರ್ಣವಾದ ಶಿಕ್ಷಣ ಕ್ರಮಗಳು ಈ ನೆಲದಲ್ಲಿದ್ದವು ಎಂಬುದನ್ನು ಸಂಪೂರ್ಣವಾಗಿ ಮರೆತಿದ್ದೇವೆ. ಕಲಿಯುವ ಕ್ರಮಗಳು ಇಲ್ಲಿದ್ದವು. ವಿಜ್ಞಾನವನ್ನು ಅರ್ಥ ಮಾಡಿಕೊಳ್ಳುವ. ತಂತ್ರಜ್ಞಾನವನ್ನು ಸೃಷ್ಟಿಮಾಡುವ ಭಿನ್ನಕ್ರಮಗಳು ಇಲ್ಲಿದ್ದವು ಎಂಬುದನ್ನು ಮರೆತಿದ್ದೇವೆ. ಆಧುನಿಕ ಶಿಕ್ಷಣಕ್ರಮದ ಕಾರಣದಿಂದ ತಂತ್ರಜ್ಞಾನವು ಪಶ್ಚಿಮದಿಂದಲೇ ಬಂದಿರುವಂಥದ್ದು. ಅದು ಆಧುನಿಕ ಜಗತ್ತಿಗೆ ಸೇರಿರುವಂಥದ್ದು ಎಂದುಕೊಂಡ ಬಹುಪಾಲು ವಿದ್ಯಾರ್ಥಿಗಳ ಮನೋಸ್ಥಿತಿಯನ್ನು ಇಲ್ಲಿ ನಿದರ್ಶನವಾಗಿ ಚರ್ಚಿಸಬಹುದು.

೧೭ನೇ ಶತಮಾನದಿಂದ ಶುರುವಾದ Enlightenment ನಿಂದ ವಿಜ್ಞಾನ ಹಾಗೂ ತಂತ್ರಜ್ಞಾನ ಬಂದಿದೆ ಎಂಬ ನಂಬಿಕೆ ಬಹಳಷ್ಟು ಜನ ಹೊಂದಿದ್ದಾರೆ. ಆದರೆ, ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಯೊಂದಿದೆ. ಇಲ್ಲಿ ಈ ದೇಶದ ವಾಸ್ತುಶಿಲ್ಪ, ಲೋಹಶಾಸ್ತ್ರ, ಕಾಲುವೆ ಕಟ್ಟುವ, ಮನೆ ಕಟ್ಟುವ ಕ್ರಮಗಳನ್ನು ಗಮನಿಸಿದರೆ ಬಹಳ ಪ್ರವರ್ಧಮಾನವಾದ, ಪ್ರಬುದ್ಧ ತಂತ್ರಜ್ಞಾನ ಇಲ್ಲಿತ್ತು. ಆ ತಂತ್ರಜ್ಞಾನ ಇದ್ದಿದ್ದರೆ ಅದನ್ನು ಕಲಿಸುವ ಶಿಕ್ಷಣಕ್ರಮ ಇದ್ದಿರಲೇಬೇಕಲ್ಲ ಎಂಬ ಪ್ರಶ್ನೆಯು ತಪ್ಪು ಕಲ್ಪನೆಯಲ್ಲಿರುವ ಅನೇಕರಲ್ಲಿ ಮೂಡುವುದೇ ಇಲ್ಲ. ಈ ಪ್ರಶ್ನೆಗೆ ಪ್ರತಿಕ್ರಿಯೆಯಾಗಿ ಅಪೂರ್ವವಾದ ದೇಶಿ ಶಿಕ್ಷಣ ಕ್ರಮಗಳು ಎದ್ದು ಕಾಣುತ್ತವೆ. ಈ ಕುರಿತ ಒಂದು ಸಣ್ಣ ಉದಾಹರಣೆಯನ್ನು ಇಲ್ಲಿ ಪ್ರಸ್ತಾಪಿಸಬಹುದು.

ಕೇರಳದ ಮಲಬಾರ್‌ನಿಂದ, ಆ ಕರಾವಳಿ ಪ್ರದೇಶದಿಂದ ಸಿದ್ಧವಾದ ಹಡಗುಗಳು ದೇಶ–ವಿದೇಶ ದಾಟುತ್ತಿದ್ದವು. ಆ ಹಡಗುಗಳನ್ನು ಕಟ್ಟುವ ನೌಕಾರಚನೆಯ ವಿಜ್ಞಾನ ಈ ದೇಶದಲ್ಲಿತ್ತು. ಬಹಳ ಜನ ನಂಬೋಲ್ಲ. ಕೆಲವು ಪದ್ಯಗಳ (Verses) ಮೂಲಕ ಈ ವಿಜ್ಞಾನವನ್ನು ಕೊಡುತ್ತಿದ್ದರು. ಮರವನ್ನು ನೋಡಿ ಈ ಮರದಿಂದ ಎಂಥ ಹಲಗೆ, ಎಂದ ನೌಕೆ ಕಟ್ಟಬಹುದು ಎಂಬ ವೈಜ್ಞಾನಿಕ ಆಲೋಚನೆ ಇಲ್ಲಿತ್ತು.

ಇದರಿಂದ ಸ್ಪಷ್ಟವಾಗುವುದೆಂದರೆ, ಇವುಗಳ ಆಧಾರಿತ ಶಿಕ್ಷಣ ಪದ್ದತಿ ಸಮರ್ಥವಾಗಿ ಇಲ್ಲಿ ಬೇರೂರಿತ್ತು ಎಂಬುದನ್ನು ಯಾರೂ ನಮಗೆ ಹೇಳಿಕೊಡಬೇಕಾಗಿಲ್ಲ.

ದೆಹಲಿಯ ಕಬ್ಬಿಣದ ಸ್ತೂಪ ನೋಡಿದಾಗ ಆಶ್ಚರ್ಯವಾಗುತ್ತದೆ. ನೂರಾರು ವರ್ಷಗಳಿಂದ ತುಕ್ಕು ಹಿಡಿಯದೇ ಮೂಲ ಸ್ವರೂಪದಲ್ಲಿಯೇ ಉಳಿದುಕೊಂಡ ಅಂಥ ಕಬ್ಬಿಣವೊಂದು ಸೃಷ್ಟಿಯಾಗಲು ಲೋಹಶಾಸ್ತ್ರ, ಅದಕ್ಕನುಗುಣವಾದ ಗಣಿತಶಾಸ್ತ್ರ, ಪೂರಕವಾದ ಭೂಗರ್ಭ ವಿಜ್ಞಾನ ಅತ್ಯಾವಶ್ಯಕ. ಅವೆಲ್ಲವೂ ಇಲ್ಲಿದ್ದವು. ಆದರೆ ನಾವು 'ಇವ್ಯಾವುವೂ ನಮ್ಮಲ್ಲಿರಲಿಲ್ಲ. ಅವನ್ನು ಪರಿಚಯಿಸಿ ಅವುಗಳ ಬಗ್ಗೆ ಹೇಳಿಕೊಡುವ ಶಿಕ್ಷಣ ಪದ್ದತಿಯೂ ನಮ್ಮಲ್ಲಿ ಇರಲಿಲ್ಲ. ಎಲ್ಲವೂ ಕೂಡಾ ಪಶ್ಚಿಮದಿಂದಲೇ ಬಂದಂಥ ಸರಕು' ಎಂಬ ಕುರುಡು ನಂಬಿಕೆಗೆ ಪಕ್ಕಾಗಿದ್ದೇವೆ. ತಂತ್ರಜ್ಞಾನವು ಪಶ್ಚಿಮದ ಬಳುವಳಿ ಎಂದು ನಂಬುವ ಸ್ಥಿತಿ ಸೃಷ್ಟಿಸಿದ್ದು ಜಾಗತೀಕರಣದ ಪರಿಣಾಮ (ವಸಾಹತುಶಾಹಿ ಪರಿಣಾಮ ಎಂದೂ ಹೇಳಬೇಕಾಗುತ್ತದೆ).

ದುರ್ದೈವದ ಸಂಗತಿ ಏನೆಂದರೆ. ನಮ್ಮ ದೇಶದ ಶಿಕ್ಷಣ ಪದ್ದತಿ ಬಗ್ಗೆ ಖಚಿತ ಚರಿತ್ರೆ ಮಾಹಿತಿ ಇಲ್ಲ ಎನ್ನುವುದು. ಆ ವಿವರಗಳೇ ನಮಗೆ ಲಭ್ಯವಿಲ್ಲ ಎಂಬುದು ವಾಸ್ತವ. ನಾನು ಅಧ್ಯಯನದಿಂದ ಈ ಸತ್ಯವನ್ನು ಕಂಡುಕೊಂಡಿದ್ದೇನೆ. ಲೋಹಶಾಸ್ತ್ರವನ್ನು ಯಾರು ಕಲಿತಿದ್ದರು? ಎಲ್ಲಿ? ಲೋಹಶಾಸ್ತ್ರ ಕಲಿಕಾ ಪ್ರಯೋಗಗಳ ಸ್ವರೂಪ ಹೇಗೆ ಇತ್ತು? ಎಂಬುದರ ಕುರಿತ ಮಾಹಿತಿ ನಮಗೆ ಲಭ್ಯವಾಗುವುದಿಲ್ಲ. ನಮ್ಮಲ್ಲಿದ್ದ ಶಿಕ್ಷಣ ಪದ್ದತಿಯ ಬಗ್ಗೆ ಸಮರ್ಪಕವಾದ ಚರಿತ್ರೆಯನ್ನೇ ಇಲ್ಲಿ ಯಾರಿಗೂ ಬರೆಯಲು ಸಾಧ್ಯವಾಗಲಿಲ್ಲ. ಅಂಥ ಚರಿತ್ರೆಯ ದಾಖಲೆಯೇ ನಮ್ಮಲ್ಲಿಲ್ಲ. ಹೀಗಾಗಿ ಬಹುಪಾಲು ಸಂದರ್ಭಗಳಲ್ಲಿ ನಾವು 'ಹೀಗೆ ಇದ್ದಿರಬಹುದು' ಎಂದು ಊಹೆ ಮಾಡಬಹುದಷ್ಟೆ. ಈ ಬಗೆಯ ದಾಖಲೆಯ ಕೊರತೆಯ ದೇಶೀಯ ಶಿಕ್ಷಣ ವ್ಯವಸ್ಥೆಯ ಬಗ್ಗೆ ನಾವು ಚರ್ಚಿಸುವ ಕಾಲಕ್ಕೆ ಬಹುದೊಡ್ಡ ತೊಡಕಾಗುತ್ತದೆ. ಸ್ಥಳೀಯ ಶಿಕ್ಷಣ ಪದ್ದತಿಯ ಬಗ್ಗೆ ನಮಗಿರುವ ಅಜ್ಞಾನ ಎಷ್ಟಿದೆ ಎಂಬುದನ್ನು ನಾವು ಈ ಕೊರತೆಯ ಮೂಲಕವೇ ಅರ್ಥೈಕೊಳ್ಳಬಹುದು.

ನಾವು ದೇಶೀಯ ಶಿಕ್ಷಣ ಪದ್ದತಿಯ ಬಗ್ಗೆ ಚರ್ಚಿಸುವಾಗ ಈ ತೆರನಾದ ತೊಡಕಿನೊಂದಿಗೇ ತಳುಕು ಹಾಕಿಕೊಂಡ ಮತ್ತೊಂದು ಮುಖ್ಯ ಸಮಸ್ಯೆಯನ್ನು ಎದುರಿಸುತ್ತೇವೆ. ದೇಶೀಯತೆ, ಸ್ವದೇಶಿ ಕುರಿತು ಈಚೆಗೆ ಚರ್ಚೆಗಳಾಗುತ್ತಲೇ ಇವೆ. ನಮ್ಮಲ್ಲಿರುವುದು ನೂರಾರು ಪರಂಪರೆಗಳು, ಇವೆಲ್ಲವನ್ನೂ ಕಡೆಗಣಿಸಿ ಒಂದೇ ಒಂದು ಪರಂಪರೆಯನ್ನು ದೇಶೀಯ ಪರಂಪರೆ, ಒಂದೇ ಒಂದು ಬಗೆಯ ಶಿಕ್ಷಣವನ್ನೇ ಭಾರತೀಯ ಶಿಕ್ಷಣ ಎಂದು ಬಿಂಬಿಸುವಂಥ ಪ್ರಮಾದಗಳು ಸಲೀಸಾಗಿ ಏರ್ಪಡುವ ಕಾಲಘಟ್ಟದಲ್ಲಿ ನಾವಿದ್ದೇವೆ. 'ಗುರುಕುಲ' ಪರಂಪರೆ ಕೂಡಾ ದೇಶೀಯ ಶಿಕ್ಷಣಕ್ರಮ ಎಂದು ಹೇಳಲಾಗುತ್ತದೆ. ಅದು ಅಲ್ಲ ಎಂದು ನಾನು

ತಿರಸ್ಕರಿಸುವುದಿಲ್ಲ. ಈ ಗುರುಕುಲ ಪದ್ಧತಿ ಎನ್ನುವಂಥದ್ದು ಯಾವ ವಿಜ್ಞಾನ, ಶಾಸ್ತ್ರಗಳನ್ನು ಹೇಳಿಕೊಡುತ್ತಿತ್ತು? ಈ ಪದ್ಧತಿಯ ಶಿಕ್ಷಣಕ್ರಮ ಯಾವ ಶಾಸ್ತ್ರ ವಿಷಯಗಳನ್ನು ಬೋಧಿಸುತ್ತಿತ್ತು? ವೇದಾಧ್ಯಯನ, ಧಾರ್ಮಿಕ ಶಾಸ್ತ್ರ, ಸಂಸ್ಕೃತ ಇಂಥದ್ದನ್ನು ಹೇಳಿಕೊಡುವ ಶಿಕ್ಷಣಕ್ರಮದ ಸಾಮರ್ಥ್ಯ–ಅಸಾಮರ್ಥ್ಯ ಏನು? ಎಂಬ ಪ್ರಶ್ನೆಗಳನ್ನಿಟ್ಟುಕೊಂಡು ಚರ್ಚಿಸುವ ಅಗತ್ಯವಿದೆ. ನಮ್ಮ ಇಡೀ ನಾಗರಿಕತೆ, ಸಮಾಜದಲ್ಲಿ ಇದ್ದದ್ದು ಇದೊಂದೇ ಬಗೆಯ ಶಿಕ್ಷಣ ಕ್ರಮವಲ್ಲ ಎಂಬುದನ್ನೂ ನಾವು ಗಮನಿಸಬೇಕು. ಅದರ ಹೊರತಾಗಿಯೂ ಗಣಿತಶಾಸ್ತ್ರ, ಲೋಹಶಾಸ್ತ್ರ, ವಾಸ್ತುಶಿಲ್ಪ ಕೂಡಾ ಇತ್ತು. ಅದನ್ನು ಹೇಳಿಕೊಡಲಾಗುತ್ತಿತ್ತು. ಬೇಲೂರು–ಹಳೇಬೀಡು ದೇವಾಲಯ ಶಿಲ್ಪಗಳನ್ನು ನೋಡ್ತಾ ಇರುವಾಗ 'ಕೈ ಮುಗಿದು ಒಳಗೆ ಬಾ' ಅಂತ ನಮಗೆ ನಾವೇ ಹೇಳಿಕೊಳ್ಳುತ್ತೇವೆ. ಆದರೆ ಆ ಶಿಲ್ಪಕಲಾ ದೇವಾಲಯ ರೂಪುಗೊಳ್ಳಲು ಏನೆಲ್ಲಾ ಶ್ರಮ. ಕಲಿಕೆಗಳಿರುತ್ತವೆ ಎಂಬುದು ಹೊಳೆಯುವುದೇ ಇಲ್ಲ. ಆ ದೇವಾಲಯದ ಒಂದೇ ಒಂದು ಕೆತ್ತನೆ ಮಾಡಲು ಏನೆಲ್ಲಾ ಸಿದ್ಧತೆ ಬೇಕಾಗುತ್ತಿತ್ತು. ಆ ಶೈಲಿಯ ವಾಸ್ತುಶಿಲ್ಪದ ಕಂಬಗಳನ್ನು ಒಂದು ಲೇಥ್ (Lathe) ಮೂಲಕ ಹೊರಳಿಸಬೇಕಾಗುತ್ತಿತ್ತು. ಇವುಗಳನ್ನು ಕೈಯಿಂದ ಹೊರಳಿಸಲಾಗುತ್ತಿರಲಿಲ್ಲ. ವಿಶೇಷ ಶಿಲೆ ತೆಗೆದುಕೊಂಡು ಲೇಥ್ ಮೂಲಕ ಹೊರಳಿ ಒಂದು ಆಕಾರ ಕೊಡಬೇಕಾಗುತ್ತಿತ್ತು. ಅದಕ್ಕಾಗಿ ಅಷ್ಟೇ ಬಲಶಾಲಿಯಾದ ಲೋಹಶಾಸ್ತ್ರ, ಗಣಿತಶಾಸ್ತ್ರ ಗೊತ್ತಿರುತ್ತಿತ್ತು. ಅಲ್ಲದೇ ಇದಕ್ಕೆ ಪೂರಕವಾಗಿ ಪ್ರಬುದ್ಧ ತಂತ್ರಜ್ಞಾನ ಇಲ್ಲಿ ನೆಲೆಗೊಂಡಿತ್ತು. ಈ ತಂತ್ರಜ್ಞಾನವನ್ನು ಕುರಿತು ಗುರುಕುಲ ಪದ್ಧತಿಯ ಶಿಕ್ಷಣಕ್ರಮದಲ್ಲಿ ಹೇಳಿಕೊಡಲಾಗು–ತ್ತಿರಲಿಲ್ಲ.

ಅದನ್ನು ಕಲಿಸುವ ಜ್ಞಾನಮೂಲಗಳನ್ನು ಹುಡುಕಿದರೆ ಕಡಿಮೆ ಮಾಹಿತಿ ದೊರಕುತ್ತದೆ. ರೋಮಿಲಾ ಥಾಪರ್ ಎಂಬ ಇತಿಹಾಸತಜ್ಞೆ ಈ ಕುರಿತ ಮಾಹಿತಿಯನ್ನು ನೀಡುತ್ತಾರೆ. ಅವರ ಪ್ರಕಾರ ಆ ಕಾಲದಲ್ಲಿ ಕಸುಬುಗಳ (Skilled Professions) ಬಗ್ಗೆ ತರಬೇತಿ ನೀಡಲು ಗಿಲ್ಡ್‌ಗಳು ಇರುತ್ತಿದ್ದವು. ಆಧುನಿಕ ಭಾಷೆಯಲ್ಲಿ ನಾವೀಗ ಅಂಥವುಗಳನ್ನು ಐಟಿಐ ಎಂದು ಗುರುತಿಸುತ್ತಿದ್ದೇವೆ. ಆ ರೀತಿಯ ತಂತ್ರಜ್ಞಾನ ಹಿಂದಿನಿಂದಲೂ ಇದ್ದರೂ ನಾವದನ್ನು ಗುರುತಿಸುವಲ್ಲಿ ವಿಫಲರಾಗಿದ್ದೇವೆ. ಇದನ್ನು ಸ್ಥಳೀಯ ದೇಶೀಯ ಶಿಕ್ಷಣ ಪದ್ಧತಿ ಎಂದು ಪರಿಗಣಿಸಬೇಕು ಎಂಬುದು ನನ್ನ ವಾದ. ಕಸುಬು–ಕೌಶಲ್ಯಾಧಾರಿತ ಈ ಶಿಕ್ಷಣ ಕ್ರಮ, ಅದಕ್ಕೆ ಅವಶ್ಯಕವಾದ ಶಾಸ್ತ್ರ ಹೇಳಿಕೊಡುವ ಶಿಕ್ಷಣ ಪದ್ಧತಿ ಇಲ್ಲಿ ಇತ್ತು. ಅದು ಸಮರ್ಪಕವೂ ಆಗಿತ್ತು. ಆದರೆ, ವಸಾಹತುಶಾಹಿ ನಂತರ ನಮ್ಮದೇ ಆದ ದೇಶೀಯ ಕೌಶಲ್ಯದ ಬಗ್ಗೆ ತಿಳಿದುಕೊಳ್ಳದಂತಹ

ದುಃಸ್ಥಿತಿಯಲ್ಲಿದ್ದೇವೆ. ಈಗಿನ Engineering ಶಿಕ್ಷಣ ಮಾದರಿಯಲ್ಲಿಯೇ ಆಗ ಗಿಲ್ಡ್‌ಗಳು ನೇರವಾಗಿ ತಾಂತ್ರಿಕ ಶಿಕ್ಷಣವನ್ನು ನೀಡುತ್ತಿದ್ದವು.

ಈ ಶಿಕ್ಷಣ ಪದ್ಧತಿಯ ಬಗೆಗೆ ನಮ್ಮಲ್ಲಿ ಮರೆವು ಉಂಟಾಗಿದ್ದು ಹೇಗೆ? ಅದರ ಬದಲಾಗಿ ಆಧುನಿಕ ತಂತ್ರಜ್ಞಾನ ಎಷ್ಟರಮಟ್ಟಿಗೆ ಸ್ಥಳೀಯ ಸಮಾಜದ ಅಗತ್ಯಗಳನ್ನು ಪೂರೈಸುತ್ತದೆ? ನಮ್ಮ ದೇಶಕ್ಕೆ ಎಷ್ಟು ಪ್ರಯೋಜನಕಾರಿ? ಎಂದು ಆಲೋಚಿಸುವ ಸಂದರ್ಭದಲ್ಲಿ ಇಂದು ಪಶ್ಚಿಮದ ವಿಜ್ಞಾನವೇ ಎಲ್ಲ ಕಾಲದಲ್ಲಿಯೂ Universal ಎಂಬಂತೆ ಬಿಂಬಿಸುವ ಪ್ರಚಾರಕ್ರಮ ವ್ಯಾಪಕವಾಗಿದೆ. ಯುರೋಪಿನ ತಂತ್ರಜ್ಞಾನದ ಶಕ್ತಿ ಸಾರ್ವಕಾಲಿಕ, ಅಲ್ಲಿಯ ತಂತ್ರಜ್ಞಾನ ಇಲ್ಲಿಯೂ ಅನ್ವಯವಾಗಿರಬೇಕು ಎಂಬ ನಿಲುವುಗಳು ಈ ಪ್ರಚಾರಕ್ರಮದ ಭಾಗವಾಗಿಯೇ ವ್ಯಕ್ತವಾಗುತ್ತಿವೆ. ನಮ್ಮ ದೇಶದ ತಂತ್ರಜ್ಞಾನವು ಇಲ್ಲಿಯ ಅಗತ್ಯಗಳಿಗೆ ಸ್ಪಂದಿಸುವ ತಂತ್ರಜ್ಞಾನ ಆಗಿಲ್ಲ, ಸ್ವಲ್ಪಮಟ್ಟಿಗೆ ಆಗಿದೆ ಅಷ್ಟೆ ಎನ್ನುವಂತಹ ತುಚ್ಛೀಕರಣ ಇಲ್ಲಿದೆ. ಜಾಗತೀಕರಣದ ಅಪಾಯವನ್ನು ನಾವು ಇಲ್ಲಿ ಗುರುತಿಸಬಹುದು. ಪಶ್ಚಿಮದ ಸಂದರ್ಭದಲ್ಲಿ ಯಾವ ರೀತಿಯ ಶಿಕ್ಷಣಕ್ರಮ ಸಮರ್ಪಕವಾಗಿದೆಯೋ ಅದು ಇಲ್ಲಿಯೂ ಆಗಿದೆ ಎಂಬ ತಪ್ಪು ಭಾವನೆಯನ್ನು ಜಾಗತೀಕರಣ ನೆಲೆಗೊಳಿಸುತ್ತದೆ ಎಂಬುದನ್ನು ನಾವು ಗಮನಿಸಬೇಕು.

ಎರಡು ನಿದರ್ಶನಗಳನ್ನು ಮುಂದಿಟ್ಟುಕೊಂಡು ಜಾಗತೀಕರಣದ ಅಪಾಯಕಾರಿ ಸ್ವರೂಪವನ್ನು ಅರ್ಥೈಸಬಹುದು. ಮೊದಲನೇ ನಿದರ್ಶನ ಇಂಗ್ಲಿಷ್ ಶಿಕ್ಷಣಕ್ರಮಕ್ಕೆ ಸಂಬಂಧಿದ್ದು. ಇಂಗ್ಲಿಷ್‌ನ್ನು ಭಾರತದ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಬೇಕು ಎಂಬ ನಿರ್ಧಾರವನ್ನು ಬ್ರಿಟಿಷರು ತೆಗೆದುಕೊಂಡ ಮೇಲೆ ಇಲ್ಲಿಯ ಪ್ರತಿಭಾನ್ವಿತರು ಪಶ್ಚಿಮ ಮಾದರಿಯ ಇಂಗ್ಲಿಷ್ ಶಿಕ್ಷಣ ಬೇಕು ಎಂಬ ಬೇಡಿಕೆಯನ್ನು ಸಲ್ಲಿಸಿದ್ದರು. (ಅದೇ ಆಧುನಿಕ ಶಿಕ್ಷಣ ಎಂಬ ನಂಬಿಕೆ ಅವರೆಲ್ಲರದಾಗಿತ್ತು. ಆ ಕಾಲದಲ್ಲಿನ ದೊಡ್ಡ ವಾಗ್ವಾದ ಎಂದರೆ ಇಲ್ಲಿ ಆಳ್ವಿಕೆ ಮಾಡುತ್ತಿದ್ದ ಬ್ರಿಟಿಷರಿಗೆ ಎಂಥ ಶಿಕ್ಷಣ ಬೆಂಬಲಿಸಬೇಕು ಎನ್ನುವುದೇ ಆಗಿತ್ತು. ಒಂದು ಕಡೆ ಮೆಕಾಲೆ 'Minutes on Education' ಕೃತಿಯಲ್ಲಿ ಶಿಕ್ಷಣಕ್ರಮದ ಕುರಿತು ತಮ್ಮ ನಿಲುವುಗಳನ್ನು ಸ್ಪಷ್ಟಪಡಿದ್ದಾನೆ. 'ಭಾರತದಲ್ಲಿ ಆಧುನಿಕ ಶಿಕ್ಷಣವನ್ನು ಇಂಗ್ಲಿಷ್ ಮಾಧ್ಯಮದ ಮೂಲಕ ಕೊಡಬೇಕು' ಎಂಬುದು ಅವನ ನಿಲುವಾಗಿತ್ತು. ವಿದ್ಯಾರ್ಥಿಗಳನೇಕರು ಈ ಭಾಗವನ್ನು ಮಾತ್ರ ಓದಿಕೊಳ್ಳುತ್ತಾರೆ. ಆದರೆ, ಮೆಕಾಲೆ ನೀಡಿದ ಕಾರಣಗಳನ್ನು ಓದುವುದೇ ಇಲ್ಲ. 'ಸಂಸ್ಕೃತದಲ್ಲಿರುವ ಸಾಂಪ್ರದಾಯಿಕ ಜ್ಞಾನದ ಪುಸ್ತಕ ಹುಡುಕಿ ಓದಿದರೆ ಅದರಲ್ಲಿ ಅರ್ಥಪೂರ್ಣವಾದ, ಮೌಲ್ಯಯುತವಾದದ್ದು ಎಷ್ಟು ಕಡಿಮೆ ಇದೆ ಅಂದರೆ ಒಂದು ಕಟ್ಟಿಗೆ ಕಪಾಟಿನ ಒಂದು ಶೆಲ್ಫ್‌ನಲ್ಲಿಡುವಷ್ಟು ಮಾತ್ರ' ಎಂದು ಮೆಕಾಲೆ ಸ್ಪಷ್ಟ ಕಾರಣವನ್ನು ಪ್ರಸ್ತಾಪಿಸಿದ್ದಾನೆ. ಇಡೀ ಇಂಡಿಯಾದ

ಇಷ್ಟು ಸಾವಿರ ವರ್ಷಗಳಲ್ಲಿ ಉತ್ಪಾದಿತವಾದ ಶಾಸ್ತ್ರ ಎಷ್ಟರಮಟ್ಟಿಗೆ ನಿಷ್ಪ್ರಯೋಜಕ ಎಂದರೆ ಒಳ್ಳೆಯದನ್ನು ಆಯ್ಕೆ ಮಾಡಿಕೊಂಡರೆ ಎಷ್ಟು ಕಡಿಮೆ ಅಂದರೆ ಶೆಲ್ಫ್‌ನಲ್ಲಿಡುವಷ್ಟು ಮಾತ್ರ ಎಂದು ಅವನು ಈ ಮೂಲಕ ಗುರುತಿಸಿದ್ದಾನೆ. ಹೀಗೆ ಗುರುತಿಸಿ ಆಧುನಿಕ ಇಂಗ್ಲಿಷ್ ಶಿಕ್ಷಣದ ಅನಿವಾರ್ಯತೆಯನ್ನು ಆತ ಮನಗಾಣಿಸಿದ್ದಾನೆ. ಅದರ ಮೂಲಕವೇ ಈ ನಾಗರಿಕತೆಯನ್ನು ತಿದ್ದುವುದು ಸಾಧ್ಯ ಎಂಬುದನ್ನು ಸ್ಪಷ್ಟಪಡಿಸಿದ್ದಾನೆ. 'ನಾವು ಮುಂಚೂಣಿ ನಾಗರಿಕತೆಯಿಂದ ಬಂದವರು ಹಿಂದುಳಿದ ನಾಗರಿಕತೆಯನ್ನು ಈ ಆಧುನಿಕ ಶಿಕ್ಷಣದ ಮೂಲಕ ತಿದ್ದಬಹುದು' ಎಂದು ಪ್ರತಿಪಾದಿಸಿದ್ದಾನೆ.

ಒಂದು ಕ್ಷಣ ಯೋಚಿಸಿ ಮೆಕಾಲೆಯ ಧಾಟಿಯಲ್ಲಿಯೇ ಈಗಲೂ ನಾವು ಆಲೋಚಿಸುತ್ತಿದ್ದೇವೆ ಎಂದೆನಿಸುವುದಿಲ್ಲವೇ? ನಮ್ಮ ನೆಲದ ಶಿಕ್ಷಣ ವ್ಯವಸ್ಥೆಗಳು ನಿಷ್ಪ್ರಯೋಜಕ, ಇವತ್ತು ವಿಶ್ವದ ಮಾರುಕಟ್ಟೆ ಏನು ಕೇಳುತ್ತದೋ ಅದು ಮಾತ್ರ ಶಿಕ್ಷಣ. ಅದನ್ನು ಬಿಟ್ಟರೆ ಬೇರಾವುದೂ ಶಿಕ್ಷಣ ಅಲ್ಲವೇ ಅಲ್ಲ ಎಂಬ ನಂಬಿಕೆ ಎಲ್ಲರಲ್ಲೂ ಇವತ್ತು ಬೇರೂರಿದೆ. ಮೆಕಾಲೆಯ ಕಾಲದಲ್ಲಿ ಹೇಳಿದ್ದನ್ನೇ, ಒಪ್ಪಿಕೊಂಡಿದ್ದನ್ನು ಈ ಕಾಲದಲ್ಲಿಯೂ ಹೇಳುತ್ತಲೇ ಇದ್ದೇವೆ. ಆವಾಗ ಇಲ್ಲಿಯ ಶಾಸ್ತ್ರವು ವಿಜ್ಞಾನಶಾಸ್ತ್ರವೇ ಅಲ್ಲ ಎಂಬ ನಂಬಿಕೆಯ ಮೇಲೆ ಇಲ್ಲಿ ಇಂಗ್ಲಿಷ್ ಶಿಕ್ಷಣ ಇಲ್ಲಿ ನೆಲೆಯೂರಲಾರಂಭಿತು. ಅಲ್ಲಿಂದಾಚೆಗೆ ಇಂಗ್ಲಿಷ್ ಸಾಹಿತ್ಯವನ್ನೇ ಓದಲೇಬೇಕು, ಮಿಲ್ಟನ್, ಶೇಕ್ಸ್‌ಪಿಯರ್ ಇವರೆಲ್ಲರನ್ನೂ ಓದಲೇಬೇಕು ಎನ್ನುವಂತಹ ಪಠ್ಯಕ್ರಮ ಶುರುವಾದದ್ದು. ಅದು ಇವತ್ತಿಗೂ ಹೆಚ್ಚು ಕಡಿಮೆ ಹಾಗೆಯೇ ಉಳಿದಿದೆ...! ಅಂದರೆ ಒಬ್ಬ ಕಾಳಿದಾಸನ ನಾಟಕಗಳನ್ನು ಓದದೇ ಇದ್ದರೂ ಶೇಕ್ಸ್‌ಪಿಯರ್‌ನನ್ನು ಓದಿದರೆ ಸಾಕು! ಒಬ್ಬ ವಾಲ್ಮೀಕಿಯನ್ನು ಎಂದೂ ಕವಿ ಎಂದು ಪರಿಗಣಿಸದೇ ಇದ್ದರೂ ಸಹ ಒಬ್ಬ ಮಿಲ್ಟನ್‌ನನ್ನು ಓದೋಕೆ ಬಹಳ ಕಷ್ಟವಾದರೆ ಗೈಡ್‌ಗಳನ್ನು ಓದಿದರೂ ಸಾಕು ಎಂಬ ಪರಂಪರೆ ಆವಾಗಿನಿಂದಲೂ ಈಗಿನವರೆಗೂ ಮುಂದುವರೆದುಕೊಂಡು ಬಂದಿದೆ.

ಅಂದರೆ ಇಲ್ಲಿದ್ದಂತಹ ಭಾಸ, ಭವಭೂತಿ, ಕಾಳಿದಾಸ, ಶೂದ್ರಕ ಇವರಾರೂ ಸಾಹಿತಿಗಳಲ್ಲ. ಮಹಾಭಾರತ ಎನ್ನುವಂಥದ್ದು ವಿಶ್ವದ ಅತಿ ಶ್ರೇಷ್ಠ ಕಥಾನಕ ಅಲ್ಲವೇ ಅಲ್ಲ. ಎಂಬ ಪ್ರಮೇಯದಿಂದ ಈ ಆಧುನಿಕ ಶಿಕ್ಷಣದ ಪರಿಕ್ರಮ ಇಲ್ಲಿ ಶುರುವಾಯಿತು. ಅದನ್ನು ಆವಾಗಲೂ ಒಪ್ಪಿಕೊಂಡಿದ್ದೆವು. ಈಗಲೂ ಒಪ್ಪಿಕೊಳ್ಳುತ್ತಿದ್ದೇವೆ. ವಸಾಹತುಶಾಹಿಯ ಮುಂದುವರಿಕೆಯಾಗಿಯೇ ನಾನಂತೂ ಈ ಜಾಗತೀಕರಣವನ್ನು ನೋಡುತ್ತೇನೆ. ಹೊಸದಾಗಿ ಈ ಜಾಗತೀಕರಣ ಹುಟ್ಟಿಕೊಂಡಿಲ್ಲ. ಅದು ವಸಾಹತುಶಾಹಿಯ ಮುಂದುವರಿಕೆಯಾಗಿಯೇ ನಾವಿಲ್ಲಿ ನೋಡುತ್ತೇವೆ. ಇದರಿಂದ ಉಂಟಾದ ಏರುಪೇರುಗಳನ್ನು ಗಮನಿಸಬಹುದು. ಆ ಏರುಪೇರುಗಳು ಈಗಲೂ ಬಹುದೊಡ್ಡ ಸವಾಲುಗಳಾಗಿಯೇ ಕಾಡುತ್ತಿವೆ. ಇಂಗ್ಲಿಷ್

ಮಾತ್ರ ಜ್ಞಾನದ ಮಾಧ್ಯಮ, 'ಇಂಗ್ಲಿಷ್ ಮೂಲಕ ಮಾತ್ರ ವಿಶ್ವದ ಪರಿಪಕ್ವ ಜ್ಞಾನ ಸಿಗುತ್ತದೆ. ನಿಮ್ಮ ಭಾಷೆಗಳಾದ ಕನ್ನಡ, ಬೆಂಗಾಲಿ, ಮರಾಠಿ ಇತ್ಯಾದಿಗಳೆಲ್ಲವೂ ಬರೀ ಸ್ಥಳೀಯ ಭಾಷೆಗಳು. ಅವುಗಳಿಂದ ಸಿಕ್ಕುವ ಜ್ಞಾನ ಸ್ಥಳೀಯ ಜ್ಞಾನ. ನೀವು ಕೂಪಮಂಡೂಕಗಳಾದರೆ 'ಇದನ್ನಷ್ಟೇ ನೆಚ್ಚಿಕೊಳ್ಳುತ್ತೀರಿ. ಆದರೆ ವಿಶ್ವಜ್ಞಾನ ಲಭಿಸುವುದು ಇಂಗ್ಲಿಷ್‌ನಿಂದ ಮಾತ್ರ ಸಾಧ್ಯ' ಎಂದು ನಂಬಿಸಿ ಜಾಗತೀಕರಣ ಸ್ಥಳೀಯದ್ದರಲ್ಲಿ ಇರುವ ನಂಬಿಕೆಗಳನ್ನೇ ನಾಶ ಮಾಡುತ್ತದೆ. ಸ್ಥಳೀಯ ಅನ್ನೋದನ್ನು ವಿಶ್ವಾತ್ಮಕ ಅನ್ನೋದರ ಜೊತೆಗೆ ವೈದೃಶ್ಯ ಮಾಡಿಕೊಂಡು 'ಇಂಗ್ಲಿಷ್ ಮೂಲಕ ಬರುವುದಲ್ಲವೂ ವಿಶ್ವಾತ್ಮಕ, ಕನ್ನಡದ ಮೂಲಕ ಬರುವುದೆಲ್ಲವೂ ಸ್ಥಳೀಯ' ಎಂದು ನಾವು ಗುರುತಿಸುತ್ತೇವೆ. ಜಾಗತೀಕರಣ ಆರಂಭವಾದ ನಂತರ ನಮ್ಮ ದೇಶದ ಮಾಧ್ಯಮಗಳು ನಂಬಿರುವ ಸತ್ಯ ಏನು? ಪ್ರತಿದಿನ ಬೆಳಿಗ್ಗೆ ಕರ್ನಾಟಕದಲ್ಲಿ ನಡೆಯುತ್ತಿರುವ ಚರ್ಚೆ ಏನು? ಇಂಗ್ಲಿಷ್ ಮೊದಲನೇ ಇಯತ್ತೆಯಿಂದ ಬೇಕೋ ಬೇಡವೋ? ಇದರ ಹಿಂದೆ ಪ್ರಬಲವಾಗಿರುವ ಚರ್ಚೆ ಎಂದರೆ 'ಸ್ಥಳೀಯ ಭಾಷೆಗಳಿಂದ ಸ್ಥಳೀಯ ಜ್ಞಾನ ಮಾತ್ರ ಸಿಗುತ್ತದೆ. ವಿಶ್ವಕ್ಕೆ ಕನ್ನಡಿಯಾಗಿರುವುದು ಇಂಗ್ಲಿಷ್ ಮಾತ್ರ' ಇದು ತಪ್ಪು. ನಾವು ಏನು ಹೇಳಬೇಕು ಎಂದರೆ ಇಂಗ್ಲಿಷ್ ಕಾಡುಭಾಷೆಯಾಗಿದ್ದಾಗಲೇ ನಮ್ಮಲ್ಲಿ ಪಂಪ ಮಹಾಕಾವ್ಯ ಬರೆದಿದ್ದ ಅಂತ ನಾನು ಹೇಳಿದರೆ ಸಾಹಿತ್ಯ, ಕಾವ್ಯ ಇವೆಲ್ಲವೂ ಹಳೆಯ ಕಾಲದ್ದು ಎಂದು ನೀವು ಹೇಳುತ್ತೀರಿ. ಅದರಲ್ಲಿ ವಿಜ್ಞಾನ, ಆಧುನಿಕ ವಿಜ್ಞಾನ ಇದಿಲ್ಲ ಅಂತ ಕೇಳ್ತೀರಿ. ನಾನು ಇದಕ್ಕೆ ನನ್ನ ವಿದ್ಯಾರ್ಥಿಗಳಿಗೆ ಯಾವಾಗಲೂ ಒಂದು ಸರಳ ಪ್ರಶ್ನೆ ಕೇಳುತ್ತಿರುತ್ತೇನೆ. ಭಾರತದ ಅನಕ್ಷರಸ್ಥ ರೈತರು, ಎಂದಿಗೂ ಇಂಗ್ಲಿಷ್ ಕಲಿಯದ ಇದ್ದಂತಹ ರೈತರು ತಮ್ಮ ಕೃಷಿಯ ಜ್ಞಾನದ ಮೂಲಕ ಭತ್ತದ ಎಷ್ಟು ತಳಿಗಳ ಕುರಿತ ಜ್ಞಾನ ಹೊಂದಿದ್ದರು? ಯಾವಾಗಲಾದರೂ ನಾವು ಇದನ್ನು ಸಂಶೋಧನೆ ಮಾಡಿದ್ದೇವಾ? ನಾನು ಕೇಳ್ತಾ ಇರೋದು ಪಂಪನ ಕಾವ್ಯದ ಬಗ್ಗೆ ಅಲ್ಲ. ಇದು ತಳಿಶಾಸ್ತ್ರದ ಕುರಿತ ಪ್ರಶ್ನೆ. ಭತ್ತ ಬೆಳೆಯುತ್ತಿದ್ದ ಈ ದೇಶದ ರೈತರು ತಮ್ಮಲ್ಲಿಯ ಪಾರಂಪರಿಕ ಜ್ಞಾನದ (ಅದು ವಿಜ್ಞಾನವಲ್ಲದೇ ಮತ್ತೇನೂ ಅಲ್ಲ) ಅವರಿಗೆ ಗೊತ್ತಿರುವ ತಳಿಶಾಸ್ತ್ರ ವಿಜ್ಞಾನದ ಮೂಲಕ ಭತ್ತದ ಎಷ್ಟು ತಳಿಗಳು ಗೊತ್ತಿದ್ದವು ಎಂದರೆ, ವಿಜ್ಞಾನಿಗಳೇ ಹೇಳುವ ಹಾಗೆ ಹತ್ತಿರ ಹತ್ತಿರ ಒಂದು ಲಕ್ಷದಷ್ಟು ತಳಿಗಳು ಅವರಿಗೆ ಗೊತ್ತಿದ್ದವು. ಅಷ್ಟು ತಳಿಗಳ ಪರಿಚಯ ಇಲ್ಲಿ ಇತ್ತು. ಇದು ಅತಿಶಯೋಕ್ತಿಯಲ್ಲ. ನಮ್ಮ ಶಿವಮೊಗ್ಗದ ಕಾಲೇಜು ವಿದ್ಯಾರ್ಥಿಗಳು ಶಿಕಾರಿಪುರದ ಸುತ್ತಮುತ್ತಲೂ ೧೫ ಚದರ ಮೈಲಿ ಹೋಗಿ ೩೨ ಬಗೆಯ ಭತ್ತದ ತಳಿಗಳ ವೆರೈಟಿ ಬಗ್ಗೆ ಮಾಹಿತಿ ಸಂಗ್ರಹಿದ್ದಾರೆ. ಇದು ವಿಜ್ಞಾನ ಹೌದೋ? ಅಲ್ಲವೋ?

ಇಂಗ್ಲಿಷರ ವಿರುದ್ಧ ಇಂಗ್ಲೀಷ್ ಮೂಲಕವ ಹೋರಾಟ ಮಾಡಬೇಕು ಎಂಬ ಅಪೇಕ್ಷೆಯಿತ್ತು. ಇಂಗ್ಲೀಷ್ ಬಳಕೆಗೆ ಇರುವಂಥ ನಮ್ಮ ಚರಿತ್ರೆಯನ್ನೇ ನಾವು ಮರೆತಿದ್ದೇವೆ. ಇಂಗ್ಲಿಷ್‌ನಲ್ಲಿ ನಾವು ಜಗತ್ತಿನೊಂದಿಗೆ ಜಗಳ

ಕೂಡಾ ಮಾಡಿದ್ದೇವೆ. ಕೇವಲ ಸಂವಹನ ಮಾತ್ರವಲ್ಲ. ಇಂಗ್ಲಿಷ್ ರಾಜಕೀಯದ ಜೊತೆಗೆ ನಮ್ಮ ಸಂವಾದ ನಡೆಸಿದ್ದೇವೆ. ಇಂಗ್ಲಿಷ್ ಮೂಲಕ ಕನ್ನಡದ ನೆಲದ ಕಥೆಗಳನ್ನು ಹೇಳಿದ್ದೇವೆ. ರಾಜಾರಾವ್ ಅದನ್ನು ಮಾಡಿ ತೋರಿದ್ದಾರೆ. ಈಗ ಏನಾಗಿದೆ ಎಂದರೆ, ಈ ಜಾಗತೀಕರಣದ ಭರಾಟೆಯಲ್ಲಿ ನೀವು ಇಂಗ್ಲಿಷ್ ಶಿಕ್ಷಕರಾದರೆ ಇಂಗ್ಲಿಷ್‌ನ್ನು ಈ ಉದ್ದೇಶಗಳಿಗಷ್ಟೇ ಹೇಳಿಕೊಡಬೇಕು; ಸಂವಹನಕ್ಕೆ ಮಾತ್ರ ಅದನ್ನು ಹೇಳಿಕೊಡಬೇಕು. ಆ ಸಂವಹನ ಯಾಂತ್ರಿಕವಾದಂತಹ ಸಂವಹನ. ಸಂವಹನದ ಕೆಲವು ಕಲೆಗಳನ್ನು ಹೇಳಿಕೊಟ್ಟರೆ ಸಾಕು ಎಂಬ ಪರಿಸ್ಥಿತಿ ಯಾಕೆ ನಿರ್ಮಾಣವಾಗಿದೆ ಎಂಬುದನ್ನು ಕೂಡಾ ಚರ್ಚಿಸಬೇಕಾಗಿದೆ. ಇಂಥ ಸಂದರ್ಭದಲ್ಲಿ ನಮಗೆ ಜಾಗತಿಕ ತಂತ್ರದ ಸವಾಲು ಎದುರಿಸುವುದು ಸಾಧ್ಯವಾಗುತ್ತಿಲ್ಲ. ನಾನು ವಿಶ್ವಸ್ಥವಾಗಿರುವಂಥದ್ದು. ನಾನು ಎಲ್ಲರಿಗೂ ಎಲ್ಲ ಕಾಲದಲ್ಲೂ ಸಮಾನವಾಗಿ ಬೇಕಾಗಿರುವಂಥದ್ದು. ನಾನು ಎಲ್ಲ ಸಾಂಸ್ಕೃತಿಕ ಸಂದರ್ಭದಲ್ಲಿ ಸಮಾನವಾಗಿ ಏಕರೂಪವಾಗಿ ಎಲ್ಲರಿಗೂ ಬೇಕಾಗಿರುವಂಥದ್ದು' ಎಂಬುದು ಆ ಜಾಗತಿಕ ತಂತ್ರೋಪಾಯ.

ಇದನ್ನು ನಾವು ಪ್ರತಿರೋಧಿಸಲು ನಮ್ಮ ದೇಶೀ ಶಿಕ್ಷಣದ ಬಗ್ಗೆ ಏನು ಹೇಳಬೇಕಾಗುತ್ತದೆ ಎಂದರೆ ನಾವು ಯಾವುದನ್ನೂ ತಿರಸ್ಕರಿಸುವುದಿಲ್ಲ. ನಾವು ಸ್ವೀಕರಿಸಿದರೆ ಅದನ್ನು ಇಲ್ಲಿಯ ಸಮಾಜಕ್ಕೆ ಅನ್ವಯ ಮಾಡಿಕೊಂಡು ಬಳಸಿಕೊಳ್ಳುತ್ತೇವೆ. ಅದು ಯಾವ ತಂತ್ರಜ್ಞಾನವೇ ಇರಲಿ, ಯಾವುದೇ ಇರಲಿ, ಉದಾಹರಣೆಗೆ ಮಾಹಿತಿ ತಂತ್ರಜ್ಞಾನ, ಕಂಪ್ಯೂಟರ್ ಶಿಕ್ಷಣ ಅನಿವಾರ್ಯವೆನಿಸಿದೆ. ಇದರೊಂದಿಗೆ ತಳುಕು ಹಾಕಿಕೊಂಡ ಎರಡು ಪ್ರಶ್ನೆಗಳನ್ನು, ನಮ್ಮ ಶಿಕ್ಷಣಕ್ರಮ ಸರಿಯಾಗಿ ಅರ್ಥೈಸಿಕೊಂಡಿಲ್ಲ. ಕಂಪ್ಯೂಟರ್ ಶಿಕ್ಷಣ ಕೊಡುವಾಗ ಸ್ವಲ್ಪ ಏರುಪೇರಾದರೆ (ಶ್ರೀಮಂತ ಮತ್ತು ಬಡವರಿಗೆ ಕೊಡಮಾಡುವ ಸಂದರ್ಭ) ಇನ್ನೂ ಎರಡು ವರ್ಗ ಸೃಷ್ಟಿಯಾಗುತ್ತದೆ. ಕಂಪ್ಯೂಟರ್ ಶಿಕ್ಷಣ ಬಲ್ಲವರು ಮತ್ತು ಗೊತ್ತಿಲ್ಲದವರು. ಆ ವರ್ಗಗಳಿಗೆ ಕೊಡುವ ಸಾಮಾಜಿಕ ನ್ಯಾಯವೂ ಬದಲಾಗುತ್ತದೆ. ಎಲ್ಲ ದೃಷ್ಟಿಯಿಂದಲೂ ವಿಜ್ಞಾನ, ಮಾಹಿತಿ ತಂತ್ರಜ್ಞಾನವೇ ದೊಡ್ಡದು ಅಂತ ಜಾಗತೀಕರಣ ಆದಾಗಲೇ ಬಿಂಬಿಸಿದೆ. ಅದನ್ನು ಮೀರಿ ಇನ್ನಾವುದೂ ಇಲ್ಲ ಎಂಬುದನ್ನೂ ಹೇಳಿದೆ. 'ಮತ್ತೆ ಈ ತಂತ್ರಜ್ಞಾನವನ್ನು, ಮಾಹಿತಿ ತಂತ್ರಜ್ಞಾನದ ಶಿಕ್ಷಣ ಕೊಡುವ ಕಾಲಕ್ಕೆ ಅದನ್ನು ಕಲಿಸಿಕೊಟ್ಟುಬಿಡಿ, ಅದರಿಂದ ನೀವು ಇವತ್ತು ಜ್ಞಾನದ ದೃಷ್ಟಿಯಿಂದ ಅತಿದೊಡ್ಡ ಪ್ರಜಾಪ್ರಭುತ್ವದಲ್ಲಿ ನಾಗರೀಕರಾಗಿದ್ದೀರಿ?' ಎಂದು ಹೇಳುತ್ತದೆ. 'ಜಾಗತೀಕರಣದ ಮುಂಚೆ ಜ್ಞಾನ ಎನ್ನುವುದು ಯಾರದೋ ಕೈಯಲ್ಲಿತ್ತು. ಮಾಹಿತಿ ತಂತ್ರಜ್ಞಾನ ಬಂದ ನಂತರ ಇಡೀ ಜಗತ್ತೇ ಜ್ಞಾನದ ಪ್ರಜಾಪ್ರಭುತ್ವವಾಗಿದೆ. ಇಲ್ಲಿ ಎಲ್ಲರೂ ಸಮಾನರು. ನೀವು ಕಂಪ್ಯೂಟರ್ ಎದುರು ಕೂತುಕೊಂಡರೆ ಇಂಟರ್‌ನೆಟ್ ಮೂಲಕ ಜಗತ್ತಿನ ಎಲ್ಲ ಜ್ಞಾನಗಳೂ ಲಭ್ಯವಾಗುತ್ತವೆ. ಹಿಂದಿನ ಕಾಲದಲ್ಲಿ ದ್ರೋಣ ಗುರು ಆದರೆ ಹೆಬ್ಬೆರಳು ಕೇಳ್ತಾ ಇದ್ದ. ಈಗ ನೀವು

ಹೆಬ್ಬೆರಳು ಕೊಡಬೇಕಾಗಿಲ್ಲ. ಈಗ ಕ್ಲಿಕ್ ಮಾಡಿದರೆ ಜಗತ್ತಿನ ಎಲ್ಲ ಜ್ಞಾನ ಸಿಗುತ್ತದೆ? ಇದೆಲ್ಲವನ್ನೂ ನಾವು ಒಪ್ಪಿಕೊಂಡಿದ್ದೇವಲ್ಲವಾ? ನಿಜವಾ ಇದು?....

ಇನ್ನು ಇಂಟರ್‌ನೆಟ್ ವಿಷಯ. ಯಾರು ಆ ವಾಹಿನಿಯೊಳಗೆ ಮಾಹಿತಿಯನ್ನು ಇಟ್ಟಿರುತ್ತಾರೋ ಅದು ನಮಗೆ ಸಿಗುತ್ತದೆ. ಯಾರು ಯಾವುದನ್ನು ಅದರಲ್ಲಿ ಸೇರ್ಪಡೆಗೊಳಿಸುತ್ತಾರೆ ಎನ್ನುವುದು ಹಲವು ಸಂಗತಿಗಳಿಗೆ ಸಂಬಂಧಿಸಿರುತ್ತದೆ. ನೀವು ಬೇಂದ್ರೆ ಎಂದು ಟೈಪ್ ಮಾಡಿದರೆ ಎಷ್ಟು ಬಗೆಯ ಮಾಹಿತಿ ಸಿಗಬಹುದು? ಕೇವಲ ಎರಡೋ ಮೂರು ವೆಬ್‌ಸೈಟ್‌ಗಳು ಸ್ವಲ್ಪ ಮಾಹಿತಿ ನೀಡಬಹುದು. ಏಟ್ಸ್ ಅಂತ ಅಥವಾ ಎಲಿಯಟ್, ಮಾರ್ಕ್ವೆಜ್ ಎಂದು ಟೈಪ್ ಮಾಡಿದರೆ ಸಾವಿರಾರು ವೆಬ್‌ಗಳು, ಎಂಟ್ರಿಗಳು ಕಂಪ್ಯೂಟರ್ ಪರದೆಯ ಮೇಲೆ ಕಾಣಿಸುತ್ತವೆ. ಹಾಗಿದ್ದರೆ, ಈ ಜ್ಞಾನದ ಪ್ರಜಾಪ್ರಭುತ್ವದಲ್ಲಿ ಬೇಂದ್ರೆ ಬೆಲೆ ಐದು; ಮಾರ್ಕ್ವೆಜ್‌ನ ಮೇಲೆ ೮೬,೦೦೦ bytes. ಇಲ್ಲಿ ನೀವು ಗಮನಿಸಬೇಕಾದದ್ದು. ಎಲ್ಲಿಯವರೆಗೆ ವಿಶ್ವದಲ್ಲಿ ಬೇರೆ ಬಗೆಯ ಅಸಮಾನತೆಗಳು ಇರುತ್ತವೋ ಆ ಅಸಮಾನತೆಗಳನ್ನು ನೀವು ಒಂದು ‘ಕ್ಲಿಕ್’ ನಿಂದ ಹೋಗಲಾಡಿಸುವುದಕ್ಕಾಗುವುದಿಲ್ಲ. ಅದೊಂದು ಭ್ರಮೆ ಅಷ್ಟೇ. ಆದರೂ ಈ ವಾದವನ್ನು ನಾನು ಮುಂದಿಡುತ್ತೇನೆ; ಬಹುಮಟ್ಟಿಗೆ ಅದು ಒಳ್ಳೆಯ ಕೆಲಸ ಮಾಡಿದೆ. ಬಹುಮಟ್ಟಿಗೆ ಜ್ಞಾನದ ಮಾಹಿತಿಯ ಬಗ್ಗೆ ಕೆಲವರು ಇಟ್ಟುಕೊಂಡ ಯಜಮಾನಿಕೆಯನ್ನು ಭಗ್ನ ಮಾಡಿದೆ. ಆ ರೀತಿಯಿಂದ ಇಂಟರ್‌ನೆಟ್ ಕಂಪ್ಯೂಟರ್ ಒಂದು ರೀತಿಯ ಸ್ವಾತಂತ್ರ್ಯವನ್ನು ಕೊಟ್ಟಿದೆ. ಆದರೆ ಅಲ್ಲಿಗೆ ಮಾತ್ರ ಶಿಕ್ಷಣ ವ್ಯವಸ್ಥೆ ಕಂಪ್ಯೂಟರ್ ಶಿಕ್ಷಣ ಹೇಳಿಕೊಡಬೇಕು ಅನ್ನೋದಕ್ಕಷ್ಟೇ ನಿಲ್ಲಬಾರದು. ಆದರಿಂದ ಆಗಬಹುದಾದ ಪರಿಣಾಮಗಳನ್ನು ಕೂಡಾ ದೂರಗ್ರಾಹಿಯಾಗಿ ಗಮನಿಸಬೇಕು. ಅರ್ಥ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಇನ್ನೊಂದು ದೊಡ್ಡ ಕಂದರ (Great Divide) ನಿರ್ಮಾಣವಾಗುತ್ತದೆ. ಬಡವರು–ಶ್ರೀಮಂತರು ಎನ್ನುವ ಹಾಗೆ Those who are computer literate and those who are computer illiterate ಇವುಗಳ ಮಧ್ಯೆ ಭೀಕರವಾದುದೊಂದು ಅಂತರ ಸಾಧ್ಯವಾಗುವ ಸ್ಥಿತಿಯಿದೆ. ಸರಿಯಾಗಿ ಕಂಪ್ಯೂಟರ್ ಶಿಕ್ಷಣ ಹೇಳಿಕೊಡುವ ಉತ್ಕೃಷ್ಟ ನಿದರ್ಶನಗಳಿವೆ. ತಮಿಳುನಾಡಿನ ಕರಾವಳಿಯಲ್ಲಿ ಮೀನುಗಾರರ ಕುಟುಂಬದ ಮಹಿಳೆಯರೇ ಕಂಪ್ಯೂಟರ್ ಕಲಿತು ಅದರೆದುರು ಕುಳಿತು ಕಂಪ್ಯೂಟರ್ ಮೂಲಕ ಹವಾಮಾನದ ಎಲ್ಲ ಮಾಹಿತಿಗಳನ್ನು ಕಲೆಹಾಕಿ ಸಂವಹನ ಮಾಡುತ್ತಾರೆ. Public Address System. Microphone ಬಳಸಿಕೊಳ್ಳುತ್ತಿದ್ದಾರೆ. ಈ ಮುಖವೂ ಕಂಪ್ಯೂಟರ್‌ಗಿದೆ. ಆದರೆ. ಇಂಥ ಸಾಧ್ಯತೆಗಳನ್ನು ಹೇಳಿಕೊಡದೇ ಇರುವುದೇ ನಮ್ಮ ಉನ್ನತ ಶಿಕ್ಷಣದ ತೊಂದರೆ. ‘ಕಂಪ್ಯೂಟರ್ ಶಿಕ್ಷಣ ಹೇಳಿಕೊಡುತ್ತೇವೆ. ನೀವು ಬೆಂಗಳೂರಿನಲ್ಲಿದ್ದುಕೊಂಡು

ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ನ್ಯೂಯಾರ್ಕ್ ಜೊತೆಗೆ ಸಂಭಾಷಣೆ ಮಾಡಬೇಕು ಎಂದು ಹೇಳಿಕೊಡುತ್ತೇವೆಯೇ ಹೊರತು ಒಬ್ಬ ಎಸ್.ಎಸ್.ಎಲ್.ಸಿ ಪಾಸಾದ ಮಹಿಳೆ ಮೀನುಗಾರಿಕೆಗೆ ಹೊರಡುವ ಗಂಡನಿಗೆ, ತಮ್ಮನಿಗೆ ಮಾಹಿತಿ ಕೊಡಬಲ್ಲಳು' ಎಂದು ಹೇಳಿಕೊಡುವುದಿಲ್ಲ. ಆದರೆ. ಜಗತ್ತಿನ ಹಲವಾರು ದೇಶಗಳಲ್ಲಿ ಮುಖ್ಯವಾಗಿ ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಪ್ರಧಾನವಾಗಿ ಪಶ್ಚಿಮದಿಂದ ಬಂದ ಈ ಕಂಪ್ಯೂಟರ್, ಇಂಟರ್‌ನೆಟ್, ಈ ಮಾಹಿತಿ ಜ್ಞಾನಮೂಲಗಳನ್ನು ಅವರವರ ಅವಶ್ಯಕತೆಗಳಿಗಾಗಿ ಬಳಸುವ ಕ್ರಮವನ್ನು ಅನುಸರಿಸಲಾಗುತ್ತಿದೆ. ಜಾಗತೀಕರಣವನ್ನು ಬಳಸಿಕೊಂಡೇ ಅದನ್ನು ಪ್ರತಿರೋಧಿಸುವ ಕೆಲಸ ಸಾಧ್ಯವಾಗಿಸಲು ಇದನ್ನೇ ಬಳಸಿಕೊಳ್ಳಬಹುದು. ಪ್ರತಿರೋಧ ಎಂಬ ಪದ ಬಳಸಲು ನಿಮಗೆ ಇಷ್ಟವಿಲ್ಲದಿದ್ದರೆ ಜಾಗತೀಕರಣವನ್ನು ಮಾರ್ಪಾಡು ಮಾಡಿಕೊಂಡು ಬಳಸುವ ಸಾಧ್ಯತೆಗಳಿವೆ. ನಮ್ಮ ಉನ್ನತ ಶಿಕ್ಷಣದ ಕ್ರಮ ಈ ಸಾಧ್ಯತೆಗಳ ಹಾದಿಯಲ್ಲಿಲ್ಲ. ಏಕೆಂದರೆ, ಬಹುಪಾಲು ಈ ವ್ಯವಸ್ಥೆ. ಸಂದರ್ಭ ಸೃಷ್ಟಿ ಮಾಡುವ ಈ ಬಹುರಾಷ್ಟ್ರೀಯ ಕಂಪನಿಗಳಿಗೆ ಅವುಗಳ ಹಿಂದಿರುವ ಅಂತರರಾಷ್ಟ್ರೀಯ ಬಂಡವಾಳಕ್ಕೆ ಹೀಗಾಗುವುದು ಇಷ್ಟವಿಲ್ಲ. **ರೇಚಲ್ ಕಾರ್ಸ್ಟನ್** ಎಂಬ ಮಹಿಳೆ ಮೊದಲ ಬಾರಿಗೆ ರಾಸಾಯನಿಕಗಳು ನಮ್ಮ ಇಡೀ ವಿಶ್ವವನ್ನು ಹೇಗೆ ನಾಶ ಮಾಡುತ್ತಿವೆ ಎಂಬುದನ್ನು ಸಂಶೋಧಿಸಿ ಬರಹ ಬರೆದಿದ್ದಾರೆ. "The Silent Spring" ಅನ್ನೋದು ಅದರ ಹೆಸರು. ಕೆಲ ವರ್ಷಗಳ ಹಿಂದೆ ಅವರ ಹುಟ್ಟಿನ ೧೦೦ನೇ ವರ್ಷವನ್ನು ಕೆಲವಡೆ ಆಚರಿಸಲಾಯಿತು. ತನ್ನ ೫೬ನೇ ವಯಸ್ಸಿನಲ್ಲಿ ಆಕೆ ತೀರಿಹೋದಳು. ಆಕೆ ತನ್ನ ೫೫ನೇ ವಯಸ್ಸಿನಲ್ಲಿ ಈ ಪುಸ್ತಕವನ್ನು ಬರೆಯಲು ಆರಂಭಿಸಿದ್ದಳು. ಬಹಳ ವರ್ಷಗಳ ಹಿಂದೆ ಪ್ರಕಟವಾಗಿರುವ ಪುಸ್ತಕವದು. ಆಗ ಇಡೀ ವಿಶ್ವದಲ್ಲಿ ವಿಜ್ಞಾನದ ಪ್ರಚಾರ ಹೇಗಿತ್ತು ಎಂದರೆ ಡಿಡಿಟಿ ಎನ್ನುವುದು ವಿಜ್ಞಾನ ಕಂಡುಹಿಡಿದ ಅಂತಿಮ ಬ್ರಹ್ಮಾಸ್ತ್ರ. ಎಲ್ಲ ಕೀಟಗಳನ್ನು ನಾಶಮಾಡಿ ಆರೋಗ್ಯ ಸೃಷ್ಟಿಮಾಡುವಂಥದ್ದೇ ಡಿಡಿಟಿ ಎಂಬ ದೊಡ್ಡ ಪ್ರಚಾರ ದೊರೆತಿದ್ದ ದಿನಗಳವು. Bio Technology ಕುರಿತು ಓದಿದ ಅವಳು ತನ್ನ ಪುಸ್ತಕದಲ್ಲಿ ಸ್ಪಷ್ಟವಾಗಿ ಹೇಳಿದ್ದು; 'ಡಿಡಿಟಿಯನ್ನು ಹೀಗೆ ಲಂಗುಲಗಾಮಿಲ್ಲದೇ ಬಳಸಿದರೆ ಅದು ಕೀಟನಾಶಕವಾಗುವ ಬದಲು ಜೀವನಾಶಕವಾಗುತ್ತದೆ'. ಈ ಪುಸ್ತಕ ಪ್ರಕಟವಾದ ಮೇಲೆ ಎಲ್ಲ ಬಹುರಾಷ್ಟ್ರೀಯ ಕಂಪನಿಗಳು ಈ ಪುಸ್ತಕ ಜನರ ಕೈಗೆ ತಲುಪಬಾರದು ಎಂಬ ಕಾರಣಕ್ಕೆ ನೂರಾರು ಪ್ರಕರಣಗಳನ್ನು ಅವಳ ವಿರುದ್ಧ ಎಲ್ಲ ನ್ಯಾಯಾಲಯಗಳಲ್ಲೂ ದಾಖಲು ಮಾಡಿದವು. 'ಅವಳಿಗೆ ವಿಜ್ಞಾನ ಗೊತ್ತಿಲ್ಲ. ಸುಮ್ಮನೆ ಅನಾಗರಿಕವಾದ ಹಳೆಯದನ್ನು ಪ್ರತಿಪಾದಿಸಿ ವಿಜ್ಞಾನ ವಿರೋಧಿ ನಿಲುವನ್ನು ತಳೆದಿದ್ದಾಳೆ' ಎಂಬ ವಾದವನ್ನು ಮುಂದಿಟ್ಟವು. ಅವಳ ಸ್ಪಷ್ಟನೆ ಹೀಗಿದೆ; 'ನಾನು ವಿಜ್ಞಾನಿ. ವಿಜ್ಞಾನ ವಿರೋಧಿಯಲ್ಲ. ಏನನ್ನಾದರೂ ಆವಿಷ್ಕಾರ ಮಾಡಿದರೆ ಅದು ಮನುಷ್ಯ ಸಂಕುಲ, ನಮ್ಮ ಜೀವಸಂಕುಲಕ್ಕೆ ಏನು ಮಾಡುತ್ತದೆ ಅನ್ನುವುದನ್ನು ಗಮನಿಸಬೇಕು'. ಆಕೆ

ಸ್ಪಷ್ಟ ನಿಲುವುಗಳನ್ನು ಅಭಿವ್ಯಕ್ತಿಸಿದರೂ ಆ ಪುಸ್ತಕದ ಚರ್ಚೆ ಆಗದ ಹಾಗೆ ಮೊಕದ್ದಮೆಗಳನ್ನು ದಾಖಲಿಸಲಾಗುತ್ತದೆ. ಅದಾದ ನಂತರವೂ ಆ ಪುಸ್ತಕ ಎಲ್ಲರಿಗೂ ತಲುಪುವುದಕ್ಕೆ ಸಾಧ್ಯವಾಯಿತು. ನಾವು ವಿಜ್ಞಾನದಿಂದ ಪಡೆಯುವ ಕೆಲ ಅಸ್ತ್ರಗಳು ಯಾವ ಪರಿಣಾಮ ಬೀರುತ್ತವೆ ಎಂಬುದನ್ನು ತಿಳಿಸುತ್ತಾ ಆ ಪುಸ್ತಕ Ecological Awareness ಮೂಡಿಸಿತು. ಇದೆಲ್ಲ ಆದ ಮೇಲೆ ಕೊನೆಪಕ್ಷ ನಮ್ಮ ವಿಶ್ವವಿದ್ಯಾಲಯದ ಪಠ್ಯಕ್ರಮಗಳಲ್ಲಿ ರೇಚಲ್ ಕಾರ್ಸ್ಟನ್ ವಿಚಾರಗಳು ವಿಜ್ಞಾನದ ಅಂಶಗಳೆಂದು ಪರಿಗಣಿತವಾಗುತ್ತಿದೆ.

ಆದರೆ ಆ ಪುಸ್ತಕ ಪ್ರಕಟವಾದ ಕಾಲದ ವಿಜ್ಞಾನದ ಸಂಸ್ಥೆಗಳು ಏನು ಹೇಳಿದ್ದವೆಂದರೆ, 'ನಾವು ಹೇಳಿದ್ದೇ ಸತ್ಯ. ಇವಳು ಹೇಳುತ್ತಿರುವುದು ಅಲ್ಲವೇ ಅಲ್ಲ' ಎಂಬುದನ್ನು ಈ ತರಹದ ಕ್ರಮಗಳು ನಮಗೆ ಗೊತ್ತಿಲ್ಲದೇ ನಮ್ಮ ಉನ್ನತ ಶಿಕ್ಷಣದಲ್ಲಿ ಪ್ರವೇಶಿವೆ. ಆ ಬಗ್ಗೆ ಎಚ್ಚರವಾಗಿರಬೇಕು. ಅದು ಏನು? ಯಾಕೆ ಹೀಗಿದೆ? ಎಂಬುದನ್ನು ವಿವೇಕದಿಂದ ಸ್ವೀಕರಿಸುವ, ಬೇಡದಿದ್ದರೆ ತಿರಸ್ಕರಿಸುವ ಸ್ವಾಮ್ಯ ನಮ್ಮಲ್ಲಿರಬೇಕು. ಬಹುಪಾಲು ಈ ಹಂತದಲ್ಲಿಯೇ ನಾವು ಸೋಲುತ್ತಿದ್ದೇವೆ. ಏಕೆಂದರೆ. ಜಾಗತೀಕರಣದ ಬಗ್ಗೆ ನಮ್ಮಲ್ಲಿನ ಅತಿಶಯ ಭ್ರಮೆ, ನಿರೀಕ್ಷೆಗಳಿರುವ ಕಾರಣ ಹೀಗಾಗುತ್ತಿದೆ. ನಮ್ಮ ಶಿಕ್ಷಣ ಪದ್ದತಿಯ ದೋಷಗಳು ಎಷ್ಟೇ ಇರಲಿ. ಇಲ್ಲಿಯ ಉನ್ನತ ಶಿಕ್ಷಣ ಪದ್ದತಿ 'ಮಾನವತಾವಾದಿ' ಎಂಬ ಸಂಪ್ರದಾಯದಲ್ಲಿ ಬೆಳೆದುಕೊಂಡು ಬಂದಿರುವಂಥದ್ದು. ಕೊಠಾರಿ ಆಯೋಗದಿಂದ ಹಿಡಿದು ಇತ್ತೀಚೆಗೆ ಸ್ಯಾಮ್ ಪಿಟ್ರೋಡಾ ನೇತೃತ್ವದ Knowledge Commission ಸಲ್ಲಿದ ಉನ್ನತ ಶಿಕ್ಷಣ ಕುರಿತ ವರದಿಗಳನ್ನು ಓದಿದರೆ ಒಂದು ಅಂಶವಂತೂ ಸ್ಪಷ್ಟವಾಗುತ್ತದೆ. ಇಲ್ಲಿಯ ಉನ್ನತಶ್ಷಿಣ ಪದ್ದತಿ ವಸಾಹತುಶಾಹಿ ಕಾಲದಲ್ಲಿ ಆರಂಭವಾಗಿ ಸಾಕಷ್ಟು ದೋಷಗಳನ್ನಿಟ್ಟುಕೊಂಡರೂ ಕೂಡಾ ಒಟ್ಟಾರೆಯಾಗಿ ಮಾನವತಾವಾದಿ ಚೌಕಟ್ಟಿನಲ್ಲಿ ಅದು ಕೆಲಸ ಮಾಡುತ್ತಿತ್ತು.

ಈಗ ಜಾಗತೀಕರಣದ ನಂತರದ ಟೀಕೆಗಳೇನು? ಈ ರೀತಿಯ ಶಿಕ್ಷಣ ಪದ್ದತಿ ಒಂದು ರೀತಿಯ General Education ಆಗಿದೆ. ಇದು ವೃತ್ತಿನಿರತ, Professional ಆಗಿಲ್ಲ ಎಂಬ ಟೀಕೆಗಳು ಬರೋಕೆ ಶುರುವಾದವು. ನೆಹರೂ ಕಾಲದಲ್ಲಿ ನೆಹರೂ ವ್ಯಕ್ತಿತ್ವ, ಚಿಂತನೆ, ಪರಿಕಲ್ಪನೆಗಳಿಂದ ನಮ್ಮ ಉನ್ನತ ಶಿಕ್ಷಣ ಒಂದು ರೀತಿಯ ಮಾದರಿಯನ್ನು ಅಳವಡಿಸಿಕೊಂಡುಬಂತು. ಏಕೆಂದರೆ ನೆಹರೂ ಅವರು ಗಾಂಧಿ ಕಲ್ಪನೆಯ ಗ್ರಾಮ ಸಮುದಾಯಗಳನ್ನು, ಗೃಹ ಕೈಗಾರಿಕೆಗಳನ್ನು ಒಪ್ಪಿಕೊಂಡವರಲ್ಲ. ಅವರು ಕೂಡಾ ಪಶ್ಚಿಮದ ಬೃಹತ್ ಕೈಗಾರಿಕೆಗಳನ್ನು ಒಪ್ಪಿಕೊಂಡವರು. ಅವರು ಬಯಸಿದ್ದು. ಬಳಸಿದ್ದು State Socialismನ್ನು. ಸ್ವತಃ ಸರ್ಕಾರ, ಪ್ರಭುತ್ವ ಕೈಗಾರಿಕೆಗಳ ಮೂಲಕ ಅಭ್ಯುದಯ ಸಾಧಿಸಬೇಕು. ಆ ಮೂಲಕ ಸಮಾಜವಾದ ತರಲು ಸಾಧ್ಯ,

ಬಡತನ ಹೋಗಲಾಡಿಸಲು ಸಾಧ್ಯ ಎಂಬುದು ನೆಹರೂ ಅಭಿಪ್ರಾಯವಾಗಿತ್ತು. ಹೀಗಾಗಿ ಆಗ ನಮ್ಮಲ್ಲಿ ಪ್ರವರ್ಧಮಾನಕ್ಕೆ ಬಂದ ಉನ್ನತ ಶಿಕ್ಷಣ ಹೇಗಿತ್ತು ಎಂದರೆ. ನೆಹರೂ ಯುಗದಿಂದ ಇಲ್ಲಿಯವರೆಗೂ ಒಂದು ತಿಳುವಳಿಕೆ ನಮ್ಮ ಉನ್ನತ ಶಿಕ್ಷಣದಲ್ಲಿತ್ತು. ವೈಜ್ಞಾನಿಕ ಮನೋಭಾವವನ್ನು ಎತ್ತಿಹಿಡಿಯಬೇಕು (ವಿಜ್ಞಾನವನ್ನು ಮಾತ್ರವಲ್ಲ) ಮತ್ತು ವಿಜ್ಞಾನದ ಮೂಲಕ ನಡವಳಿಕೆ. ಮೂಢನಂಬಿಕೆ ಪರೀಕ್ಷಿಸಬೇಕು ಎಂಬ ತಿಳುವಳಿಕೆಯಿತ್ತು. ಅದರ ಪರಿಣಾಮವಾಗಿ ನೆಹರೂ ಎಲ್ಲಿಯವರೆಗೆ ಹೋದರು ಎಂದರೆ ಯಾವುದನ್ನು ಸ್ಯಾಮ್ ಪಿಟ್ರೋಡಾ ಅವರು Stand Alone Institutions ಎಂದು ಗುರುತಿಸುವ ಸಂಸ್ಥೆಗಳನ್ನು ಆ ಕಾಲದಲ್ಲಿಯೇ ಸೃಷ್ಟಿದರು. ಸ್ಯಾಮ್ ಪಿಟ್ರೋಡಾ ಪ್ರಕಾರ Stand Alone Institution ಎಂದರೆ, Indian Institute of Science, Indian Institute of Technology ಎಲ್ಲರಿಗೂ ಇವು ಶಿಕ್ಷಣಕ್ರಮವನ್ನು ಒದಗಿಸಿಕೊಡುವುದಿಲ್ಲ. ಇವು ಅಲ್ಲಲ್ಲಿ ಒಂದು ತರಹ ಮುಂಚೂಣಿಯಲ್ಲಿರುವಂಥವು. ನೆಹರೂ ಆ ಕಾಲದಲ್ಲಿಯೇ ಇಂಥವುಗಳನ್ನು ಸೃಷ್ಟಿದರು. ಅಂತಹ ಒಂದು ಕ್ರಮವನ್ನು ಇವತ್ತಿಗೂ ಒಪ್ಪಿಕೊಂಡಿದ್ದೇವೆ. ಒಂದೆಡೆ ತಂತ್ರಜ್ಞಾನವನ್ನು ಮೂಲಕ ಬೆಳೆಸುವ ಪ್ರಯತ್ನ ಆಗುತ್ತಿದೆ. ಮತ್ತೊಂದೆಡೆ Humanist Learning ಎಂದು ಗುರುತಿಸಲಾಗುವ ಸಾಹಿತ್ಯ, ಕಲೆ, ಸಮಾಜ ವಿಜ್ಞಾನಗಳಿವೆ. ಇವುಗಳಿಗೂ ನೆಹರೂ ಕಾಲದಿಂದ ಬಂದಂತಹ ವ್ಯವಸ್ಥೆಯಲ್ಲಿಯೂ ಸ್ಥಾನವಿತ್ತು. ಈ ಕಳೆದ ಒಂದೆರಡು ದಶಕಗಳಲ್ಲಿ ಇವುಗಳ ಕುರಿತ ಚಿಂತನೆ ಆಮೂಲಾಗ್ರವಾಗಿ ಬದಲಾಗಿದೆ. ಈ ಬದಲಾವಣೆಗೆ ಜಾಗತೀಕರಣದ ಶಕ್ತಿಗಳೇ ನೇರವಾಗಿ ಕಾರಣವಾಗಿವೆ. ಹಾಗೆ ಬದಲಾದ ಚಿಂತನೆಯುಳ್ಳವರ ದೃಷ್ಟಿಯಲ್ಲಿ Humanist Learning ಪ್ರಯೋಜನಕಾರಿಯಲ್ಲ, ಅದು ಹೆಚ್ಚಿನ ಪ್ರಯೋಜನ ಕೊಡಲಾರದು ಎಂಬುದೇ ಅಂಥವರ ವಾದ. ಅಂಥದ್ದು ನಮಗೆ ಬೇಡ. ನಮಗೆ ಬೇಕಾಗಿರುವಂಥದ್ದು ವಿಜ್ಞಾನ–ತಂತ್ರಜ್ಞಾನ. ಅದಕ್ಕಿಂತಲೂ ಹೆಚ್ಚಾಗಿ Professional ಆಗಿರುವಂಥದ್ದು. ಈ ಬಗೆಯ ಚಿಂತನೆಗಳು ಏನೇನು ಪರಿಣಾಮ ಬೀರಿವೆ ಎಂಬುದನ್ನು ಇಲ್ಲಿ ಬಿಡಿಸಿ ಹೇಳಬೇಕಾಗಿಲ್ಲ.

ನನ್ನನ್ನೂ ಸೇರಿದ ಹಾಗೆ ಯಾವುದೇ ಮಧ್ಯಮ ವರ್ಗದ ತಂದೆ–ತಾಯಿಯ ಒಂದೇ ಕನಸು. ಎರಡನೇ ಪಿಯು ಪೂರ್ಣಗೊಂಡ ನಂತರ ಸ್ವರ್ಗಕ್ಕೆ ಒಂದೇ ದಾರಿಯಿರುತ್ತದೆ. ಆ ದಾರಿ ತಪ್ಪಿದರೆ ನಿರಂತರವಾದ ನಿತ್ಯನಾರಕಿಗಳಾಗಿ ನೀವು ಬದುಕುತ್ತೀರಿ ಎಂಬ ಭಯವನ್ನುಂಟು ಮಾಡಲಾಗುತ್ತಿದೆ. ಮಾನವತಾವಾದಿ ಚೌಕಟ್ಟನ್ನು ಕಿತ್ತುಹಾಕಿ ವೃತ್ತಿಪರತೆಯ ಮಂತ್ರವನ್ನು ಪಠಿಸುವ, ಅದಕ್ಕನುಗುಣವಾಗಿ ಯೋಜಿಸುವ ಸ್ಥಿತಿಗತಿಗಳು ಏರ್ಪಡುತ್ತಿವೆ. ಎಲ್ಲರಿಗೂ ಐಟಿ ಬೇಕು. ಹೇಳಿಕೊಡಲು ಓದಿರುವ ಶಿಕ್ಷಕರು ಬೇಕು. ಜಾಗತೀಕರಣದ ಸಂದರ್ಭದಲ್ಲಿ ಟೀಚರ್ಸ್ ಆಗುವವರು ‘ಎಲ್ಲಿಯೂ ಸಲ್ಲದವರು ಇಲ್ಲಿ ಸಲ್ಲುತ್ತಾರೆ’ ಎಂದು ಹೇಳಲಾಗುತ್ತಿದೆ.

ನಿಮಗೆ ಎಲ್ಲಿಯೂ ಸ್ಥಾನ ಇರದಿದ್ದರೆ ನೀವು ಶಿಕ್ಷಕ–ಶಿಕ್ಷಕಿಯರಾಗುವಿರಿ ಎಂದು ಹೇಳಿ, ಶಿಕ್ಷಕರನ್ನೇ ಇಲ್ಲದ ಹಾಗೆ ಮಾಡಿದರೆ ನಾಳೆ ನಿಮಗೆ ಐಟಿ ಯಾರು ಹೇಳಿಕೊಡುತ್ತಾರೆ? ಆ ತಳಹದಿ ಇಲ್ಲದವರು ಯಾವ ಮಾಹಿತಿ ತಂತ್ರಜ್ಞಾನ ಬೆಳೆಸಲು ಸಾಧ್ಯ? ಮಧ್ಯಮವರ್ಗದ ಆಕಾಂಕ್ಷೆಗಳನ್ನೇ ಬಂಡವಾಳವಾಗಿಸಿಕೊಂಡ ಕಾರಣದಿಂದಲೇ ತಪ್ಪು ಕಲ್ಪನೆಗಳನ್ನು ಬಿತ್ತಿ ಬೆಳೆವ ಪ್ರಯತ್ನಗಳು ಯಶಸ್ಸು ಕಾಣುತ್ತಿವೆ. ಇನ್ನೊಂದು ಕಡೆಗೆ ಉನ್ನತ ಶಿಕ್ಷಣವು ಜಾಗತೀಕರಣದ ಪ್ರಸ್ತಾಪಗಳನ್ನು ನೇರವಾಗಿ ಒಪ್ಪಿಕೊಳ್ಳುತ್ತಿರುವುದರಿಂದ ವೈರುಧ್ಯಗಳು ಎದುರಾಗುತ್ತಿವೆ. ಇದಕ್ಕೆ ಪರಿಹಾರಗಳೇ ಇಲ್ಲವಾ? ಈ ಬಗೆಯ ವೈರುಧ್ಯಗಳು ಹೀಗೆಯೇ ಮುಂದುವರಿಯುತ್ತವಾ?

ಜಾಗತೀಕರಣದ ಬಿಕ್ಕಟ್ಟುಗಳಿಗೆ ನಾವು ಸಾಕ್ಷಿಯಾಗುತ್ತಲೇ ಇದ್ದೇವೆ. ಅರ್ಥವ್ಯವಸ್ಥೆಯ ಬಿಕ್ಕಟ್ಟುಗಳು ನಮ್ಮೆದುರಿಗಿವೆ. ಯಾವ ಮಾಧ್ಯಮಗಳೂ ಅವನ್ನು crisis ಎಂದು ಕರೆಯುವುದಿಲ್ಲ. ನಮ್ಮ ಅರ್ಥಶಾಸ್ತ್ರದ ಪ್ರೊಫೆಸರ್‌ಗಳೂ ಹಾಗೆ ಕರೆಯಲು ಇಚ್ಛಿಸುವುದಿಲ್ಲ. ಅವರ ಪ್ರಕಾರ ಇವೆಲ್ಲವೂ A small error which is being rectified - ಒಂದು ಸಣ್ಣ ಏರುಪೇರು, ನಾಳೆ ಸರಿಪಡಿಸಬಹುದು. ಜಾರ್ಜ್ ಬುಷ್ ಕೋಟಿಗಟ್ಟಲೆ, ಮಿಲಿಯಗಟ್ಟಲೆ ದುಡ್ಡು ಹಾಕಿ ಸರಿಪಡಿಸುತ್ತಾರೆ. ಇವತ್ತು logical ಅದ crisis ಸೇರಿಕೊಂಡಿದೆ. ನಾವು ತಾತ್ಕಾಲಿಕ ಮಾತ್ರ. ಅವು ಶಾಶ್ವತವಾಗಿ ಇದೇ ರೀತಿ ಮುಂದುವರೆಯುವುದಿಲ್ಲ. ಅವಕ್ಕೆ ಪೂರಕವಾದ ಜಾಗತಿಕ ವ್ಯವಸ್ಥೆ ಕೂಡಾ ಹಾಗೆಯೇ. ನಾವು ಅಂದುಕೊಂಡಷ್ಟು durability ಅದಕ್ಕಿಲ್ಲ. Sustainability ಇಲ್ಲ. ಇಲ್ಲದೇ ಇರುವುದರಿಂದ ನಮ್ಮ ಆದ್ಯತೆಗಳು ಮತ್ತೆಮತ್ತೆ ಬದಲಾಗುತ್ತಿವೆ ಎಂದುಕೊಂಡಿದ್ದೇನೆ. ಹೀಗೆ ಹೇಳುವ ಮೂಲಕ ನಾನು ಆಧುನಿಕತೆಯನ್ನೇ ವಿರೋಧಿಸುತ್ತಿದ್ದೇನೆ. ಆಧುನಿಕ ವಿಜ್ಞಾನವನ್ನೇ ವಿರೋಧಿಸುತ್ತಿದ್ದೇನೆ ಎಂಬರ್ಥವಲ್ಲ. ವಿಜ್ಞಾನವನ್ನು ತ್ಯಜಿಸುವಂಥ ತಿರಸ್ಕರಿಸುವಂಥ ಪ್ರಶ್ನೆಯೇ ಇಲ್ಲ. ನನ್ನ ಪ್ರಕಾರ ಜಾಗತೀಕರಣವೂ ವಿಜ್ಞಾನವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದಿಲ್ಲ.

ನಾನು ಹೇಳುವುದಿಷ್ಟೇ ಜಾಗತೀಕರಣವು ಮೇಲ್ನೋಟಕ್ಕೆ ವಿಜ್ಞಾನವನ್ನು ಸಮರ್ಥಿಸುವ ಹಾಗೆ ಮಾತನಾಡುತ್ತದೆಯೇ ಹೊರತು ಮೂಲಭೂತವಾದ ವೈಜ್ಞಾನಿಕ ಚಿಂತನೆ ಜಾಗತೀಕರಣಕ್ಕೆ ಬೇಡವಾಗಿದೆ. ಜಾಗತೀಕರಣವು ವೈಜ್ಞಾನಿಕ ಚಿಂತನೆಯನ್ನು ಬೆಳೆಯೋಕೆ ಅವಕಾಶ ಕೊಡುವುದಿಲ್ಲ. ಏಕೆಂದರೆ, ವೈಜ್ಞಾನಿಕ ಚಿಂತನೆ ಮಾಡುವವನಿಗೆ ಅರ್ಥವ್ಯವಸ್ಥೆ ಕುಸಿಯುತ್ತಿರುವುದು ಅರ್ಥವಾಗುತ್ತದೆ. ಎಲ್ಲವೂ ಅರ್ಥವಾಗುತ್ತವೆ. ಯಾವ ವೈಜ್ಞಾನಿಕತೆಯನ್ನು ಜಾಗತೀಕರಣ ಒಪ್ಪುವುದಿಲ್ಲವೋ ಆ ವೈಜ್ಞಾನಿಕತೆಯನ್ನು ನಮ್ಮ ಶಿಕ್ಷಣ ಬೆಂಬಲಿಸಬೇಕು. ನಿಜವಾದ ವೈಜ್ಞಾನಿಕ ದೃಷ್ಟಿ ನಮ್ಮ ಉನ್ನತ ಶಿಕ್ಷಣದಲ್ಲಿ ಬರಲು ಸಾಧ್ಯವಾದರೆ, ಆ ಮೂಲಕ

ಉನ್ನತ ಶಿಕ್ಷಣವನ್ನು ಗಟ್ಟಿಗೊಳಿಸುವುದು ಸಾಧ್ಯವಾದರೆ ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗುತ್ತದೆ. ಈ ಸವಾಲುಗಳು ನಮ್ಮನ್ನು ಮುಗಿಸಿಬಿಡುತ್ತವೆ. ನಮಗೆ ಪರಿಹಾರವೇ ಇಲ್ಲ ಎಂಬ ನಿರಾಶೆ ಇಟ್ಟುಕೊಳ್ಳುವಂಥ ಅವಶ್ಯಕತೆ ಇರುವುದಿಲ್ಲ. ಈಗಲೂ ಕೂಡಾ ನಮ್ಮ ಆಯ್ಕೆಗಳನ್ನು ಬದಲಾಯಿಸಿಕೊಳ್ಳಬಹುದು. ಈಗಲೂ ಕೂಡಾ ನಮ್ಮ ಉನ್ನತ ಶಿಕ್ಷಣದ ಆದ್ಯತೆಗಳನ್ನು ಬದಲಾಯಿಸಲು ಸಾಧ್ಯವಿದೆ. ಹಾಗೆ ಮಾಡಿದಾಗ ಈ ಸವಾಲುಗಳನ್ನು ಎದುರಿಕೊಂಡೇ ನಮ್ಮ ಶಿಕ್ಷಣ ಪದ್ದತಿ ಬೆಳೆಯಬಲ್ಲದು.

**('ಅಸಮಗ್ರ' – ರಾಜೇಂದ್ರ ಚನ್ನಿ)**

# 2. ಸಮಾಜ

2.1. ವಚನಗಳು – ವಿವಿಧ ವಚನಕಾರರು

2.2 ಅಪರಾಧಿ ಯಾರು – ಕೊಡಗಿನ ಗೌರಮ್ಮ

2.3 ಮಾ ನಿಷಾದ – ಗಿರೀಶ್ ಕಾರ್ನಾಡ್

2.4 ಅನಿಷ್ಟ ಪದ್ಧತಿಯ ವಿರುದ್ಧ – ಸಾರಾ ಅಬೂಬಕ್ಕರ್

**ಆಶಯ :**

## ತಕರಾರಿನವರು

ತಕರಾರಿನವರು ಸ್ವಾಮೀ
ನಾವು ತಕರಾರಿನವರು.

ಇಬ್ಬರ ತಕರಾರಿಗೆ ಹುಟ್ಟಿ
ಹಲವರ ತಕರಾರಿನಲ್ಲಿ
ಬೆಳೆದವರು.
ನಾವು ನಿಮ್ಮಂತೆ, ಹೋಗಲಿ
ಯಾರಂತಾದರೂ ಯಾಕಿಲ್ಲವೆಂದು
ಹಡೆದವರನಂದವರು.

ತಕರಾರನುಟ್ಟು ತಕರಾರ ತೊಟ್ಟು
ಮುಸಡಿಗೆ ತೆರೆಗಣ್ಣು, ಕಿಸಬಾಯಿ
ಜೋಡಿ ನಕ್ಕು,
ಪುರಾಣದ ಹರಾಮತನದ
ಮನುವಿನ ಕಟ್ಟಡದ ಮೈಸಿರಿಗೆ
ಬೈದರಾಗಿ ನಿಂತು
ನಿಮ್ಮ ದೃಷ್ಟಿಗೂ ತಕರಾರು ತೆಗೆದವರು

ಸ್ವಾಮೀ,
ನಾವು ತಕರಾರಿನವರು.

**– ಡಾ. ಚಂದ್ರಶೇಖರ ಕಂಬಾರ**

# ೨.೧. ವಚನಗಳು

**– ವಿವಿಧ ವಚನಕಾರರು**

**೧) ಬಸವಣ್ಣ :**

ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ.

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ,
ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ.
ಒಮ್ಮನವಾದಡೆ ಒಡನೆ ನುಡಿವನು,
ಇಮ್ಮನವಾದಡೆ ನುಡಿಯನು.
ಕಾಣಿಯ ಸೋಲ, ಅರ್ಧಗಾಣಿಯ ಗೆಲ್ಲ,
ಜಾಣ ನೋಡವ್ವಾ, ನಮ್ಮ ಕೂಡಲಸಂಗಮದೇವ.

ಹಾವು ತಿಂದವರ ನುಡಿಸಬಹುದು,
ಗರ ಹೊಡೆದವರ ನುಡಿಸಬಹುದು,
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ.
ಬಡತನವೆಂಬ ಮಂತ್ರವಾದಿ ಹೋಗಲು,
ಒಡನೆ ನುಡಿವರಯ್ಯಾ, ಕೂಡಲಸಂಗಮದೇವಾ.

ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು,
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ.
ಉಂಬ ಜಂಗಮ ಬಂದಡೆ ನಡೆಯೆಂಬರು,
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ.
ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ,
ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ.

**೨) ಜೇಡರ ದಾಸಿಮಯ್ಯ :**

ಒರತೆಗಳ ಕಂಡಿಂತು ಕೆಲರೀ ಬಾವಿಯ ತೋಡೆಂಬರು?
ಅರವಟಿಗೆ ಛತ್ರವು ತಮ್ಮದೆಂಬರು!
ಎಲೆ ಪಯಿರೈದದಿರೆ, ಸುರಿವ ಮಳೆ ಸುರಿಸದಿದ್ದಡೆ,
ಅವರೇತರಲ್ಲಿ ನೀಡುವರಯ್ಯಾ! ರಾಮನಾಥ.

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ.
ಸುಳಿದು ಬೀಸುವ ವಾಯು ನಿಮ್ಮ ದಾನ.
ನಿಮ್ಮ ದಾನವನುಂಡು ಅನ್ಯರ ಹೊಗಳುವ,
ಕುನ್ನಿಗಳನೇನೆಂಬೆ, ರಾಮನಾಥ.

ಕಡುಭಸಿತವ ಹೂಸಿ,
ಮುಡಿಯಲ್ಲಿ ಲಿಂಗವ ಧರಿಸಿ,
ಮಂತ್ರಮೂರ್ತಿಯ ಮನಸಾರೆ ಪೂಜಿಸಿ,
ಭಕ್ತ ವೇಷವ ಹೊತ್ತು ಭಕ್ತನೆನೆಸಿದ ಬಳಿಕ,
ಭವಿಯ ಮನೆಯನ್ನವ
ನಾಯಡಗು, ನರರು ಹೇಸಿದ ಅಮೇಧ್ಯವೆಂದೆ ಕಾಣಬೇಕು.
ಹೀಗಲ್ಲದೆ ಒಡಲಿಚ್ಛೆಗೆ ತುಡುಗಣಿ ನಾಯಂತೆ
ಒಡಲ ಹೊರೆವವರ ಮೆಚ್ಚ, ನಮ್ಮ ರಾಮನಾಥ.

**೩) ಸತ್ಯಕ್ಕ :**

ಅರ್ಚನೆ ಪೂಜನೆ ನೇಮವಲ್ಲ;
ಮಂತ್ರತಂತ್ರ ನೇಮವಲ್ಲ;
ಧೂಪ ದೀಪಾರತಿ ನೇಮವಲ್ಲ;
ಪರಧನ, ಪರ ಸ್ತ್ರೀ, ಪರದೈವಂಗಳಿಗೆರಗದಿಪ್ಪುದೆ ನೇಮ.
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ.

ಲಂಚವಂಚನಕ್ಕೆ ಕೈಯಾನದಭಾಷೆ.
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ,
ನಾನು ಕೈ ಮುಟ್ಟಿ ಎತ್ತಿದೆನಾದರೆ,
ನಿಮ್ಮಾಣೆ ನಿಮ್ಮ ಪ್ರಮಥರಾಣೆ.
ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ,
ಇಂತಲ್ಲದೆ ನಾನು ಅಳಿಮನವ ಮಾಡಿ,
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ,
ನೀನಾಗಲೆ ಎನ್ನ ನರಕದಲ್ಲಿ ಅದ್ದಿ ನೀನೆದ್ದು ಹೋಗಾ
ಶಂಭುಜಕ್ಕೇಶ್ವರಾ.

**೪) ಸಕಳೇಶ ಮಾದರಸ :**

ಏರಿಯ ಕಟ್ಟಬಹುದಲ್ಲದೆ ನೀರ ತುಂಬಬಹುದೆ ?
ಕೈದುವ ಕೊಡಬಹುದಲ್ಲದೆ ಕಲಿತನವ ಕೊಡಬಹುದೆ ?
ವಿವಾಹವ ಮಾಡಬಹುದಲ್ಲದೆ ಪುರುಷತನವ ಹರಸಬಹುದೆ ?
ಘನವ ತೋರಬಹುದಲ್ಲದೆ ನೆನಹ ನಿಲಿಸಬಹುದೆ ?
'ಓದು ಒಕ್ಕಾಲು ಬುದ್ಧಿ ಮುಕ್ಕಾಲು' ಎಂಬ ಲೋಕದ
ಗಾದೆಮಾತಿನಂತೆ,
ಸದ್ಗುರುಕಾರುಣ್ಯವಾದರೂ ಸಾಧಿಸಿದವನಿಲ್ಲ, ಸಕಳೇಶ್ವರಾ.

ಆಟಮಟವೆ ಆಧಾರ, ಕಪಟವೆ ಸದಾಚಾರ,
ಕುಟಿಲವೆ ಮಹಾಘನವಾಯಿತ್ತು ಕೆಲಬರಿಗೆ,
ಹುಸಿಯ ಮಸಕವೆ ವರ್ತಕವಾಯಿತ್ತು ಕೆಲಬರಿಗೆ,
ಯಂತ್ರ ತಂತ್ರ ದ್ರವ್ಯ ಬೆವಹಾರವಾಯಿತ್ತು ಕೆಲಬರಿಗೆ,
ಸಟೆಯ ಸಾಗರದೊಳಗೆ ತೇಂಕಾಡುತ್ತಿದ್ದರು ಕೆಲಬರು,
ಸಕಳೇಶ್ವರದೇವರ ನೆರೆನಂಬಲರಿಯದವರೆಲ್ಲರು.

# ೨.೨. ಅಪರಾಧಿ ಯಾರು

**– ಕೊಡಗಿನ ಗೌರಮ್ಮ**

**ಆಶಯ:** ತನ್ನದಲ್ಲದ ತಪ್ಪಿಗೆ ಬಹಿಷ್ಕೃತಳಾಗಿ, ಶಿಕ್ಷೆ ಅನುಭವಿಸಿ, ರಕ್ಷಣೆ ಕೋರಿ ಅನ್ಯ ಮತಕ್ಕೆ ಸೇರಿಕೊಂಡರೂ ಸಮಾಜ ನಿಂದಿಸುವುದು ಮುಸ್ಲಿಮಳಾದ ಪಾರ್ವತಿಯನ್ನೇ ಹೊರತು ಅಂತದೊಂದು ಸ್ಥಿತಿಗೆ ಅವಳನ್ನು ದೂಡಿದ ನಾಗೇಶರಾಯರನ್ನಲ್ಲ.

–೧–

ಅಣ್ಣ,

ನಾನು ಬರೆದ ಹಿಂದಿನ ಕಾಗದವು ನಿನಗೆ ತಲುಪಿರಬಹುದು. ಅದಕ್ಕೆ ನೀನು ಪ್ರತ್ಯುತ್ತರವನ್ನು ಬರೆಯುವ ಮೊದಲೇ ಈ ಕಾಗದವನ್ನು ನೋಡಿ ನಿನಗೆ ಆಶ್ಚರ್ಯವಾಗಲೂ ಬಹುದು. ಆಶ್ಚರ್ಯದ ವಿಷಯವೇ ಇರುವುದರಿಂದ ನಿನಗಿದನ್ನು ಬರೆಯುತ್ತಿರುವೆನು.

ನಮ್ಮ ಮನೆಗೆ ಪಕ್ಕದ ಮನೆಯಲ್ಲಿದ್ದ ನಾಗೇಶರಾಯರದು ನಿನಗೆ ಗೊತ್ತಿದೆ. ಗೊತ್ತಿದೆ ಎಂದರೆ ನಿನಗವರ ಗುಣಗಳೆಲ್ಲಾ ಗೊತ್ತಿರಲಾರದು. ಈ ಮನೆಗೆ ನಾವು ಮೊದಲು ಬಂದ ಸುರುವಿನಲ್ಲಿ ಅವರನ್ನು ನೋಡಿ 'ಕ್ರೂರಿಯ ಕಣ್ಣುಗಳಂತಿವೆ ರಾಯರ ಕಣ್ಣುಗಳು' ಎಂದು ಹೇಳಿಕೊಂಡು ನಗುತ್ತಿದ್ದುದು ನಿನಗೆ ಮರೆತುಹೋಗಿರಲಾರದು. ಚಿಕ್ಕತನದ ತಂಟೆಯಲ್ಲಿ ತಮಾಷೆಯಾಗಿ ನಾವಾಡಿದ ಮಾತುಗಳು ಈಗ ನಿಜವಾಗಿ ಪರಿಣಮಿಸಿವೆ. ನಾವು ಊಹಿಸಿದುದಕ್ಕಿಂತಲೂ ಹೆಚ್ಚಿನ ನೀಚರವರು. ನಾನೇಕೆ ಅವರ ಗುಣ ವರ್ತನೆ ಮಾಡುತ್ತಿರುವೆನೆಂದು ನೀನು ಹುಬ್ಬುಗಂಟಿಕ್ಕಬಹುದು. ಸ್ವಲ್ಪ ಸಮಾಧಾನ ತಾಳಿಕೋ; ನಾನೀ ಕಾಗದ ಬರೆಯುತ್ತಿರುವುದೇ ಅವರ ನೀಚತನಕ್ಕೆ ಬಲಿಯಾಗಿ ಜಾತಿಯಿಂದ ಬಹಿಷ್ಕರಿಸಲ್ಪಟ್ಟಿರುವ ಪಾರ್ವತಿಗಾಗಿ, ಪಾರ್ವತಿ ಯಾರೆಂದು ಗೊತ್ತೆ? ನಮಗೆ ಕನ್ನಡವನ್ನು ಕಲಿಸುತ್ತಿದ್ದರಲ್ಲ, ಆ ಪಂಡಿತರ ಮಗಳು. ಪಂಡಿತರು ಪಾರ್ವತಿಯನ್ನು ಮದುವೆ ಮಾಡಿದ ವರ್ಷವೇ ಸತ್ತುಹೋದದ್ದು ನಿನಗೆ ತಿಳಿದಿದೆ. ಕಳೆದ ವರ್ಷ ಅವಳ ಪತಿಯೂ ಬೇಕಾದಷ್ಟು ಸಾಲ ಮಾಡಿಟ್ಟು ಅವರ ದಾರಿ ಹಿಡಿದ. ಅಂದಿನಿಂದ ಅನಾಥ ಪಾರ್ವತಿ ಅವಳ ಚಿಕ್ಕ ಮಗುವನ್ನು ಸಾಕುವುದಕ್ಕೆ ಬೇರೇನೂ ಉಪಾಯ ತೋರದೆ ನಾಗೇಶರಾಯರ ಮನೆಯಲ್ಲಿ ಅಡುಗೆಯ ಕೆಲಸಕ್ಕೆ ನಿಂತಳು. ಇದು ಒಂದು ವರ್ಷದ ಹಿಂದಿನ ಮಾತು.

ಮಗುವಿಗೋಸ್ಕರವಾಗಿ ರಾಯರ ಅತ್ಯಾಚಾರವನ್ನು ಸಹಿಸಿಕೊಂಡಿದ್ದ ಪಾರ್ವತಿಯನ್ನು ರಾಯರು ಅಪವಾದದ ಹೊರೆಯೊಡನೆ ಬಹಿಷ್ಕಾರವನ್ನೂ ಹಾಕಿ ಮೊನ್ನೆ ಮನೆಯಿಂದ ಹೊರದೂಡಿರುವರು. ನಿನ್ನೆ ರಾತ್ರಿ

ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಉದ್ದೇಶದಿಂದ ಮಗುವಿನೊಂದಿಗೆ ಬಾವಿಯ ಹತ್ತಿರ ನಿಂತಿದ್ದಳಂತೆ. ಗೈಬಿ ರಾತ್ರಿ ತಪ್ಪಿಸಿಕೊಂಡು ಹೋದ ದನವನ್ನು ಹಿಡಿದುಕೊಂಡು ಬರುವುದಕ್ಕೆ ಹೋಗಿದ್ದಾಗ ಅವಳನ್ನು ಕಂಡು ಗೈಬಿ ಅವಳನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದಾಳೆ. ಬಲಾತ್ಕಾರದಿಂದ ಕರೆದುಕೊಂಡು ಬಾರದಿದ್ದರೆ ಆ ದಿನ ತಾಯಿ ಮಗುವಿನ ಶವಗಳನ್ನು ಬಾವಿಯಿಂದ ತೆಗೆಯಬೇಕಾಗುತ್ತಿತ್ತು. ನೋಡಿದೊಡನೆಯೇ ನನಗವಳ ಗುರುತು ಸಿಕ್ಕಿತ್ತು.

ನನ್ನನ್ನು ನೋಡಿ ಪಾಪ, ಮುಖವನ್ನು ಮುಚ್ಚಿಕೊಂಡು ಆಳತೊಡಗಿದಳು. ರಾತ್ರಿ ನಿದ್ದೆಯೇ ಮಾಡಲಿಲ್ಲ. ಹಸಿದಿದ್ದ ಮಗುವಿಗೆ ಸ್ವಲ್ಪ ಹಾಲು ಕುಡಿಸಿದ್ದಾಳೆ. ಎಷ್ಟು ಹೇಳಿದರೂ ತಾನೇನೂ ಮುಟ್ಟುವುದಿಲ್ಲ. ನಿನ್ನೆಯಿಂದಲೂ ಉಪವಾಸ. ನಿನಗಿದೆಲ್ಲ ಏಕೆ ಬರೆಯುತ್ತಿರುವೆನೆಂದರೆ ಈ ವಿಷಯದಲ್ಲಿ ನಿನ್ನ ಸಹಾಯವೂ ಅತ್ಯಗತ್ಯವಾದುದರಿಂದ. ಎಲ್ಲಿ ಹೋಗುವುದು, ಏನು ಮಾಡುವುದು ಎಂದು ಅವಳಿಗೆ ತಿಳಿಯದಾಗಿದೆ. ಜಾತಿಯವರು ಸೇರಿಸುವಂತಿಲ್ಲ. ಇಲ್ಲಿಂದ ನಾವು ಹೊರಗೆ ಕಳುಹಿದರೆ ಬಾವಿಯೇ ಅವಳಿಗೆ ಗತಿಯಾಗುವುದು. ಏನು ಮಾಡುವಿ? ಎಂದು ಕೇಳಿದರೆ 'ಇಲ್ಲೇ ಇದ್ದುಬಿಡುತ್ತೇನೆ: ಈ ಮಗುವಿನ ಸಲುವಾಗಿ ನೀವಾದರೂ ಆಶ್ರಯ ಕೊಡಿ' ಎಂದು ಅಳುತ್ತಾಳೆ. ಆದುದರಿಂದ ನೀನು ಇಲ್ಲಿಗೆ ಬಂದರೆ ಅವಳನ್ನು ಶಾಸ್ತ್ರೋಕ್ತವಾಗಿ ನಮ್ಮ ಜಾತಿಗೆ ಸೇರಿಸಿ ಅವಳ ಮುಂದಿನ ಜೀವನಕ್ಕೆ ದಾರಿ ಮಾಡಬಹುದು.

ಅಣ್ಣ, ಅವಳ ತಂದೆ ಪಂಡಿತರು. ತಮ್ಮ ಜಾತಿಯನ್ನು ಹೊಗಳಿಕೊಳ್ಳುತ್ತಿದ್ದುದು ನಿನಗೆ ಜ್ಞಾಪಕವಿರಬಹುದು. ಅನಾಥ ಅಬಲೆಯರು ಆತ್ಯಾಚಾರಿಯ ಅತ್ಯಾಚಾರಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದೇ ಅವರ ಜಾತಿಯ ನೀತಿಯಾದರೆ ನಮಗಾ ಜಾತಿಯಲ್ಲಿ ಜನ್ಮ ಕೊಡದಿದ್ದುದಕ್ಕಾಗಿ ದೇವರನ್ನು ಎಷ್ಟು ವಂದಿಸಿದರೂ ಸ್ವಲ್ಪವೇ. ಇದನ್ನು ನೋಡುವುದಕ್ಕೆ ಪಂಡಿತರು ಇದ್ದಿದ್ದರೆ ನಮ್ಮ ಜಾತಿಯ ವಿಷಯದಲ್ಲಿದ್ದ ಭಾವನೆಯನ್ನವರು ಬದಲು ಮಾಡಬೇಕಾಗಿ ಬರುತ್ತಿತ್ತು; ಇರಲಿ, ಈ ಕಾಗದವನ್ನು ನೋಡಿದೊಡನೆಯೇ ಬರುವಿಯಾಗಿ ಆಶಿಸುವ,

ನಿನ್ನ ಪ್ರೀತಿಯ ತಂಗಿ,

**ಉನ್ನೀಸಾ**

-೨-

ಸೀತಮ್ಮನವರೇ,

ಬಹಳ ದಿನಗಳಿಂದಲೂ ನಿಮಗೆ ಕಾಗದ ಬರೆಯಬೇಕೆಂದು ಆಲೋಚಿಸಿಕೊಂಡಿದ್ದೇನೆ. ಬರೆಯುವುದಕ್ಕೆ ಮಾತ್ರ ಸ್ವಲ್ಪವೂ ಸಮಯವಾಗುವುದಿಲ್ಲ ನೋಡಿ; ಈಗಲಾದರೂ ಸಮಯ ಸಿಕ್ಕಿತೇ ಎಂದು ನೀವು ಕೇಳಬಹುದು. ನಿಜವನ್ನು ಹೇಳುವುದಾದರೆ ಈಗಲೂ ಇಲ್ಲ. ಕಮಲೆಗೆ ಜ್ವರ; ಅವಳಿಗೆ ಔಷಧಿ ಕುಡಿಸಿಲ್ಲ. ರಘುವನ್ನು ಇನ್ನೂ ಸ್ನಾನ ಮಾಡಿಸಿಲ್ಲ. ಅಡುಗೆಯೂ ಆಗಿಲ್ಲ. ಆದರೂ ನಿಮಗೊಂದು ವಿಶೇಷದ ಸುದ್ದಿ ತಿಳಿಬಿಡಬೇಕೆಂದು ಕೆಲಸಗಳನ್ನೆಲ್ಲಾ ಬಿಟ್ಟು ಬರೆಯುವುದಕ್ಕೆ ಕೂತಿದ್ದೇನೆ.

ಆ ಪಾರ್ವತಿ ನೋಡಿ-ಬೊಂಬೆಯ ಹಾಗೆ ಆಲಂಕಾರ ಮಾಡಿಕೊಂಡು ಶಾಲೆಗೆ ಹೋಗುತ್ತಿದ್ದಳಲ್ಲ. ಆ ಪಂಡಿತರ ಮಗಳು ಅವಳು, ಜಾತಿ ಕೆಟ್ಟು ತುರುಕರ ಜಾತಿಗೆ ಸೇರಿದ್ದಾಳೆ ನೋಡಿ! ಅವಳನ್ನು ಅವಳಪ್ಪ ಮುದ್ದು ಮುದ್ದು ಎಂತ ಶಾಲೆಗೆ ಕಳಿಸುವಾಗಲೇ ನನಗೆ ಗೊತ್ತಿತ್ತು ಅವಳು ಹೀಗಾಗುವಳೆಂದು! ಇದು ಬೇರೆ ತಮಾಷೆ ನೋಡಿ, ಪಕ್ಕದ ಮನೆ ಲಕ್ಷ್ಮೀ ಇದ್ದಾಳಲ್ಲ- ಈ ಜಾತಿಗೇಡಿಯ ಜೊತೆಯಲ್ಲೇ ಶಾಲೆಗೆ ಹೋಗುತ್ತಿದ್ದಳು- ಅವಳನ್ನುತ್ತಾಳೆ ಕೇಳಿ: ಸೇರದೆ ಅವಳೇನು ಮಾಡುವುದು? ಸೇರದಂತೆ ಪ್ರಯತ್ನ ಮಾಡುವುದರ ಬದಲು ಬಹಿಷ್ಕರಿಸಿ ಅವಳ ಮುಖಕ್ಕೆ ಬಾಗಿಲನ್ನು ಹಾಕಿ ಬಾವಿಯ ತೋರಿದ ನಿಮಗೆ ಆವಳೇನಾದರೇನು?" ಎಂತ. ಬಹಿಷ್ಕಾರ ಹಾಕಿದ್ದು ತಪ್ಪಂತೆ! ಜಾತಿಗೆಟ್ಟವಳನ್ನು ಮನೆಯಲ್ಲಿರಿಕೊಳ್ಳಬೇಕಾಗಿತ್ತಂತೆ! ನೋಡಿದಿರಾ, ಹೇಗಿದೆ ಎಂತ!!

ಹೊತ್ತಾಗಿ ಹೋಯಿತು! ಆಡುಗೆ ಮಾಡಬೇಕು, ಇನ್ನೊಮ್ಮೆ ಬಿಡುವಿದ್ದಾಗ ಬರೆಯುತ್ತೇನೆ.

ನಿಮ್ಮ,

-೩-

ನಲಿನಿ,

ಬಹಳ ದಿನಗಳಾದವು ನಿನ್ನ ಕಾಗದಗಳೊಂದೂ ಬಾರದೆ. ಏಕೆ ಬರೆಯುವುದಿಲ್ಲ? ಕಣ್ಮರೆಯಾದೊಡನೆಯೇ ಮರೆತುಹೋಯಿತೇನು? ಸಹಜ: ಬೇಕಾದಷ್ಟು ಹೊಸ ಗೆಳತಿಯರು ಸಿಕ್ಕಿರುವಾಗ ಹಳೆಯ ಹಳ್ಳಿಯ ಸ್ನೇಹಿತೆಯೊಬ್ಬಳನ್ನು ಜ್ಞಾಪಿಕೊಳ್ಳುವುದು ಕಷ್ಟ. ಆದರೆ ನೀನೆಷ್ಟು ನನ್ನನ್ನು ಮರೆಯುವುದಕ್ಕೆ ಯತ್ನಿಸಿದರೂ, ಯತ್ನದಲ್ಲಿ ಸಫಲತೆಯನ್ನು ಪಡೆದರೂ, ನಾನು ಮಾತ್ರ ಆಗಾಗ ಕಾಗದಗಳನ್ನು ಬರೆದು 'ಈ ಪ್ರಪಂಚದಲ್ಲಿ ನಾನೊಬ್ಬಳಿದ್ದೇನೆ' ಎಂಬುದನ್ನು ನಿನಗೆ ಜ್ಞಾಪಿಸದೆ ಬಿಡುವುದಿಲ್ಲ. ನನ್ನ ಹತ್ತು ಕಾಗದಗಳಿಗೆ

ನೀನು ಒಂದೇ ಒಂದು ಕಾಗದವನ್ನಾದರೂ ಬರೆಯದಿದ್ದರೆ ನಾನೇ ಅಲ್ಲಿಗೆ ಬಂದು ನಿನ್ನ ಅತ್ಯಮೂಲ್ಯವಾದ ಸಮಯವನ್ನು ನನ್ನೊಡನೆ ಮಾತಿಗಾಗಿ ಉಪಯೋಗಿಕೊಳ್ಳುತ್ತೇನೆ. ಈ ಬೆದರಿಕೆಗೆ ನೀನು ಹೆದರದಿರಲಾರೆ. ಏಕೆಂದರೆ ಚಿಕ್ಕವರಾಗಿರುವಾಗ ನಾನು ಕೀಟಲೆ ಮಾಡತೊಡಗಿದರೆ ನೀನೂ ಪಾರ್ವತಿಯೂ ಹೆದರಿ ಕೇಳಿದುದನ್ನು ಕೊಡುತ್ತಿದ್ದಿರಿ.

ನೆನಪಿದೆಯೇ ನಲಿನಿ!–ಆಗಿನ ಆಟ, ತಮಾಷೆ, ಜಗಳ, ನಗು ಎಲ್ಲಾ! ಆಗ ನಾವು ಶಾಲೆಯ ಹಿಂದಿನ ದಿನ್ನೆಯ ಮೇಲೆ ಕುಳಿತು ನಮ್ಮ ಮುಂದಿನ ಜೀವನವನ್ನು ಚಿತ್ರಿಸಿಕೊಳ್ಳುತ್ತಿದ್ದುದು! ನಾವು ಕಲ್ಪಿಸಿ, ನೋಡಿ ನಲಿಯುತ್ತಿದ್ದ ಹಗಲು ಕನಸುಗಳ ಸ್ಮೃತಿ! ಆಗ ನಾವು ಜೀವನವು ಸುಖ–ಸಂತೋಷಮಯ ಎಂದು ತಿಳಿದಿದ್ದೆವಲ್ಲ ನಲಿನಾ! ಈಗ ನಮ್ಮಲ್ಲೆಷ್ಟು ಜನರು ಆ ಭಾವನೆಯನ್ನು ಬದಲಾಯಿಸಬೇಕಾಗಿ ಬಂದಿದೆ ನೋಡು. ನಮ್ಮ ಗೆಳತಿ ಸೀತೆಯನ್ನು ನೋಡು–ಅವಳು ಬಯಸುತ್ತಿದ್ದ ಬಯಕೆಗಳೆಲ್ಲಿ? ಈಗವಳನುಭವಿಸುತ್ತಿರುವ ಯಾತನೆಗಳೆಲ್ಲಿ! ನಾವೆಂದಾದರೂ ಅವಳ ಗತಿ ಹೀಗಾಗಬಹುದೆಂದು ಎಣಿಸಿದ್ದೆವೇ? ಕ್ಲಾಸಿನಲ್ಲಿ ಹುಚ್ಚಿ ಎಂದು ನಾವು ಹಾಸ್ಯ ಮಾಡುತ್ತಿದ್ದ ಉಮಾ ಈಗ ನೋಡು ದೊಡ್ಡ ಸಮಾಜ ಸುಧಾರಕಳಾಗಿ ಬಿಟ್ಟಿದ್ದಾಳೆ. ಅವಳ ಮಾತಗಳನ್ನು ಕೇಳಲು ಜನರು ಹಾತೊರೆಯುವುದನ್ನು ನೋಡಿದರೆ 'ಅಂದಿನ ಉಮಾ ಇವಳೇನು?' ಎನ್ನಿಸುತ್ತದೆ. 'ಮದುವೆಯಾಗುವುದೇ ಇಲ್ಲ' ಎನ್ನುತ್ತಿದ್ದ ಶಾಂತೆಗೆ ಈಗ ಇಬ್ಬರು ಮಕ್ಕಳಿದ್ದಾರೆ. ಕ್ಲಾಸಿನಲ್ಲಿ ಮೊದಲನೆಯವಳಾಗಿ ಬುದ್ಧಿವಂತೆ ಎನ್ನಿಸಿಕೊಳ್ಳುತ್ತಿದ್ದ ಕಮಲೆಗೆ ಅತ್ತೆಯ ಮನೆಯಲ್ಲಿ ದಡ್ಡಿ, ಮೂದೇವಿ ಎಂದು ಬಿರುದುಗಳು ಬಂದಿವೆ.

ಇವುಗಳೆಲ್ಲವುಗಳಿಗಿಂತಲೂ ವಿಷಾದಕರವಾದ ಇನ್ನೊಂದು ಸುದ್ದಿ ಇದೆ ನಲಿನಾ–ಅದೂ ನಮ್ಮ ಪ್ರೀತಿಯ ಪಾರ್ವತಿಯ ವಿಷಯ–ಹೇಗದನ್ನು ಬರೆಯಲಿ ಹೇಳು?

ಸೌಂದರ್ಯ, ಗುಣ ನಡತೆಗಳಲ್ಲಿ ನಮ್ಮೆಲ್ಲರ ಮೆಚ್ಚಿಕೆಯನ್ನು ಪಡೆದಿದ್ದ ಪಾರ್ವತಿ ವಿಧವೆಯಾದದ್ದೂ, ನಾಗೇಶರಾಯರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದುದೂ ನಿನಗೆ ಗೊತ್ತಿದೆ. ಅವಳ ಭವಿಷ್ಯವನ್ನು ನಾವು ಚಿತ್ರಿಸಿದಂತೆ ಇನ್ನಾರದನ್ನು ಚಿತ್ರಿಸಿದ್ದೆವು. ನಲಿನಾ! 'ನಮ್ಮ ಸುಂದರಿ, ರಾಜನ ರಾಣಿ ಕಿರೀಟಧಾರಿಣಿ' ಯಾಗುವಳೆಂದು ಹೇಳಿಕೊಂಡು ನಾವು ನಲಿಯುತ್ತಿದ್ದೆವಲ್ಲ! ಅವಳೀಗ ಜಾತಿಯಿಂದ ಬಹಿಷ್ಕರಿಸಲ್ಪಟ್ಟಿರುವಳು. ನಲಿನಾ! ರಾಯರ ಪಾಪದ ಪ್ರತಿಫಲವಾಗಿ, ಇದೆ ನೋಡು–ನಮ್ಮ ಸಮಾಜದ ನ್ಯಾಯ! ನಮ್ಮ ಜಾತಿ, ನೀತಿ, ಸಮಾಜ ಉತ್ತಮವೆಂದು ಹೇಳಿಕೊಂಡು ನಾವೆಷ್ಟು ಸಲ ಉನ್ನೀಸಾಳೊಡನೆ ಜಗಳವಾಡಿಲ್ಲ! ಮುಸಲ್ಮಾನ ಜಾತಿಯವಳೆಂದು ಎಷ್ಟು ಸಾರಿ ಉನ್ನೀಸಾಳನ್ನು ತಿರಸ್ಕರಿಸಿಲ್ಲ! ಊರು ತುಂಬ ನಮ್ಮವರ ಮನೆಗಳಿದ್ದು

ಪಾರ್ವತಿಗೆ ಬಾಗಿಲನ್ನು ತೆರೆಯುವವರಿರಲಿಲ್ಲ. ನಮ್ಮವರ ಹೃದಯದಲ್ಲಿ ಜಾತಿಗಲ್ಲದೆ ದಯೆಗೆ ಎಡೆಯಿಲ್ಲ. ಅದೂ ಜಾತಿ ನಿಯಮಗಳು ಹೆಂಗಸರಿಗೆ ಮಾತ್ರ, ಗಂಡಸರು ಆ ನಿಯಮಕ್ಕೆ ಒಳಪಡಬೇಕಾಗಿಲ್ಲ. ಇದೇ ನೋಡು, ನಮ್ಮ ಜಾತಿಯ ದೊಡ್ಡತನದ ಕುರುಹು.

ಉತ್ತಮ, ಅತ್ಯುತ್ತಮ ಜಾತಿಯ ನಮ್ಮವರು ಪಾರ್ವತಿಗೆ ಅವಳ ಮುದ್ದು ಮಗುವಿನೊಡನೆ ಬಾವಿಯ ದಾರಿಯನ್ನು ತೋರಿಸಿಕೊಟ್ಟಾಗ ಕೈಹಿಡಿದು ಆದರದಿಂದ ಆಶ್ರಯವಿತ್ತವಳು ಯಾರು ಗೊತ್ತೇ? ಉನ್ನೀಸ! ಮ್ಲೇಂಛಳೆಂದು ನಾವು ನಕ್ಕು ತಿರಸ್ಕರಿಸುತ್ತಿದ್ದ ಉನ್ನೀಸ! ಈಗ ಹೇಳು ನಲಿನಾ, ಉತ್ತಮರು ಯಾರೆಂದು?

ಊರವರೆಲ್ಲರೂ ಪಾರ್ವತಿಯನ್ನು ಮುಸಲ್ಮಾನ ಜಾತಿಗೆ ಸೇರಿದವಳೆಂದು ತಿರಸ್ಕರಿಸುತ್ತಿರುವರು. ಮೊದಲೇ ನಮಗೆ ಅವಳು ಹಾಗಾಗುವಳೆಂದು ಗೊತ್ತಿತ್ತು ಎನ್ನುವರು. ಇಷ್ಟೆಲ್ಲಾ ತಿಳಿದವರು ಅವಳು ಹಾಗಾಗದಿರುವಂತೆ ಮಾಡಲು ಯಾವ ಯತ್ನವನ್ನೂ ಮಾಡಲಿಲ್ಲವೇಕೆ? ಎಂದು ನಾನು ಕೇಳಿದೆ. ಅದಕ್ಕಾಗಿ ಪಾರ್ವತಿಯ ಪಕ್ಷವೆಂದು ನೀರಿಗೆ ಹೋದಲ್ಲಿ ಎಂದಿನಂತೆ ನೆರೆಕೆರೆಯವರು ನನ್ನೊಡನೆ ಮಾತಾಡುವುದಿಲ್ಲ.

ಅಪರಾಧಿ ಯಾರು, ನಲಿನಾ? ಪಾರ್ವತಿ ರಜಿಯಾ ಆಗುವುದಕ್ಕೆ ಹೊಣೆ ಯಾರು? ಅವಳೇ? ರಾಯರೆ? ಅಥವಾ ನಮ್ಮ ಕ್ರೂರ ಕಠೋರ ಸಮಾಜವೇ?

ಯಾರಾದರೇನು? ಆದುದಾಗಿಬಿಟ್ಟಿತು. ಪಾರ್ವತಿಯಾಗಿ ಅವಳು ಸುಖದಲ್ಲಿರಲಿಲ್ಲ. ರಜಿಯಾ ಆಗಿಯಾದರೂ ಅವಳ ಜೀವನವು ಸುಖಮಯವಾಗಲೆಂದು ದೇವರಲ್ಲಿ ನನ್ನ ಬೇಡಿಕೆ.

ಸಾಕು; ಇನ್ನೇನು ಬರೆಯಲಿ..........

ನಿನ್ನ,

ಲಕ್ಷ್ಮೀ

ತಾರೀಖು ೮ರ ಸ್ಥಳಿಕ ಪತ್ರಿಕೆಯೊಂದರಲ್ಲಿ ಹೀಗಿತ್ತು: –

ಮೊನ್ನೆ ದಿನ ಹಿಂದೂ–ರಮಣಿಯೊಬ್ಬಳು ಮುಸಲ್ಮಾನ ಧರ್ಮ ಸ್ವೀಕರಿದುದು ಊರಿನ ಜನಗಳಿಗೆಲ್ಲಾ ಬಹಳ ವಿಷಾದವನ್ನುಂಟು ಮಾಡಿದೆ. ಇನ್ನು ಮುಂದೆ ಈ ರೀತಿ ಸಂಭವಿಸದಂತೆ ನೋಡಿಕೊಳ್ಳುವುದಕ್ಕಾಗಿ ಊರಿನ ಪ್ರಮುಖರ ಸಭೆಯೊಂದು ಶ್ರೀಮಾನ್ ನಾಗೇಶರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಸರ್ವಾನುಮತದಿಂದ ಧರ್ಮರಕ್ಷಣೆ ಮಾಡಬೇಕೆಂದು ತೀರ್ಮಾನವಾಯಿತು.

**ನವಂಬರ್ ೧೯೩೪**

# ೨.೩. ಮಾನಿಷಾದ

- ಗಿರೀಶ್ ಕಾರ್ನಾಡ್

## ಪಾತ್ರ ವರ್ಗ

ಅಗಸ

ಋಷಿ

ಅಗಸನ ಹೆಂಡತಿ

ಭರತ

ಸೈನಿಕ

ದಾರಿಹೋಕ

ವಸುಧಮ್ಮ

ದ್ವಾರಪಾಲಕ

# ಮಾ ನಿಷಾದ

**ಮಾ ನಿಷಾದ ಪ್ರತಿಷ್ಠಾಂ ತ್ವಮಗಮ:**

**ಶಾಶ್ವತೀ ಸಮಾಃ ।**

**ಯತ್ಕ್ರೌಂಚಮಿಥುನಾದೇಕಮವಧಿಃ ಕಾಮಮೋಹಿತಮ್ ॥**

**(ಬಾಲಕಾಂಡ, ರಾಮಾಯಣ)**

**ಸ್ಥಳ :** ದಟ್ಟಡವಿಯ ನಡುವಿನ ಬಯಲೊಂದು, ಒಬ್ಬ ಋಷಿ ಬಳಿಯಲ್ಲಿರುವ ಕಲ್ಲೊಂದರ ಮೇಲೆ ಕಣ್ಮುಚ್ಚಿ ಕುಳಿತಿದ್ದಾನೆ. ಅಡವಿಯೊಳಗಿಂದ ಒಬ್ಬ ಮನುಷ್ಯ ಬರುತ್ತಾನೆ.

**ಮನುಷ್ಯ** ಮುನಿಗಳೇ....

**ಋಷಿ** ಯಾರದು ?

**ಮನುಷ್ಯ** ನಿಮ್ಮ ಧ್ಯಾನಕ್ಕೆ ಅಡ್ಡಿ ತಂದುದಕ್ಕೆ ಕ್ಷಮಿಸಬೇಕು, ಮುನಿಗಳೇ.

**ಋಷಿ** ಧ್ಯಾನವೇನಿಲ್ಲ. ಏನೋ ವಿಚಾರ ಮಾಡುತ್ತಿದ್ದೆ. ಅಷ್ಟೆ, ಏನು ಬೇಕು ನಿನಗೆ ? ಈ ಕಾರಡವಿಯಲ್ಲೇನು ಮಾಡುತ್ತಿರುವೆ ?

**ಮನುಷ್ಯ** ಇಲ್ಲಿಂದ ವಾಲ್ಮೀಕಿ ಋಷಿಗಳ ಆಶ್ರಮ ಬಹಳ ದೂರವಿದೆಯೇ, ಸ್ವಾಮಿ ?

**ಋಷಿ** ಇಲ್ಲ. ಇಲ್ಲಿಂದ ಪೂರ್ವಕ್ಕೆ ನೆಟ್ಟಗೆ ಹೋದರೆ ಹತ್ತು ನಿಮಿಷಗಳ ದಾರಿ ಅಷ್ಟೆ. ಆದರೆ..... ನಿನಗೆ ಏನು ಬೇಕಾಗಿದೆ. ಅಲ್ಲಿ?

**ಮನುಷ್ಯ** ಏನಿಲ್ಲ, ಗುರುಗಳೇ, ಅಲ್ಲಿ ತಾಯಿ ಸೀತಾದೇವಿ ಇದ್ದಾಳೆಂದು ಯಾರೋ ಎಂದರು. ಅವಳ ದರ್ಶನಕ್ಕಾಗಿ ಹಾತೊರೆದು ಓಡಿ ಬಂದಿದ್ದೇನೆ. ಆ ಸುದ್ದಿ ನಿಜವೇ ಸ್ವಾಮಿ ?

**ಋಷಿ** (ಮೆಲ್ಲನೆ) ನಿಜವಿತ್ತು. ಆದರೆ – ಈಗ ಅವಳು ಅಲ್ಲಿಲ್ಲ.

**ಮನುಷ್ಯ** (ಬೆದರಿ) ಅಲ್ಲಿಲ್ಲ? ಎಲ್ಲಿ ಹೋಗಿದ್ದಾರವರು ?

**ಋಷಿ** ನೀನಿನ್ನೂ ಕೇಳಿಲ್ಲವೇ ? ಮೂರು ದಿನಗಳ ಹಿಂದೆ ಇಲ್ಲಿ ಇದೇ ಬಯಲಲ್ಲಿ ಅವಳು ಶ್ರೀರಾಮನಿಗೆ ಭೆಟ್ಟಿಯಾದಳು.

**ಮನುಷ್ಯ** (ಆನಂದದಿಂದ) ಭೆಟ್ಟಿಯಾದಳೇ ? ಹಾಗಾದರೆ ಶ್ರೀರಾಮ ಮತ್ತು ಸೀತಾ ತಾಯಿ ಒಂದಾದರೇ ? ನಿಜವೇ ಇದು?..... ದೇವರೇ, ದೇವರೇ ನಿನ್ನನ್ನೆಷ್ಟು ಸ್ತುತಿಸಲಿ ? ನನ್ನನ್ನು ಪಾತಕದ ವೇದನೆಯಿಂದ ಮುಕ್ತಿಗೊಳಿಸಿದೆ. ದೇವರೇ,

ನಿನ್ನ ಋಣ ಹೇಗೆ ತೀರಿಸಲಿ ?..... ಗುರುಗಳೇ, ನಿಮ್ಮ ಕಾಲಿಗೆ ಬೀಳುತ್ತೇನೆ. ನೀವು ಬದುಕಿಸಿದಿರಿ ನನ್ನನ್ನು.

**ಋಷಿ** ನಿನ್ನ ಪಾತಕ ? ಏನೆನ್ನುತ್ತಿರುವೆ ನೀನು ? ಯಾರು ನೀನು ?

**ಮನುಷ್ಯ** ಅದೊಂದು ದೊಡ್ಡ ಕತೆ, ಸ್ವಾಮಿ. ಅದನ್ನು ಕೇಳದಿರುವುದೇ ಒಳ್ಳೆಯದು. ಮೊದಲೇ ನಿಮ್ಮ ಧ್ಯಾನ ಕೆಡಿಸಿದ್ದೇನೆ. ಇನ್ನು ನನ್ನ ಗೋಳು ಹೇಳಿ ನಿಮ್ಮ ತಲೆ ಕೆಡಿಸಲಾರೆ. ನಾನು ಹೋಗಬೇಕು – ಬೇಗ ಹೋಗಬೇಕು. ಅಯೋಧ್ಯೆಗೆ.

**ಋಷಿ** (ಒಮ್ಮೆಲೆ) ತಡೆ.... (ಸ್ವಲ್ಪ ತಡೆದು) ನೀನು ಯಾರು ಎಂಬುದನ್ನು ಹೇಳಬಾರದೇ ? ಸೀತೆಯ ಸಂಕಟಕ್ಕೂ ನಿನ್ನ ವ್ಯಥೆಗೂ ಇಂಥ ಸಂಬಂಧವಿದೆಯೇ ? ಈ ತರಹದ ವ್ಯಥೆಯುಳ್ಳ ಇಬ್ಬರು ಈ ಜಗತ್ತಿನಲ್ಲಿ ಇರಬಹುದು ಎಂದು ಎಣಿಸಿರಲಿಲ್ಲ. ಯಾರು ನೀನು ?

**ಮನುಷ್ಯ** ನಾನು ಹಿಂದೆ ಅಯೋಧ್ಯೆಯಲ್ಲಿ ಅಗಸನಾಗಿದ್ದೆ, ಗುರುಗಳೇ,

**ಋಷಿ** (ಒಮ್ಮೆಲೆ) ಓಹ್, ಅವನೇಯೇನು ನೀನು ?

**ಅಗಸ** (ಕಹಿಧ್ವನಿಯಲ್ಲಿ) ಹೌದು, ಸ್ವಾಮಿ, ಅವನೇ. ಅಯೋಧ್ಯೆಯಲ್ಲಿ ನೂರಾರು ಅಗಸರಿದ್ದರೂ, 'ಅಯೋಧ್ಯೆಯ ಅಗಸ' ಎಂದೊಡನೆ ಎಲ್ಲರ ಕಣ್ಮುಂದೆ ಮೂಡುವ ದುರುಳ–ಅವನೇ ನಾನು.

**ಋಷಿ** ನನ್ನನ್ನು ಕ್ಷಮಿಸು, ತಮ್ಮ, ನಿನ್ನನ್ನು ನೋಯಿಸಲಿಕ್ಕೆ ಎನ್ನಲಿಲ್ಲ ನಾನು. ಬಾಯಿತಪ್ಪಿ ಆ ಮಾತು..... ಕ್ಷಮಿಸು.

**ಅಗಸ** ನೀವೇಕೆ ಕ್ಷಮೆ ಕೋರಬೇಕು, ಗುರುಗಳೇ? ತಪ್ಪು ಮಾಡಿದವ ನಾನು. ಅದಕ್ಕೇ ಅಯೋಧ್ಯೆಗೆ ಹೋಗಿ ಸೀತಾದೇವಿಯ ಕ್ಷಮೆ ಕೇಳಲು ಹೊರಟಿದ್ದೇನೆ.

**ಋಷಿ** (ಮೆಲ್ಲನೆ) ಇಷ್ಟೇಕೆ ಗಡಬಿಡಿಯದಕ್ಕೆ ? ಸ್ವಲ್ಪ ವಿಶ್ರಮಿಸು. ಇಲ್ಲಿ ಕುಳಿತುಕೊ ಸ್ವಲ್ಪ ಹೊತ್ತು.....(ತಡೆದು) ತಮ್ಮ, ನಿನ್ನ ನೋವಿನ ಮೇಲೆ ಉಪ್ಪನ್ನು ಅರೆಯ ಬಯಸುವದಿಲ್ಲ. ಆದರೂ ನಿನ್ನ ಕತೆ ಏನಾಯಿತು ಎಂಬುದನ್ನು ಸ್ವಲ್ಪ ಹೇಳುತ್ತೀಯಾ ?

**ಅಗಸ** ಅದನ್ನೆಲ್ಲ ಕೇಳಿ ಏನು ಪ್ರಯೋಜನ ನಿಮಗೆ ? ಪೃಥ್ವಿಯ ಜನರೆಲ್ಲ ಆಡಿದ್ದನ್ನು ನೀವು ಕೇಳಿರಲೇಬೇಕು.

**ಋಷಿ** ಜನ ಬೇಕಾದುದೆನ್ನುತ್ತಾರೆ. ನಾನು ವ್ಯರ್ಥ ಕುತೂಹಲದಿಂದ ಕೇಳುತ್ತಿಲ್ಲ. ನಾನು ಕೇಳುವುದಕ್ಕೊಂದು ಕಾರಣವಿದೆ. ನನ್ನ ಮನಸ್ಸಿನ ಶಾಂತಿಗಾಗಿ ಕೇಳುತ್ತಿದ್ದೇನೆ. ದಯಮಾಡಿ ಹೇಳು...

**ಅಗಸ** ನಿಮ್ಮ ಮನಸ್ಸಿನ ಶಾಂತಿ ? ಸ್ವಾಮಿ, ನೀವು ಜ್ಞಾನಿಗಳು, ತಪೋಧನರು.

**ಋಷಿ** (ಕಳವಳದಿಂದ) ಓಹ್.....

**ಅಗಸ** ನಿಮಗೆ ನನ್ನ ಕತೆ ಕೇಳಿ ಏನು ಶಾಂತಿ ಸಿಗಬೇಕು ? ಆದರೆ ನನಗೆ ಈ ಪುಣ್ಯದ ಸುದ್ದಿ ಹೇಳಿದಿರಿ. ನಿಮಗೆ ಇಲ್ಲ ಎನ್ನಲಾರೆ..... ನನ್ನ ಹೆಸರು ಪದ್ಮನಾಭ, ಅಯೋಧ್ಯೆಯಲ್ಲಿ ಅಗಸನಾಗಿದ್ದೆ. ಯಾರ ಗೊಡವೆಯಿಲ್ಲದೆ ನನ್ನಷ್ಟಕ್ಕೆ ಕೆಲಸಮಾಡಿ ನನ್ನ ಹೆಂಡತಿಯೊಡನೆ ಸುಖದಿಂದಿದ್ದೆ. ನಾನು – ನನ್ನ ಹೆಂಡತಿ – ನನ್ನ ಕತ್ತೆ..... ಇನ್ನೇನು ಬೇಕಿತ್ತು ನನಗೆ ? ಸುಖದಿಂದಿರಬಹುದಾಗಿತ್ತು. ಆದರೆ ಸುಖದಲ್ಲೂ ವಿನಾಶದ ಆಸೆ ಬಿಡುವುದಲ್ಲ, ಸ್ವಾಮಿ. ನನಗೆ ಶ್ರೀರಾಮನ ಹೆಸರು ತೆಗೆದರೆ ಆಗುತ್ತಿರಲಿಲ್ಲ. ಹೆಸರು ಕೇಳಿದರೆ ಮೈ ಉರಿಯುತ್ತಿತ್ತು. ವಾಲಿಯನ್ನು ಬೆನ್ನಲ್ಲಿರಿದು ಕೊಂದವ, ಶೂರ್ಪನಖಿಯಂಥ ಹೆಣ್ಣಿನ ಮೂಗು ಕೊಯ್ಸಿದವ, ವಾನರ ಸೇನೆಯ ಸಹಾಯದಿಂದ ಮಾತ್ರ ಲಂಕ ಗೆದ್ದವ–ಒಂದೇ, ಎರಡೇ ? ಅಂಥ ರಾಮನ ಪ್ರಜೆ ನಾನಾಗಿದ್ದೇನೆ ಎಂಬುದನ್ನು ನೆನೆದರೆ ಮೈ ಬೆಂಕಿಯಾಗುತ್ತಿತ್ತು. ಆದರೆ ನನ್ನ ಹೆಂಡತಿಗೆ ಮಾತ್ರ ರಾಮನಲ್ಲಿ ಭಕ್ತಿ. ದಿನವೂ ರಾತ್ರಿ ಅವನ ಪೂಜೆ, ಅವನ ಹೆಸರು ನಾಲಿಗೆಯ ಮೇಲೆ. ಅವಳ ಭಕ್ತಿ ಕಂಡಾಗ ನನಗೆ ಭೂತ ಸಂಚಾರವಾದಂತಾಗುತ್ತಿತ್ತು. ಒಮ್ಮೊಮ್ಮೆ ಅಸೂಯೆ ಭುಗಿಲೇಳುತಿತ್ತು.... ನನ್ನ ಒರಟುತನ ಕ್ಷಮಿಸಬೇಕು, ಗುರುಗಳೇ, ಆದರೆ ನಾನು ಅಜ್ಞಾನಿಯಾಗಿದ್ದೆ.

**ಋಷಿ** ಆ ವಾಕ್ಯವನ್ನು ಭೂತಕಾಲದಲ್ಲಿ ತಳ್ಳುವ ಧೈರ್ಯ ನನಗಿದ್ದರೆಷ್ಟು ಒಳ್ಳೆಯದಾಗುತ್ತಿತ್ತು!

**ಅಗಸ** ಒಂದು ದಿನ ನಮ್ಮಿಬ್ಬರ ಜಗಳವಾಯಿತು. ರಾಮನ ಹೆಸರಿನ ಮೇಲೆ ಪ್ರತಿ ದಿನ ನಮ್ಮಿಬ್ಬರ ವಾದ ನಡೆದೇ ಇರುತ್ತಿತ್ತು. ಆದರೆ ಆ ದಿನ ತಾಳಲಾರದೆ ನಾನವಳಿಗೆ ಒಂದು ಏಟು ಕೊಟ್ಟೆ. ಆದರೆ ಕೊಟ್ಟೆ ಮಾತ್ರ. ಎದೆ ಧಸ್ಸೆಂದಿತು. ಅಲ್ಲಿಯವರೆಗೆ ನಾನೆಂದೂ ಅವಳನ್ನು ಹಿಂಸಿಸಿರಲಿಲ್ಲ. ನನ್ನ ಪ್ರೀತಿಯ ಹೆಂಡತಿಯವಳು. ಏಟು ಕೊಟ್ಟ ಮೇಲೆ ಅವಳೆದುರು ನಿಲ್ಲಲಾಗಲಿಲ್ಲ ನನಗೆ. ನನ್ನ ಕತ್ತೆಯನ್ನು ತೆಗೆದುಕೊಂಡು ಘಟ್ಟಕ್ಕೆ ಹೋದೆ. ಇಡಿಯ ದಿನ ಅಲ್ಲಿದ್ದು ದುಡಿದೆ. ಮರಳಿ ಬಂದಾಗ.... ಮನೆ ಬರಿದಾಗಿತ್ತು. ನನಗೆ ಏನೋ ವಿಚಿತ್ರವೆನಿತು. ಆ ರಾತ್ರಿಯೂ ಅವಳು ತಿರುಗಿ ಬರದಿದ್ದಾಗ ಮಾತ್ರ ಖಂಡಿತವಾಯಿತು– ಅವಳು ತನ್ನ ತಂದೆಯ ಮನೆಗೆ ಹೋಗಿರಬೇಕೆಂದು. ನನ್ನ ಪಿತ್ತ ನೆತ್ತಿಗೇರಿತು. ನೆಟ್ಟಗೆ ಹೋಗಿ ಶ್ರೀರಾಮನನ್ನೆದುರಿಸಬೇಕು, ನಮ್ಮ ಸಂಸಾರದಲ್ಲೇಕೆ ಮುಳ್ಳು ಹರಡುತ್ತಿರುವೆ ಎಂದು ಪ್ರಶ್ನಿಸಬೇಕು ಎನ್ನಿಸಿತು. ಆದರೆ... ಮನೆಯಲ್ಲೇ ಮಂಕಾಗಿ ಕುಳಿತೆ. ನಾಲ್ಕು ದಿನ ಘಟ್ಟದತ್ತ ಹೋಗಲಿಲ್ಲ. ಕೂಡಲೇ ಹೋಗಿ ಹೆಂಡತಿಯನ್ನು ಕರೆದು ತರಬೇಕು

| | |
|---|---|
| | ಎಳೆದಾದರೆ ಎಳೆದು, ಒಲಿಸಿಯಾದರೆ ಒಲಿಸಿ ತರಬೇಕು ಎನ್ನಿಸುತ್ತಿತ್ತು. ಆದರೆ ಅಭಿಮಾನವೆಲ್ಲಿ ಹೋದೀತು, ಸ್ವಾಮಿ ? ನಾಲ್ಕು ದಿನ....ಐದನೇ ದಿನ ನಾನು ಮನೆಯಲ್ಲಿದ್ದೆ. ಆಗ ಯಾರೋ ಕದ ಬಡಿದರು. |
| | **(ಕದ ಬದ ಸಪ್ಪಳ.)** |
| **ಅಗಸ** | ಯಾರದು ? |
| **ಹೆಣ್ಣು ಧ್ವನಿ** | **ನಾನು.....** |
| **ಅಗಸ** | (ಆನಂದದಿಂದ) ಯಾರು ಗ..... (ಆಮೇಲೆ ತನ್ನನ್ನೇ ತಡೆಹಿಡಿದು ವ್ಯಂಗ್ಯದಿಂದ) ನಾನು ? ನಾನು ಎಂದರೆ ಯಾರು ? |
| **ಹೆಣ್ಣು ಧ್ವನಿ** | ನಾನು, ಸ್ವಾಮಿ, ತಿರುಗಿ ಬಂದಿದ್ದೇನೆ. |
| **ಅಗಸ** | ಓ ಹೋ ಹೋ, ನನ್ನ ಧರ್ಮಪತ್ನಿಯೇನು ? ಎಷ್ಟು ಬೇಗನೆ ಬಂದುಬಿಟ್ಟೆ... ಏಕೆ ತಾಯ್ತಂದೆ ಮಗಳನ್ನು ಮನೆಯಲ್ಲಿ ಬೆಚ್ಚಗಿಡುವ ವ್ಯವಸ್ಥೆ ಮಾಡಿರಲಿಲ್ಲವೇನು ? |
| **ಹೆಂಡತಿ** | ನಾನು ಅವರಿಗೆ ಹೇಳದೆ ಕೇಳದೆ ಬಂದಿದ್ದೇನೆ. ಎಲ್ಲ ಹೇಳುತ್ತೇನೆ. ಮೊದಲು ಕದ ತೆಗೆಯಿರಿ. |
| **ಅಗಸ** | ಕದ ತೆರೆದೇನು ಮಾಡಲಿ ? ಇಲ್ಲಿ ಇರುವವ ನಾನೊಬ್ಬನೇ ನನಗೂ ನಿನಗೂ ಏನು ಸಂಬಂಧ ? |
| **ಹೆಂಡತಿ** | (ವಿಹ್ವಲಳಾಗಿ) ನಾನು ತಪ್ಪು ಮಾಡಿದೆ, ಸ್ವಾಮಿ. ಒಪ್ಪಿಕೊಳ್ಳುತ್ತೇನೆ. ನೀವು ಹೇಳಿದ್ದನ್ನು ಮಾಡುತ್ತೇನೆ. ಆದರೆ ಹೀಗೆ ಬೀದಿಯಲ್ಲಿ ಕೂಡ್ರಿಸಬೇಡಿ ನನ್ನನ್ನು ಕದ ತೆರೆಯಿರಿ. |
| **ಅಗಸ** | ಕದ ತೆಗೆಯಬೇಕಂತೆ–ಕದ ! (ತೆರೆಯುತ್ತಾನೆ.) ಹಾಂ. ಹಾಂ. ತಡೆ ತಡೆ. ಹೊರಟೇಬಿಟ್ಟೆಯಲ್ಲ ನೆಟ್ಟಗೆ ಒಳಗೆ..... ಹೇಳು. ಏನು ಬೇಕು ನಿನಗಿಲ್ಲಿ? |
| **ಹೆಂಡತಿ** | (ದೀನಳಾಗಿ) ದಾರಿ ಬಿಡಿರಿ. ನನ್ನ ತಪ್ಪಾಯ್ತು. ನೆರೆಹೊರೆಯವರೆಲ್ಲ ನೋಡುತ್ತಿದ್ದಾರೆ. ಅವರೆದುರಿಗೆ ಏನು ಇದೆಲ್ಲ ಹಗರಣ? |
| **ಅಗಸ** | ನೆರೆಹೊರೆಯವರು ನೋಡುತ್ತಿದ್ದಾರೇನು ? ನೋಡಲಿ, ನೋಡಲಿ. (ಕೂಗಿ) ಬನ್ನಿರಿ, ಬನ್ನಿರಿ **(ಇನ್ನೂ ಸಮೀಪ ಬಂದು)** ನೋಡಿರಿ ನಮ್ಮ ಮನೆಯ ಆಟ! ಬನ್ನಿರಿ, ಕಾಣಿರಿ ಈ ಪತಿವ್ರತೆಯನ್ನು..... |
| **ಹೆಂಡತಿ** | ಸಾಕು, ಸಾಕು ಮಾಡಿರಿ... ಎಲ್ಲರೆದುರಿಗೆ ನನ್ನ ನಾಚಿಕೆ ತೆಗೆಯಬೇಡಿ, ಸ್ವಾಮಿ, ನಿಮ್ಮ ಕಾಲಿಗೆ ಬೀಳುತ್ತೇನೆ.... ನನಗೊಮ್ಮೆ ಒಳಗೆ ಬಿಡಿ. |

**ಅಗಸ** ನಾಚಿಕೆ ಇದ್ದರಲ್ಲವೆ ತೆಗೆಯುವುದು ? ನನಗೆ ಹೇಳದೆ ಮನೆಯಿಂದ ಓಡಿಹೋಗುವಾಗ ಬರಲಿಲ್ಲವೇನು ನಾಚಿಕೆ ? ನನಗಿಂತ ನಿನ್ನ ದೇವರು ದೊಡ್ಡವನಾದ ಅಲ್ಲವೇನು ನಿನಗೆ ? ಸರಿ ನಿನ್ನಿಚ್ಛೆ, ನಿನ್ನ ತಂದೆ ನಿನ್ನ ಕೈಯಲ್ಲಿ ನೀಲಾಂಜನ ಕೊಟ್ಟು 'ದೀಪ ಹಚ್ಚು' ಎಂದು ಹೇಳಿರಬೇಕಲ್ಲ ಮುದ್ದಿನ ಮಗಳಿಗೆ; ಆದರೆ ಇಲ್ಲೇನೂ ರಾಮ ಸಿಗುವುದಿಲ್ಲ ನಿನಗೆ. ಇಲ್ಲಿ ಇರುವವನು ನಾನು ಮಾತ್ರ, ಕ್ಷುದ್ರ ಅಗಸ ! ಆ ರಾಮ ಎಲ್ಲಿ ಇದ್ದಾನೆ ಗೊತ್ತೇ ? ಅಲ್ಲಿ–ಆ ಅರಮನೆಯಲ್ಲಿ–ಬೇಕಾದರೆ ಹೋಗಲ್ಲಿ, ಅಲ್ಲೇ–

**ನೆರಮನೆಯ ಹೆಂಗಸು** ಪದ್ಮನಾಭ.....

**ಅಗಸ** ಏಕೆ, ವಸುಧಮ್ಮ, ದೂರದಿಂದ ನೋಡಿ ಸಾಕಾಲಿಲ್ಲವೇನು ಆಟದ ಮೋಜು? ಮತ್ತೆ ಇಲ್ಲಿಯೇ ನಡುವೆ ಮೂಗು ತುರುಕುತ್ತಿದ್ದೀರಿ ?

**ವಸುಧಮ್ಮ** ಸಿಟ್ಟಾಗ ಬೇಡಪ್ಪ. ಆದರೆ ಈ ರೀತಿ ಎಲ್ಲರೆದುರಿಗೆ ಹೆಂಡತಿಯ ಅವಮಾನ ಮಾಡುವದು ಒಳ್ಳೆಯದಲ್ಲಪ್ಪ, ಅಲ್ಲದೆ ಅಲ್ಲಿ ನೋಡು. ರಾಜನ ಸೈನಿಕನೊಬ್ಬ ಈ ಕಡೆಗೇ ಬರುತ್ತಿದ್ದಾನೆ. ಈ ಗದ್ದಲ ಕೇಳಿ ಬರುತ್ತಿರಬೇಕು. ಎಲ್ಲಿಯಾದರೂ ರಾಜನೆಡೆಗೆ ಎಳೆದೊಯ್ದರೆ ನಾಚಿಕೆಗೇಡಲ್ಲವೆ ನಿನಗೆ ?

**ಅಗಸ** (ಉರಿದು) ನನಗೆ ನಾಚಿಕೆಗೇಡು–ಶ್ರೀರಾಮನಿಂದ ? ವಸುಧಮ್ಮ, ನಾನು ಎಂದರೆ ಯಾರೆಂದು ತಿಳಿದಿದ್ದಾನೆ ಅವನು ? ನನಗೆ ಆಜ್ಞೆ ಮಾಡಿ ಇವಳನ್ನು ಒಳಗೆ ತೆಗೆದುಕೊಳ್ಳುವಂತೆ ಮಾಡುತ್ತಾನೇನು ? ಇಲ್ಲ. ಇಲ್ಲ. ಇಲ್ಲ.... ಮನೆ ಬಿಟ್ಟು ದೂರ ಹೋದ ಹೆಂಡತಿಯನ್ನು ಮತ್ತೆ ಸ್ವಾಗತ ಮಾಡಿ ಕರೆದುಕೊಳ್ಳಲಿಕ್ಕೆ ನಾನು ರಾಮನಲ್ಲ ಎಂದೆ.

**ಹೆಂಡತಿ** ಅಯ್ಯೋ, ನನ್ನನ್ನು ಬೀದಿಗೆ ದೂಡಿರಿ, ಕೊಲ್ಲಿರಿ. ಆದರೆ. ಶ್ರೀರಾಮನನ್ನು ಹೀಗೆ ಬಯ್ಯಬೇಡಿರಿ.....

**ಅಗಸ** ನೋಡು, ನೋಡು, ಮೂಗಿಗೆ ಹೇಗೆ ಉರಿ ಬಿತ್ತು....

**ವಸುಧಮ್ಮ** ಪದ್ಮನಾಭ, ಏನಿದು ? ಆ ಸೈನಿಕ ಇದನ್ನು ಕೇಳಿದರೆ–

**ಅಗಸ** ಕೇಳಲಿ ! ನನಗೇನು ? ಹೆದರಿಕೆಯೇನು ? ಎಲ್ಲಿದ್ದಾನವನು ? ನಾನೇ ಹೇಳುತ್ತೇನೆ ಅವನಿಗೆ.... ಎಲಾ ಇವನ. ಓಡಿಹೋಗಿ ಬಿಟ್ಟನೇನು ಪುಣ್ಯಾತ್ಮ?..... ಹೋಗದೆ ಏನು ಮಾಡುತ್ತಾನೆ ಅನ್ನಿರಿ, ಅಂಥವನ ಆಳಾಗಿರೋದೆ ನಾಚಿಕೆ ಎನ್ನಿಸಿರಬೇಕು.

**ಹೆಂಡತಿ** ದೇವರೇ, ಇಂಥ ಹೇಸಿ ಮಾತನ್ನು ಕೇಳುವುದಕ್ಕಿಂತ ನಾನು ಸತ್ತು ಏಕೆ ಹೋಗುವುದಿಲ್ಲ?

**ಅಗಸ** ನಾನು ಕೊನೆಗೂ ನನ್ನ ಹೆಂಡತಿಯನ್ನು ಮನೆಯಲ್ಲಿ ಬರಗೊಡಲಿಲ್ಲ. ಅವಳು ತಂದೆಯ ಮನೆಗೂ ಹೋಗಲಿಲ್ಲ. ನೆರೆಮನೆಯ ವಸುಧಮ್ಮನ ಮನೆಯಲ್ಲಿದ್ದಳಂತೆ. ಇತ್ತ ನನಗೂ ಹುಚ್ಚು ಹಿಡಿಯುತ್ತದೋ ಎನ್ನಿಸುತ್ತಿತ್ತು. ಎಲ್ಲರೆದುರು ತಳೆದ ಅವತಾರ ನೆನಪಾದಾಗ ನಾಚಿಕೆಯಾಗಿ ಎದೆಯೊಡೆಯುತ್ತಿತ್ತು. ಹೆಂಡತಿಯನ್ನು ಕಾಣಬೇಕು, ಅವಳ ಕ್ಷಮೆ ಕೇಳಬೇಕು..... ಅವಳು ಸುಶೀಲೆ, ಕುವಿಚಾರಕ್ಕೆ ಎಡೆಗೊಡುವವಳಲ್ಲ ಎಂಬುದೂ ನನಗೆ ಖಚಿತವಾಗಿ ಗೊತ್ತಿತ್ತು. ಆದರೆ ಅಭಿಮಾನ– ಮತ್ತೆ ಅದೇ ದುರಾಗ್ರಹ. ಅವಳೆಲ್ಲಿಯಾದರೂ ಕದ್ದು ಬರಬಹುದೆಂದು ಮನೆಯ ಬಾಗಿಲುಗಳನ್ನು ಗಟ್ಟಿಯಾಗಿ ಮುಚ್ಚಿಟ್ಟಿದ್ದೆ..... ನಾಲ್ಕೈದು ದಿನಗಳ ನಂತರದ ಸುದ್ದಿಯಿದು. ನಾನು ತಲೆ ಹಿಡಿದು ಕುಳಿತುಕೊಂಡಿದ್ದೆ. ಯಾರೋ ಒಮ್ಮೆಲೆ ಕದ ಬಡಿಯಲಾರಂಭಿದರು.........

**(ಒಂದೇ ಸಮನೆ ಕದದ ಬಡಿತ)**

**ಅಗಸ** **(ಕೂಗಿ)** ಯಾರದು ?

**ಹೆಂಡತಿ** ನಾನು, ಸ್ವಾಮಿ, ಬೇಗ ಕದ ತೆಗೆಯಿರಿ, ಬೇಗ......

**ಅಗಸ** ಏಕೆ ಬಂದೆ ಮತ್ತೆ? ಕದ ತೆರೆಯುವುದಿಲ್ಲ, ತೆರೆಯುವುದಿಲ್ಲ ಎಂದೆ !

**ಹೆಂಡತಿ** ನನಗಾಗಿಯಲ್ಲ, ಸ್ವಾಮಿ, ನಿಮಗಾಗಿ ! ನಿಮ್ಮ ಜೀವಕ್ಕಾಗಿ, ನಿಮ್ಮನ್ನು ಕೊಲ್ಲಲಿಕ್ಕೆ ಬರುತ್ತಿದ್ದಾರೆ ಸ್ವಾಮಿ.....

**ಅಗಸ** **(ಔಪರೋಧಿಕವಾಗಿ)** ನನ್ನನ್ನು ಕೊಲ್ಲಲಿಕ್ಕೆ ಬರುವವರು ಯಾರು ? ಮಾವನವರೆ ?

**ಹೆಂಡತಿ** ನಗೆಚಾಟಿಕೆ ಮಾಡಲಿಕ್ಕೆ ಒಂದಿಷ್ಟೂ ಹೊತ್ತಿಲ್ಲ. ಅದೋ.... ಬಂದೇ ಬಿಟ್ಟರು. (ದೂರದಲ್ಲಿ ಜನರ ಕೋಲಾಹಲ, ಗಲಭೆ ನಿಮಿಷ ನಿಮಿಷಕ್ಕೆ ಸಮೀಪ ಬರುತ್ತಿದೆ.)

**ಅಗಸ** ಏನು ಆ ಗಲಭೆ ? ತಡೆ. ಸ್ವಲ್ಪ ತಡೆ, ಕದ ತೆರೆಯುತ್ತೇನೆ. ಇಷ್ಟೆಲ್ಲ ಜನರು ಯಾರವರು ? ಏಕೆ ಬರುತ್ತಿದ್ದಾರೆ ?

**ಹೆಂಡತಿ** ಒಳಗೆ ಬನ್ನಿ ಬೇಗ ಕದ ಮುಚ್ಚಿಕೊಳ್ಳಿ. ಹೊರಗೆ ನಿಲ್ಲಬೇಡಿ. ನಿಮ್ಮ ಜೀವಕ್ಕೆ ಅಪಾಯ.... ಮುಚ್ಚಿರಿ ಬೇಗ.

(ಕದ ಮುಚ್ಚುತ್ತಾಳೆ. ಹೊರಗೆ ಗದ್ದಲ ಹೆಚ್ಚಾಗಿದೆ. **'ಪದ್ಮನಾಭ ಒಳಗೆ ಓಡಬೇಡ'** ಎಂದು ಯಾರೋ ಕೂಗುತ್ತಾರೆ.)

**ಅಗಸ** **(ಬೆದರಿದ ಧ್ವನಿಯಲ್ಲಿ)** ಯಾರವರು ? ನಮ್ಮ ಮನೆಯನ್ನೇಕೆ ಸುತ್ತುತ್ತಿದ್ದಾರೆ? ಏನು ಬೇಕಂತೆ ಅವರಿಗೆ ?

| | |
|---|---|
| **ಹೆಂಡತಿ** | (ಅಳುತ್ತ) ನೀವಿನ್ನೂ ಕೇಳಿಲ್ಲವೆ, ಸ್ವಾಮಿ, ಅನರ್ಥ ? |
| **ಅಗಸ** | ಅನರ್ಥ ? ನನಗೆ ಹೇಗೆ ತಿಳಿಯಬೇಕು ? ನಾನು ಮನೆಯಿಂದ ಹೊರಗೇ ಹೋಗಿಲ್ಲ. ಯಾವ ಅನರ್ಥ ? |
| **ಹೆಂಡತಿ** | ವಸುಧಮ್ಮನ ಗಂಡ ಹೇಳಿದರು, ಸ್ವಾಮಿ. ಈ ಜನ ಬರುತ್ತಿದ್ದಾರೆಂದು.... ನಿಮ್ಮಿಂದ ಸೀತೆಗೆ ಮತ್ತೆ ವನವಾಸವಾಯಿತೆಂದು ರೊಚ್ಚಿಗೆದ್ದಿದ್ದಾರೆ ಈ ಜನ. |
| **ಅಗಸ** | ಏನು ಬಡಬಡಿಸುತ್ತಿರುವೆ ಹುಚ್ಚಿಯಂತೆ ? |
| **ಹೆಂಡತಿ** | ಆ ದಿನ..... ನೀವು ಆಡಿದ ಮಾತುಗಳನ್ನು ಕೇಳಿ, ಆ ಸೈನಿಕ ಕೂಡಲೇ ಅರಮನೆಗೆ ಹೋದನಂತೆ. ಎಲ್ಲವನ್ನೂ ಅರಸರಿಗೆ ಹೇಳಿದನಂತೆ. |
| **ಅಗಸ** | **(ದ್ವೇಷದಿಂದ)** ಮೂರ್ಖ ! ಕೆಲವರ ಬಾಯಲ್ಲೊಂದು ಶಬ್ದ ನಿಲ್ಲುವುದಿಲ್ಲ. |
| **ಹೆಂಡತಿ** | ಅದರಿಂದ ಮನನೊಂದ ರಾಮಚಂದ್ರ ಪ್ರಭು ಸೀತೆಯನ್ನು ಲಕ್ಷ್ಮಣನೊಡನೆ ವನಕ್ಕೆ ಕಳುಹಿಸಿದ್ದಾನಂತೆ..... ಸೀತೆಗೆ ಮರಳಿ ವನವಾಸ, ಸ್ವಾಮಿ. ಈಸಲ ಮಾತ್ರ ಆಜನ್ಮ ವನವಾಸ..... ನಿಮ್ಮ ಒಂದು ಮಾತಿಗಾಗಿ.... |
| | (ಅಳುತ್ತಾಳೆ. ಹೊರಗೆ ಗಲಭೆ ಹೆಚ್ಚುತ್ತದೆ. **"ಮುರಿಯಿರಿ ಕದ" "ಹೊರಗೆ ಎಳೆದು ತೆಗೆಯಿರಿ ಆ ಖೂಳನನ್ನು', 'ಬೆಂಕಿ ಹಚ್ಚಿರಿ ಅವನ ಮನೆಗೆ'** ಇತ್ಯಾದಿ ಕೂಗುಗಳು. ಕೆಲ ಕಲ್ಲೂ ಹೆಂಚಿನ ಮೇಲೆ ಬಿದ್ದ ಸಪ್ಪಳ.) |
| **ಹೆಂಡತಿ** | ಸ್ವಾಮಿ, ಕಿಟಕಿಯ ಹತ್ತಿರ ಹೋಗಬೇಡಿ. ಅವರು ಕಲ್ಲೊಗೆಯುತ್ತಿದ್ದಾರೆ. (ಅಗಸ ಮಾತ್ರ ನಗಲಾರಂಭಿಸುತ್ತಾನೆ.) ಇಂಥ ಪ್ರಸಂಗದಲ್ಲಿಯೂ ನಗೆಯೇನು ? ಎಂಥ ಕಲ್ಲೆದೆ ನಿಮ್ಮದು ? |
| **ಅಗಸ** | ಅಯೋಧ್ಯೆಯ ಸುಸಂಸ್ಕೃತ ಪೌರರು! ರಾಮರಾಜ್ಯದ ಪ್ರಜೆಗಳೆಂದು ತಮ್ಮ ಶಾಂತಿ, ವಿನಯ, ವಿದ್ಯೆಗಾಗಿ ಹೆಸರಾದ ಜನ ! ಆದರೆ ನನ್ನ ಒಂದು ಮಾತಿಗೆ ಇವರ ಛದ್ಮ ವೇಷವೆಲ್ಲ ಕಳಚಿಬಿದ್ದಿದೆ, ನೋಡು..... |
| **ಹೆಂಡತಿ** | (ಕೋಪದಿಂದ) ಅವರನ್ನೇಕೆ ಬಯ್ಯುತ್ತೀರಿ ? ನೀವಿಂಥವರು ಎಂಬುದು ನನಗೂ ಇಷ್ಟು ದಿನ ತಿಳಿದಿರಲಿಲ್ಲ. ತಿಳಿದಿದ್ದರೆ ತಿರುಗಿ ಬರುತ್ತಿರಲಿಲ್ಲ. ಈ ಕಟುಕರ ಮನೆಗೆ– |
| **ಅಗಸ** | (ನಗುತ್ತ) ನಾನೂ ಈ ಅಯೋಧ್ಯೆಯವನೇ ಅಲ್ಲವೇ ? (ಹೊರಗಿನ್ನೂ ಗದ್ದಲ ನಡೆದಿದೆ. ಕುದುರೆಗಳ ಖುರ ಪುಟ) ಕುದುರೆಗಳು..... ಪರ ಊರಿನವರೂ ಬಂದರೇನು ನನ್ನನ್ನು ಗೌರವಿಸಲಿಕ್ಕೆ ? |

**ಹೆಂಡತಿ** ನಾನು ನೋಡುತ್ತೇನೆ. ನೀವು ಏನಾದರೂ ಕಿಟಕಿಯ ಹತ್ತಿರ ಹೋಗಬೇಡಿ, ಸ್ವಾಮಿ... ಸ್ವಲ್ಪ ತಾಳಿ.... ಇವರು ಬೇರೆ ಊರಿನ ಜನರಲ್ಲ. ಸೈನಿಕರು ! ರಾಜನ ರಾಹುತರು.....

**ಅಗಸ** (ಬೆದರಿದವನಂತ ಒಮ್ಮೆಲೆ) ರಾಹುತರು ? ಅವರು ಇಲ್ಲಿ ಏಕೆ ? ನನ್ನನ್ನು ಹಿಡಿದೊಯ್ಯಲು ಬಂದಿದ್ದಾರೇನು ?

**ಹೆಂಡತಿ** ಇಲ್ಲ. ಅವರ ಮುಂದಾಳು ಏನೋ ಪತ್ರ ಹೊರತೆಗೆಯುತ್ತಿದ್ದಾನೆ. ಬಿಚ್ಚಿ ಓದುತ್ತಿದ್ದಾನೆ. ಏನೋ ರಾಜಾಜ್ಞೆಯಿರಬೇಕು. **(ಗಂಟೆಯ ಸದ್ದು. ಗದ್ದಲ ಕಡಿಮೆಯಾಗುತ್ತಾ ಹೋಗಿ ಕೊನೆಗೆ ಸ್ತಬ್ಧತೆ.)**

**ಸೈನಿಕ** ಅಯೋಧ್ಯೆಯ ನಾಗರೀಕರೇ, ಕೇಳಿರಿ! ಸಕಲ ಭೂಮಂಡಲೇಶ್ವರ, ಕೌಸಲ್ಯಾತನಯ ಶ್ರೀರಾಮಚಂದ್ರ ಪ್ರಭುಗಳು ಈ ಮುಂದಿನಂತೆ ಆಜ್ಞಾಪಿಸಿದ್ದಾರೆ. ರಾಣಿ ಸೀತಾದೇವಿಯ ನಿರ್ಗಮನದಿಂದ ಪೌರರಿಗೆಷ್ಟು ದುಃಖವಾಗಿದೆಯೆಂಬುದರ ಕಲ್ಪನೆ ರಾಜೇಂದ್ರರಿಗಿದೆ. ಆದರೆ ಆ ಸಂತಾಪಕ್ಕೆ ಒಳಗಾಗಿ ಪೌರರು ಹಿಂಸೆಗೆ ಕೈಹಾಕಬಾರದು. ಅನರ್ಥಕ್ಕೆ ಎಡೆಗೊಡಬಾರದು. ತಮ್ಮ ಸಕಲ ನಿರ್ಧಾರಗಳಿಗೆ ರಾಜರೇ ಹೊಣೆಗಾರರು ಎಂಬುದನ್ನು ನೆನಪಿಟ್ಟು ಶಾಂತಿಯಿಂದ ವರ್ತಿಸಬೇಕು.

**ಒಬ್ಬ ನಾಗರಿಕ** ಆ ದುರುಳನನ್ನು ಅರಸರು ಹೀಗೆಯೇ ಬಿಡಬಾರದು. ಅವನಿಗೆ ಶಿಕ್ಷೆಯಾಗಲೇಬೇಕು.

**ಸೈನಿಕ** ಸಾಕು ! ಸಾಕು ? ಶ್ರೀರಾಮ ಪ್ರಭುಗಳಿಗೆ ನ್ಯಾಯದ ಪಾಠ ಹೇಳಿ ಕೊಡುತ್ತೀರೇನು ? ಹೇಳಿದಷ್ಟು ಕೇಳಲಿಕ್ಕಾಗುವುದಿಲ್ಲವೇನು? ಹುಂ! ಕೂಡಲೆ ಹೊರಡಿರಿ ಮನೆಗೆ.

**(ಗದ್ದಲ ಕಡಿಮೆಯಾಗುತ್ತದೆ. ಕೊನೆಗೆ ನಿಶ್ಯಬ್ದ, ಕುದುರೆಗಳ ಖುರ ಪುಟ)**

**ಅಗಸ** ಹೋದರೇನು ಜನ ?

**ಹೆಂಡತಿ** (ಉದಾಸೀನಳಾಗಿ) ಹೌದು. ಹೋದರು. ಎಲ್ಲರೂ ಹೋದರು.

**ಅಗಸ** ನಾನೂ ಹೊರಡಬೇಕು.

**ಹೆಂಡತಿ** (ಬೆದರಿ) ನೀವು ? ನೀವೆಲ್ಲಿ ಹೊರಟರಿ ?

**ಅಗಸ** ಅರಮನೆಗೆ, ನಾನು ರಾಮಚಂದ್ರನನ್ನು ಕಾಣಲೇಬೇಕು. ಸೀತೆ ಮರಳಿ ಬರಲೇಬೇಕು.

**ಹೆಂಡತಿ** ಈಗ ಬೇಡ ಸ್ವಾಮಿ, ರಾಜರ ಕ್ಷಮೆ ಕೇಳುವುದಿದ್ದರೂ ಸ್ವಲ್ಪ ತಡೆದು ಹೋಗಿ.

**ಅಗಸ** ಕ್ಷಮೆ ? ನಾನು ಯಾರ ಕ್ಷಮೆ, ಏಕೆ ಕೇಳಬೇಕು ? ನಾನೇನು ತಪ್ಪು ಮಾಡಿದೆ ? ನನ್ನ ಮಾತು ಕೇಳಿ ರಾಮ ಸೀತೆಯನ್ನು ವನಕ್ಕಟ್ಟಿದನಂತಲ್ಲ. ಈಗ ನನ್ನ ಮಾನವನ್ನು ಉಳಿಸಲಿಕ್ಕೆ ಅವಳು ತಿರುಗಿ ಬರಬೇಕು. ನೀನು ಆ ಸೈನಿಕರ ನಾಯಕ ಎಂದಿದ್ದನ್ನು ಕೇಳಲಿಲ್ಲವೇನು ? 'ತಮ್ಮ ಸಕಲ ನಿರ್ಧಾರಗಳಿಗೆ ರಾಜರೇ ಹೊಣೆಗಾರರು' ಅಂತ. ಎಷ್ಟು ಚತುರತೆಯಿಂದ ಹೊಣೆ ತನ್ನದಲ್ಲ ಎಂದು ಸೂಚಿಸುತ್ತಾನೆ ನಿನ್ನ ರಾಮ. ಜನರೂ ಇದನ್ನು ನನ್ನ ತಲೆಯ ಮೇಲೆಯೇ ಹಾಕಿದ್ದಾರೆ.... ಈ ಅಪವಾದ ಹೊತ್ತು ನಾನಿಲ್ಲಿ ಇರುವುದಾದರೂ ಹೇಗೆ ? ಈ ಅಪವಾದ ನನಗಂಟಿಕೊಂಡರೆ ನಾನು ಜೀವನ ಸಾಗಿಸುವುದಾದರೂ ಹೇಗೆ ? ನನಗೆ ಬಟ್ಟೆ ಕೊಡುವವರಾದರೂ ಯಾರು ? ಇಲ್ಲ. ಇಲ್ಲ ನಾನು ಅರಸನನ್ನು ಕಾಣಲೇಬೇಕು.

**ಹೆಂಡತಿ** ಸ್ವಾಮಿ, ದಾರಿಯಲ್ಲಿ ನಿಮಗೇನಾದರೂ ಅಪಾಯವಾದೀತು. ದಯಮಾಡಿ ಈಗ ಹೋಗಬೇಡಿ....

**ಅಗಸ** ಜನರಿಗೇಕೆ ಸುಮ್ಮನೇ ಹೆದರುತ್ತೀ ನೀನು ? ಅವರು ರಾಮನ ಭಕ್ತರು. ಅವರಿಗೆ ರಾಮನ ಮಾತಿನ ಅರ್ಥ ತಿಳಿಯಲಿಲ್ಲವೆಂದು ಎಣಿಸಿದೆಯಾ ? ಅವರು ನನಗೆ ಜೀವಂತ ಇರಗೊಟ್ಟರೆ ನಾನು ಬದುಕಿರುವವರೆಗೆ ನಾನೇ ಈ ಅಪವಾದ ಹೊರಬೇಕಾಗುತ್ತದೆ. ಅವರಿಗೆ ಅದೇ ಬೇಕು. ಅದಕ್ಕೇ ನನ್ನನ್ನು ಮುಟ್ಟಲಾರರವರು.

**ಹೆಂಡತಿ** ಅವರ ಭಯ ಇಲ್ಲ ನನಗೆ.....ನನಗಿದ್ದ ಭಯ ರಾಮನದು.....

**ಅಗಸ** ನಾನು ನೇರವಾಗಿ ಅರಮನೆಗೆ ಹೋದೆ. ನಾನು ನೆನೆದಂತೆ ನನ್ನನ್ನು ಯಾರೂ ಮುಟ್ಟಲಿಲ್ಲ. ನನ್ನತ್ತ ನೋಡಿ, ಮುಖ ತಿರುವಿದರು. ಅಯೋಧ್ಯೆಯ ಮೇಲೆ ಮೃತ್ಯು ಕಳೆ ಹರಡಿತ್ತು. ಅರಮನೆಯ ದ್ವಾರಪಾಲಕ ನನಗೆ ಒಳಗೆ ಹೋಗಗೊಡಲಿಲ್ಲ. ಶ್ರೀರಾಮನಿಗೆ ಸ್ವಾಸ್ಥ್ಯವಿಲ್ಲ. ಭರತನನ್ನು ಬೇಕಾದರೆ ಕಾಣಬಹುದು ಎಂದ. ಆದರೆ ನನಗೆ ಕಾಣಬೇಕಾಗಿತ್ತು ಶ್ರೀರಾಮಚಂದ್ರನನ್ನು. ಅವನು ತನ್ನ ಒಂದು ಕೃತ್ಯದಿಂದ ನನ್ನ ಜೀವನ ಹೇಗೆ ಹಾಳುಮಾಡುತ್ತಿದ್ದಾನೆಂಬುದನ್ನು ತೋರಿಸಬೇಕಾಗಿತ್ತು. ನಾನು ಕಾವಲುಗಾರರೊಡನೆ ಜಗಳವಾಡಿದೆ. ಅವರ ಕಾಲ್ಗೆರಗಿದೆ ಆದರೇನೂ ಪ್ರಯೋಜನವಾಗಲಿಲ್ಲ. ಕೊನೆಗೆ ಆ ಗದ್ದಲ ಕೇಳಿ ಭರತನೇ ಹೊರಗೆ ಬಂದ.

**ಭರತ** ದ್ವಾರಪಾಲಕರೇ, ಏನು ಗದ್ದಲ ನಡೆದಿದೆ ಇಲ್ಲಿ?

**ದ್ವಾ.ಪಾ.** ಪುಣ್ಯಶ್ರೀ ಕೈಕೇಯರಿಗೆ ಜಯವಾಗಲಿ ! ಈ ಮನುಷ್ಯ ಪ್ರಭುಗಳನ್ನು ಕಾಣಬೇಕೆನ್ನುತ್ತಾನೆ. ತಮ್ಮನ್ನು ಭೆಟ್ಟಿಯಾಗು ಎಂದರೆ ಕೇಳುವುದಿಲ್ಲ. ಎಷ್ಟು ಹೇಳಿದರೂ ಹಟ ಹಿಡಿದಿದ್ದಾನೆ.

**ಭರತ** ಏನು ಬೇಕು ನಿನಗೆ ?

**ಅಗಸ** ನಾನೇನು ಹೇಳಲಿ, ಒಡೆಯ ? ನಾನು ಕೋಪದಿಂದ ಆಡಿದ ಒಂದು ಮಾತಿಗೆ ಪ್ರಭುಗಳು ಸೀತಾದೇವಿಯನ್ನು ವನಕ್ಕೆ ಕಳಿಸಿದ್ದಾರಂತೆ. ನಾನು ಕೆಟ್ಟ ಉದ್ದೇಶದಿಂದ ಆಡಿರಲಿಲ್ಲ, ಒಡೆಯ, ಬಾಯ್ತಪ್ಪಿ ಆಡಿದ ಮಾತುಗಳವು......

**ಭರತ** ಈಗ ದುಃಖಪಟ್ಟು ಏನು ಉಪಯೋಗ ? ಶ್ರೀರಾಮಚಂದ್ರರು ಈಗ ನಿಶ್ಚಯ ಮಾಡಿದ್ದಾರೆ. ಈಗ ಅವರು ಮನಸ್ಸನ್ನು ಬದಲಿಸಲಾರರು.

**ಅಗಸ** ಆದರೆ ನನ್ನ ಗತಿಯೇನು ? (ಕಳವಳದಿಂದ) ಶ್ರೀರಾಮಚಂದ್ರ ಪ್ರಭುಗಳ ಕೃತ್ಯದ ಹೊಣೆಯನ್ನು ನಾನು ಹೊರಲಾರೆ, ಸ್ವಾಮಿ...

**ಭರತ** ನಾನೇನು ಮಾಡಲಿ, ರಜಕ ? ತಪ್ಪು ನಿನ್ನದಲ್ಲ. ನೀನಿಲ್ಲದಿದ್ದರೆ ಬೇರೆ ಯಾವುದಾದರೂ ಕಾರಣ ಸಿಗುತ್ತಿತ್ತು ಶ್ರೀರಾಮರಿಗೆ...

**ಅಗಸ** ಎಂದರೆ ? ಎಂದರೇನು ಸ್ವಾಮಿ ?

**ಅಗಸ** ಭರತರು ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ನಾನು ಹಿಂದಕ್ಕೆ ಹೊರಳಿದೆ. ಆದರೆ ಮನೆಗೆ ಹೋಗುವುದು ಅಸಾಧ್ಯವಾಗಿತ್ತು. ಹೆಂಡತಿಯನ್ನು ಕಾಣುವದು ಅಸಹ್ಯವೆನ್ನಿಸುತ್ತಿತ್ತು. ಅವಳು ಅ ಅಪವಾದದ ಸಾಕ್ಷಾತ್ಕಾರದಂತಿದ್ದಳು ! ನಾನು ಅಯೋಧ್ಯೆ ಬಿಟ್ಟು ಹೊರಬಿದ್ದೆ. ಅಯೋಧ್ಯೆಗೆ ಮರಳಿ ಬರಲಾರೆನೆಂದು ಆಣೆ ಮಾಡಿದೆ. ವಿಷ್ಣುಪುರಕ್ಕೆ ಹೋದೆ. ಅಲ್ಲಿ ಅಗಸನೆಂದು ಕೆಲಸ ಹಿಡಿದೆ. ಆದರೆ ಕೆಲ ಸಮಯದಲ್ಲಿ ಅಲ್ಲಿಯೂ ಯಾರೋ ನನ್ನ ಗುರುತು ಹಿಡಿದರು. 'ಅಯೋಧ್ಯೆಯ ದುಷ್ಟ, ಅಗಸ ವಿಷ್ಣುಪುರದಲ್ಲಿದ್ದಾನೆ' ಎಂಬ ಪುಕಾರು ಎದ್ದಿತು. ಕಂಡವರೆಲ್ಲ ನನ್ನನ್ನು ಬೆರಳುಮಾಡಿ ತೋರಿದರು. ಕೊನೆಗೆ ಊರಿನ ಅಗಸರು ನನ್ನನ್ನು ವಿಷ್ಣುಪುರದಿಂದ ಓಡಿಸಿದರು. ನಾನು ಮಿಥಿಲಿಗೆ ಹೋದೆ. ಅಲ್ಲಿಯೂ ಅದೇ ಗತಿ ! ಹೋದಲ್ಲೆಲ್ಲ ಅಪವಾದ ನನ್ನ ನೆರಳಾಗಿತ್ತು.....

**ಋಷಿ** ನೀನು ದೂರ ದಕ್ಷಿಣದಲ್ಲಿ ಎಲ್ಲಾದರೂ ಏಕೆ ಹೋಗಲಿಲ್ಲ ? ನನಗೆ ಮನುಷ್ಯ ಸಮಾಜದ ಬಗ್ಗೆ ಘೃಣೆಯೆನ್ನಿಸ ಹತ್ತಿತ್ತು, ಸ್ವಾಮಿ. ಊರೂರು ಅಲೆದೆ. ಆಮೇಲೆ ಊರು ಬಿಟ್ಟು ಅಡವಿ ಸೇರಿದೆ. ನಾನು ಅಡವಿಯಲ್ಲಿ ಆರು ವರುಷ ಇದ್ದು ಪಶುವಾಗಲೆತ್ನಿಸಿದೆ.

ಒಂದು ದಿನ ಒಬ್ಬ ಋಷಿಗಳು ನನ್ನನ್ನು ತಮ್ಮ ಆಶ್ರಮಕ್ಕೆ ಕರೆದೊಯ್ದರು. ಅಲ್ಲಿ ವೇದೋಪನಿಷತ್ತುಗಳ ಗಂಗೆ ನನ್ನ ಕಿವಿಗಳ ಮೇಲೆ ಹರಿಯಿತು. ಮನಸ್ಸು ತಣಿಯಿತು. ಸಮಾಧಾನದ ಬೀಜ ಚಿಗುರಿತು ಅಲ್ಲಿ. ಮೂರು ವರುಷ ಅಲ್ಲಿದ್ದೆ. ಆ ಮೇಲೆ ಮಹರ್ಷಿಗಳ ಆಶೀರ್ವಾದ ಪಡೆದು ಹೊರಬಿದ್ದೆ. ಹೆಂಡತಿಯನ್ನು ಕಾಣುವ ಆಸೆ ಪ್ರಬಲವಾಗಿತ್ತು. ಅಯೋಧ್ಯೆಗೆ ಹೋಗಿ ಮನೆಯೆದುರಿಗೆ ನಿಂತೆ. ಮನೆ ? ಮನೆಯೆಂಥದದು ? ವಿಧ್ವಸ್ತವಾಗಿತ್ತು. ಪಾಳ್ಗರೆಯುತ್ತಿತ್ತು.

ಮಂಕಾಗಿ ಮುರಿದುಬಿದ್ದ ಮನೆಯನ್ನೇ ದಿಟ್ಟಿಸುತ್ತಾ ಎಷ್ಟು ಹೊತ್ತು ನಿಂತಿದ್ದೆನೋ ಏನೋ, ಆಗಲೇ ಯಾರೋ ಗೃಹಸ್ಥ ನನ್ನನ್ನು ಮಾತನಾಡಿಸಿದ.

**ಗೃಹಸ್ಥ** ಏನು, ಸ್ವಾಮಿ ? ಊರಿಗೆ ಹೊಸಬರೇನು ನೀವು ?

**ಅಗಸ** ಹುಂ..... ಈ ಮನೆಯನ್ನು ನೋಡುತ್ತಿದ್ದೆ. ಹೇಗೆ ವಿಧ್ವಸ್ತವಾಗಿದೆ. ಈ ವೈಭವದ ನಗರಿಯಲ್ಲಿ ಈ ಅವಕಳೆ ಹೇಗೆ ?

**ಗೃಹಸ್ಥ** ಓ ಇದೇ ? ನಿಮಗೆ ಗೊತ್ತಿಲ್ಲವೇ ? ಇಲ್ಲಿ ಆ ಅಗಸ ಇರುತ್ತಿದ್ದ– ಸೀತಾದೇವಿಯನ್ನು ವನಕ್ಕೆ ಕಳಿಸಿದ ಧೂರ್ತ. ಅವನಂತೂ ಓಡಿಹೋದ. ಅನಂತರ ಯಾರೂ ಆ ಮನೆಯಲ್ಲಿರಲಿಕ್ಕೆ ಸಿದ್ದರಿಲ್ಲ. ಅದನ್ನು ಕೆಡವಲಿಕ್ಕೂ ಸಿದ್ಧರಿಲ್ಲ. ಜೀರ್ಣೋದ್ಧಾರ ಮಾಡಲಿಕ್ಕೂ ಸಿದ್ದರಿಲ್ಲ. ಅದರ ನೆರಳು ಬೇಡ ಎನ್ನುತ್ತಾರೆ.

**ಅಗಸ** ಅವನ ಹೆಂಡತಿ ?

**ಗೃಹಸ್ಥ** ಅವನು ಹೋದ ಮೇಲೆ ಅವಳೇನಿರುತ್ತಾಳೆ ? ಬಲ್ಲವರು ಹೇಳಿ ನೋಡಿದರು. ಆದರೆ ಒಂದು ಕಾಳೂ ಉಣಲಿಲ್ಲ. ಒಂದು ಹನಿ ನೀರು ಕುಡಿಯಲಿಲ್ಲ. ಕದ ಮುಚ್ಚಿ ಒಳಗೇ ಹುಚ್ಚಿಯಂತೆ ಕುಳಿತಿರುತ್ತಿದ್ದಳು. ಅವಳು ಸತ್ತ ನಂತರ ಎರಡು ದಿನಗಳವರೆಗೆ ಯಾರಿಗೂ ಗೊತ್ತಾಗಲಿಲ್ಲವಂತೆ. ಕೊಳೆತ ಹಣ ಮಾತ್ರ ಸಿಕ್ಕಿತು.

**ಅಗಸ** (ಅಸ್ಫುಟ) ಅಯ್ಯೋ.....

**ಗೃಹಸ್ಥ** ಅವನ ಕತ್ತೆ ಮಾತ್ರ ಇನ್ನೂ ಗಟ್ಟಿಮುಟ್ಟಾಗಿದೆ. ಇನ್ನೊಬ್ಬ ಅಗಸ ನೆಡೆಗೆ.....

(ನಗುತ್ತಾನೆ–ಗಹ ಗಹಿಸಿ ನಗುತ್ತಾನೆ.)

**ಅಗಸ** ಆ ನಗುವಿನೊಡನೆ ನಾನು ಋಷಿಗಳ ಆಶ್ರಮದಲ್ಲಿ ಕಲಿತ ತಿಳುವಳಿಕೆ, ದೊರಕಿಕೊಂಡ ಶಾಂತಿ–ಎಲ್ಲ ಹಳೆಯ ಬಟ್ಟೆಗಳಂತೆ ಕಳಚಿಬಿದ್ದವು. ಅವುಗಳ ಸ್ಥಳದಲ್ಲಿ ಉಳಿದಿತ್ತು ವೇದನೆ ಮಾತ್ರ. ಆ ನಗೆಯ ಗಹಗಹಿಕೆಯಲ್ಲಿ ನನಗೆ ಶ್ರೀರಾಮನ ವೇದನೆಯ ಅರ್ಥವಾಯಿತು. ಆದರೆ ಅದರೊಡನೆ ಬಿರುಗಾಳಿಯಲ್ಲಿ ಸಿಲುಕಿದಂತಾದೆ. ಅಯೋಧ್ಯೆ ಬಿಟ್ಟಾಗ ನನಗೆ ನನ್ನ ಜನತೆಯ ಮೇಲಿನ ದ್ವೇಷದ ಆಧಾರವಿತ್ತು. ಈಗ ನನ್ನಲ್ಲಿ ಉಳಿದಿತ್ತು ಆತ್ಮತಿರಸ್ಕಾರ ಮಾತ್ರ. ಅದೇನು ಆಧಾರ ಕೊಡುತ್ತದೆ ?..... ಈಗ ನನಗೂ ಹದಿನಾಲ್ಕು ವರುಷ ವನವಾಸವಾಗಿದೆ.

**ಋಷಿ** ಇಲ್ಲಿ ಹೇಗೆ ಬಂದೆ, ತಮ್ಮ?

ಅಗಸ ಮೊನ್ನೆ ಎಲ್ಲೋ ಒಬ್ಬ ಭಿಕ್ಷುಕ ಹೇಳಿದ. 'ಸೀತಾದೇವಿಯ ಶೋಧವಾಗಿದೆ. ಅವರು ತಮ್ಮ ಇಬ್ಬರು ಮಕ್ಕಳೊಡನೆ ವಾಲ್ಮೀಕಿ ಋಷಿಗಳ ಆಶ್ರಮದಲ್ಲಿದ್ದಾರೆ' ಎಂದು. ಆಗ ಒಮ್ಮೆಲೆ ಆಸೆ ಮೂಡಿತು. ಸೀತಾ ದೇವಿಯನ್ನು ಕಂಡು ಕ್ಷಮೆ ಕೋರಬೇಕು ಎಂದು ಇಲ್ಲಿಗೆ ಓಡಿ ಬಂದೆ. (ನಕ್ಕು) ಇಲ್ಲಿ ಬಂದರೆ ಅವರು ಅಯೋಧ್ಯೆ ಸೇರಿದ್ದಾರೆ ಎಂದಿರಿ ನೀವು. ಹೋಗಲಿ, ಚಿಂತೆಯಿಲ್ಲ. ರಾಮ ಸೀತೆ ಕೂಡಿದ್ದಾರೆ : ಅದೇ ಆನಂದ.... ನಮಸ್ಕಾರ, ಸ್ವಾಮಿ, ನಿಮಗೆ ಬೇಸರ ತರಿಸಿರಬೇಕು. ಬರುತ್ತೇನೆ. ಅಯೋಧ್ಯೆಗೆ ಹೋಗಬೇಕು. ಅಲ್ಲಿ ಸ್ವರ್ಣ ಸೀತೆ ಕರಗುವುದನ್ನು ನೋಡಬೇಕು.

ಋಷಿ ಬೇಡ, ಪದ್ಮನಾಭ, ಅಯೋಧ್ಯೆಗೆ ಹೋಗಬೇಡ.

ಅಗಸ (ಆಶ್ಚರ್ಯ) ಏಕೆ ಸ್ವಾಮಿ ?

ಋಷಿ (ಮೆಲ್ಲನೆ) ಸೀತೆ ಅಲ್ಲಿ ಇಲ್ಲ.

ಅಗಸ (ಧ್ವನಿಯಲ್ಲಿ ನಡುಕ) ಎಲ್ಲಿದ್ದಾರವರು ಹಾಗಾದರೆ ?

ಋಷಿ ಅವಳು..... ಅವಳು ಮಣ್ಣು ಗೂಡಿದ್ದಾಳೆ.

ಅಗಸ ಗುರುಗಳೇ, ಇದೇನು ಅಬದ್ಧ?

ಋಷಿ ಶ್ರೀರಾಮ ಸೀತೆಯನ್ನು ಕಂಡಾಗ, ಅವಳ ಕ್ಷಮೆ ಬೇಡಿದ. 'ತನ್ನ ತಪ್ಪಾಯಿತು. ಅಯೋಧ್ಯೆಗೆ ಬಾ' ಎಂದು ಕರೆದ. ಆದರೆ ಸೀತೆ ಹೋಗಲಿಲ್ಲ.

ಅಗಸ ಏಕೆ?

ಋಷಿ ಅವಳು ಕೇವಲ ಚೀರಿದಳು ! 'ಭೂಮಿತಾಯಿ, ನೀನೇ ನನ್ನನ್ನು ಒಡಲಲ್ಲಿ ತೆಗೆದುಕೊಳ್ಳಬೇಕು' ಎಂದು ಪ್ರಾರ್ಥಿದಳು. ಅವಳ ಆಕ್ರಂದನಕ್ಕೆ ಕಿವಿಗೊಟ್ಟಂತೆ ಅವಳು ನಿಂತಲ್ಲೇ ಭೂಮಿ ಒಡೆಯಿತು. ಆ ಬಿರುಕಿನಲ್ಲಿ ಕಾಣೆಯಾದಳು ಸೀತೆ.....

ಅಗಸ (ಹುಚ್ಚು ಹಿಡಿದವನಂತೆ) ಏಕೆ ? ಏಕೆ ಗುರುಗಳೇ ?

(ಉತ್ತರವಿಲ್ಲ.)

ಸೀತಾದೇವಿ ಹೀಗೇಕೆ ವಿನಾಶವನ್ನು ಕೋರಬೇಕು ?

(ಉತ್ತರವಿಲ್ಲ.)

ಅವರೇನಾದರೂ ಎಂದಿರಬೇಕಲ್ಲವೇ? ಅಯೋಧ್ಯೆಗೆ ಬರದಿರುವುದಕ್ಕೆ ಕಾರಣ ಕೊಟ್ಟಿರಬೇಕಲ್ಲವೇ?

(ಉತ್ತರವಿಲ್ಲ.)

|  |  |
|---|---|
|  | ಏಕೆ ಸುಮ್ಮನಿರುವಿರಿ ? ಸ್ವಾಮಿ, ನೀವು ಸುಳ್ಳಾಡಬಾರದು. ಸುಳ್ಳಾಡಲಾರಿರಿ. ನನಗೆ ನೀವು ಹೇಳಲೇ ಬೇಕು. ಸೀತಾದೇವಿ ಏನೆಂದರೆಂದು. |
| ಋಷಿ | ಒಮ್ಮೆ ಒಬ್ಬ ನಿಷ್ಪಾಪಿಯನ್ನು ನಿಷ್ಕಾರುಣವಾಗಿ ಶಪಿಸಿದೆ ನಾನು. ಈಗಲಾದರೂ ಕರುಣೆ ಪದ್ಮನಾಭ ತೋರಿಸಲು ಆಸ್ಪದಕೊಡು, ಪದ್ಮನಾಭ. |
| ಅಗಸ | ನೀವು ನನಗೆ ಹೇಳಲೇ ಬೇಕು. |
| ಋಷಿ | ಶ್ರೀರಾಮನ ಮಾತು ಕೇಳಿ ಸೀತೆಯೆಂದಳು : 'ಇಲ್ಲ, ಆರ್ಯ ಪುತ್ರ, ನಾನು ಅಯೋಧ್ಯೆಗೆ ಬರುವುದಾದರೂ ಹೇಗೆ? ಯಾವ ಅಗಸನಿಂದಲೂ ತೊಳೆಯಲಾಗದ ಕಲಂಕವಲ್ಲವೆ ನಾನು?' |
| ಅಗಸ | ದೇವರೇ! ದೇವರೇ! |
| ಋಷಿ | ನೊಂದುಕೊಳ್ಳಬೇಡ, ತಮ್ಮ, ಸೀತೆ ಅದನ್ನು ಕೋಪದಿಂದೆನ್ನಲಿಲ್ಲ. |
| ಅಗಸ | ಈಗ ನನಗೇನು ಗತಿ, ಗುರುಗಳೇ ? ನನಗೆ ಬಿಡುಗಡೆಯೇ ಇಲ್ಲವೇ ? |
| ಋಷಿ | ನಾನೇನು ಹೇಳಲಿ? ಬೇಕಾದರೆ ನನ್ನೊಡನೆ ಬಾ, ನನ್ನ ಆಶ್ರಮಕ್ಕೆ ಸಮೀಪದಲ್ಲಿದೆ. |
| ಅಗಸ | ನಿಮ್ಮ ಆಶ್ರಮ ? ಅಂದರೆ ನೀವು–ನೀವು |
| ಋಷಿ | ಹೌದು. ನಾನು ವಾಲ್ಮೀಕಿ. |
| ಅಗಸ | ವಾಲ್ಮೀಕಿ ? ವಾಲ್ಮೀಕಿ ಮಹರ್ಷಿಗಳೇ ? |
| ವಾಲ್ಮೀಕಿ | ಬರುತ್ತೀಯೇನು ? ನನ್ನ ಆಶ್ರಮಕ್ಕೆ ! ದೊಡ್ಡ ಆಶ್ರಮವಲ್ಲ ಅದು. ನಾನು, ನನ್ನ ಒರಟು ಶಿಷ್ಯರು. ದಟ್ಟಡವಿಯ ನಡುವೆ ಮುರುಕು ಗುಡಿಸಲು. ಅಲ್ಲಿ ನಿನಗೆ ಶಾಂತತೆ ಸಿಗುತ್ತದೆ, ತಮ್ಮ ಆದರೆ ಶಾಂತಿ ಸಿಕ್ಕೀತೆಂದು ಹೇಗೆ ಹೇಳಲಿ? |
| ಅಗಸ | ನೀವೇ ಹೀಗೆ ಎಂದರೇನು, ಗುರುಗಳೇ ? ನನ್ನಂಥ ಪಾಪಿ ಏನು ಮಾಡಬೇಕು ? ನೀವು ಮಹಾಕವಿಗಳು, ಸಿದ್ಧ ಪುರುಷರು |
| ವಾಲ್ಮೀಕಿ | ಇಲ್ಲ. ಇಲ್ಲ. ನಾನು ಸಿದ್ಧ ಪುರುಷನಲ್ಲ, ನನ್ನ ಶೋಧವಿನ್ನೂ ಮುಗಿದಿಲ್ಲ. ಮರಣದ ಮುಂಗತ್ತಲೆಯಲ್ಲೂ ನಾನು ಹುಡುಕುತ್ತಿದ್ದೇನೆ. |
| ಅಗಸ | ನೀವು ? ನೀವೇನನ್ನು ಹುಡುಕುತಿದ್ದೀರಿ ? |
| ವಾಲ್ಮೀಕಿ | ನೀನು ಹುಡುಕುತ್ತಿರುವುದನ್ನೇ, ಪದ್ಮನಾಭ, ಹೋಳಾಗಿ ಬಿದ್ದ ಜೀವನವನ್ನು ಒಂದುಗೂಡಿಸುವ ಬಗೆಯನ್ನು..... ನಾನು ಕವಿ, ನಿಜ. ಆದರೆ ಆ ಕಾವ್ಯದ ಉಗಮವಾಯಿತು ಕಳವಳದಲ್ಲಿ. ಶಾಪದ ರೂಪದಲ್ಲಿ! ಬೇಡನೊಬ್ಬನ |

ಬಾಣಕ್ಕೆ ಕ್ರೌಂಚ ಪಕ್ಷಿಯೊಂದು ಸಾಯುತ್ತಿರುವಾಗ, ಅದರ ಜೋಡಿ ಹಕ್ಕಿಯ ವಿರಹದ ಆಕ್ರಂದನೆಗೆ ವಾಚೆ ಒಡೆಯಿತು ನನಗೆ. ಅದಕ್ಕೆಂದೇ ಆ ವಿಯೋಗವನ್ನು ಮರೆಯಲಿಕ್ಕೆ ನನ್ನ ಕಾವ್ಯ ಏಕ ಭಾವವನ್ನಿರಿಸಿಕೊಂಡು ಹೋಯಿತು. ಐಕ್ಯದ ಸಾಕ್ಷಾತ್ಕಾರಕ್ಕಾಗಿ ದೇವರ ಅವತಾರವನ್ನಲ್ಲದೆ ಬೇರೆ ಯಾರನ್ನು ಮೊರೆ ಹೋಗುವುದು ? ಅದಕ್ಕೆ ರಾಮಾಯಣ ಬರೆದೆ. ಆದರೆ ಬರೆಯುತ್ತ ಹೋದಂತೆ ನನ್ನ ಶಬ್ದಗಳಲ್ಲಿ ಮೂಡಿದ್ದು ವಿರಹ ಮಾತ್ರ ! ತಂದೆ ತಾಯಂದಿರಿಂದ ದೂರವಾಗಿ ಸತ್ತ ಶ್ರವಣ, ರಾಮನಿಂದ ದೂರವಿರಲಾಗದೆ ತೀರಿಕೊಂಡ ದಶರಥ, ಲಕ್ಷ್ಮಣನಿಂದ ದೂರವಾದ ಊರ್ಮಿಳೆ, ಭರತನನ್ನು ಕಳೆದು ಕೊಂಡ ಕೈಕೇಯಿ, ಇವೆಲ್ಲರ ನಡುವೆ ರಾಮ–ಸೀತೆ–ಏಕಭಾವದ ಶೋಧಕ್ಕಾಗಿ ಜನಿಸಿದ ನನ್ನ ರಾಮಾಯಣ ವಿಯೋಗದ ಕಾವ್ಯವಾಯಿತು. ವಿರಹ ಶಾಪದ ಬಣ್ಣನೆಯಾಯಿತು. ಆದರೂ ನಾನು ಆಸೆ ಬಿಡಲಿಲ್ಲ. ಒಂದಿಲ್ಲೊಂದು ದಿನ ರಾಮ ಮತ್ತು ಸೀತೆ ಒಂದಾಗಲೇ ಬೇಕು. ನನ್ನ ಕಾವ್ಯದಲ್ಲಿ ಸಂಯೋಗ ಮೂಡಲೇಬೇಕು ಎಂಬ ಆಸೆ ಇತ್ತು ನನಗೆ ಕೊನೆಗೆ ರಾಮ ಸೀತೆ ಒಂದಾದರು. ಒಂದಾದರು– ಆದರೆ–

**ಅಗಸ** ಆದರೆ ನಾನು ಬಂದೆ–ಹರಿತವಾದ ಶಬ್ದಗಳನ್ನೆಸೆದೆ–ಅವರ ಜೋಡಿಯನ್ನು ಮತ್ತೆ ಒಡೆದೆ–

**ಋಷಿ** ಆ ತಪ್ಪು ನಿನ್ನದಲ್ಲ. ಭರತನೆಂದದ್ದು ನಿಜ, ಈಗ ಹಿಂದಿರುಗಿ ನೋಡಿದಾಗ ರಾಮ ಸೀತೆಯರ ಅಗಲಿಕೆ ಅನಿವಾರ್ಯವಿದ್ದಿತೆನಿಸುತ್ತದೆ. ಇಂದಿನವರೆಗೂ ಪೀಡಿಸುತ್ತ ಬಂದ ಕ್ರೌಂಚ ಪಕ್ಷಿಯ ಕೂಗು ಇಷ್ಟು ಸುಲಭವಾಗಿ ಮೂಕವಾಗುವದು ಅಶಕ್ಯವಾಗಿತ್ತು ಎನಿಸುತ್ತದೆ. ಈಗ ಸೀತೆ ಮಣ್ಣಾಗಿದ್ದಾಳೆ. ರಾಮ ದಿಗ್ಭ್ರಾಂತನಾಗಿ ಕಲ್ಲಾಗಿದ್ದಾನೆ. ನನ್ನ ಬಳಿ ಉಳಿದಿದೆ–ನಾನು ಆ ನಿಷಾದನಿಗಿತ್ತ ಶಾಪ ಮಾತ್ರ.... ಶಾಪ ಮಾತ್ರ!

**ಅಗಸ** (ಉತ್ತರದ ಅಪೇಕ್ಷೆಯಿಲ್ಲದವನಂತೆ) ಇನ್ನು ಮುಂದೇನು ಸ್ವಾಮಿ ?
ರಾಮಾಯಣ ಹೀಗೆಯೇ ಕೊನೆಗೊಳ್ಳಬೇಕೇ?.

○

## ಓದುಪತ್ಯ:

# ೨.೪. ಅನಿಷ್ಟ ಪದ್ದತಿಯ ವಿರುದ್ಧ

**–ಸಾರಾ ಅಬೂಬಕ್ಕರ್**

ವರದಕ್ಷಿಣೆ ಎಂಬ ಒಂದು ದುಷ್ಟಪದ್ಧತಿಯು ಎಂದಿನಿಂದ ಯಾರಿಂದ ಪ್ರಾರಂಭವಾಯಿತು ಎಂಬ ಪ್ರಶ್ನೆಗಳಿಗೆಲ್ಲ ಇಂದು ಸಮನಾದ ಉತ್ತರ ದೊರೆಯಲಾರದು. ಆದರೆ ಇಂದು ಈ ದುಷ್ಟ ಪದ್ದತಿಯು ಹಿಂದು, ಮುಸ್ಲಿಂ, ಕ್ರೈಸ್ತರೆಂಬ ಭೇದವಿಲ್ಲದೆ ಎಲ್ಲ ಸಮಾಜದ ಹೆಣ್ಣುಮಕ್ಕಳನ್ನೂ ಪೆಡಂಭೂತವಾಗಿ ನುಂಗಹೊರಟಿವೆ. ಹೆಣ್ಣುಮಕ್ಕಳು ಮನಃಶಾಂತಿಯಿಂದ, ನೆಮ್ಮದಿಯಿಂದ ಗಂಡನ ಮನೆಯಲ್ಲಿ ಬಾಳುವುದನ್ನು ಬಿಟ್ಟು ಜೀವ ಕೈಯಲ್ಲಿ ಹಿಡಿದು ಯಾವಾಗ ತಮ್ಮನ್ನು ಬಾವಿಗೆ ನೂಕುವರೊ, ಸೀಮೆಎಣ್ಣೆ ಸುರಿದು ಸುಡುವರೊ ಎಂದು ಭಯದಿಂದ ಕಂಗಾಲಾಗಿ, ಮರಣವನ್ನೆದುರು ನೋಡುತ್ತಾ ಅಸ್ಥಿರತೆಯಿಂದ ಬದುಕುವಂತಾಗಿದೆ. ಇದು ನಮ್ಮ ಹೆಣ್ಣು ಮಕ್ಕಳ ಸ್ಥಿತಿ. ಇದು ಯಾವುದಾದರೊಂದು ಊರಿಗೆ ಅಥವಾ ಜನಾಂಗಕ್ಕೆ ಮಾತ್ರ ಸೀಮಿತವಾಗಿಲ್ಲ. ಕೋಮು ದ್ವೇಷದ ವಿಷ ಬೀಜ ಬಿತ್ತುತ್ತಾ, ಒಬ್ಬರ ತಪ್ಪನ್ನು ಇನ್ನೊಬ್ಬರು ಎತ್ತಿತೋರುತ್ತಾ ನಾಯಿ, ಬೆಕ್ಕುಗಳಂತೆ ಕಚ್ಚಾಡುವ ಹಿಂದೂ ಮುಸ್ಲಿಮರೆಲ್ಲರೂ ಈ ವಿಷಯದಲ್ಲಿ ಒಂದಾಗುತ್ತಾರೆ. ಅದೇನೆಂದರೆ ತಮ್ಮ ಗಂಡುಮಕ್ಕಳಿಗೆ ಹೆಣ್ಣು ತರುವಾಗ ಆಕೆಯ ತಂದೆ ತಾಯಿಗಳಿಂದ ಎಷ್ಟು ಸಾಧ್ಯವೋ ಅಷ್ಟನ್ನು ಸುಲಿಗೆ ಮಾಡಬೇಕು; ಆ ವಿಷಯದಲ್ಲಿ ಮಾತ್ರ ಭಿನ್ನಾಭಿಪ್ರಾಯಗಳಿಲ್ಲ. ಎಲ್ಲ ಕೋಮಿನವರ ಗುರಿಯೂ ಒಂದೇ, ಅತ್ಯಧಿಕ ವರದಕ್ಷಿಣೆ ವಸೂಲು ಮಾಡುವುದು.

ಈ ಪದ್ದತಿ ಹಿಂದೂಗಳಲ್ಲಿ ಹೇಗೆ ಪ್ರಾರಂಭವಾಯಿತೆಂದು ನನಗೆ ತಿಳಿಯದು. ಬಹುಶಃ ಹಿಂದಿನ ಕಾಲದಲ್ಲಿ ಹೆಣ್ಣುಮಕ್ಕಳಿಗೆ ತಂದೆತಾಯಿಗಳ ಆಸ್ತಿಯಲ್ಲಿ ಪಾಲಿರಲಿಲ್ಲವಾದ ಕಾರಣ ತಂದೆತಾಯಿಗಳಿಂದ ತಮ್ಮ ಹೆಣ್ಣು ಮಕ್ಕಳಿಗೆ ಅಷ್ಟಾದರೂ ದಕ್ಕಲಿ ಎಂದು ಯಾರಾದರೂ ಈ ಪದ್ದತಿಯನ್ನು ಪ್ರಾರಂಭಿಸಿರಬಹುದು.

ಆದರೆ ಇಸ್ಲಾಂ ಧರ್ಮದಲ್ಲಿ ಹೆಣ್ಣುಮಕ್ಕಳಿಗೂ ಆಸ್ತಿಯಲ್ಲಿ ಗಂಡು ಮಕ್ಕಳಂತೆ ಅರ್ಧ ಪಾಲಿದೆ. ಈ ಧರ್ಮದಲ್ಲಿ ವರದಕ್ಷಿಣೆ ಎಂಬ ಪದವೇ ಇಲ್ಲ. ಅಲ್ಲಿರುವುದು ಗಂಡು ಹೆಣ್ಣಿಗೆ ಕೊಡಬೇಕಾಗಿರುವ ಕನ್ಯಾಶುಲ್ಕ. ಇದನ್ನು ಹೆಣ್ಣಿಗೆ ನೀಡದೆ ಆಕೆಯ ಮೈ ಮುಟ್ಟಬಾರದು ಎಂಬುದು ಖುರಾನ್ ವಾಕ್ಯ. ವಿವಾಹವಾದಂದಿನಿಂದಲೂ ಆಕೆಯ ಎಲ್ಲಾ ಖರ್ಚು ವೆಚ್ಚಗಳನ್ನು ಆ ಗಂಡನೇ ವಹಿಸಬೇಕೆಂದು ಮಹಮ್ಮದ್

ಪೈಗಂಬರರು ಬೋಧಿದ್ದಾರೆ. ಆದರೆ ಪುರುಷರಿಗೆ ಲಾಭವಾಗುವಂತಹ ಪದ್ಧತಿಗಳಿದ್ದರೆ ಆಗ ಖುರಾನ್ ವಾಕ್ಯಗಳೆಲ್ಲ ಗೌಣವಾಗುತ್ತದೆ. ಇಲ್ಲಿನ ಹಿಂದೂಗಳಲ್ಲಿದ್ದ ಈ ವರದಕ್ಷಿಣೆಯ ಪದ್ಧತಿಯನ್ನು ಸುಲಭವಾಗಿ ತಮ್ಮ ಸಮಾಜಗಳಲ್ಲೂ ಅಳವಡಿಕೊಂಡರು ಇಲ್ಲಿನ ಮುಸ್ಲಿಮರು. ಹೇಗೋ ಭಾರತದಲ್ಲಿ ಬದುಕುತ್ತಿರುವ ಪುರುಷರಿಗೆ ಎಲ್ಲ ವಿಧದ ಸ್ವಾತಂತ್ರ್ಯವೂ ಇದ್ದೇ ಇದೆ. ಆದ್ದರಿಂದ ವಿವಾಹಾಲೋಚನೆಗೆ ಬಂದ ಕನ್ಯಾಪಿತೃವಿನೊಡನೆ ಇವರು ಕೇಳುವ ಮೊದಲ ಪ್ರಶ್ನೆ ಹೆಣ್ಣಿನ ಕುರಿತಲ್ಲ. "ಏನು ಕೊಡುತ್ತೀರಿ?" ಎಂದು. ಕನ್ಯಾಪಿತೃ ವರನ ತಂದೆಯೊಡನೆ ತನ್ನ ಶಕ್ತಿಮೀರಿ ಅಷ್ಟೋ ಇಷ್ಟೋ ಕೊಡುತ್ತೇನೆಂದು ಒಪ್ಪಿಕೊಳ್ಳುತ್ತಾನೆ. ಆಕಸ್ಮಾತ್ ಅವನಿಂದ ಒಪ್ಪಿಕೊಂಡಷ್ಟು ಕೊಡಲು ಸಾಧ್ಯವಾಗದೆ ಹೋದರೆ ವಧುವಾಗಿ ಮನೆ ತುಂಬಿದ ಹೆಣ್ಣು ಮಗಳನ್ನು ಸೀಮೆಎಣ್ಣೆ ಸುರಿದು ಸುಡುವ ಭೂಪರು ನಮ್ಮಲ್ಲಿ ದಿನಕ್ಕೊಬ್ಬರು ದೊರೆಯುತ್ತಾರೆ. ಸೀಮೆ ಎಣ್ಣೆಯ ಅಭಾವದ ಈ ದಿನಗಳಲ್ಲಿ ಒಂದು ಹೆಣ್ಣಿಗಾಗಿ ಅಷ್ಟು ಸೀಮೆಎಣ್ಣೆಯನ್ನಾದರೂ ಏಕೆ ಖರ್ಚು ಮಾಡಬೇಕೆಂದುಕೊಂಡು ಕಡಿದು ಕೊಲೆ ಮಾಡಿ ಬಾವಿಗೆ ಎಸೆಯುವವರಿಗೆ ನಮ್ಮಲ್ಲೇನು ಕೊರತೆ ಇಲ್ಲ.

ಕೇರಳದ ಮುಸ್ಲಿಮರಲ್ಲಿ ಇನ್ನೂ ಸುಲಭದ ಪದ್ಧತಿ ಇದೆ. ವರದಕ್ಷಿಣೆ ಸಮನಾಗಿ ತರದ ಹೆಣ್ಣನ್ನು ತವರು ಮನೆಗಟ್ಟಿ ಮೂರು ಬಾರಿ 'ತಲಾಖ್' ಎಂದು ಬಿಟ್ಟರೆ ಆ ಗಂಡ ಹೆಂಡಿರ ಸಂಬಂಧ ಕೊನೆಗೊಂಡಿತು. ಆತನಿಗೆ ಮರುದಿನವೇ ಬೇರೊಬ್ಬಳೊಡನೆ ಮದುವೆ. ಇಲ್ಲಿನ ಮುಸ್ಲಿಮರು ಹೆಣ್ಣನ್ನು ಕೊಲೆ ಮಾಡುವಷ್ಟು ಕಟುಕರಲ್ಲ. ಇವರ ಹೃದಯದಲ್ಲಿ ಇನ್ನೂ ಕರುಣೆಯ ಒರತೆ ಒಸರುತ್ತಿದೆ. ಈ ರೀತಿ ಜೀವಸಹಿತ ಹೆಣ್ಣು ಮಕ್ಕಳನ್ನು ತವರಿಗಟ್ಟುತ್ತಿರುವುದನ್ನು ನಾವವರಿಗೆ ಕೃತಜ್ಞತೆ ಸಲ್ಲಿಸಬೇಕು.

ಕಳೆದ ದಶಕದಿಂದೀಚೆಗೆ ಅಂದರೆ ನಮ್ಮ ಜನರ ವಿದ್ಯಾಮಟ್ಟ ಹೆಚ್ಚುತ್ತಿದ್ದಂತೆ, ಜನರು ಹೆಚ್ಚು ನಾಗರಿಕರಾಗುತ್ತಿದ್ದಂತೆ ಹೆಣ್ಣಿನ ಮೇಲೆ ನಡೆಯುತ್ತಿರುವ ಈ ದೌರ್ಜನ್ಯ ಇನ್ನೂ ಅಧಿಕವಾಗುತ್ತಿದೆ. ಹದಿನೆಂಟನೇ ಶತಮಾನದಲ್ಲಿದ್ದ ಸತೀಸಹಗಮನ ಪದ್ಧತಿಗೆ ಇಪ್ಪತ್ತನೇ ಶತಮಾನದ ಈ ವಧುದಹನ ಪದ್ಧತಿಯನ್ನು ಹೋಲಿಸಬಹುದು ಮತ್ತು ಮುಂದಿನ ಶತಮಾನಗಳಲ್ಲಿ ನಮ್ಮ ಮುಂದಿನ ಜನಾಂಗದ ಮಕ್ಕಳು ಚರಿತ್ರೆ ಪುಸ್ತಕಗಳಲ್ಲಿ ಓದಬಹುದು. ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ಭಾರತೀಯರು ರೋಹಿಣಿ, ಭಾಸ್ಕರ ಮುಂತಾದ ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಉಡಾಯಿಸುವುದರ ಜೊತೆಗೆ ವರದಕ್ಷಿಣೆ ತರದೆ ಬಂದ ವಧುವನ್ನು ಜೀವಂತವಾಗಿ ಸುಡುತ್ತಿದ್ದರು. ಈ ರೀತಿಯ ಕ್ರೌರ್ಯ, ಹಿಂಸೆಯನ್ನು ಇನ್ನೆಷ್ಟು ದಿನ ನಮ್ಮ ಹೆಣ್ಣು ಮಕ್ಕಳು ತಾಳಿಕೊಂಡಿರಬೇಕು? ಭಾರತಕ್ಕೆ ಸ್ವಾತಂತ್ರ್ಯ ಬಂದ ಅನೇಕ ವರ್ಷಗಳ ಬಳಿಕವೂ ನಮ್ಮ ಹೆಣ್ಣುಮಕ್ಕಳು ಈ ರೀತಿ ಮರಣದ ನೆರಳಿನಲ್ಲೇ ಬಾಳಬೇಕೇ? ಈ ಹಿಂಸೆಗೆ ಕೊನೆ ಎಂದು.

ವರದಕ್ಷಿಣೆ ತೆಗೆದುಕೊಳ್ಳಬಾರದು ಎಂದು ಸರಕಾರ ಕಾನೂನು ಮಾಡಿತು. ಕೊಟ್ಟವನಿಗೂ ಕೊಂಡವನಿಗೂ ಇಬ್ಬರಿಗೂ ಕಾನೂನು ರೀತ್ಯಾ ಶಿಕ್ಷೆಗಳಿವೆ. ಆದರೆ ಈ ವರದಕ್ಷಿಣೆಯ ಪಿಡುಗು ಇಷ್ಟು ವ್ಯಾಪಕವಾಗಿ ಹರಡಿ, ಇಡೀ ದೇಶದ ಗಂಭೀರ ಸಮಸ್ಯೆಗಳಲ್ಲೊಂದಾಗಿ ಪರಿಣಮಿಸಿದ್ದರೂ ಈ ಕಾನೂನು ರೀತ್ಯ ಎಷ್ಟು ಜನ ಶಿಕ್ಷೆಗೊಳಗಾಗಿದ್ದಾರೆ. ಸರಕಾರ ಮಾಡುವ ಎಲ್ಲಾ ಕಾನೂನುಗಳಲ್ಲೂ ಸ್ಥಾಪಿತ ಹಿತಾಸಕ್ತಿಗಳು ಹೊರ ನುಸುಳುವಂತಹ ತೂತುಗಳೂ ಇರುವುದರಿಂದ ವರದಕ್ಷಿಣೆ ತೆಗೆದುಕೊಂಡದ್ದಕ್ಕಾಗಿ ಶಿಕ್ಷಿಸಲು ನಮ್ಮ ನ್ಯಾಯಾಲಯಗಳಿಗೆ ಈವರೆಗೆ ಯಾರೂ ದೊರೆತಿಲ್ಲವೆಂದೇ ಹೇಳಬಹುದು.

ಹಾಗಾದರೆ ಈ ಸಮಸ್ಯೆಗೆ ಪರಿಹಾರವೇನು? ಮೊತ್ತಮೊದಲಾಗಿ ನಾವಿಂದು ಯೋಚಿಸಬೇಕಾಗಿರುವುದು ಈ ರೀತಿ ಹಣಕ್ಕೆ ಕೊಂಡ ಪತಿಯೊಬ್ಬನ ಅಗತ್ಯ ನಮಗಿದೆಯೇ ಎಂದು. ಪ್ರಕೃತಿಗೆ ತನ್ನದೇ ಆದ ಕೆಲವು ನಿಯಮಗಳಿವೆ. ಕಾಲ, ಋತುಮಾನ ಎಲ್ಲವೂ ಬದಲಾಗುತ್ತಿರುವಂತೆ, ಮರಗಿಡಗಳು ಸಕಾಲದಲ್ಲಿ ಮೊಗ್ಗೊಡೆದು ಹೂವಾಗಿ, ಹೆಣ್ಣುಗಂಡು ಸಂಕರವಾಗಿ ಕಾಯಾಗಿ ಕಾಯಿ ಬೇರೆಯೇ ಮರವಾಗುವಂತೆ ಮನುಷ್ಯ ಸಂಕುಲವೂ ಗಂಡುಹೆಣ್ಣುಗಳ ಒಕ್ಕೂಟದಿಂದ ಸೃಷ್ಟಿಯ ಕೆಲಸವನ್ನು ಮುಂದುವರಿಸಬೇಕಾಗುತ್ತದೆ. ಇದರಲ್ಲಿ ಒಂದು ಮೇಲು ಇನ್ನೊಂದು ಕೀಳು ಎಂಬ ವಿಚಾರವಂತೂ ಆ ಸೃಷ್ಟಿಕರ್ತನಿಗೆ ಖಂಡಿತ ಇರಲಾರದು. ಪ್ರಕೃತಿಯ ನಿಯಮದಂತೆ ಹೆಣ್ಣು ಗಂಡುಗಳಿಗೆ ಯೌವ್ವನ ಬಂದಂತೆ ಈ ದೇಹಗಳೆರಡೂ ಪರಸ್ಪರ ಸಾಮೀಪ್ಯ ಬಯಸುತ್ತದೆ. ಸೃಷ್ಟಿಯ ಕೆಲಸವನ್ನು ಮುಂದುವರಿಸಲು ಕಾತರಗೊಳ್ಳುತ್ತವೆ. ಈ ಹಂಬಲ ಅಧಿಕವಾಗಿರುವುದು ಗಂಡಿನಲ್ಲೇ ಹೊರತು ಹೆಣ್ಣಿನಲ್ಲಲ್ಲ. ಹೀಗಿದ್ದೂ ಇಂದು ನಾವು ಈ ಗಂಡನ್ನು ಕೊಂಡುಕೊಳ್ಳಬೇಕಾದಂತಹ ಒಂದು ದಯನೀಯ ಪರಿಸ್ಥಿತಿ ಬಂದಿರುವುದಾದರೂ ಏಕೆ?

ಇದಕ್ಕೆ ಒಂದು ಮುಖ್ಯಕಾರಣ ನಮ್ಮ ಹೆಣ್ಣು ಮಕ್ಕಳಿಗೆ ವಿವಾಹವಲ್ಲದೆ ಬೇರೆ ದಾರಿಯಿಲ್ಲ. ಮದುವೆಯೊಂದೇ ಅಂತಿಮ ಗುರಿ ಎಂದು ನಮ್ಮ ಹೆಣ್ಣು ಮಕ್ಕಳು ಮತ್ತವರ ಹೆತ್ತವರು ತಿಳಿದಿರುವುದು. ಮತ್ತು ನಮ್ಮ ಹೆಣ್ಣು ಮಕ್ಕಳಿಗೆ ಯಾವುದೇ ರೀತಿಯ ಆರ್ಥಿಕ ಸ್ವಾತಂತ್ರ್ಯ ಇಲ್ಲದಿರುವುದು. ಇಂದಿಗೂ ಹಳ್ಳಿಯ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವ ಪರಿಪಾಟವಿಲ್ಲ. ಹೆಣ್ಣು ಮಕ್ಕಳ ಈ ನಿರಕ್ಷರತೆಯಿಂದಾಗಿ ಇವರು ಕೀಳರಿಮೆ ಬೆಳೆಸಿಕೊಂಡರು. ಇದರಿಂದಾಗಿ ಗಂಡುಮಕ್ಕಳ ಪ್ರಾಧಾನ್ಯತೆಯನ್ನು ಇವರು ಒಪ್ಪಿಕೊಳ್ಳುವುದು ಅನಿವಾರ್ಯವಾಗಿ ಒಂದು ವಿಧದ ದಾಸ್ಯಪದ್ಧತಿಗೆ ತಮ್ಮನ್ನು ತಾವೇ ಒಪ್ಪಿಸಿಕೊಳ್ಳುತ್ತಾರೆ. ಗಂಡನು ತನಗೆ ಆಶನವಸನ ಆಶ್ರಯ ಕೊಡುವವನಾದ ಕಾರಣ ಆತನಿಗೆ ವರದಕ್ಷಿಣೆ ಕೊಡುವುದು ತಪ್ಪಲ್ಲ ಎಂಬಲ್ಲಿಯವರೆಗೆ ನಮ್ಮ ಈ ಹೆಣ್ಣು ಮಕ್ಕಳ ಮನೋಭಾವ ಸಂಕುಚಿತಗೊಂಡಿದೆ.

ನಿಜ. ಗಂಡನು ಹೆಂಡತಿಗೆ ಅನ್ನ ಹಾಕಿ ಸಾಕುತ್ತಾನೆ. ಆದರೆ ಅದಕ್ಕೆ ಪ್ರತಿಫಲವಾಗಿ ಆತನು ಆಕೆಯಿಂದ ಏನನ್ನೂ ಪಡೆಯುವುದಿಲ್ಲವೇ. ಬೆಳಿಗ್ಗೆ ಎದ್ದು ಆತನಿಗೆ ನೀರು ಬಿಸಿಮಾಡುವುದರಿಂದ ಹಿಡಿದು ಆತ ಮಲಗುವವರೆಗಿನ ಆತನ ಎಲ್ಲ ಚಾಕರಿಗಳನ್ನೂ ಆಕೆ ಸಂತೋಷದಿಂದ ಮಾಡುವುದಿಲ್ಲವೇ? ಹಳ್ಳಿಯ ಬಡ ಕುಟುಂಬದ ಹೆಣ್ಣುಮಕ್ಕಳಿಗೆ ಗಂಡನ ಮನೆಯಲ್ಲಿ ವಿಶ್ರಾಂತಿ ಎಂಬುದು ಎಷ್ಟು ದುರ್ಲಭವೆಂಬುದು ಹಳ್ಳಿಯಲ್ಲಿರುವವರಿಗೆ ಮಾತ್ರ ತಿಳಿಯಲು ಸಾಧ್ಯ.

ಇದು ಒಂದು ರೀತಿಯ ಶ್ರಮ, ಇದು ಮಾತ್ರವಲ್ಲದೆ ಆಕೆ ಆತನ ಸಂತಾನವನ್ನು ಮುಪ್ಪಿನಲ್ಲಿ ಆಸರೆಯಾಗಬೇಕಾದ ಮಕ್ಕಳನ್ನು ಒಂಭತ್ತು ತಿಂಗಳು ಹೊಟ್ಟೆಯಲ್ಲಿಟ್ಟು, ತನ್ನ ರಕ್ತ ಮಾಂಸವನ್ನು ಹಂಚಿ ಹುಟ್ಟು ಸಾವುಗಳ ಮಧ್ಯೆ ಹೋರಾಡಿ ಅದಕ್ಕೆ ಜನ್ಮ ನೀಡಿ ರಾತ್ರಿ ನಿದ್ರೆಗೆಟ್ಟು ವರ್ಷವಿಡೀ ಅದಕ್ಕೆ ಹಾಲೂಡಿ ತನ್ನ ಆರೋಗ್ಯವನ್ನು ಕೆಡಿಸಿಕೊಂಡರೂ ಎಲ್ಲವೂ ತನ್ನ ಕರ್ತವ್ಯವೆಂಬಂತೆ ನಿರ್ವಹಿಸಿ ನಗುನಗುತ್ತಾ ಗಂಡ ಮತ್ತು ಮಕ್ಕಳಿಗಾಗಿ ಪ್ರಾಣವನ್ನೂ ಅರ್ಪಿಸಬಲ್ಲವಳು ಹೆಣ್ಣು ಮಾತ್ರ. ಹೆಣ್ಣಿನಿಂದ ಗಂಡು ಇಷ್ಟೆಲ್ಲವನ್ನು ಪಡೆದೂ ತಾನೇ ಆಕೆಗೆ ಏನೋ ಉಪಕಾರ ಮಾಡುವಂತೆ, ಆಕೆಯ ತಂದೆ ತಾಯಿಗಳಿಂದ ಆದಷ್ಟು ಸುಲಿಗೆ ಮಾಡಿ, ಮತ್ತಷ್ಟು ಕ್ರೂರವಾಗಿ ಆಕೆಯ ಮೈಮೇಲೆ ಸೀಮೆಎಣ್ಣೆ ಸುರಿದು ಸುಟ್ಟುಬಿಡಬಲ್ಲಷ್ಟೂ ಕ್ರೂರಿಯಾದರೆ ಅಂತಹ ಗಂಡನ, (ಗಂಡಿನ) ಅವಶ್ಯಕತೆ ನಮ್ಮ ಹೆಣ್ಣು ಮಕ್ಕಳಿಗಿದೆಯೇ? ಅಂತಹ ಒಂದು ಗಂಡಿನ ಗುಲಾಮಳಾಗಿ ಬಾಳುವುದಕ್ಕಿಂತ ಬಾಳು ಪೂರ್ತಿ ವಿವಾಹವಿಲ್ಲದೆ ಪುರುಷ ಸಂಪರ್ಕವನ್ನೇ ತೊರೆದು ಬಾಳಲು ಹೆಣ್ಣಿಗೆ ಸಾಧ್ಯವಾಗದೇ? ಗಂಡಿನ ಪ್ರೇಮ, ಔದಾರ್ಯ, ಸಾಮಿಪ್ಯ ಹೆಣ್ಣಿಗೆ ಅಗತ್ಯವಾದರೆ, ಹೆಣ್ಣಿನ ಪ್ರೇಮ, ಮೃದು, ಹೃದಯ, ಮೃದು ದೇಹದ ಅವಶ್ಯಕತೆ ಗಂಡಿಗೆ ನಾಲ್ಕು ಪಾಲಷ್ಟು ಅಧಿಕವಾಗಿದೆ ಎಂದೇಕೆ ನಾವು ಯೋಚಿಸಬಾರದು ಸ್ತ್ರೀಯರೆಲ್ಲರೂ ಒಗ್ಗಟ್ಟಾಗಿ ಒಕ್ಕೊರಲಿನಿಂದ ವಿವಾಹವನ್ನೇ ಕೊಂಚ ಕಾಲ ಬಹಿಷ್ಕರಿದರೆ ಪುರುಷರ ಕಲ್ಲು ಹೃದಯ ಕೂಡ ಕರಗಬಹುದೇನೊ!

ಇದು ಒಂದು ದೃಷ್ಟಿ ಇದಕ್ಕೆ ಇನ್ನೊಂದು ದೃಷ್ಟಿಯೂ ಇದೆ. ಈ ವರದಕ್ಷಿಣೆಗೆ ಪುರುಷರು ಮತ್ತವರ ತಂದೆ ತಾಯಿಗಳು ಎಷ್ಟರ ಮಟ್ಟಿಗೆ ಕಾರಣರಾಗುತ್ತಾರೋ, ಕೆಲವು ಹೆಣ್ಣುಮಕ್ಕಳೂ ಅವರ ಹೆತ್ತವರೂ ಅಷ್ಟೇ ಕಾರಣರಾಗುತ್ತಾರೆ ಎಂಬ ಕಟು ಸತ್ಯವನ್ನೂ ನಾವು ಮರೆಯಬಾರದು. "ಎಷ್ಟು ಲಕ್ಷಗಳನ್ನಾದರೂ ಕೊಡಲು ಸಿದ್ಧ. ಆದರೆ ತನ್ನ ಮಗಳಿಗೆ ಡಾಕ್ಟರ್ ವರನೇ ಬೇಕು" ಎನ್ನುವ ತಂದೆ ತಾಯಿಗಳಿಗೆ ಕೊರತೆ ಇದೆಯೇ? "ನನ್ನ ಮಗಳು ಒಂದು ಕಡ್ಡಿಯನ್ನು ಎತ್ತಿ ಇಟ್ಟವಳಲ್ಲ. ಅವಳನ್ನು ಹಾಗೆಯೇ ನೋಡಿಕೊಳ್ಳುವವರಿರಬೇಕು" ಎನ್ನುವ ತಾಯಂದಿರನ್ನೂ ನಾನು ಕಂಡಿದ್ದೇನೆ. ಅಥವಾ "ಹವಾ ನಿಯಂತ್ರಿತ ಕೊಠಡಿಯಲ್ಲಿ ಮಲಗಿಯೇ

ನನ್ನ ಮಗಳಿಗೆ ಅಭ್ಯಾಸ. ಹವಾನಿಯಂತ್ರಿತವಿಲ್ಲದ ಮನೆಯಲ್ಲಿ ನನ್ನ ಮಗಳು ಒಂದು ದಿನವೂ ಇರಲಾರಳು" ಎನ್ನುವ ತಾಯಂದಿರೂ ಇದ್ದಾರೆ. ರೇಂಜರ್ ಅಥವಾ ಸಬ್ ಇನ್ಸ್‌ಪೆಕ್ಟರ್ ವರನೇ ಬೇಕೆಂದು ಹುಡುಕಾಟ ನಡೆಸುವ ತಂದೆತಾಯಿಗಳಿಗೆ ನಮ್ಮ ಸಮಾಜದಲ್ಲಿ ಕೊರತೆಯಿಲ್ಲ. ವಾಸ್ತವದಲ್ಲಿ ಹೆಚ್ಚು ಸಂಬಳವಿರುವುದು ಓರ್ವ ಉಪನ್ಯಾಸಕನಿಗೇ ಆದರೂ ಆತನಿಗೆ ತಮ್ಮ ಮಗಳನ್ನು ಕೊಡಲು ಈ ಹೆತ್ತವರು ಸಿದ್ಧರಿರಲಾರರು. ನಮ್ಮ ಹೆಣ್ಣುಮಕ್ಕಳು ಮತ್ತವರ ಹೆತ್ತವರ ಮನೋಭಾವ ಈ ರೀತಿಯಾದರೆ ಹೆಣ್ಣು ಮಕ್ಕಳನ್ನು ಈ ರೀತಿ ನಿಷ್ಪ್ರಯೋಜಕರನ್ನಾಗಿ ಅಲಂಕಾರದ ಬೊಂಬೆಗಳನ್ನಾಗಿ ಬೆಳೆಸಿದರೆ ಈ ಗಂಡುಗಳನ್ನು ದೂರುವುದರಲ್ಲಿ ಅರ್ಥವಿದೆಯೇ? "ಈಗಿನ ಕಾಲದಲ್ಲಿ ಒಂದು ಸೀರೆಯ ಬೆಲೆ ಐದುನೂರು ರೂಪಾಯಿಗಳಿಗಿಂತ ಕಮ್ಮಿಯಿಲ್ಲ. ನಮ್ಮ ಸಂಬಳದಲ್ಲಿ ಆಗಾಗ ಇಂತಹ ಸೀರೆಗಳನ್ನು ಕೊಂಡುಕೊಳ್ಳಲು ಸಾಧ್ಯವೇ? ಆದ್ದರಿಂದ ಅವಳಿಗೆ ದುಂದುವೆಚ್ಚ ಮಾಡಲು ಬೇಕಾದುದನ್ನು ಅವಳೇ ತರಲಿ!" ಎನ್ನುವ ನಮ್ಮ ಹುಡುಗರ ಮಾತುಗಳನ್ನು ನಾವು ಅರ್ಥಮಾಡಿಕೊಳ್ಳಬೇಕಲ್ಲವೇ?

ಆದರೆ ಈ ಬೇಕಾದುದನ್ನ ತರಿಸುವ ಪರಿಪಾಠ ಎಲ್ಲಿಯವರೆಗೆ ನಡೆದಿದೆಯೆಂದರೆ ಗ್ಯಾಸ್ ಒಲೆಯಿಂದ ಹಿಡಿದು ಮನೆಗೆ ಬೇಕಾದ ಎಲ್ಲಸಾಮಾನುಗಳನ್ನು ಆಕೆ ತಾಯಿಯ ಮನೆಯಿಂದ ತಂದು ಅಡಿಗೆ ಮಾಡಿ ತನ್ನ ತೌರಿನಿಂದ ತಂದ ಪ್ಲೇಟಿನಲ್ಲಿ ಊಟ ಬಡಿಸಿ, ತನ್ನ ಮೇಜಿನ ಮೇಲಿಟ್ಟು ತಿನ್ನಿಸಿ, ತಾನು ತಂದ ಹಾಸಿಗೆ ಮಂಚದಲ್ಲಿ ಆತನನ್ನು ಮಲಗಿಸಿ ತನ್ನ ದೇಹವನ್ನು ಆತನಿಗೆ ಅರ್ಪಿಸಬೇಕಾಗುತ್ತದೆ. ಹಾಗಾದರೆ ಈ ಗಂಡನ ಕೆಲಸವೇನು ನಮ್ಮ ಮಕ್ಕಳ ತಂದೆಯಾಗುವುದು ಮತ್ತು ನಮ್ಮಿಂದ ಸೇವೆ ಮಾಡಿಕೊಳ್ಳುವುದು ಮಾತ್ರವೇ ಮತ್ತು ಆಕಸ್ಮಾತ್ ನಾವು ತಂದದ್ದು ಕಮ್ಮಿಯಾದರೆ ಸೀಮೆಎಣ್ಣೆ ಸುರಿದು ಜೀವಂತ ದಹಿಸುವುದಕ್ಕೆ ಎಂದು ನಾವು ತಿಳಿದುಕೊಳ್ಳಬೇಕಾಗಿದೆ.

ನಮ್ಮ ಹೆಣ್ಣುಮಕ್ಕಳ ಈ ದುರವಸ್ಥೆಗೆ ಪರೋಕ್ಷವಾಗಿ ಇವರ ಹೆತ್ತವರೂ ಕಾರಣರಾಗುತ್ತಾರೆ. ಇವರನ್ನು ಸಮನಾಗಿ ಘೋಷಿಸಿ ಅವರಿಗೆ ಉತ್ತಮ ವಿದ್ಯಾಭ್ಯಾಸವನ್ನೊದಗಿಸಿ ಅವರು ಆರ್ಥಿಕವಾಗಿ ಸ್ವತಂತ್ರರಾಗುವಂತೆ ಮಾಡಬೇಕಾದುದು ಇಂದಿನ ತಂದೆತಾಯಿಗಳ ಕರ್ತವ್ಯವಾಗಿದೆ. ಮನೆಯ ಹೆಣ್ಣು ಗಂಡು ಮಕ್ಕಳ ನಡುವೆ ಯಾವುದೇ ರೀತಿಯ ವ್ಯತ್ಯಾಸವಿಲ್ಲದಂತೆ ಅವರನ್ನು ಪೋಷಿಸಿ-ಸಂಸಾರದಲ್ಲಿ ಗಂಡಿಗಿರುವ ಪ್ರಾಮುಖ್ಯತೆ ಹೆಣ್ಣಿಗೂ ಇದೆ. ಸಂಸಾರವೆಂಬುದು ಹೆಣ್ಣು ಗಂಡುಗಳೆಂಬ ಎರಡು ಚಕ್ರಗಳ ಒಂದು ಬಂಡಿ, ಒಂದೇ ಚಕ್ರದಲ್ಲಿ ಈ ಗಾಡಿ ಉರುಳಲಾರದು ಎಂಬುದನ್ನು ನಾವು ಮನೆಯ ಗಂಡು ಮಕ್ಕಳಿಗೂ ಮನವರಿಕೆ ಮಾಡಿಕೊಡಬೇಕು. ಹೆಜ್ಜೆ ಹೆಜ್ಜೆಗೂ "ನೀನು ಹೆಣ್ಣು" ಎಂದು ಹೆಣ್ಣನ್ನು ಹಂಗಿಸುತ್ತಾ ಅವಳಲ್ಲಿ ಕೀಳರಿಮೆ

ಬೆಳೆಸಿ ವಿವಾಹದ ವಿನಹ ಬೇರೆ ದಾರಿಯೇ ಇಲ್ಲ ಎಂದು ಆಕೆ ತಿಳಿಯುತ್ತಾ ಗಂಡನ ಮನೆಯಲ್ಲೂ ಚಿತ್ರಹಿಂಸೆಯನುಭವಿಸುತ್ತಾ, ಪ್ರತಿಭಟಿಸಲೂ ಬಾರದ ನಿಷ್ಕ್ರಿಯಳಾಗಿ, ಅಸಹಾಯಕಳಾಗಿ, ಕೆಲವೊಮ್ಮೆ ಆಕೆ ಆತ್ಮಹತ್ಯೆ ಮಾಡಿಕೊಳ್ಳಲು ಆಕೆಯ ತಂದೆತಾಯಿಗಳೆ ಕಾರಣರಾಗುತ್ತಾರೆ. "ಎಂತಹ ಪರಿಸ್ಥಿತಿಯಲ್ಲೂ ತೌರಿಗೆ ಮರಳಬೇಡ" ಎಂದು ತಂದೆ ತಾಯಿಗಳು ಬುದ್ದಿವಾದ ಹೇಳುವುದನ್ನು ಬಿಟ್ಟು, "ನಿನಗೆ ಅನ್ಯಾಯವಾದಾಗ ಪ್ರತಿಭಟಿಸು, ಗಂಡನ ಮನೆ ನರಕವಾದಾಗ ನಮ್ಮ ಮನೆಯ ಬಾಗಿಲು ಸದಾ ತೆರೆದಿರುತ್ತದೆ" ಎಂಬ ಧೈರ್ಯದ ಮಾತನ್ನು ಅಂದೇ ತಮ್ಮ ಹೆಣ್ಣುಮಕ್ಕಳನ್ನು ಪತಿಗೃಹಕ್ಕೆ ಕಳುಹಿಸಿಕೊಡಬೇಕು. ಹೆಣ್ಣು ಮಕ್ಕಳಲ್ಲಿ ಸ್ವಾಭಿಮಾನ, ಎಂತಹ ಪರಿಸ್ಥಿತಿಯನ್ನೂ ಕೆಚ್ಚೆದೆಯಿಂದ ಎದುರಿಸುವ ಧೈರ್ಯ ಇವು ಮೂಡಿಬರಬೇಕು. ತಾವು ಅಬಲೆಯರು, ಪರಾವಲಂಬಿ, ಗಂಡಿನ ಆಸರೆ ಇಲ್ಲದೆ ಬದುಕಲಾರೆವು ಎಂಬ ಕೀಳರಿಮೆ ಇವರಿಂದ ಮಾಯವಾಗಬೇಕು. ಕೈ ಹಿಡಿದಾತ ವರದಕ್ಷಿಣೆಗಾಗಿ ಪೀಡಿಸಿದರೆ ಆತನ ಮನೆಬಿಟ್ಟು ಹೊರಬಂದು ಸ್ವತಂತ್ರವಾಗಿ ಜೀವಿಸುವಂತಹ ಸಾಮರ್ಥ್ಯ ಆರ್ಥಿಕ ಸ್ವಾತಂತ್ರ್ಯದ ಹಾದಿ ಆಕೆಗಿರಬೇಕು ಮತ್ತು ಸಮಾಜವೂ ಇಂತಹವರ ಜೀವನ ಸುಗಮವಾಗುವಂತೆ ಆಕೆಗೆ ಸಹಾಯಹಸ್ತ ಚಾಚಬೇಕೇ ಹೊರತು ಆಕೆ ಪತಿಗೃಹದಿಂದ ಓಡಿಬಂದವಳೆಂದು ಆಕೆಯನ್ನು ತಪ್ಪಿತಸ್ಥಳನ್ನಾಗಿಸುವ ಮೂರ್ಖತನ ತಿಳಿಯಬಾರದು.

ವರದಕ್ಷಿಣೆಯ ಸಮಸ್ಯೆಗೆ ಇಂದು ಪ್ರೇಮ ವಿವಾಹ ಉತ್ತಮ ಪರಿಹಾರವನ್ನೊದಗಿಸಬಹುದು. ಆದರೆ ನಮ್ಮ ದೇಶದ ಈ ಹಲವಾರು ಧರ್ಮ, ಜಾತಿ, ಪಂಗಡಗಳಿಂದಾಗಿ ಈ ದಿಸೆಯಲ್ಲೂ ನಾವು ಮುಂದುವರಿಯದಂತಾಗಿದೆ. ಹೆಣ್ಣಿಗೊಬ್ಬ ಗಂಡು ಮುಖ್ಯವಾಗಿರುವಂತೆಯೇ ಆತನ ಜಾತಿ, ಕುಲ, ಗೋತ್ರಗಳೂ ಮುಖ್ಯವಾಗಿವೆ. ಭೂಮಿಯ ಮೇಲೆ ಹುಟ್ಟಿದ ಮನುಷ್ಯರೆಲ್ಲರೂ ಸರಿಸಮಾನರು, ಜಾತಿ, ಧರ್ಮ, ಕಟ್ಟುಪಾಡುಗಳನ್ನೆಲ್ಲ ನಾವೇ ಸೃಷ್ಟಿಕೊಂಡವರು ಎಂಬುದನ್ನು ನಾವು ಸಂಪೂರ್ಣ ಮರೆತು ಬಿಡುತ್ತೇವೆ. ಎಂದಿನವರೆಗೆ ನಾವು ಜಾತಿ, ಧರ್ಮಗಳ ಅಡ್ಡಗೋಡೆಗಳನ್ನು ಕೆಡವಲಾರವೊ, ಸರ್ವರೂ ಸಮಾನರೆಂಬ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲಾರೆವೊ, ಅಂದಿನವರೆಗೆ ನಮ್ಮ ಎಲ್ಲ ಮೂಢನಂಬಿಕೆಗಳಂತೆ ವರದಕ್ಷಿಣೆಯ ಪದ್ದತಿಯೂ ಉಳಿದುಬರುತ್ತದೆ. ಯಾವುದೇ ಕಾಯಿದೆ, ಕಾನೂನುಗಳಿಂದಲೂ ಈ ದುಷ್ಟ ಪದ್ದತಿಯ ನಿವಾರಣೆಯಾಗದು.

ನಮ್ಮ ಯುವಕರು ಕೊಂಚ ಪ್ರಜ್ಞಾವಂತರಾಗಿ ವರ್ತಿಸಿದರೆ, ಹಣ, ಅಂತಸ್ತಿಗಿಂತಲೂ ಉತ್ತಮ ಗುಣ ನಡೆಯ ಉತ್ತಮ ಸಂಸ್ಕೃತಿಯನ್ನು ಮೈಗೂಡಿಕೊಂಡ ಹೆಣ್ಣು ಮುಖ್ಯ ಎಂಬುದನ್ನು ಮನವರಿಕೆ ಮಾಡಿಕೊಂಡರೆ ಕೆಲವು ಹೆಣ್ಣು ಮಕ್ಕಳಾದರೂ ಸಮನಾದ ಬಾಳಸಂಗಾತಿಗಳನ್ನು ಪಡೆದು ಸುಖಸಂಸಾರ ನಡೆಸುವಂತಾಗಬಹುದು.

# 3. ಪ್ರೀತಿ


3.1 ಪ್ರೀತಿ ಇಲ್ಲದ ಮೇಲೆ – ಡಾ. ಜಿ.ಎಸ್. ಶಿವರುದ್ರಪ್ಪ.

3.2 ಲಹರಿ... ಲಹರಿ.. ಲಹರಿ – ನಾಗತಿಹಳ್ಳಿ ಚಂದ್ರಶೇಖರ್

3.3 ಕಮರಿ ಹೋಗುವ ಜನ – ಡಾ. ಗೀತಾ ನಾಗಭೂಷಣ

3.4 ತಂದೆ ತಾಯಿ ಮತ್ತು ಮಗುವಿನ ನಡುವಣ ಪ್ರೀತಿ – ಎರಿಕ್ ಫ್ರಾಂ. ಕನ್ನಡಕ್ಕೆ: ಕೆ.ವಿ.ಎನ್ ಮತ್ತು ಎಚ್.ಎಸ್. ರಾಘವೇಂದ್ರರಾವ್

## ಆಶಯ: ಪ್ರೀತಿ ಎಂದರೆ

"ಮತ್ತೆ ಯಾವಾಗ ಮರು ಭೇಟಿ? ಕಣ್ಣು
ಕಣ್ಣುಗಳ ಸಮ್ಮಿಲನ / ಮೌನದ ನಿಗೂಢ
ಗಂಭೀರ ಸಂಪಾದದ ಚಟಾಕಿ ?
ಆತ್ಮೀಯ ದೀವಿಗೆ ಮತ್ತೆ ಬರಬಲ್ಲೆನೇ,
ಏಳು ಕಡಲುಗಳ ದಾಟಿ ? ಬಂದರೂ
ಕೂಡ ದೊರೆವುದ ಹೇಳು, ಈ ಇಂಥ ಸರಿಸಾಟಿ?"

**– ಎಂ. ಗೋಪಾಲಕೃಷ್ಣ ಅಡಿಗ**

ಒಲವಿನ ಪೂಜೆಗೆ ಒಲವೇ ಮಂದಾರ
ಒಲವೇ ಬದುಕಿನ ಬಂಗಾರ
ಒಲವಿನ ನೆನಪೆ ಹೃದಯಕೆ ಮಧುರ
ಒಲವೆ ದೈವದ ಸಾಕ್ಷಾತ್ಕಾರ
ಒಲವೆ ಜೀವನ ಸಾಕ್ಷಾತ್ಕಾರ
ಒಲವೆ ಮರೆಯದ ಮಮಕಾರ

**– ಕಣಗಾಲ್ ಪ್ರಭಾಕರಶಾಸ್ತ್ರಿ**

ಗಾಳಿ ನೀರು ಹೂವು ಹಣ್ಣು ಇರುವುದು ಏತಕ್ಕೆ?
ಪ್ರೀತಿಯಿಂದ ತಾನೆ? ಪ್ರೇಮದಿಂದ ತಾನೆ?
ಸೂರ್ಯ ಚಂದ್ರ ರಾತ್ರಿ ಹಗಲು ಬರುವುದು ಏತಕ್ಕೆ?
ಪ್ರೀತಿಯಿಂದ ತಾನೆ? ಪ್ರೇಮದಿಂದ ತಾನೆ?

**– ಹಂಸಲೇಖ**

ಒಲುಮೆಯ ಸಲುವಾಗಿ ಎಲ್ಲವ ತೆತ್ತೆ,
ಚಂದವ, ಪ್ರಾಯವ, ಜೀವವ ತೆತ್ತೆ,
ಒಲಿಯಲು ತೆತ್ತೆ,
ಒಲಿದುದಕೇ ತೆತ್ತೆ;
ಸಾಯುವೆ; ತುಸುಹೊತ್ತು ಮುತ್ತಿಡು ಮತ್ತೆ

**– ಪು.ತಿ. ನ.**

ಒಂದು ಹೆಣ್ಣಿಗೊಂದು ಗಂಡು ಹೇಗೋ ಸೇರಿ ಹೊಂದಿಕೊಂಡು ।
ಕಾಣದೊಂದು ಕನಸ ಕಂಡು ಮಾತಿಗೊಲಿಯದಮೃತವುಂಡು ।
ದುಃಖ ಹಗುರವೆನುತಿರೆ ಪ್ರೇಮವೆನಲು ಹಾಸ್ಯವೇ? ।

**– ಕೆ.ಎಸ್ ನರಸಿಂಹಸ್ವಾಮಿ**

ನಾನು ಬಡವಿ ಆತ ಬಡವ, ಒಲವೆ ನಮ್ಮ ಬದುಕು ।
ಬಳಸಿಕೊಂಡವದನೆ ನಾವು, ಅದಕು ಇದಕು ಎದಕು ॥
ಆತ ಕೊಟ್ಟ ವಸ್ತು ಒಡವೆ ನನಗೆ ಅವಗೆ ಗೊತ್ತು ।
ತೋಳುಗಳಿಗೆ ತೋಳ ಬಂದಿ ಕೆನ್ನೆ ತುಂಬ ಮುತ್ತು ॥

**–ದ. ರಾ. ಬೇಂದ್ರೆ**

# ೩.೧. ಪ್ರೀತಿ ಇಲ್ಲದ ಮೇಲೆ

–ಜಿ.ಎಸ್. ಶಿವರುದ್ರಪ್ಪ

ಪ್ರೀತಿ ಇಲ್ಲದ ಮೇಲೆ –
ಹೂವು ಅರಳೀತು ಹೇಗೆ ?
ಮೋಡ ಕಟ್ಟೀತು ಹೇಗೆ ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೆ?

ಪ್ರೀತಿ ಇಲ್ಲದ ಮೇಲೆ –
ಮಾತಿಗೆ ಮಾತು ಕೂಡೀತು ಹೇಗೆ ?
ಅರ್ಥ ಹುಟ್ಟೀತು ಹೇಗೆ ?
ಬರೀ ಪದಕ್ಕೆ ಪದ ಜತೆಗಿದ್ದ ಮಾತ್ರಕ್ಕೆ
ಪದ್ಯವಾದೀತು ಹೇಗೆ?

ಪ್ರೀತಿ ಇಲ್ಲದ ಮೇಲೆ –
ದಕ್ಷಿಣಾಫ್ರಿಕದ ಕಗ್ಗತ್ತಲಿಗೆ
ಬೆಳಕು ಮೂಡೀತು ಹೇಗೆ ?
ಸೆರೆಮನೆಯ ಕಂಬಿಯ ನಡುವೆ
ಕಮರುವ ಕನಸು ಕೊನರೀತು ಹೇಗೆ ?
ಬಿಳಿ ಜನರ ಕರಾಳ ಕಪ್ಪು ಹೃದಯಕ್ಕೆ
ಕ್ರಿಸ್ತನ ಕರುಣೆ ಅರ್ಥವಾದೀತು ಹೇಗೆ ?

ಪ್ರೀತಿ ಇಲ್ಲದ ಮೇಲೆ –
ಸಂಶಯದ ಗಡಿಗಳುದ್ದಕ್ಕು
ಸಿಡಿಗುಂಡುಗಳ ಕದನ ನಿಂತೀತು ಹೇಗೆ ?
ಜಾತಿ–ಮತ–ಭಾಷೆ–ಬಣ್ಣಗಳ ಗೋಡೆಯ ನಡುವೆ
ನರಳುವ ಪಾಡು ತಪ್ಪೀತು ಹೇಗೆ ?
ನಮ್ಮ ನಿಮ್ಮ ಮನಸ್ಸು
ಮರುಭೂಮಿಯಾಗದ ಹಾಗೆ
ತಡೆಗಟ್ಟುವುದು ಹೇಗೆ?

# ೩.೨. ಲಹರಿ... ಲಹರಿ.. ಲಹರಿ

**- ನಾಗತಿಹಳ್ಳಿ ಚಂದ್ರಶೇಖರ್**

ಆನಂತರ –

ನನಗೂ ಅವಳಿಗೂ ನೂರಹನ್ನೊಂದನೆಯ ಬಾರಿ ನಡುಬೀದಿಯಲ್ಲಿ ಭಾರೀ ಲಡಾಯಿ ಆಯಿತು. ನಾನಂತೂ ಕೋಪದಿಂದ ಕುದಿಯುತ್ತಿದ್ದೆ. ತುಂಬಾ ಅರ್ಜೆಂಟಾಗಿ ಎಲ್ಲೋ ಹೋಗುತ್ತಿರುವಾಗಲೇ ಅರ್ಧಕ್ಕೆ ಬಂದು ನಾನು ಬರುವುದಿಲ್ಲ–ನನಗೆ ಹೊಟ್ಟೆನೋವು–ಅಂತ ಅರ್ಧದಾರಿಯಲ್ಲಿ ನಿಂತರೆ ಯಾರಿಗೆ ಕೋಪ ಬರುವುದಿಲ್ಲ ? ನಿನಗೆ ಮುದ್ದು ಅತಿಯಾಯ್ತು. ಜಾಸ್ತಿ ಪ್ರೀತಿಯಿಂದ ನೋಡಿಕೊಂಡಿದ್ದಕ್ಕೆ ಈ ಪ್ರತಿಫಲ ಬರುತ್ತೀಯೋ ಅಥವಾ ಇಲ್ಲೇ ಬಿಟ್ಟು ಹೋಗಲೋ ಎಂದು ಅರಚಿದೆ. ಅಷ್ಟೇ ಸಾಕು, ಅವಳು ಮೌನವ್ರತ ಹಿಡಿಯಲು, ಮುಖ ತಿರುಗಿಸಿ ಮುನಿಸಿಕೊಂಡು ನಿಂತಲ್ಲೇ ನಿಂತು ಬಿಟ್ಟಳು. ಕಂಡವರ ಫಜೀತಿಗಳನ್ನು ನೋಡಿ ಸುಖಿಸುವ ಜನ ಅಲ್ಲಲ್ಲಿ ನಿಂತು ಇಣುಕಿ ನೋಡತೊಡಗಿದಾಗ ನಾನಂತೂ ಅವಮಾನ, ಕೋಪಗಳಿಂದ ಬೆವರತೊಡಗಿದೆ. ಎರಡು ಮೂರು ಬಾರಿ ಅವಳ ಎರಡೂ ಕೈ ಹಿಡಿದು ಎಳೆದೆ. ದುರಹಂಕಾರಿ ಬರದೆ ಸತಾಯಿಸಿದಳು. ಜನರ ಕಣ್ಣಿನ ನೋಟ ಇರಿಯತೊಡಗಿದವು. ನನ್ನ ಮಹಾದೌರ್ಬಲ್ಯವೆಂದರೆ ಕೋಪವೆಂದರೆ ವಿಪರೀತ ಕೋಪ.... ಪ್ರೀತಿಯೆಂದರೆ ಅತಿಯಾದ ಪ್ರೀತಿ.... ಈ ಅತಿರೇಕಗಳ ನಡುವಿನ ಬಿಂದು ಗುರುತು ಹಚ್ಚಿ ನೆಲೆ ನಿಲ್ಲಲು ನನ್ನಿಂದ ಸಾಧ್ಯವೇ ಇಲ್ಲ. ಅರ್ಧಂಬರ್ಧ ಪ್ರೀತಿಸುವವರು, ಅರ್ಧಂಬರ್ಧ ದ್ವೇಷಿಸುವವರನ್ನು ನಾನು ಅರ್ಧಮನುಷ್ಯರೆಂದು ಮಾತ್ರ ಕರೆಯುತ್ತೇನೆ. ಉಳಿದರ್ಧ ಏನು ಅಂತ ಕೇಳಬೇಡಿ, ಕಲ್ಲೋ, ಮೃಗವೋ, ಮಣ್ಣೋ ನಪುಂಸಕತ್ವವೋ ಎಂಥದೋ ಒಂದು..

ಇವಳ ಧಿಮಾಕು ಎಂಥದು ಅಂತ ತನಗೆ ಹೊಟ್ಟೆನೋವು ಅಂತ ಮನೆ ಮನೆಯಲ್ಲೇ ಬೊಗಳಿದ್ದರೆ ನಾನೊಬ್ಬನೇ ರಿಕ್ಷಾ ಹಿಡಿದು ಹೋಗುತ್ತಿದ್ದೆ. ನಾನೂ ಬತ್ತೀನಿ ಅಂತ ಯಾಕೆ ಹಠ ಹಿಡೀಯಬೇಕಾಗಿತ್ತು ? ಬಂದ ಮೇಲೆ ರಸ್ತೆ ಮಧ್ಯೆ ಮಾನ ಯಾಕೆ ಕಳೀಬೇಕು ? ರೇಗತೊಡಗಿದೆ. ಅವಳೇನು ಕಡಿಮೆಯೆ ? ಹೊಟ್ಟೆನೋವು ಹೇಳಿ ಕೇಳಿ ಬರುತ್ತಾ ? ಮನೆ ಬಿಟ್ಟಾಗ ಚೆನ್ನಾಗಿಯೇ ಇದ್ದೆ. ನಿಮಗೆ ಇದ್ದಕ್ಕಿದ್ದ ಹಾಗೆ ಖಾಯಿಲೆ ಬರೋಲ್ವಾ ? ಅಂತ ವಾದಿಸತೊಡಗಿದಳು. ಎಲ್ಲಿ ಹೊಟ್ಟೆಯನ್ನಾದರೂ ತೋರಿಸು ನೋಡೋಣ ಅಂತ ಸ್ವಲ್ಪ ಬಟ್ಟೆ ಸರಿಸಿದೆ. ಥೂ.... ಇಲ್ಲಿ ಬೇಡ... ಡಾಕ್ಟರತ್ರ ಹೋಗೋಣ ಅಂತ ಮುಖಸಿಂಡರಿಸಿದಳು. ನಮ್ಮೆಲ್ಲ ಆವಾಂತರಗಳನ್ನು ಭಂಡ ಜನ ನೋಡುತ್ತಾ ಆನಂದಪಡುತ್ತಿದ್ದರು. ಇವಳಂತೂ ನಾನು ಒಂದು

ಹೆಜ್ಜೆಯನ್ನೂ ಮುಂದಿಡಲಾರೆನೆಂದು ಪಟ್ಟು ಹಿಡಿದಳು. ಕೋಪ ತಾಳದೆ ಝಾಡಿಸಿ ಒದ್ದೆ. ಎಲ್ಲರ ಮುಂದೆ ಒದೆಯಬಾರದಿತ್ತು ಅನಿಸಿತು. ಆಮೇಲೆ ನನ್ನ ಒದೆತ ಜೋರಾಗಿತು. ಅವಳು ನೋವ ತಾಳಲಾರದೆ ಗೊರಗೊರನೆ ನರಳಿದಳು. ನಾನು ಸುಸ್ತಾಗಿ ಸಂತೈಸಿ, ಅವಳ ಎರಡೂ ಕೈ ಹಿಡಿದು ಮೆಲ್ಲಗೆ ಬಹುಮೆಲ್ಲಗೆ ನಡೆಸಿಕೋತಾ ಚಿಕಿತ್ಸಾಲಯಕ್ಕೆ ಬಂದೆ.

ಡಾ॥ ನವಾಬ್ ಅಂದು ಬಿಜಿಯಾಗಿದ್ದರು. ಆ ಮನುಷ್ಯನ ಮುಂದೆ ಇವಳಂಥ ಹತ್ತಾರು ರೋಗಿಗಳು ಕುಳಿತಿದ್ದರು. ಇವಳಿಗೂ ನವಾಬ್ ಕಂಡರೆ ಗೌರವ. ಏನು ಖಾಯಿಲೆ ಬಂದರೂ ಅವರೇ ಆಗಬೇಕು. ಅವರ ಕೈಗುಣ ಒಳ್ಳೆಯದು ಎಂಬುದು ಇವಳ ಪ್ರಶಂಸೆ. ಟ್ರೀಟ್‌ಮೆಂಟ್ ಒರಟಾಗಿರುವುದಿಲ್ಲವಂತೆ. ಅದಕ್ಕಿಂತ ಮುಖ್ಯವಾದ ಗುಟ್ಟೆಂದರೆ ನವಾಬರಿಗೆ ನನ್ನೊಂದಿಗೆ ಎಂಥ ಸ್ನೇಹವಿದೆ ಅಂದರೆ ಅವರಿಗೆಷ್ಟೇ ರೋಗಿಗಳಿದ್ದರೂ ತತ್‌ಕ್ಷಣ ಇವಳ ಕಡೆಗೆ ಗಮನಿಸುತ್ತಾರೆ. ಅದಕ್ಕೆ ಇವಳಿಗೆ ತಲೆನೋವು ಬರಲಿ, ಹೊಟ್ಟೆನೋವು ಬರಲಿ, ಕಣ್ಣಿಗೆ ಪೆಟ್ಟಾಗಲಿ, ಅಜೀರ್ಣವಾಗಲಿ ನವಾಬರ ಬಳಿಗೇ ಓಡುತ್ತಾಳೆ. ಇವಳ ಕಂಡ ಕೂಡಲೇ ಚಿಕಿತ್ಸೆ ಶುರುಮಾಡಿದರು. ನಾನು ಬಟ್ಟೆ ಮುಟ್ಟಿದರೆ ನಾಚಿಕೆ ಅಂತಿದ್ದವಳು ನವಾಬರು ಅರ್ಧಭಾಗ ಬಟ್ಟೆ ಪೂರ್ತಿ ಬಿಚ್ಚಿಟ್ಟರೂ ಸುಮ್ಮನೆ ಸಹಕರಿಸಿದಳು ರಾಸ್ಕಲ್ ! ಡಾಕ್ಟರು ನಿರ್ಲಿಪ್ತವಾಗಿ ಮುಟ್ಟಿ ತಟ್ಟಿ ಪರೀಶೀಲಿಸುವಾಗ ಅವರ ಕಿವಿಯಲ್ಲಿ ನನ್ನ ವರ್ತನೆ ಬಗ್ಗೆ ಏನು ಚಾಡಿ ಹೇಳಿದಳೋ ಏನೋ.. ಬಿಲ್ ಕೊಟ್ಟು ಬರುವಾಗ ಅವರು ನನಗೆ "ಸ್ವಲ್ಪ ಚೆನ್ನಾಗಿ ನೋಡಿಕೊಳ್ಳಬೇಕು. ನೀವು ಸ್ವಲ್ಪ ರಫ್ ಆಗಿ ನಡೆಸಿಕೊಂಡಿದ್ದೀರಿ, ಈಕೇನ ನೋಡಿದ್ರೇ ಗೊತ್ತಾಗುತ್ತೆ. ಅಟ್‌ಲೀಸ್ಟ್ ಸ್ನಾನ ಮಾಡಿಸಬಾರದಾ ? ಒಂದ್ ಮಾತು ತಿಳಕೊಳ್ಳಿ, ಈಕೆಗೆ ನಿಮ್ಮ ಪ್ರೀತಿಯ ಅವಶ್ಯಕತೆ ಇದೆ" ಎಂದು ಉಪದೇಶಿಸಿದರು.

ನಾವಿಬ್ಬರೂ ಮುನಿಸಿಕೊಂಡೆವು. ಆ ರಾತ್ರಿ ನಾನು ಅವಳನ್ನು ಮುಟ್ಟಲೂ ಇಲ್ಲ. ಮಾತನಾಡಿಸಲೂ ಇಲ್ಲ. ಡಾಕ್ಟರಿಂದ ನನಗೇ ವಿವೇಕ ಹೇಳಿಸಿದಳಲ್ಲ ? ಇವಳಿಗೆ ನಾನೇನು ಕಡಿಮೆ ಮಾಡಿದ್ದೇನೆ ? ದಿನಕ್ಕೆ ಹತ್ತಿಪ್ಪತ್ತು ರೂಪಾಯಿ ಖರ್ಚು ಮಾಡುವುದಿಲ್ಲವೆ ? ಹೋದ ಕಡೆಗೆಲ್ಲಾ ಕರೆದುಕೊಂಡು ಹೋಗುವುದಿಲ್ಲವೆ ? ಆದರೂ.... ಇವತ್ತು ಬೀದಿಯಲ್ಲಿ ಹಾಗೆ ಮಾಡಬಹುದೆ ? ಹೊಟ್ಟೆನೋವು ಬಂದರೆ ಇನ್ನೇನು ಮಾಡುತ್ತಾಳೆ? ಅವಳಿಗೆ ತಾನೆ ಯಾರಿದ್ದಾರೆ ? ನನಗೂ ಪಿಚ್ಚೆನಿಸಿತು.

ನಿಮ್ಮ ಹತ್ತಿರ ಮುಚ್ಚುಮರೆ ಏಕೆ ? ಇವಳ ಬಗ್ಗೆ ಒಂದಿಷ್ಟು ಹೇಳಬಯಸುವೆ. ಈಗ್ಗ್ಯೆ ಎರಡು ಸಂವತ್ಸರಗಳ ಹಿಂದೆ ನಾನು ಬಹಳ ಅಸುಖಿಯೂ, ಒಂಟಿಯೂ ಆಗಿದ್ದೆ. ಯಾರನ್ನೂ ಪ್ರೀತಿಸದೆಯೇ ಉತ್ಕಟ ವಿರಹಾವಸ್ಥೆಯಿಂದ ಬಳಲುವ ಅವಿವೇಕಿಯಾಗಿದ್ದೆ. ನನ್ನವರೆಂಬುವರು ಯಾರೂ ಇಲ್ಲವೆ ಎಂದು ಕೊರಗುತ್ತಾ

ಕಸ್ತೂರಿಬಾ ರಸ್ತೆಯಲ್ಲಿ ಕಾಲೆಳೆಯುತ್ತಾ ಹೋಗುತ್ತಿದ್ದಾಗ ಒಂದು ಗಾಜಿನ ಪರದೆಯ ಮುಂದೆ ಇವಳು ನಿಂತಿದ್ದಳು. ಅವಳು ನೋಟದಲ್ಲಿ ಅಪೂರ್ವವಾದ ದೈನ್ಯತೆ ಇತ್ತು. ಎರಡು ನಿಮಿಷ ನೋಡಿದೆ. ಅವಳ ಕುಡಿನೋಟ ನನ್ನನ್ನು ಸಾಯಿಸುವಂತಿತ್ತು. ಏಕ್‌ದಂ ಹೃದಯ ಕೊಟ್ಟುಬಿಟ್ಟೆ. ನಿಂಬೆ ಬಣ್ಣದ ಚೆಲುವೆ ನಿರಾಭರಣ ಸುಂದರಿಯಾದರೂ ಕಣ್ಣು ಕುಕ್ಕುವ ಹೊಳಪಿನಿಂದ ನನ್ನ ಸೆಳೆದುಬಿಟ್ಟಳು. ಲವ್ ಅಟ್ ಫಸ್ಟ್ ಸೈಟ್ ಅಂತಾರಲ್ಲ ಅದು ಆಯಿತು.

ಪ್ರೇಮಿಸುವಷ್ಟು ಸುಲಭವಲ್ಲ – ಸಮಾಗಮವಾಗುವುದು. ಅವಳದೊಂದು ದುರಂತ ಕಥೆ. ಅವಳಿಗೆ ಅಪ್ಪ ಅಮ್ಮ ಯಾರೂ ಇರಲಿಲ್ಲ. ಅವಳಿಗೆ ಅವರ ಬಗ್ಗೆ ಗೊತ್ತೇ ಇರಲಿಲ್ಲ. ಅವಳಿಗೆ ಅವರ ಬಗ್ಗೆ ಗೊತ್ತೇ ಇರಲಿಲ್ಲ. ಇನ್ನೂ ಸ್ಪಷ್ಟವಾಗಿ ಹೇಳಲೇ ? ಬೆರಕೆಗೆ ಹುಟ್ಟಿದಂತಿದ್ದಳು. ಆ ಮೋಹಕ ಸೌಂದರ್ಯ ನೋಡಿದಾಗಲೇ ಅನ್ನಿಸಿತ್ತು. ಇದೊಂದು ಹೈಬ್ರೀಡ್ ತಳಿ ಅಂತ. ಇವಳ ಕಂಡೊಡನೆ ಆ ಥಿಯರಿ ಸರಿಸರಿ ಅನ್ನಿಸಿತು. ಇಷ್ಟಾದರೂ ಅವಳನ್ನು ನನ್ನ ಬಾಳಿಗೆ ಕರೆದುಕೊಳ್ಳಬೇಕೆಂಬ ಅಭೀಷ್ಟೆ ಹೆಚ್ಚಾಯಿತು. ಯಾಕೆಂದರೆ ನನಗೆ ಶಾಸ್ತ್ರ ಸಂಪ್ರದಾಯಗಳನ್ನು ಭಗ್ನಗೊಳಿಸಿ ಒಪ್ಪಿತವಾದ ಲೋಕರೂಢಿಗಳನ್ನು ಮುರಿಯುವುದೆಂದರೆ ಅತ್ಯಾನಂದದ ವಿಷಯ. ಅವಳಿಗೊಬ್ಬ ಸಾಕು ತಂದೆ ಇದ್ದ. ನನಗಿವಳು ಬೇಕು ಎಂದೆ. ನಿರ್ದಯವಾಗಿ ಅವಳನ್ನು ನನಗೆ ಮಾರಿಬಿಟ್ಟ. ಅವನು ಎಷ್ಟಕ್ಕೆ ಇವಳನ್ನು ಕೊಂಡು ತಂದಿದ್ದನೋ ತಿಳಿಯೆ. ನನಗಂತೂ ಲಾಭ ಗಿಟ್ಟಿಸಿಯೇ ಮಾರಿಬಿಟ್ಟ. ಈ ಹುಡುಗಿಯರು ನಕ್ಕಿದ್ದಕ್ಕೆ ಮಾತನಾಡಿದ್ದಕ್ಕೆ ಕೆಮ್ಮಿದ್ದಕ್ಕೆ ಕ್ಯಾಕರಿಸಿದ್ದಕ್ಕೆಲ್ಲಾ ದುಡ್ಡು ತೆತ್ತು ಬರಿದಾಗುತ್ತಿದ್ದ ನಾನು ಎಲ್ಲವನ್ನೂ ಬಂದ್ ಮಾಡಿ ಇದ್ದ ಹಣವನ್ನೆಲ್ಲಾ ಸುರಿದು ಅವಳನ್ನು ನನ್ನ ಬದುಕಿನ ಮನೆಗೆ ಕರೆತಂದೆ.

ಕರೆತಂದ ಪ್ರಥಮ ದಿನ – ಇದನ್ನು ಪ್ರಥಮ ರಾತ್ರಿ ಎನ್ನಲು ಸಂಕೋಚ – ನಾವಿಬ್ಬರೂ ಮೌನದಲ್ಲೇ ಮಾತಾಡಿದೆವು. ನಿನಗೆ ಏನಾದರೂ ಬೇಕೆ ? ಎಂದೆ. ಸಣ್ಣ ಪುಟ್ಟ ಒಡವೆಗಳನ್ನು ಕೊಂಡಳು. ನನಗೆ ಚೆನ್ನಾಗಿ ನೆನಪಿರುವಂತೆ ಅವಳು ಬೇಡಿದ್ದು ಕನ್ನಡಿ. ಅವಳ ಸೌಂದರ್ಯ ಪ್ರಜ್ಞೆಯನ್ನು ಕಂಡು ಸಂತಸಗೊಂಡೆ. ನಾನು ಪ್ರೀತಿಯಿಂದ ಕೊಡಿಸಿದ ಪುಟ್ಟ ಕನ್ನಡಿಯನ್ನು ಅವಳಿನ್ನೂ ಇರಿಸಿಕೊಂಡಿದ್ದಾಳೆ.

ಆ ರಾತ್ರಿ ಕೇಳಿದೆ, ನಿನ್ನ ಹೆಸರೇನು ಎಂದು. ನಾಚುತ್ತಾ "ಪ್ರಿಯಾ" ಎಂದಳು. ಆ ಹೆಸರು ನನಗೆ ಬಹಳ ಹಿಡಿಸಿತು. ಅನಂತರ ನಾವು ಬಹಳ ಮಾತಾಡಿದೆವು :

"ನಿನ್ನ ಹೆಸರು ತುಂಬಾ ಚೆನ್ನಾಗಿದೆ."

"ನಿಜ ಹೇಳಿ.... ನನ್ನ ಹೆಸರು ಮಾತ್ರವೋ ಅಥವಾ ನಾನೋ ?"

"ನೀನು, ನಿನ್ನ ಹೆಸರು ಎಲ್ಲಾ ಸೊಗಸು."

"ನನ್ನಲ್ಲಿ ಏನನ್ನು ಕಂಡು ಮೆಚ್ಚಿಕೊಂಡಿರಿ ? ಅಪ್ಪ ಅಮ್ಮನ ಹೆಸರೂ ಗೊತ್ತಿಲ್ಲದ ಅನಾಥೆ ನಾನು...."

"ಹೇಳ್ತೀನಿ.... ಬೇಸರ ಪಟ್ಕೋಬೇಡ.....ನಿನ್ನ ಒಂದೊಂದು ಅಂಗ ಒಂದೊಂದು ಥರಾ ಇವೆ. ಎಲ್ಲಿಂದಲೋ ತಂದು ಕೂಡಿಸಿದಂತೆ. ನನಗೆ ಮಿಶ್ರಣಗೊಂಡ ವ್ಯಕ್ತಿಗಳು ಇಷ್ಟ. ನೋಡು ನಿನ್ನ ಕಾಲುಗಳೇ ಒಂಥರಾ ಇವೆ. ಕೈಗಳೇ ಒಂಥರಾ ಇವೆ. ನಿನ್ನ ಒಡಲು ಮತ್ತೊಂದು ಥರಾ ಇದೆ. ಐ ಲೈಕ್ ಇಟ್. ಏಕರೂಪತೆ, ಏಕತಾನತೆ ಅಂದ್ರೆ ನನಗೆ ಆಗೋಲ್ಲ."

"ನೀವು ನನ್ನನ್ನು ಮೋಸ ಮಾಡಿ ಬೇರೆಯವಳ ಹಿಂದೆ ಹೋಗಲ್ಲ....ತಾನೇ ?"

"ನಾನು ಹಾಗೆ ಹೋಗೋಕೆ ನಿನ್ನ ಅಕರ್ಷಣೆ – ಸೆಳೆತ ಬಿಟ್ರೆ ತಾನೆ ?"

"ಮದ್ದೆ ಯಾವಾಗ ಮಾಡ್ಕೊಳ್ಳೋದು ?"

"ಮದ್ದೆ – ಗಿದ್ದೆ ಏನೂ ಇಲ್ಲ ... ಒಟ್ಟಿಗೇ ಬಾಳೋದು ಅಷ್ಟೆ"

"ಯಾಕೆ. ?"

"ನಮ್ಮಿಬ್ಬರ ಜಾತಿ ಬೇರೆ."

"ಜಾತಿಯಲ್ಲಿ ನಂಬಿಕೆ ಇದೆಯಾ?"

"ನಂಬಿಕೆ ಇಲ್ಲ. ಆದ್ರೆ ಪ್ರಯೋಗ ಮಾಡೋಕೆ ಟೈಮಿಲ್ಲ. ಮತ್ತೆ ಇಲ್ಲೆ ಒಟ್ಟಿಗೆ ಬಾಳ್ತಿದ್ರೆ ಕದ್ದು ಮುಚ್ಚಿ ಕೂಡೋ ಪ್ರೇಮಿಗಳ ಥರಾ ಮಜಾ ಇರುತ್ತೆ. ಆದ್ರಿಂದ ಮದ್ವೆ ಬೇಡ. ಹೀಗೇ ಹಾಯಾಗಿರೋಣ...." ನಾನು ಹಾಯಾಗಿ ನಿದ್ರೆ ಹೋದೆ. ಮರುದಿನ ಪ್ರಾತಃಕಾಲದಲ್ಲಿ ಪ್ರಿಯಾ ಲಜ್ಜೆಯಿಂದ ಮತ್ತೊಂದು ಪುಟ್ಟ ಬೇಡಿಕೆ ಸಲ್ಲಿಸಿದಳು.

"ಹೇಳು ಪರವಾಗಿಲ್ಲ" ಎಂದೆ ಭುಜತಟ್ಟಿ

"ಥೂ.... ನಾಚಿಕೆ ಆಗುತ್ತೆ" ಎಂದಳು ಕಣ್ಣು ಮಿಟುಕಿಸಿ.

"ಹೋಗ್ಲಿ ಬಿಡು" ಎಂದೆ ನಿರುತ್ಸಾಹ ಪ್ರಕಟಿಸಿ.

"ಅಯ್ಯೋ ಹಾಗಲ್ಲ.... ಹೇಳೆ ಇದ್ರೆ ನನಗೆ ಕಷ್ಟ" ಮತ್ತೆ ಅವಳ ಸಂದಿಗ್ಧ.

"ಮತ್ತೆ ಹೇಳಲ್ಲ.... ಸಂಕೋಚ ಯಾಕೆ ?"

"ನೀವು ಏನೂ ಅಂದ್ಕೋಳ್ಳಲ್ಲ ತಾನೆ ?"

"ಇಲ್ಲ....."

"ನೀವು... ನೀವು...."

"ನಾನು...?"

"ನೀವು...."

"ಹೇಳು ಪ್ರಿಯ..."

"ಮತ್ತೆ ನೀವು... ನೀವು"

"ಸುಮ್ನೆ ಹೇಳಲೇ ಕತ್ತೆ..... ಸತಾಯಿಸ್ಬೇಡ."

"ನೀವು ತುಂಬಾ ಭಾರ ಇದ್ದೀರ... ಸ್ವಲ್ಪ ಡಯೆಟ್ ಮಾಡಿ ತೂಕ ಕಡಿಮೆ ಮಾಡ್ಕೊಳ್ಳಿ.

.... ನನ್ನ ಕಷ್ಟ ನಿಮಗೆ ಹ್ಯಾಗೆ ತಿಳೀಬೇಕು ?"

* * *

ಅವಳು ಹೇಗೆ ಒಳಬಂದಳು – ನನ್ನ ಬದುಕಿಗೆ ಭಾಗವಾದಳು ಎಂದು ಗತಕಾಲವನ್ನು ನೆನಪು ಮಾಡಿಕೊಂಡಂತೆಯೇ ಅವಳ ಬಗೆಗಿನ ಸಿಟ್ಟು ಮಾಯವಾಗತೊಡಗಿತು. ನವಾಬರು ಹೇಳಿದಂತೆ ಅವಳನ್ನು ಪ್ರೀತಿಯಿಂದ ನೋಡಿಕೊಳ್ಳಬೇಕೆಂದುಕೊಂಡೆ. ಥೂ.... ಎಂಥ ಜೀವನವೋ ಇದು.... ತಪ್ಪು ಮಾಡುವುದು..... ಪಶ್ಚಾತ್ತಾಪ ಪಡುವುದು... ಮತ್ತೆ ತಪ್ಪು... ಮತ್ತೆ ಪಶ್ಚಾತಾಪ... ಮತ್ತೆ ತಪ್ಪು... ನಾಳೆ ಅವಳ ಕ್ಷಮೆ ಕೇಳಬೇಕೆಂದುಕೊಂಡೆ...

ಮರುದಿನ ನಾವು ಮತ್ತೆ ರಾಜಿ ಆದೆವು.

ಇನ್ನು ಮುಂದೆ ನಾನು ಹಾಗೆ ಬೀದಿಯಲ್ಲಿ ಝಾಡಿಸಿ ಒದೆಯಲ್ಲ ಎಂದೆ. ತಾನೂ ಇನ್ನು ಮುಂದೆ ಬೀದಿಯಲ್ಲಿ ಹೊಟ್ಟೆನೋವೆಂದು ತಕರಾರು ತೆಗೆಯಲ್ಲ ಎಂದಳು. ಎಲ್ಲಾ ಊಫಿ ಊಫಿ ಆಯಿತು. ಹದವಾಗಿ ಬಿಸಿ ನೀರು ಕಾಯಿಸಿದೆ. ಅವಳಿಗಾಗಿ ಹೊಸ ಸೋಪು, ಮೃದುವಾದ ಹೊಸ ಟವೆಲ್ ತಂದೆ. ನಿನಗಿವತ್ತು ನಾನೇ ಸ್ನಾನ ಮಾಡಿಸುತ್ತೇನೆ. ಅವಳು ಉಂಟಾದ ಅಮಿತಾನಂದವನ್ನು ಮುಚ್ಚಿಡಲಾರದೆ ಹೋದಳು. ಅವಳ ಮುಖದಲ್ಲಿ ಕುಣಿದ ಸಂಭ್ರಮವನ್ನು ನೋಡಬೇಕು ! ಲಜ್ಜೆಯನ್ನು ಬದಿಗಿಟ್ಟು ಸ್ನಾನಕ್ಕೆ ಅಣಿಯಾದಳು.

ಹೆಂಡತಿಗೆ ಸ್ನಾನ ಮಾಡಿಸುವುದು ಅಷ್ಟು ಸುಂದರ ಅನುಭವವಲ್ಲದಿರಬಹುದು. ಆದರೆ ನಲ್ಲೆಗೆ ಸ್ನಾನ ಮಾಡಿಸುವುದಂತೂ ಅತ್ಯಂತ ರೋಮಾಂಚನಕಾರಿ ಅನುಭವ ಎಂದರೆ ನೀವು ನನ್ನನ್ನು ಪೋಲಿ ಅನ್ನಬಹುದು. ಅನ್ನಿರಿ, ಜನರು ಎದೆಯೊಳಗೆ ಈಡೇರದ ಆಸೆಗಳ ಮೊತ್ತವನ್ನಿರಿಸಿಕೊಂಡು ಅಂಥ ಆಸೆಗಳನ್ನು

ಬೇರೆಯವರು ಈಡೇರಿಸಿಕೊಂಡಾಗ ಅವರನ್ನು ಪೋಲಿ ಎಂದು ಸನ್ಮಾನಿಸುವುದು ವಾಸ್ತವವಾದದ್ದೆ. ನನ್ನ ಪ್ರಿಯಾ ಎಷ್ಟು ರಸಿಕಳೆಂದರೆ ನಾನೆಷ್ಟು ಹೊತ್ತು ಸ್ನಾನ ಮಾಡಿಸಿದರೂ ಅವಳಿಗೆ ತೃಪ್ತಿಯೇ ಇಲ್ಲ. ಸ್ವಲ್ಪ ತಲೆಯ ಮೇಲೆ ಬಿಸಿ ನೀರು ಹಾಕಿ.... ಹಾಯ್ ಎನಿಸ್ತಿದೆ... ಛಿ... ಛಿ... ಅಲ್ಲೆಲ್ಲಾ ಮುಟ್ಟಬೇಡಿ. ಕಚಗುಳಿ ಇಟ್ಟಂತಾಗುತ್ತದೆ... ಪ್ಲೀಸ್... ಸ್ವಲ್ಪ ಬೆನ್ನಿನ ಮೇಲೆ ಸುಡುವ ನೀರು ಹಾಕಿ... ಯಾಕೋ ನೊಯ್ತಿದೆ. ಎಲ್ಲಾ ನಿಮ್ಮಿಂದಾನೆ ತೂಕ ಇಳಿಸ್ಕೊಳ್ಳಿ ಅಂದ್ರೆ ಕೇಳಲ್ಲ... ತಲೇನಲ್ಲಿ ಎಣ್ಣೆ ಜಿಡ್ಡು ಹಾಗೇ ಇದೆ. ಇನ್ನೊಂದಸ್ಸಾರಿ ಸೋಪು ಹಾಕಿ... ಹೀಗೆ ಏನೇನೋ ಮಾತನಾಡಿದಳು... ಅವಳ ನಿಂಬೆ ಮೈನಿಂದ ಬಿಸಿನೀರಿನ ಹಬೆ ತೆಳುವಾಗಿ ಹೊಮ್ಮುವುದನ್ನು ನೋಡುತ್ತಾ ನಿಲ್ಲುತ್ತೇನೆ. ಅವಳಿಗೆ ಮಾತು ನಿಲ್ಲಿಸಿ ಸುಮ್ಮನೆ ತಲೆ ಎತ್ತಿ ಎಲ್ಲವನ್ನೂ ನನಗೊಪ್ಪಿಸಿ ನಿರ್ಲಿಪ್ತವಾಗಿ ನಿಂತುಬಿಡುತ್ತಾಳೆ... ಹಂಡೆ ಬಿಸಿನೀರು ತೀರಿದ ಮೇಲೆ ಅವಳ ತಲೆಯನ್ನು ಒರೆಸುತ್ತೇನೆ. ನಂತರ ಅವಳ ಮೈ ಇಡೀ ಒರೆಸಿ ಬಟ್ಟೆ ಹಾಕಿ ಅವಳ ಮೈಬಣ್ಣಕ್ಕೆ ಹೊಂದುವ ಕ್ರೀಂ ಹಚ್ಚಿ ಒಮ್ಮೆ ಲಘುವಾಗಿ ಚುಂಬಿಸಿ ಹೊರಗೆ ಬಿಸಿಲಿನಲ್ಲಿ ನಿಂತು ಒಣಗಿಸಿಕೊ ಎನ್ನುತ್ತೇನೆ. ನಾನು ಸ್ನಾನಕ್ಕೆ ಅಣಿಯಾಗುತ್ತೇನೆ. ಅವಳೆಂಥ ಸ್ವಾರ್ಥಿ ಎಂದರೆ ಒಮ್ಮೆಯೂ ನನಗೆ ಸ್ನಾನ ಮಾಡಿಸುವ ಬಗ್ಗೆ ಯೋಚಿಸಿದ್ದಿಲ್ಲ, ಹೆಂಗಸರೇ ಹೀಗೆ. ಗಂಡಸರೆಂದರೆ ಅವರಿಗೆ ಆಟದ ಬೊಂಬೆಗಳು. ಗಂಡಸಿನಿಂದ ದೊರೆಯುವ ಎಲ್ಲ ಸುಖವೂ ಅದಕ್ಕೆ ಬೇಕು. ಆದರೆ ತಾವು ಗಂಡಸಿಗೆ ಕೊಡಬೇಕಾದ ಸುಖಗಳ ಬಗ್ಗೆ ಯೋಚಿಸುವುದಿಲ್ಲ. ನನಗೆ ನೀನೇ ಬಂದು ಸ್ನಾನ ಮಾಡಿಸು ಅಂತ ನಾನ್ಯಾಕೆ ಕೇಳಲಿ? ನನಗೂ ಸ್ವಾಭಿಮಾನವಿದೆ. ಕಳೆದ ಮುವ್ವತ್ತು ಸಂವತ್ಸರಗಳಲ್ಲಿ ನಾನು ಮಾಡಬಹುದಾದ ಅರವತ್ತು ಸ್ನಾನಗಳಲ್ಲಿ ಇವಳೇ ಇದ್ದಳಾ ದೊಣ್ಣೆ ನಾಯಕಿ ? ನನ್ನ ಕೆಲಸವನ್ನು ನಾನೇ ಮಾಡಿಕೊಳ್ಳುತ್ತೇನೆ. ನನಗೆ ಯಾವಳ ಹಂಗೂ ಬೇಡ. ನಾನು ರಪ್ಪನೆ ಬಾತ್ ರೂಮಿನ ಬಾಗಿಲು ಹಾಕಿಕೊಂಡಾಗ ಇವಳು ಬೀದಿಯಲ್ಲಿ ಮೈ ಒಣಗಿಸುತ್ತಾ ತನ್ನ ಪಳಪಳ ಹೊಳೆಯುವ ರೂಪ ಲಾವಣ್ಯಗಳಿಂದ ಬೀದಿಯ ಪಡ್ಡೆ ಹುಡುಗರನ್ನು ಸೆಳೆಯುತ್ತಾ ಲೈನ್‌ಹಾಕುತ್ತಾ ನಿಲ್ಲುತ್ತಾಳೆ.

ಇನ್ನೊಂದು ವಿಷಯವನ್ನು ಬಚ್ಚಿಟ್ಟಿರುವುದಕ್ಕೆ ವಾಚಕರು ನನ್ನನ್ನು ಕ್ಷಮಿಸಬೇಕು. ಅದನ್ನೂ ಇಲ್ಲಿ ಹೇಳಿಬಿಡುತ್ತೇನೆ. ಏಕೆಂದರೆ ನನ್ನ – ಪ್ರಿಯಾಳ ಹನಿಮೂನ್ ವಿಷಯ. ನನಗೆ ಮದುವೆಯಲ್ಲಿ ಅಷ್ಟು ವಿಶ್ವಾಸವಿಲ್ಲದಿದ್ದರೂ ಹನಿಮೂನ್‌ನಂಥ ವಿಷಯಗಳಲ್ಲಿ ಗಾಢ ವಿಶ್ವಾಸ, ಮದುವೆ ಮಾಡಿಕೊಂಡು ನಂತರ ಹನಿಮೂನಿಗೆ ಹೋದ ಹಲವು ಗೆಳೆಯರನ್ನು ಆ ಬಗ್ಗೆ ವಿಚಾರಿಸಿದ್ದೇನೆ. ದುಡ್ಡಿಗೆ ಪರದಾಡಿಕೊಂಡೋ, ಗಂಡ ಹೆಂಡತಿ ಜಗಳ ಮಾಡಿಕೊಂಡೋ, ವಸತಿ ಸಿಕ್ಕದೆಯೋ, ಇತರರ ಕಿರಿಕಿರಿಯಿಂದಲೋ ಅನೇಕ ಹನಿಮೂನುಗಳು ಹನಿ ಇಲ್ಲದೆ ಹೋದ ಬಗ್ಗೆ ನನ್ನ ಬಳಿ ಸ್ಪಷ್ಟ ಮಾಹಿತಿಗಳಿವೆ. ಆದ್ದರಿಂದಲೇ ನಾನು ನನ್ನ

ಗೆಳೆಯ – ವಾಚಕಮಹಾಶಯರಿಗೆ ವಿವಾಹರಹಿತ ಹನಿಮೂನನ್ನು ಶಿಫಾರಸ್ಸು ಮಾಡುವುದು. ಈ ಕಾಲದಲ್ಲಿ ಇಂಥ ಸತ್ಯ – ಪ್ರಾಮಾಣಿಕತೆ ಉಳ್ಳ ಶಿಫಾರಸ್ಸನ್ನು ಯಾರು ಕೇಳುತ್ತಾರೆ ? ಅದಿರಲಿ.... ನಾನು–ಪ್ರಿಯಾ ಮಧುಚಂದ್ರವನ್ನು ಸಿಂಪಲ್ಲಾಗಿ ಆಚರಿಸಬೇಕೆಂದು ನಂದಿಬೆಟ್ಟಕ್ಕೆ ಹೋಗಿ ಭರ್ಜರಿಯಾಗಿ ಆಚರಿಸಿದೆವು. ವಿವರಗಳು ಬೇಡ. ಒಟ್ಟಿನಲ್ಲಿ ಯಶಸ್ವೀ ಮಧುಚಂದ್ರ. ಅವಳು ಸ್ವಲ್ಪ ಚಂಚಲಚಿತ್ತೆ ಎಂದು ನನಗೆ ಅನುಮಾನವೂ ಮೂಡಿತು. ನನ್ನ ಕಣ್ಣು ತಪ್ಪಿಸಿ ಅವಳು ಯೆಜ್ಡಿ, ಸುಜುಕಿ, ಮಾರುತಿ ಕಾರುಗಳತ್ತ ಕದ್ದು ಕದ್ದು ನೋಡಲು ಯತ್ನಿಸಿದರೆ ನನಗೆ ತಿಳಿಯದೆ? ನನಗೂ ಅವಳನ್ನು ಪಾತಿವ್ರತ್ಯದಿಂದ ಬಂಧಿಸಬೇಕಿನಿಸುವುದಿಲ್ಲ. ಪ್ರತಿಯೊಬ್ಬ ಪತಿವ್ರತೆಯಲ್ಲೂ ವಿಲಾಸಿನಿಯೊಬ್ಬಳು ಪ್ರಕಟವಾಗಲು ಕಾಯುತ್ತಾ ನಿಂತಿರುತ್ತಾಳೆ. ತಮ್ಮೊಳಗೆ ಉಸಿರುಗಟ್ಟಿ ಸಾಯುತ್ತಿರುವ ದ್ರೌಪದಿಯನ್ನು ಹತ್ತಿಕ್ಕುತ್ತಾ ಪತಿವ್ರತೆ ಸೀತೆಯ ಸೋಗಿನಲ್ಲಿ ಸುಳ್ಳುಂಪಳ್ಳೆ ಬದುಕುವ ಹೆಣ್ಣುಗಳನ್ನು ಕಂಡು ವಿಷಾದಪಟ್ಟಿದ್ದೇನೆ. ನನ್ನ ಪ್ರಿಯಾಳಿಗೆ ಬೇರೊಬ್ಬ ಸಂಗಾತಿ ನೋಡಲು – ಕೂಡಲು ಇಷ್ಟವಾದರೆ ಬೇಡವೆನ್ನಲು ನಾನು ಯಾರು? ಸೀತೆಯನ್ನು ಗಡೀಪಾರು ಮಾಡಿ ದ್ರೌಪದಿಯ ಮೇಲ್ಪಂಕ್ತಿ ಹಾಕಿರೆಂಬುದೇ ಸ್ತ್ರೀಸಮೂಹಕ್ಕೆ ನನ್ನ ಜೀವನ ಸಂದೇಶವಾಗಿರುವಾಗ ? ಬರುವಾಗ ಕೇಳಿದೆ :

"ನಿನಗೆ ಯಾರ ಬಗ್ಗೆಯಾದರೂ ಪ್ರೀತಿಯುಂಟೊ ?"

"ನಿಮಗೆ ?"

"ಓಹೋ... ಅನೇಕರ ಬಗ್ಗೆ....! ರಾಜರಾಜೇಶ್ವರಿ ಛತ್ರದ ಪಕ್ಕದಲ್ಲಿ ಎಂಟೂಮುಕ್ಕಾಲಿಗೆ ತಪ್ಪದೆ ಬರುತ್ತಾಳಲ್ಲ.... ಆ ಲಿಪ್‌ಸ್ಟಿಕ್... ಕಚ್ಚಿ ಶೈಲಿಯ ಮಾಡ್‌ಡ್ರೆಸ್... ಅವಳು ಬಸ್‌ಸ್ಟಾಪಿನಲ್ಲಿ ವಿವೇಕಾನಂದ ಕಾಲೇಜಿನ ಹತ್ತಿರ ಒಂಬತ್ತಕ್ಕೆ ಸರ್‍ಯಾಗಿ ನಿಲ್ತಾಳಲ್ಲ.... ಬೇಬಿ ಇಂದಿರಾ ಥರಾ ಕಾಣಿಸೋ ಹುಡುಗಿ.....ಅವಳು.... ಮತ್ತೆ ವಿಜಯ ಬ್ಯಾಂಕಿನ ಕೌಂಟರಿನಲ್ಲಿ ಕುಳಿತು ಸದಾ ಉದ್ದಿನವಡೆ ತರಿಸಿಕೊಂಡು ತಿನ್ತಾ ಉದ್ದಿನವಡೆ ಥರಾನೇ ಇದ್ದಾಳಲ್ಲ.... ಅವಳು.... ಮತ್ತೆ..... ಜೆ.ಸಿ.ರೋಡ್‌ನಲ್ಲಿ..."

" ಸಾಕು ನಿಲ್ಲಿ.... ನೀವು ಮಾನಗೆಟ್ಟ ಗಂಡಸು."

"ಇದೇ ನನಗೆ ಹಿಡಿಸೋದಿಲ್ಲ..... ಪತಿವ್ರತೆ ನಾಟಕ ಅಂದ್ರೆ ನನಗೆ ಆಗೋದಿಲ್ಲ.... ನೀನೇನು ಕಡಿಮೆ? ನಂದಿಬೆಟ್ಟದಲ್ಲಿ ಯಾರಾರಿಗೆ ಡವ್ ಹಾಕ್ದೆ ನಾನು ಹೇಳ್ಲಾ ? ಯಮಹಾ ಕಡೆಗೇ ಯಾಕೆ ನೋಡ್ತಿದ್ದೆ ? ಮಾರುತಿ ಕಾರನ್ನು ತಿಂದು ಕೊಳ್ಳೋ ಹಾಗೆ ದಿಟ್ಟಿಸ್ತಿದ್ದೆ.... ನೋಡೆ ಪ್ರಿಯಾ ಸಂಬಂಧಗಳಲ್ಲಿ ನಿಯತ್ತು ಇರಬೇಕು. ಆದರೆ ಬೋಳೆತನ ಇರಬಾರದು...."

“ನಾನೇನೂ ಅಂಥವಳಲ್ಲ” ಮಾತು ಮುಗಿಸಿದಳು. ಹನಿಮೂನ್‌ನಲ್ಲಿ ಬೇರೆ ಮಾತೇಕೆ ಅಂತ ನಾನೂ ತುಂಡರಿಸಿದೆ.

* * *

ಪ್ರಿಯ ಓದುಗ, ಸಿಎಎಕ್ಸ್ ತೊಂಬೈಳು ಅರವತ್ತು ಎಂದು ಹಿಂದೆ ಮುಂದೆ ನಂಬರು ಬರೆಸಿಕೊಂಡ ಬಜಾಜ್ ಕಂಪನಿಯ ಮೂರು ಗೇರಿನ ‘ಪ್ರಿಯಾ’ ಸ್ಕೂಟರ್ ಒಂದನ್ನು ನನ್ನ ಕಥಾನಾಯಕಿ ಮಾಡಿಕೊಂಡಿರುವುದರಿಂದ ಮೂಗು ಮುರಿಯಬೇಡ. ಯಂತ್ರದ ಜತೆ ಸಂಬಂಧ ಇರಿಸಿಕೊಂಡಿದ್ದಾನೆಂದು ಆಡಿಕೊಳ್ಳಬೇಡ. ಇದೊಂದು ಜೀವಂತವಾದ ಹೆಣ್ಣು. ಈ ಪ್ರಿಯಳಿಗೆ ಅಸಲಿ ಭಾವನೆಗಳಿವೆ. ಖಚಿತವಾದ ಸ್ಪಂದನಗಳಿವೆ. ಎರಡು ಪುಟಾಣಿ ಚಕ್ರಗಳ ಮೇಲೆ ಊರಿನ ಬೀದಿ ಬೀದಿ ಸುತ್ತಿ ನನ್ನ ಗುರಿಗಳನ್ನು ಗಡಿಬಿಡಿಗಳನ್ನೂ ಗೆದ್ದುಕೊಡುತ್ತಾಳೆ. ಅವಳು ಖಾಯಿಲೆ ಬಿದ್ದಾಗ ನನಗೆ ಅವಳು ಮಗು. ದ್ವಿಚಕ್ರ ಚಿಕಿತ್ಸಾಲಯದ ನವಾಬ್ ಹತ್ತಿರ ರಿಪೇರಿಗೆ ಕರೆದುಕೊಂಡು ಹೋಗುವಾಗ ಅವಳು ನನ್ನ ಮಗಳು. ನನ್ನ ತೊಡೆಗಳ ಸಂದಿಯಲ್ಲಿ ಸಿಕ್ಕಿಸಿಕೊಂಡು ಓಡಾಡುವಾಗ ಅವಳು ನನ್ನ ನಲ್ಲೆ. ಕನಸಿಗೆ ಬರುತ್ತಾಳೆ. ಮಾತನಾಡುತ್ತಾಳೆ. ಜಗಳ ಕಾಯುತ್ತಾಳೆ. ಒಂದಾಗುತ್ತಾಳೆ. ರಮಿಸುತ್ತಾಳೆ. ಮುನಿಸಿಕೊಳ್ಳುತ್ತಾಳೆ. ಮೌನಿಯಾಗುತ್ತಾಳೆ. ಹಠ ಮಾಡುತ್ತಾಳೆ. ಅಳುತ್ತಾಳೆ. ಕೊರಗುತ್ತಾಳೆ. ಕುಣಿಯುತ್ತಾಳೆ. ರಸ್ತೆಯಲ್ಲೇ ತೂಕಡಿಸುತ್ತಾಳೆ. ಖಾಯಿಲೆ ಬೀಳುತ್ತಾಳೆ. ಓಡುತ್ತಾಳೆ. ನಿಲ್ಲುತ್ತಾಳೆ. ಜಾರುತ್ತಾಳೆ. ಕುಪ್ಪಳಿಸುತ್ತಾಳೆ. ಸದ್ದು ಮಾಡುತ್ತಾಳೆ. ಮುಖ ತಿರುಗಿಸಿ ಮುನಿಸು ತೋರುತ್ತಾಳೆ. ಕುಡಿನೋಟ ಬೀರುತ್ತಾಳೆ. ಹೇಳಯ್ಯ ಮಿತ್ರ – ಇವಳು ಹೆಣ್ಣಲ್ಲವೆ ?

ನಿಜವಾಗಿಯೂ ಪ್ರಿಯಾ ನನ್ನ ಒಂಟಿತನವನ್ನು ಕೊಂದಿದ್ದಾಳೆ. ನಡೆಯಲಾರದ ನಡೆಯಬಾರದ ಹಾದಿಗಳನ್ನು ನನ್ನೊಂದಿಗೆ ಸವೆಸಿದ್ದಾಳೆ. ನನಗಾಗಿ ತಾನು ಶ್ರಮಪಟ್ಟು ನನ್ನನ್ನು ಹೊತ್ತು ಸಾಗಿಸಿದ್ದಾಳೆ. ಅವಳ ಪಾದಗಳಿಗೆ ಎಷ್ಟು ಕಲ್ಲು, ಮುಳ್ಳು, ಹೇಸಿಗೆ, ಕೆಸರು ತಾಕಿದರು ಅವು ನನಗೆ ತಾಕದ ಹಾಗೆ ಕಾಪಾಡಿದ್ದಾಳೆ. ನನ್ನ ಅವಳ ನಡುವೆ ಎಷ್ಟೇ ಭಿನ್ನಾಭಿಪ್ರಾಯಗಳಿರಲಿ ಅವಳು ನನ್ನ ಜೀವ. ನನ್ನ ದಿಕ್ಕುಗಳು, ದಾರಿಗಳು, ಉದ್ವೇಗಗಳು, ಅರ್ಜೆಂಟುಗಳು, ಲಹರಿಗಳು ಎಲ್ಲವೂ ಅವಳಿಗೆ ಗೊತ್ತು. ಅವಳೆಂಥ ತ್ಯಾಗಮಯಿ ಎಂದರೆ ನಾನು ಅವಳೊಬ್ಬಳನ್ನೇ ಬಿಟ್ಟು ಥೇಟರಿನ ಒಳಗೆ ಹೋಗಿ ಸಿನಿಮಾ ನೋಡಿ ಬರುವವರೆಗೆ ಪಾರ್ಕಿಂಗ್ ಜಾಗದಲ್ಲಿ ನಿಂತು ಬರುವವರೆಗೂ ನಿರೀಕ್ಷೆ ಮಾಡುತ್ತಾ ನಿಲ್ಲುತ್ತಾಳೆ. ಒಮ್ಮೆಯೂ ನನಗೆ ಸಿನಿಮಾ ತೋರಿಸೆಂದು ಹಠ ಮಾಡಿದ್ದಿಲ್ಲ. ಅವಳ ದೇಹ ಎಷ್ಟು ಸೆನ್ಸಿಟಿವ್ ಎಂದರೆ ಎಲ್ಲಾದರೂ ಬಿಸಿಲಲ್ಲಿ ಅನಿವಾರ್ಯವಾಗಿ ಅರ್ಧಗಂಟೆ ನಿಲ್ಲಿಸಿದರೆ ಅವಳಿಗೆ ಮೈ ಎಲ್ಲಾ ಬಿಸಿಯಾಗಿ ಜ್ವರ ಬಂದು ಬಿಡುತ್ತದೆ.

ಈಗಾಗಲೇ ಮುಖದಲ್ಲಿ ಅಲ್ಲಲ್ಲಿ ಮೊಡವೆಗಳೂ ಕಾಣಿಸಿಕೊಂಡಿವೆ. ನವಾಬರನ್ನು ಕೇಳಿದರೆ ರೀಪೈಂಟ್ ಮಾಡಿಸಿಬಿಡಿ ಸಾರ್ ಅನ್ನುತ್ತಾರೆ. ಹಾಗಾದರೆ ನನಗೂ ಪ್ರಿಯಾಗೂ ವಯಸ್ಸಾಗುತ್ತಿದೆಯೆ? ನಾವು ಮುದುಕರಾಗುತ್ತಿದ್ದೇವೆಯೆ ? ಇದನ್ನು ನೆನೆದರೇ ಭಯವಾಗುತ್ತದೆ.

ಅವಳನ್ನೂ ಇತ್ತೀಚೆಗೆ ಯಾವುದಾವುದೋ ಭೀತಿ ಆವರಿಸಿವೆ. ಪೋಲಿ ಬೈಕುಗಳು, ತುಡುಗು ಸುಜುಕಿಗಳು ಅವಳನ್ನು ಬೇಕೆಂತಲೇ ಟಚ್ ಮಾಡುವುದು. ಲಘುವಾಗಿ ಚುಂಬಿಸುವುದು. ಇಂಥ ಬೀದಿ ಕಾಮಣ್ಣನ ಕೆಲಸದಲ್ಲಿ ತೊಡಗಿವೆಯಂತೆ. ಅವಳೇ ಒಮ್ಮೆ ಆನಂದರಾವ್ ಸರ್ಕಲಿನಲ್ಲಿ ಈ ದೂರು ಹೇಳಿದಳು. ಸಿಟಿಬಸ್ಸಿನಲ್ಲಿ ರಶ್ ಇದ್ದಾಗ ಹೆಣ್ಣುಗಳಿಗೆ ಮೈ ತಾಕಿಸುವ ಪೋಲಿ ಗಂಡಸರಂತೆ ಈ ಯಜ್ಡಿಗಳೂ, ಬುಲೆಟ್ಟುಗಳೂ ಇವಳನ್ನು ಚುಡಾಯಿಸುತ್ತವಂತೆ. ಹಿಂದಿನಿಂದ ಬಂದು ನಯವಾಗಿ ಗುದ್ದುವುದು, ಪಕ್ಕದಿಂದ ಬಂದು ಇವಳ ಸೊಂಟವನ್ನು ಸವರುವುದು, ಜೆ.ಸಿ.ರೋಡಿನಲ್ಲಿ ಓವರ್‌ಟೇಕ್ ನೆಪದಲ್ಲಿ ಹತ್ತಿರಕ್ಕೆ ಬಂದು ಹೆದರಿಸುವುದು ಇದೆಲ್ಲ ಮಾಡಿದರಂತೆ. ಇಂಥವನ್ನು ಅವಾಯ್ಡ್ ಮಾಡುವುದು ಹೇಗೆಂದು ಮೊದಲು ನನಗೂ ಹೊಳೆದಿರಲಿಲ್ಲ. ಮೈ ಮೇಲೆ ಬೀಳುತ್ತಾ ಸಾವನ್ನೂ – ಕಾಮವನ್ನೂ ಒಟ್ಟಿಗೇ ಇಲ್ಲವೇ ಪರ್ಯಾಯವಾಗಿ ನೆನಪಿಗೆ ತರುವ ಬೆನ್ನ ಹಿಂದಿನ ಆಕ್ರಮಣಶೀಲ ಚಾಲಕರಿಗಾಗಿ ನಾನು ಕೊನೆಗೆ ಅವಳ ಬೆನ್ನು ಮೇಲೆ "ಸಾವು" ಎಂದು ಬರೆದೆ. ಓದಿದವರು ಅದೇನೆಂದು ಯೋಚಿಸಲಿಕ್ಕಾದರೂ ಬ್ರೇಕು ಹಾಕಿ ವೇಗ ಕಡಿಮೆ ಮಾಡುತ್ತಾರಾದ್ದರಿಂದ ಈಗ ಪ್ರಿಯಳ ಮೈಮೇಲೆ ಬೀಳುವವರು ತುಸು ಕಡಿಮೆಯಾಗಿದ್ದಾರೆ.

.....ಬರೆದದ್ದೇನೋ ಆಯಿತು. ಆದರೆ ಈ ಸಾವು ನನ್ನನ್ನು ಪ್ರಿಯಳನ್ನೂ ಭಾರೀ ಚರ್ಚೆಗೀಡುಮಾಡಿದೆ. ಇಂಥ ಘೋರ ಹೆಸರನ್ನು ನನ್ನ ಸ್ಟೆಪ್ನಿ ಕವರ್ ಮೇಲೆ ಯಾಕೆ ಬರೆದೆ? ಅಳಿಸಿಹಾಕು... ನನಗೆ ತುಂಬಾ ಮುಜುಗರವಾಗುತ್ತಿದೆ. ಎಲ್ಲರೂ ನನ್ನನ್ನು 'ಪ್ರಿಯ' ಅನ್ನುವುದರ ಬದಲು 'ಸಾವು', 'ಸಾವು' ಎಂದು ಕರೀತಾರೆ – ಮೊನ್ನೆ ಭಾನುವಾರ ಮೈ ತೊಳೆಯುವಾಗ ಅವಳು ಗೊಣಗಿದಳು. ಅವಳನ್ನು ಸಮಾಧಾನ ಮಾಡಲು ಹೆಣಗಿದೆ. "ನೋಡು ನನ್ನೊಳಗೆ ತೀರ ಆಳದಲ್ಲಿ ಸಾವಿನ ಭಯಗಳಿವೆ. ನಾನಾ ರೂಪದಲ್ಲಿ ಸಾವು ಬೆನ್ನಟ್ಟಿ ಬರುತ್ತಿರುವ ಭೀತಪ್ರಜ್ಞೆಯಿಂದ ನರಳುತ್ತಿರುತ್ತೇನೆ. ಸಣ್ಣ ಪುಟ್ಟ ಖಾಯಿಲೆ ಬಂದರೂ ಸತ್ತೇಹೋದೆ ಎನಿಸಿಬಿಡುತ್ತದೆ. ಈ ನಡುವೆ ನೀನೇ ನೋಡಿದೆಯಲ್ಲ– ಲಾಲ್‌ಬಾಗ್ ರಸ್ತೆಯಲ್ಲಿ ಲಾರಿ ಕೆಳಗೆ ತೂರಿದ ರಿಕ್ಷಾದವನ ಹೆಣ, ಹಡ್ಸನ್ ವೃತ್ತದಲ್ಲಿ ಡಬ್ಬಲ್ ಡೆಕ್ಕರಿಗೆ ಸಿಕ್ಕಿ ಸತ್ತ ಮೊಪೆಡ್ ಹುಡುಗ, ಎಂಬತ್ತಡಿ ರಸ್ತೆಯಲ್ಲಿ ಹಾಲಿನ ಟ್ಯಾಂಕರಿನಡಿ ಜೀವ ತೆತ್ತ ಲೂನಾ ಹುಡುಗಿ – ಇಂಥವು ಸಾವಿನ ಅನುಭವವನ್ನು ಹೆಪ್ಪುಗಟ್ಟಿಸಿವೆ. "ಸಾವು" ಅಂತ ಬರೆದ ಮೇಲೆ ಒಂದಿಷ್ಟಾದರೂ ನಾನು ಈ ಭೀತಪ್ರಜ್ಞೆಯನ್ನು ಮೀರಲು

ಸಾಧ್ಯವಾಗಿದೆ. ಈ ದೈತ್ಯ ನಗರದಲ್ಲಿ ನಮ್ಮನ್ನು ಸುಮ್ಮಸುಮ್ಮನೆ ಬೆನ್ನಟ್ಟಿ ಬರುವ ವಾಹಗಳವರು ತುಸುವಾದರೂ ಜಾಗರೂಕರಾಗುತ್ತಾರೆ. ಬ್ರೇಕ್ ನೆನಪಿಸಿಕೊಳ್ಳುತ್ತಾರೆ. ಇಷ್ಟಾದರೂ ಎಷ್ಟೋ ಒಳಿತಾದಂತಲ್ಲವೇ?"

...ಅವಳು ಸುಮ್ಮನೆ ಕೇಳಿಸಿಕೊಂಡಳು. ಅವಳೇನು ತೀರ ಜಾಣೆಯಲ್ಲ. ಸಾಹಿತ್ಯ–ಗೀಯಿತ್ಯ ಓದಿಕೊಂಡವಳಲ್ಲ. ದೊಡ್ಡ ದೊಡ್ಡ ಮಾತುಗಳೂ ಅರ್ಥವಾಗುವುದಿಲ್ಲ. ಆದ್ದರಿಂದ ನಾನುದೊಡ್ಡ ದೊಡ್ಡ ಮಾತುಗಳನ್ನಾಡಿ ಅವಳ ಮುಂದೆ ಬುದ್ಧಿವಂತನೆಂದು ತೋರಿಸಿಕೊಳ್ಳುತ್ತಿರುತ್ತೇನೆ. ಅವಳು ಈ ಚರ್ಚೆಯನ್ನು ಸರಳವಾಗಿ ಮುಗಿಸಿದಳು. "ಏನೋಪ್ಪ ನೀವು ಮನುಷ್ಯರು ಸಾವಿನಿಂದ ತಪ್ಪಿಸಿಕೊಳ್ಳೋಕೆ ಏನೇನೋ ಆಟ ಆಡ್ತೀರಿ. ನಡುರಾತ್ರಿಯಲ್ಲಿ ಹೆಂಡತಿ ಮಗು ರಾಜ್ಯ ಬಿಟ್ಟು ಕಾಡಿಗೆ ಹೋಗ್ತಿರಿ. ಧರ್ಮದ ಮೂಲಕ, ವಿಜ್ಞಾನದ ಮೂಲಕ ಯಾವುದಾವುದೋ ದಾರಿಗಳ ಮೂಲಕ ಸಾವನ್ನು ಗೆಲ್ಲಲ್ಲು ಹವಣಿಸುತ್ತೀರಿ. ಆದರೆ ಗೆಲ್ಲೋಕೆ ಸಾಧ್ಯವಿಲ್ಲ. ಸುಮ್ಮನೆ ಸಾವು ಬಂದಾಗ ನಮ್ಮನ್ನು ಅದಕ್ಕೆ ಒಪ್ಪಿಸಿಕೊಂಡರಾಗುವುದಿಲ್ಲವೆ ? ಪ್ರಶ್ನಾತೀತವಾದ ವಿಷಯಗಳನ್ನು ಪ್ರಶ್ನೆ ಮಾಡಿ ಏನು ಲಾಭ ? ಸಾವಿರ ವರ್ಷ ಭೂಮಿಗಂಟಿಕೊಂಡಿರಬೇಕೆನ್ನುವ ಚಪಲ ಯಾಕೆ ?"

...ನಾವು ನಮ್ಮ ಸಮಾಗಮದ ಐದನೇ ವಾರ್ಷಿಕೋತ್ಸವದ ಸವಿನೆನಪನ್ನು ಆಚರಿಸಲು ನಂದಿಬೆಟ್ಟಕ್ಕೆ ಹೊರಟಿದ್ದೆವು. ಅವಳ ಮಾತುಗಳೇ ನನ್ನ ಕಿವಿಯೊಳಗೆ ಅನುರಣಿಸುತ್ತಿದ್ದವು. ಈ ಪ್ರಿಯಾಳಿಗೊಂದು ಗಡ್ಡ ಅಂಟಿಸಿ ಒಂದು ಬ್ಯಾಗು ಹಾಕಿದರೆ ಇವಳೂ ಬುದ್ದೀಜೀವಿ ಎನಿಸಿಕೊಳ್ಳಬಲ್ಲಳು ಅನಿಸಿತು. ನಾನು ಬಹಳ ನಿಧಾನವಾಗಿ ಓಡಿಸುತಿದ್ದೆ. ಬೆಳಿಗ್ಗೆ ಅವಳ ಹೊಟ್ಟೆಗೆ ಆರು ಲೀಟರು ಪೆಟ್ರೋಲನ್ನು, ಕಾಲು ಲೀಟರ್ ಟುಟಿ ಆಯಿಲ್ಲನ್ನೂ ಅವಳಿಗೆ ಪ್ರಿಯವಾದ ರಾಜೀವ ಫಿಲ್ಲಿಂಗ್ ಸ್ಟೇಶನ್‌ನಲ್ಲೇ ತುಂಬಿಸಿದ್ದೆ. ಟಾಪ್‌ಗೇರಿನಲ್ಲಿ ಮುವ್ವತ್ತು ನಲವತ್ತು ಕಿಲೋಮೀಟರುಗಳ ವೇಗದಲ್ಲಿ ಸರಳ ರೇಖೆಯಂತೆ ಚಲಿಸುತ್ತಿದ್ದಳು. ನಗರದ ಧಾವಂತಗಳನ್ನು ದಾಟಿ ಗದ್ದೆ ಬಯಲಿಗೆ ಬಂದಿದ್ದೆವು. ಉಲ್ಲಾಸವನ್ನು ಹೊತ್ತು ತಂದ ತಂಗಾಳಿ ಹಾಯೆನಿಸಿತು. ಹೆದ್ದಾರಿಯಲ್ಲಿ ತೇಪೆಗಳು ಅಷ್ಟಾಗಿ ಇರಲಿಲ್ಲ. ಅಪರೂಪಕ್ಕೆ ಹಾದು ಹೋಗುತ್ತಿದ್ದ ವಾಹನಗಳಿಗೆ ಸಾಕಷ್ಟು ದಾರಿ ಬಿಟ್ಟು ಎಡಬದಿಯಲ್ಲಿ ನಾವು ಸಾಗುತ್ತಿದ್ದೆವು. ಮನಸ್ಸು ಗಂಭೀರವಾಗಿ ಯೋಚಿಸುತ್ತಿತ್ತು. ಈ ಪ್ರಿಯಾ ನನ್ನ ಬಾಳಿಗೆ ಏಕೆ ಬಂದಳು ? ಇದೆಲ್ಲ ಯಾವ ಅನುಬಂಧ ? ಇಂಥ ಸೆನ್ಸಿಟಿವ್ ಹೆಣ್ಣನ್ನ ಯಾರಾದರೂ ಬರೇ ಯಂತ್ರ ಎನ್ನಲು ಸಾಧ್ಯವೆ ? "ಏನಂತ ಗಾಢ ಯೋಚನೆ...? ರಸ್ತೆ ಮೇಲೆ ನಿಗಾ ಇರಲಿ" ಅವಳು ನನ್ನನ್ನು ಎಚ್ಚರಿಸಿದಳು "ಏನಿಲ್ಲ. ನಮ್ಮಿಬ್ಬರ ಸಂಬಂಧವನ್ನೇ ಕುರಿತು ಯೋಚಿಸುತ್ತಿದ್ದೇನೆ" ಎಂದೆ. ಅವಳೂ

ಯೋಚಿಸಲಾರಂಭಿಸಿದಳೂಂತ ಕಾಣುತ್ತೆ. ಸುಮ್ಮನಾಗಿಬಿಟ್ಟಳು. ನಂದಿಬೆಟ್ಟದ ಬುಡ ತಲುಪುವವರೆಗೆ ನಮ್ಮ ಮಧ್ಯೆ ಮೌನ ಆವರಿಸಿತು. ವಿಚಿತ್ರ ಬಗೆಯ ಯಾತನಾಮಯವಾದ ಮೌನ.

ಬೆಟ್ಟ ಸಮೀಪಿಸುತ್ತಿದ್ದಂತೆ ಒಂದು ತೊಂದರೆ ಎದುರಾಯಿತು. ಒಂದು ಪುಂಡು ಹುಡುಗರ ಹಿಂಡು ಮಾರುತಿ ಕಾರಿನಲ್ಲಿ ಹೋಗುತ್ತಿತ್ತು. ಕಾರಿನ ಒಳಗೆ, ಟಾಪಿನ ಮೇಲೆ, ಬಾನೆಟ್ ಮೇಲೆ ಕುಳಿತಿದ್ದ ಆ ಧಾಂಡಿಗರು ಕೈಯಲ್ಲಿ ಬೀರಿನ ಶೀಷೆ ಹಿಡಿದುಕೊಂಡು ಕುಡಿಯುತ್ತಾ ಕೇಕೆ ಹಾಕುತ್ತಿದ್ದರು. ವಿದೇಶಿ ಸಂಗೀತ ಕಾರಿನೊಳಗಿಂದ ತೂರಿ ಬರುತ್ತಿತ್ತು. ನನ್ನನ್ನು ಪ್ರಿಯಾಳನ್ನು ಕಂಡು ಚುಡಾಯಿಸತೊಡಗಿದರು. ಪ್ರಿಯ ಹೆದರಿಬಿಟ್ಟಳು. "ಅವರೇನು ಮಾಡುವುದಿಲ್ಲ. ಕೆಣಕಹೋಗಬಾರದು. ಕೆಣಕಿದರೆ ಜಾಸ್ತಿಯಾಗುತ್ತದೆ – ರಗಳೆ, ನಕ್ಕು ಸುಮ್ಮನಾಗಬೇಕು. ಅವರ ವರ್ತನೆ ಅತಿಯಾದಾಗ ಅವರೇ ಫಲ ಅನುಭವಿಸುತ್ತಾರೆ. ಸುಮ್ಮನೆ ನೋಡುತ್ತಿರು" ಎಂದೆ. "ಹೇಗೆ ಸಾಧ್ಯ ? ಕಾರನ್ನು ಅಷ್ಟು ಹತ್ತಿರಕ್ಕೆ ತರುತ್ತಿದ್ದಾನೆ. ಗೇಲಿ ಮಾಡುತ್ತಿದ್ದಾನೆ. ಎಲ್ಲಿ ಟಚ್ ಮಾಡುತ್ತಾನೋ ಎಂದು ಭಯವಾಗ್ತಿದೆ. ನಾನೂ ಒಂದು ಹೆಣ್ಣಲ್ಲವಾ ? ಘಟ್ಟದ ದಾರಿ ಬೇರೆ. ಏನಾದರೂ ಆದರೆ ?" ಅವಳು ಕಂಗಾಲಾದಳು.

ನನಗೂ ಭಯವಾಗತೊಡಗಿತು. ಆ ತುಡುಗು ದನಗಳ ವರ್ತನೆ ವಿಪರೀತವಾಗ ತೊಡಗಿತು. ಮೊದಲೇ ಹಾವಿನಂತೆ ಅಂಕುಡೊಂಕಾಗಿ, ಕಡಿದಾಗಿದ್ದ ರಸ್ತೆಯಲ್ಲಿ ಕಾರನ್ನು ಮತ್ತಷ್ಟು ಅಂಕುಡೊಂಕಾಗಿ ಓಡಿಸುತ್ತಿದ್ದರು. ಮುಂದೆ ಹೋಗಲಿ ಎಂದು ನಾವು ನಿಂತರೆ ಅವರೂ ನಿಲ್ಲುತ್ತಿದ್ದರು. ಕೋಪತಾಪಗಳು ನಡೆಯದ ನಿರ್ಜನ ಜಾಗ, ನಮ್ಮವರು ನಾಲ್ಕು ಜನ ಇದ್ದಾಗ ತಾನೇ ಕೋಪ ಬರುವುದು? ಇನ್ನೇನು ಗುದ್ದಿಯೇ ಬಿಟ್ಟ ಅನ್ನುವಷ್ಟರಮಟ್ಟಿಗೆ ಹತ್ತಿರಕ್ಕೆ ಕಾರನ್ನು ತರುತ್ತಿದ್ದ. ಎಲ್ಲರೂ ಹೋ ಎಂದು ಅರಚುತ್ತಿದ್ದರು. ಮತ್ತೆ ಹಿಂದೆ ಸರಿಯುತ್ತಿದ್ದರು. ಪ್ರಿಯಾ ಗಾಬರಿಯಾದಳು. ಅವಳು ನಡುಗುತ್ತಿದ್ದುದು ಗೋಚರವಾಯಿತು. ಹುಡುಗಾಟ ಅತಿಯಾಗಿ ಅಪತ್ತು ಬಂತು. ಕಾರು ನಿಯಂತ್ರಣ ತಪ್ಪಿ ನಮಗೆ ಢಿಕ್ಕಿ ಹೊಡೆದು ನಂತರ ಪ್ರಪಾತಕ್ಕೆ ಇಳಿಯಿತು. ಯಾರು ಏನಾದರೋ, ಕಾರಿನಿಂದ ಸಂಗೀತ ಮಾತ್ರ ಅದೇ ವೇಗದಲ್ಲಿ ಹೊರ ಹೊಮ್ಮುತ್ತಿತ್ತು.

ನಾನೂ–ಪ್ರಿಯಾ ಅಷ್ಟು ದೂರ ಹೋಗಿ ಬಿದ್ದೆವು. ನನ್ನ ಬೆರಳುಗಳು ಮುರಿದಿದ್ದವು. ಮುಂಗೈಗಳೆರಡೂ ಪೆಟ್ಟು ತಿಂದಿದ್ದವು. ಮಂಡಿ ಹತ್ತಿರ ಪ್ಯಾಂಟು ಹರಿದು ಹೋಗಿ ಗಾಯವಾಯಿತು. ಭುಜ, ಕೆನ್ನೆಯ ಮೇಲೆಲ್ಲಾ ತರಚುಗಾಯ, ಪ್ರಿಯಾ ತಲೆಕೆಳಕಾಗಿ ಬಿದ್ದಿದ್ದಳು. ಅವಳನ್ನು ಎತ್ತಿ ನಿಲ್ಲಿಸಲು ನನಗೆ ಶಕ್ತಿ ಇರಲಿಲ್ಲ. ಬೆಳಿಗ್ಗೆ ಸೇವಿಸಿದ್ದ ಪೆಟ್ರೋಲನ್ನೆಲ್ಲಾ ವಾಂತಿ ಮಾಡಿದ್ದಳು. ಮರಕ್ಕೆ ಗುದ್ದಿದ್ದಳೂಂತ ಕಾಣುತ್ತೆ.

ಮುಖವೆಲ್ಲಾ ಸೊಟ್ಟಗಾಗಿತ್ತು. ನಾನು ಪ್ರೀತಿಯಿಂದ ಕೊಡಿಸಿದ್ದ ಕನ್ನಡಿ ಚೂರುಚೂರಾಗಿತ್ತು. ಬಲಗೈ ಮುರಿದಿತ್ತು. ಹೊಟ್ಟೆಯ ಮೇಲೆ ಜಜ್ಜಿದ ಗಾಯವಾಗಿತ್ತು. ಬೆನ್ನಿನ ಮೂಳೆ ಮುರಿದಿತ್ತು. ರವಿಕೆ ಎಲ್ಲಾ ಹರಿದಿತ್ತು. ತೆವಳಿಕೊಂಡು ಸನಿಹ ಸಾಗಿದೆ. ಪ್ರಯಾಸದಿಂದ ಎತ್ತಿ ಕೂರಿಸಿದೆ. ಅವಳಿನ್ನೂ ನೋವಿನಿಂದ ನರಳುತ್ತಿದ್ದಳು. "ನಂದೇನೂ ತಪ್ಪಿಲ್ಲ. ಕೆಲವು ಬಾರಿ ಯಾರೋ ಮಾಡಿದ ತಪ್ಪಿಗೆ ನಾವು ಶಿಕ್ಷೆ ಅನುಭವಿಸಬೇಕಾಗುತ್ತದೆ. ಇದನ್ನೇ ಟ್ರಾಫಿಕ್ ಅನ್ನುತ್ತಾರೆ. ನೀನೀಗ ಧೈರ್ಯವಾಗಿರಬೇಕು" ಎಂದು ಅವಳ ತಲೆಯನ್ನು ನೇವರಿಸಿದೆ.

ಆದರೆ ಅವಳ ಅಳು ಹೆಚ್ಚಿತು. "ನಾನು ಬದುಕಿ ಉಳಿಯುವುದಿಲ್ಲ. ಇಲ್ಲೇ ಮುತ್ತೈದೆಯಾಗಿ ಸಾಯಬೇಕೆಂದಿದ್ದೇನೆ. ಮಧುಚಂದ್ರದ ನೆನಪಿಗಾಗಿ ಇಲ್ಲಿಗೆ ಬಂದರೆ ಮರಣ ಬಂತಲ್ಲ ! ಅಯ್ಯೋ.... ನೋವು...." ಎಂದು ಚೀರತೊಡಗಿದಳು. ನಾನು ಬಗೆಬಗೆಯಾಗಿ ಸಂತೈಸಿದೆ. "ಚಿಂತಿಸಬೇಡ. 'ಡಾ||ನವಾಬ್' ಇರುವವರೆಗೆ ಯಾತಕ್ಕೂ ಯೋಚಿಸಬೇಕಿಲ್ಲ. ಹೇಗಾದರೂ ನಿನ್ನನ್ನು ಅಲ್ಲಿಗೆ ಮುಟ್ಟಿಸುತ್ತೇನೆ. ಅವರು ನಿನಗೆ ಎಕ್ಸ್‌ರೇ ಮಾಡಿ ಪೂರ್ತಿ ಚೆಕಪ್ ಮಾಡುತ್ತಾರೆ. ಒಂದೇ ವಾರದಲ್ಲಿ ಗುಣವಾಗುತ್ತಿ, ನೀನೇ ಹೀಗೆ ಧೈರ್ಯಗೆಟ್ಟರೆ ನನ್ನ ಗತಿ ಏನು ? ನನಗೂ ಪೆಟ್ಟಾಗಿಲ್ಲವೆ ? ಸ್ವಲ್ಪ ತಾಳಿಕೋ. ಇಷ್ಟೊಂದು ಸೆನ್ಸಿಟಿವ್ ಆದರೆ ಏನು ಗತಿ ? ಎಂಥೆಂಥ ಸಂದರ್ಭಗಳಲ್ಲಿ ನನಗೆ ಧೈರ್ಯ ತುಂಬಿದ್ದಿ. ಗೈಡ್ ಮಾಡಿದ್ದಿ.... ಈಗ ಯಾಕೆ ಹೀಗೆ ಭಯ ಪಡುತ್ತಿ ? ಯವುದಾದರೂ ವಾಹನ ಬಂದೀತೋ ನೋಡುತ್ತೇನೆ." ಎಂದವನು ಕುಂಟಿಕೊಂಡು ರಸ್ತೆಯ ಬದಿಗೆ ಬಂದು ನಿಂತೆ.

ನನ್ನ ಪ್ರಿಯಾ ಅಪಘಾತದಿಂದ ನಲುಗಿ ಹೋಗಿದ್ದಳು. ನಾನು ಸಹಾಯಕ್ಕಾಗಿ ಕಾಯುತ್ತಾ ರಸ್ತೆಯ ಬದಿಯಲ್ಲಿ ಕುಳಿತಿದ್ದೆ. ಸಾವಿರಾರು ಕಿಲೋಮೀಟರುಗಳ ದೂರ ನನ್ನನ್ನು ನಿರಾಯಾಸವಾಗಿ ಹೊತ್ತು ಸಾಗಿಸಿದ್ದವಳನ್ನು ಸ್ವಲ್ಪವೇ ದೂರ ಸಾಗಿಸಲೂ ನಾನು ಅಸಮರ್ಥನೆನಿಸಿ ನಾಚಿಕೆಯಾಗತೊಡಗಿತು. ಕಾರಿನಿಂದ ಸಂಗೀತ ಕೇಳಬರುತ್ತಲೇ ಇತ್ತು. ಪ್ರಿಯಾ ನರಳುತ್ತಲೇ ಇದ್ದಳು. ನಾನು ದಾರಿ ಕಾಯುತ್ತಲೇ ಇದ್ದೆ.

# ೩.೩. ಕಮರಿ ಹೋಗುತ್ತಿರುವ ಜನ

**-ಡಾ. ಗೀತಾ ನಾಗಭೂಷಣ**

**ಆಶಯ:** ಬದುಕು ದುರ್ಭರ. ಸಂಬಂಧಗಳ ನೆಲೆ ಆಗೋಚರ. ನೋವು ನಲಿವು ಬಾಳ ಬಂಡಿಯ ಎರಡು ಗಾಲಿ. ಬಾಳು ಕೆಲವರಿಗೆ ಹಣ್ಣು ಕೆಲವರಿಗೆ ಹುಣ್ಣು. ಈಗಿನ ಮರ್ಯಾದ ಹತ್ಯೆಗಳ ಸಾಲಿಗೆ ಸೇರುವ ಈ ಕತೆ ಶ್ರೀಮಂತರ ಪ್ರೀತಿಯ ತಪ್ಪಿಗೆ ಬಡವರು ಹೇಗೆ ಮಣ್ಣು ಪಾಲಾಗುತ್ತಾರೆ ಎಂಬುದನ್ನು ಧ್ವನಿಸಿದೆ.

ಗುಡ್ಡದ ನೆತ್ತಿಯಿಂದ ಸೂರ್ಯ ಕೆಳಬೀಳುವುದರಲ್ಲಿದ್ದ. ಬಿಸಿಲು ಬಲ ಕಳೆದುಕೊಂಡು, ಬಣ್ಣವನ್ನೂ ಕಳೆದುಕೊಂಡು, ಕಾಮಾಲೆಯಾದವರಂತೆ ಹಳದಿಯಾಗಿತ್ತು. ಆಮಾವಾಸ್ಯೆಯ ಮುಸ್ಸಂಜೆ ಚೆಂಬಸ್ಸಪ್ಪ ಗೋಡರ ಅಂಗಳಲ್ಲಿ ಮುದ್ದೆ-ಮುದ್ದೆಯಾಗಿ ಇಳಿದುಬರುತ್ತ ಎಲ್ಲವನ್ನೂ ಮಸುಕಾಗಿಸುತ್ತಿತ್ತು.

“ಯವ್ವಾ...ನಾ ತ್ವಾಟಕ್ಕ ಹೋಗಿ ಹಿರೇರ ಸಮಾದಿಗಿ ದೀಪ ಹಚ್ಚಿ ಬರ್ತಿನೆಂತೇ....”

ಗಂಗಾ ಅಡಿಗೆಮನೆಯಲ್ಲಿ ನಿಂತು ಹಿತ್ತಲಲ್ಲಿದ್ದ ತಾಯಿಗೆ ಕೂಗಿ ಹೇಳಿದಳು. ಸಂಜೆ ಅಡಿಗೆಗೆ ಬದನೆಕಾಯಿಯ ಮುಳ್ಳು ತೆಗೆಯುತ್ತಿದ್ದ ಬಸ್ಸನಿಂಗವ್ವ ತಲೆಯೆತ್ತಿದಳು.

ಅಡಿಗೆಮನೆಯ ಬಣ್ಣದ ಬಾಗಿಲಲ್ಲಿ ನಿಂತು ತನ್ನನ್ನೇ ದಿಟ್ಟಿಸುತ್ತಿರುವ ಹರೆಯದ ಮಗಳಲ್ಲಿ ಆ ತಾಯಿಯ ಕಣ್ಣುಗಳು ಕೀಲಿಸಿದವು.

ರಕ್ತಗೆಂಪಿನ ಜರತಾರಿಯ, ಕೇದಿಗೆ ಅಂಚಿನ ಆಚ್ಚಹಸಿರು ರೇಷ್ಮೆಯ ಇಲಕಲ್ ಸೀರೆಯಲ್ಲಿ ಅರಳಿನಿಂತಿದ್ದ ಗಂಗೆಯ ಸಮೃದ್ಧ ಹರೆಯ, ಬನ್ಸಿಗೋಧಿಯ ಹಿಟ್ಟನ್ನು ನೆನೆಯಿಸಿ, ಮಿದ್ದಿ, ಮಿದ್ದಿ, ಮಿದ್ದಿ ಮಾಡಿಟ್ಟಂತೆ ಚೆಲುವಿನ ಗೊಂಬಿ ಅವಳು. ಮಾವಿನ ಹೋಳಿನಂತ ಕಣ್ಣು, ಕೇದಿಗೆಯ ಎಸಳಿನಂತ ಮೂಗು, ಮುತ್ತಲದ ಹುವ್ವಿನಂತ ಗಲ್ಲ, ಹಣ್ಣುಮೆಣಸಿನ ಕಾಯಿ ಬಣ್ಣದ ತುಟಿಗಳು, ಹುರಿಗೊಂಡು ಬಿಗಿದು ನಿಂತ ಮೈಯ ಉಬ್ಬು ತಗ್ಗುಗಳು. “ಬಟ್ಟಲಗಣ್ಣಿನಕ್ಕಿ ನೆಟ್ಟನಾ ಮೂಗಿನಕ್ಕಿ ಗಟವಾಣಿ ನನ್ನ ಕಿರಿಮಗಳು...” ಎನ್ನುವ ಹಾಡು ನೆನಪಾಯಿತು, ಗೌಡ್ತಿಗೆ. ನಿಜಕ್ಕೂ ಗಂಗಾ ಬಿಳಿತೊಗಲಿನ ರಾಶಿಗೂದಲಿನ ತುರುಬಿನ ಚೆಂದದ ಹೆಣ್ಣು.

“ಯಾಕೇ ಹಂಗ ನೋಡ್ಲಕ್ಹತ್ತೀದಿ ಯವ್ವಾ? ನಾ ತ್ವಾಟಕ ಹೋಗ್ತೀನಿ ಅಂಬಾದು ಕೇಳಿಸಲಿಲ್ಲೇನು?” ಗಂಗಾ ನಸು ನಕ್ಕು ಕೇಳಿದಳು. ಗೌಡ್ತಿಗೆ ಎಚ್ಚರ ಬಂದಿತು.

“ಹಾ..ಹಾಂ...ಹೋಗಿ ಬಾರೆ ತಾಯಿ. ಆದ್ರ ಒಬ್ಬಕ್ಕಿನೇ ಹೋಗಬ್ಯಾಡ. ನಿಮ್ಮಾಯಿಗಿ ಸಂಗಾಟ ಕರ್‍ಕೊಂಡು ಹೋಗು ಏನು? ಸರ್‍ರಂತ ಹೋಗಿ ಭರ್‍ರಂತ ಬರ್‍ರಿ. ಅಮಾಸಿ ಕತ್ತಲದಾಗ ಭಾಳ ಹೊತ್ತು ಅಲ್ಲೇ ಕೂಡಬ್ಯಾಡ್ರೀ...”

“ಆಗಲೇಳು, ಜಲ್ದಿ ಬರ್ತಿವೆಂತ..."

ಆಯಿ ಮೊಮ್ಮಗಳು ಕೂಡಿ ಊರಮುಂದಿನ ತಮ್ಮ ತೋಟಕ್ಕೆ ಬಂದಾಗ ಅಲ್ಲಿ ಆಳುಮಗ ಒಬ್ಬನನ್ನು ಬಿಟ್ಟರೆ ಯಾರೂ ಇರಲಿಲ್ಲ. ಗಂಗೆಯ ಆಯಿ ಅರವತ್ತು ದಾಟಿದ ವೃದ್ಧೆ. ಬಾವಿಕಟ್ಟೆಯ ಬಳಿ ಕುಳಿತು ಮೊಮ್ಮಗಳಿಗೆ ಹೇಳಿತು.

"ನೀ ಹೋಗಿ ಧೀಪಾ ಹಚ್ಚಿ ಬಾರಗಾ... ಕೂಸು. ನಾ ಒಂದ್ ಗಳಿಗಿ ಇಲ್ಲಿ ಕುಂತು ದಣು ಆರಸ್ಗೋತಿನೆಂತ...."

"ಹಂಗೇ ಆಗ್ಲೆ ಆಯೀ....ನೀ ಇಲ್ಲೇ ಕೂಡು."

ಎನ್ನುತ್ತ ಗಂಗಾ ತೋಟದ ಗರ್ಭ ಸೇರಿದಳು. ಪೂರ್ವ ದಿಕ್ಕಿಗೆ ಸಾಲಾಗಿ ನಾಲ್ಕು ಗೋರಿಗಳು, ಗೌಡರ ಅಜ್ಜ, ಅಜ್ಜಿ, ಈಗಿರೋ ಗೌಡ್ತಿಯ ಗಂಡ, ಮೊದಲಾದವರ ಸಮಾಧಿಗಳು ಸುಣ್ಣ ಬಳಿದುಕೊಂಡು ನುಣ್ಣಗೆ ಕುಳಿತಿದ್ದುವು. ಸುತ್ತ ಮುತ್ತಲಿನ ಗಿಡಗಳಿಂದ ಆಗಲೇ ಅವುಗಳ ಮೇಲೆ ತೆಳುವಾದ ಕತ್ತಲೆಯ ಕಪ್ಪನೆಯ ತೆರೆ ಬಿದ್ದಿತ್ತು. ಗಂಗಾ ಎಲ್ಲ ಗೋರಿಗಳ ಮಾಡದಲ್ಲಿರುವ ಹಣತಿಗಳಿಗೆ ಬತ್ತಿಯಿಟ್ಟು, ಎಣ್ಣೆ ನೀಡಿದಳು. ಪೆಟ್ಟಿಗೆಯಿಂದ ಕಡ್ಡಿ ಎಳೆದು ಕೊರೆದು, ಬತ್ತಿಯ ಮುಖಕ್ಕೆ ಹಿಡಿದಳು. ಎಲ್ಲಿಂದಲೋ ರೊಯ್ಯಂದು ಬೀಸಿಬಂದ ಬಿರುಸಿನ ಗಾಳಿ ದೀಪದ ಕಡ್ಡಿಯ ಉರಿ ಕದಿಯಿತು.

"ಇದರ ಹೆಣಾ ಎತ್ತೆ....ಎಲ್ಲಿಂದ ಬಂತೇ ಈ ದೆವ್‌ಗಾಳಿ..."

ಎಂದು ಬೈಯುತ್ತ ಅವಳು ಮತ್ತೊಂದು ಕಡ್ಡಿ ಕೊರೆದಳು. ದೀಪ ಹತ್ತಿದುವು. ಎಲ್ಲ ಸಮಾಧಿಗಳಿಗೆ ಸೆರಗು ತಾಕಿಸಿ, ಹಣೆಯಿಟ್ಟು ಸೆಣಮಾಡಿದಳು. ಎದ್ದು ನಿಂತಳು. ಅನಾಯಾಸವಾಗಿ ಅವಳ ಕಣ್ಣು ಅವುಗಳಿಗೆ ವಿರುದ್ಧ ದಿಕ್ಕಿನಲ್ಲಿ, ದೂರದಲ್ಲಿ ಒಂಟಿಯಾಗಿ ನಿಂತಿದ್ದ ಕರಿ ಕಲ್ಲಿನ ಗೋರಿಯ ಕಡೆಗೆ ತಿರುಗಿತು. ಅವಳು ಅಲ್ಲಿಂದಲೇ ಒಂದು ಹಣತೆಯನ್ನೆತ್ತಿಕೊಂಡು ಮಾಟಕ್ಕೊಳಪಟ್ಟಂತೆ ಆ ಒಂಟಿಗೋರಿಯ ಕಡೆಗೆ ಹೆಜ್ಜೆ ಹಾಕಿದಳು.

ಗೌಡನ ತೋಟದ ಪಶ್ಚಿಮ ದಿಕ್ಕಿನ ತುತ್ತತುದಿಗೆ, ಬಂದಾರಿಯ ಬಳಿ ನಿಂತಿತ್ತು. ಒಂದೇ ಒಂದು ಕರಿಕಲ್ಲಿನ ಚಪ್ಪಡಿ ಹೊತ್ತ ಒಂಟಿಗೋರಿ, ಉಳಿದ ಗೋರಿಗಳಂತೆ ಅದನ್ನು ಸಮಾಧಿಯನ್ನಾಗಿ ಕಟ್ಟಿ, ಚೊಕ್ಕಟವಾಗಿ ಸಾರಿಸಿ, ಸುಣ್ಣ ಬಳಿದಿರಲಿಲ್ಲ. ಕುಣಿಯ ಮೇಲೊಂದು ಉದ್ದನೆಯ ಕರಿಕಲ್ಲನ್ನು ಹಾಸಲಾಗಿತ್ತು. ಅದರ ತಲೆಯ ಬಳಿ ಇನ್ನೊಂದು ಕಲ್ಲನ್ನು ನೆಡಲಾಗಿತ್ತು. ಅಷ್ಟೇ ಅದರ ವೈಭವ, ಗಂಗಾ ಆ ಗೋರಿಯ ಬಳಿ ಬಂದವಳೇ ಮೈಯಲ್ಲಿಯ ನರನರಗಳಲ್ಲಿಯ ಶಕ್ತಿಯೆಲ್ಲ ಸೋರಿ ಹೋದಂತಾಗಿ ಕುಸಿದು ಕುಳಿತಳು. ಕೈಯಲ್ಲಿಯ ಹಣತೆ, ಕಡ್ಡಿಪೆಟ್ಟಿಗೆ ಕೆಳಗಿಟ್ಟು ಗೋರಿಕಲ್ಲಿನ ಮೇಲೆ ಎರಡೂ ತೋಳ ಜಾಚಿ ಅದನ್ನು ಅಪ್ಪಿ ಹಿಡಿದು, ಆದರೆದೆಯ ಮೇಲೆ ಮುಖವಿಟ್ಟು ನಿಡಿದಾದ ಉಸಿರೆಳೆದಳು. ಉಸಿರಿನೊಂದಿಗೆ ಅವಳ ಕಣ್ಣುಗಳಿಂದಿಳಿದ ಕಂಬನಿಯ ಹನಿಗಳು ತಟ ತಟನೆ ಕಲ್ಲಿನ ಮೇಲುರುಳ ತೊಡಗಿದವು.

"ಶಿವೂ...ನನ್ ಶಿವೂ....ಇದೆಲ್ಲಾ ಹ್ಯಾಂಗಾಯ್ತು ಶಿವಾ... ನೀ ಇಲ್ಲಿ ಹಿಂಗೇ ಗಪ್‌ಚಿಪ್ಪಾಗಿ, ಹೆಣಾ ಆಗಿ ಏಸುದಿನ ನಿದ್ದಿ ಮಾಡ್ತಿ ಶಿವಾ.. ಏಸು ಕಾಲ ಅಂತ ನಾ ಹಿಂಗೇ...ನಾ ಹಿಂಗೇ ಗೋಳಾಡ್ಲೀ ಎನ್ನುತ್ತ ಬಿಕ್ಕಳಿಸಿದಳು. ಹೃದಯ ಒಡೆಯುವಂತೆ ಅತ್ತಳು. ನಿಧಾನವಾಗಿ ಅವಳ ಅಳು ಹಿಡಿತಕ್ಕೆ ಬಂದಿತು. ಹಕ್ಕಿಪಿಕ್ಕಿಗಳೆಲ್ಲ ಗೋರಿ ಕಲ್ಲಿನ ಹಿಂದಿರುವ ಹೆಮ್ಮರದ ಹೊಟ್ಟೆಯೊಳಗೆ ಸೇರಿಕೊಳ್ಳ ತೊಡಗಿದ್ದುವು. ಅವುಗಳ ಕಿಚಿಪಿಚಿಯಿಂದ ಕೆಲಕ್ಷಣ ಕಲಗುಟ್ಟಿದ್ದ ವಾತಾವರಣ ಸ್ತಬ್ಧವಾಯಿತು. ಸೂರ್ಯನ ಸಾವು ಸನ್ನಿಹಿತವಾಗಿ ಆಕಾಶದಿಂದ ಗೆಡ್ಡೆ ಗೆಡ್ಡೆಯಾದ ನೆತ್ತರು ನಿಧಾನವಾಗಿ ನೆಲಕ್ಕಿಳಿಯ ತೊಡಗಿತು.

ಗಂಗಾ ಹಾಗೆಯೇ ಕಣ್ಣು ಮುಚ್ಚಿದಳು. ಒಂದು ಕ್ಷಣ, ಮರುಕ್ಷಣ ಧಾವಿಬರುವ ನೆನಪಿನ ಸುಳಿಯಲ್ಲಿ ಸುತ್ತತೊಡಗಿದಳು. ನೆನಪುಗಳು..ಬರೀ ನೆನಪುಗಳು.. ಅವಳ ಸುತ್ತಮುತ್ತ, ಮೇಲೆ ಕೆಳಗೆ, ಎಲ್ಲೆಡೆಗೂ ಬರೀ ನೆನಪುಗಳು ಅವಳನ್ನು ಆವರಿಕೊಂಡುವು...

ಕಾಡಹಳ್ಳಿ ಚೆಂಬಸಪ್ಪಗೌಡನ ಒಬ್ಬಳೇ ಒಬ್ಬಳು ಮಗಳು ಗಂಗಾ. ಗೌಡನಿಗೆ ಇಬ್ಬರು ಗಂಡುಮಕ್ಕಳಿದ್ದರೂ ಮಗಳು ಒಬ್ಬಳೇ, ಮೇಲಾಗಿ ಚೆಲುವಿನ ಖನಿ. ಗೋಡ ಗೋಡ್ತಿಯ ಮುದ್ದಿನ ಮಗಳಾಗಿ ಗಂಗಾ ಬೆಳೆದವಳು. ಹನ್ನೆರಡಕ್ಕೆಯ ಮೈನೆರೆದು, ಹದಿನಾರರ ಹರೆಯ ಹೊಕ್ಕಂತೆ ಅವಳ ಮೈ ಮಾದಕತೆಯಿಂದ ಬೀಗಿ ನಿಂತು. ಉಬ್ಬು ತಗ್ಗುಗಳೆಲ್ಲ ಬಿರಿದು ನಿಂತಾಗ ಗೋಡ ಮಗಳನ್ನು ಬಾಗಿಲಿನಿಂದ ಹೊರಗೆ ಬಿಟ್ಟರೆಲ್ಲಿ ಕೆಟ್ಟು ಕಣ್ಣು ತಾಕಿತೋ ಅಂತ ಅವಳನ್ನು ಆದಷ್ಟು ಒಳಗೆಯೇ ಇರುವಂತೆ ನೋಡಿಕೊಳ್ಳುತ್ತಿದ್ದ. ಬಣ್ಣಬಣ್ಣದ ರೇಷ್ಮೆಯ ಇಳಕಲ್ ಸೀರೆಯುಟ್ಟು, ಕೆಂಪು ಬಿಳುಪಿನ ಪಟ್ಟಿಗಳ ಟೋಪಿನ ಸೆರಗನ್ನು ಬೀಸುತ್ತ ಮಗಳು ಅಡಿಗೆಮನೆ, ಹಿರೆಮನೆ, ದೇವರಮನೆ, ಪಡಸಾಲಿ ಅಂತ ನವಿಲಿನ ನಡಿಗೆಯಲ್ಲಿ ಓಡಾಡುತ್ತಿದ್ದರೆ ಅವಳ ಕುಲುಕುಲು ನಗುವಿಗೆ, ಬೆಳ್ಳಿ ಚೈನಿನ ಗೆಜ್ಜೆಯ ಘಿಲ್ ಘಿಲ್ ನಾದಕ್ಕೆ; ಬಂಗಾರದ ಬಳೆಗಳ ಝಣತ್ಕಾರಕ್ಕೆ ಗೋಡನ ಇಡೀ ಮನೆ ಸಾರಾಸಗಟಾಗಿ, ಖುಷಿ ಮತ್ತು ಹೆಮ್ಮೆಗಳಿಂದ ಬೀಗಿ ನಿಲ್ಲುತ್ತಿತ್ತು. ಹೆತ್ತವರ ಮಮತೆ, ಆಣ್ಣಂದಿರ ವಾತ್ಸಲ್ಯ, ಅತ್ತಿಗೆಯರ ಅನುನಯನಗಳ ನೆರಳಿನಲ್ಲಿ ಗಂಗೆಯ ಬದುಕು ಸುಂದರವಾಗಿ ಅರಳುತ್ತಿತ್ತು. ಅವಳ ಮೈಯಲ್ಲಿ ವಯ್ಸಗನುಗುಣವಾದ ಭಾವನೆಗಳು ಉಕ್ಕಿ ಹರಿದವು.

ಅಂದು ನಾಗರಪಂಚಮಿ ಹಬ್ಬ. ಅತ್ತಿಗೆಯರಿಬ್ಬರೂ ತವರು ಮನೆಗೆ ಹೋಗಿದ್ದರು. ಗೋಡ್ತಿ ಹೋಳಿಗೆಗೆ ಹೆಂಚಿಟ್ಟಿದ್ದಳು. ಆಯಿಗೆ ಮೈ ನೆಟ್ಟಗಿರಲಿಲ್ಲ. ಹೊರಸಿನ ಮೇಲೆ ಕೌದಿಯಲ್ಲಿ ಮುದುಡಿ ಮಲಗಿತ್ತು.

"ಗಂಗಾ..ಜಲ್ದಿ ತ್ವಾಟಕ್ಕೆ ಹೋಗಿ ನಾಗಪ್ಪಗ ಹಾಲೆರ್ದು ಹಿರೇರಿಗಿ ನೆವ್ದ್ಯಾ ಕೊಟ್ಟು ಬಾ ಮಗಾ.."

ಗೋಡ್ತಿ ಮಗಳಿಗೆ ಹೇಳಿದಳು. ಹೊಸ ಸೀರೆ ಕುಪ್ಪಸ ತೊಟ್ಟು, ಮೈತುಂಬ ಒಡವೆಯಿಟ್ಟು ಕೊಂಡಿದ್ದ ಗಂಗಾ ನೈವೇದ್ಯದ ತಾಟು, ಹಾಲಿನ ತಂಬಿಗೆ ಹಿಡಿದುಕೊಂಡು ತೋಟಕ್ಕೆ ಹೊರಟಳು.

ತೋಟದಲ್ಲಿ ಎತ್ತುಗಳಿಗೆ ಮೇವು ಹಾಕುತ್ತ ನಿಂತಿದ್ದ ಗೋಡನ ಖಾಸಾ ಆಳು ಮಗ ಸೀನಿಂಗ ಗಂಗೆಯನ್ನು ನೋಡಿ ನಸುನಕ್ಕ.

"ಪೂಜಾಕ ಬಂದಿರೇನ್ರೀ ಗೋಡ್ತಿ?" ಕೇಳಿದ

"ಹೊಯಿದೋ ಶಿವೂ...ಬಾ ನನ್ನ ಸಂಗಾಟ, ನೀ ಹಿರೇರ ಸಮಾದಿಗೋಳಿಗಿ ನೆವ್ದ್ಯಾ ಹಿಡಿ, ನಾ ಹುತ್ತಿನ ಪೂಜಾ ನಾಗಪ್ಪನ ಹಾಲಿರಿತಿನೆಂತ..."

"ಹಿರೇರ ಸಮಾದಿಗಿ ನಾ ಹ್ಯಾಂಗ ನೆವ್ದ್ಯಾ ಹಿಡಿಬೇಕ್ರಿ ಗೋಡ್ತಿ? ಹೇಳಿ ಕೇಳಿ ನಾ ಹೊಲೇರ ಕುಲದ ಆಳ ಮಗಾ..ಮೈಲಿಗೆ ಆಗ್ತದ್ರಿ..."

"ಮೈಲಿಗಿ ಅಂತ ವೈಲಿಗಿ, ಹುಚ್ಚಗೊಟ್ಟಿ... ಅದರ ಮ್ಯಾಲ ಇಲ್ಲ್ಯಾರು ನೋಡ್ತಾರೋ ನಿನಗೆ ಶಿವೂ, ನೀ ಸುಮ್ಮನ ಬಾ... ನನಗೆ ಹೊತ್ತಾಗ್ತಪಾ...ಈಗೇ ನೋಡು, ಹೊತ್ತಾ ನಡು ನೆತ್ತಿಮ್ಯಾಲ ಬಂದಾದ. ನನಗೆ ಭಾಳ ಹಸು ಆಗ್ಯಾದೋ ಶಿವೂ... ಜಲ್ದಿ ಹೋಗಿ ಉಣ್ತೀನೆಂತ, ಬಾರೋ..."

ಶಿವು ಹಿಂಜರಿಯುತ್ತಲೇ ಬಂದ. ಅವಳ ಕೈಯಲ್ಲಿಯ ಒಂದು ನೈವೇದ್ಯದ ತಟ್ಟೆಯನ್ನೆತ್ತಿಕೊಂಡು ಗೌಡರ ಹಿರಿಯರ ಸಮಾಧಿಗಳ ಕಡೆಗೆ ನಡೆದ. ಅವಳು ಹುತ್ತಿನೆಡೆಗೆ ಹೆಜ್ಜೆ ಎತ್ತಿಟ್ಟಳು.

ನಡು ತೋಟದಲ್ಲಿ ನಿಂತಿದ್ದ ಆಳೆತ್ತರದ ಹುತ್ತಿಗೆ ಗಂಗೆಯಂತೆ ಜಾಸ್ತಿ ವಯಸ್ಸು. ಅಗಲವಾಗಿ ಶಿಖರ ಶಿಖರವಾಗಿ ಪುಟ್ಟ ಬೆಟ್ಟದಂತೆ ಬೆಳೆದು ಮಾವಿನ ಮರದ ಕಾಂಡಕ್ಕೆ ಬೆನ್ನುಕೊಟ್ಟು ನಿಂತಿದ್ದ, ಹುತ್ತದಲ್ಲಿ ಗೋಡನ ಮನೆಯ ದೇವತೆಯ ಹಾವಾಗಿ ವಾಸಿಸಿದೆ ಅಂಬೋ ನಂಬಿಕೆ ಎಲ್ಲರಿಗೆ. ಆಗಾಗ ಅದು ಆಳುಗಳ ಕಣ್ಣಿಗೆ ಬಿದ್ದರೂ ಯಾರೂ ಆದರ ತಂಟೆಗೆ ಹೋಗದೆ ಕೈ ಮುಗಿದು ದೂರ ಸರಿಯುತ್ತಿದ್ದರು. ನಾಗರ ಪಂಚಮಿಗೆ ಗೋಡನ ಮನೆಯ ಹೆಂಗಸರು ಕಲ್ಲು ನಾಗರಕ್ಕೆ ಹಾಲೆರೆಯುವ ಬದಲು, ಹುತ್ತದಲ್ಲಿಯ ಜೀವಂತ ನಾಗಪ್ಪನಿಗೆ ಹಾಲೆರೆಯುವುದು ಬಹಳ ವರ್ಷಗಳಿಂದ ನಡೆದುಬಂದ ರೂಢಿ.

ಗಂಗಾ ಹುತ್ತಿನ ಮುಂದೆ ನಿಂತಳು. ಹೂವು ಹಣ್ಣು ಇಟ್ಟು ನೈವೇದ್ಯ ಹಿಡಿದಳು. ಕೊಬ್ಬರಿ ಬಟ್ಟಲಲ್ಲಿ ಹಾಲು, ಆಳ್ಳು ಹಿಡಿದು ಹುತ್ತದ ರಂಧ್ರದಲ್ಲಿ ಹಾಲು ಸುರಿಯತೊಡಗಿದಳು. ಹುತ್ತದ ನೆತ್ತಿಯ ಎತ್ತರದ ವಿಶಾಲ ರಂಧ್ರಕ್ಕೆ ಹಾಲು ಕಡಿಮೆ ಬಿದ್ದಿತು. ಕೊಬ್ಬರಿ ಬಟ್ಟಲು ಕೆಳಗಿಟ್ಟು ತಂಬಿಗೆಯನ್ನೇ ಎತ್ತಿ ಧಡಧಡನೆ ತೂತಿನಲ್ಲಿ ಹಾಲು ಸುರುವಿದಳು. ಇನ್ನೇನು ಅವಳು ಕೈ ತೆಗೆಯಬೇಕು. ಅಷ್ಟರಲ್ಲಿ ಒಳಗಿನಿಂದ ರೌದ್ರಾವೇಶ ತಾಳಿ ಭುಸ್ಸೆಂದು ಮೇಲೆದ್ದು ಹೆಡೆ ಬಿಚ್ಚಿದ ನಾಗ ಅವಳ ಬಲಗೈಯ ಹಸ್ತಕ್ಕೆ ಬಾಯ್ದೆರೆದು ಅಪ್ಪಳಿಸಿತು. “ಯವ್ವೋ ಸತ್ನೇ...” ಎಂದು ವಿಕಾರವಾಗಿ ಕಿರುಚಿಕೊಂಡ ಗಂಗಾ ಧೊಪ್ಪನೆ ನೆಲಕ್ಕುರುಳಿ ಎಚ್ಚರ ತಪ್ಪಿದಳು.

ಹಿರಿಯರ ಸಮಾಧಿಗಳ ಮುಂದೆ ನೈವೇದ್ಯ ಹಿಡಿಯುತ್ತಿದ್ದ ಸೀನಿಂಗ ಈ ವಿಕಾರ ಆರ್ತನಾದಕ್ಕೆ ಬೆಚ್ಚಿಬಿದ್ದ. ಮರುಕ್ಷಣವೇ ಅವನು ಹುತ್ತದೆಡೆಗೆ ಹಾರಿದ.

ಹುತ್ತದ ನೆತ್ತಿಯ ಮೇಲೆ ಇನ್ನೂ ಹೆಡೆ ಬಿಚ್ಚಿಕೊಂಡು ಭುಸುಗುಡುತ್ತಿದ್ದ ನಾಗ, ಕೆಳಗೆ ಮಾರುದೂರದಲ್ಲಿ ಎಚ್ಚರ ನಶಿಸಿ ಬಿದ್ದಿದ್ದ ಗಂಗಾ. ಎರೆದುಕೊಂಡು ಹಾಗೆಯೇ ಬಿಟ್ಟಿದ್ದ ರಾಶಿಕೂದಲು, ಕೆಳಜಾರಿದ ಸೆರಗು, ಚೆಲ್ಲಿದ ನೈವೇದ್ಯ...ಹಸ್ತದಿಂದೊಸರುವ ರಕ್ತ ಕಂಡವನೇ ಬಾಗಿದ. ನಾಗಪ್ಪನ ಜೋಡಿಹಲ್ಲುಗಳ ಗುರುತು ಕಣ್ಣು ತಿವಿಯಿತು.

“ಗೋಡ್ತಿ...ಗೋಡ್ತೀ...ಗೋಡ್ತೀ...” ಎಂದು ಅವಳನ್ನಲುಗಿದ. ಉಹೂಂ ಅವಳಿಗೆ ಎಚ್ಚರ ಬರಲಿಲ್ಲ. ಕತ್ತು ತಿರುಗಿದರೆ ಹೆಡೆಬಿಚ್ಚಿ ಕಣ್ಣು ಕಿಸಿದ ಹಾವು. ತಕ್ಷಣ ಅವಳನ್ನೆತ್ತಿಕೊಂಡು ಬಾವಿ ದಂಡೆಯ ಬಾದಾಮಿ ಮರದ ಕೆಳಗೆ ನೆರಳಿಗೆ ನಡೆದ. ತೋಟದ ಸುತ್ತಮುತ್ತ ಒಂದು ನರಪ್ರಾಣಿಯ ಸುಳಿವಿಲ್ಲ. ಹಬ್ಬ ಎಂದು ಉಳಿದ ಆಳುಗಳೆಲ್ಲ ಮನೆಗೆ ಹೋಗಿದ್ದರು. ಮನೆಮಾರಿಲ್ಲದ ಒಂಟಿ ಗಂಡು ಸೀನಿಂಗ ಮಾತ್ರ ತೋಟದಲ್ಲಿದ್ದ.

ಮರದ ಕೆಳಗೆ ಗಂಗೆಯನ್ನು ಮಲಗಿದವನೇ ಅವಳ ಹಸ್ತ ಎತ್ತಿ ಹಾವು ಕಡಿದ ಭಾಗಕ್ಕೆ ಬಾಯಿಯಿಟ್ಟು ಹಿಂದೆ ಮುಂದೆ ಯೋಚಿಸದೆ ವಿಷ ಹೀರಿದ, ಉಗುಳಿದ. ಮತ್ತೆ ಹೀರಿದ, ಉಗುಳಿದ. ಆರ್ಧತಾಸಿನ ಸತತ ಪ್ರಯತ್ನದ ನಂತರ ಗಂಗಾ ನಿಧಾನವಾಗಿ ಕಣ್ತೆರೆದಳು, ಸೀನಿಂಗ ಆಯಾಸದಿಂದ ಏದುರು ಬಿಡುತ್ತ ಸುಸ್ತಾಗಿ ಮರಕ್ಕೊರಗಿದ.

ತೋಟಕ್ಕೆ ಹೋದ ತಂಗಿ ತಾಸು ಕಳೆದರೂ ಬಾರದಿದ್ದನ್ನು ಕಂಡು ಬಸ್ರಾಜಪ್ಪ ತೋಟಕ್ಕೆ ಬಂದವನು ಈ ದೃಶ್ಯ ಕಂಡು ಕಂಗಾಲಾದ.

ಗಂಗೆಯ ಜೀವ ಉಳಿಸಿದ ಸೀನಿಂಗ ಅವಳ ಹೃದಯ ಗೆದ್ದುಕೊಂಡ. ಸೀನಿಂಗ ಹೊಲೆಯರ ಕುಲದ ಅನಾಥ. ಹದಿನೆಂಟರ ಹೋಳು ಹರೆಯದ ಸೀನಿಂಗ ಕಪ್ಪು ಕಲ್ಲಿನಲ್ಲಿ ಕೆತ್ತಿದ ವಿಗ್ರಹದಂತಿದ್ದ. ಹೆತ್ತವರು ಸತ್ತು, ಒಡ ಹುಟ್ಟಿದವರಿಲ್ಲದೆ ಗೌಡನ ಮನೆಯಲ್ಲಿಯೇ ದುಡಿಯಲು ನಿಂತಿದ್ದ ಆಳು. ತನ್ನ ವಿನಯ ವಿಧೇಯತೆ ಸಾಚಾತನಗಳಿಂದ ಗೌಡನ ಮನೆಯವರಿಗೆ ತೀರ ಹತ್ತಿರದವನಾಗಿದ್ದ.

ಮರುದಿನವೇ ಚೆಂಬಸಪ್ಪಗೌಡ ತೋಟದಲ್ಲಿಯ ಹುತ್ತ ಕೆದರಿಸಿ, ಹಾವನ್ನು ಹೊಡೆಸಿ, ಹಾಕಿದ. ಮಗಳ ಜೀವಕ್ಕೆ ಕುತ್ತಾದ ನಾಗರಪಂಚಮಿ ಹಬ್ಬದ ಆಚರಣೆ ಆ ಮನೆಯಲ್ಲಿ ಅಂದಿನಿಂದ ನಿಂತೇಹೋಯಿತು.

"ಶಿವೂ... ನಿನಗ ಬಿಟ್ಟಿರಾದು ನನ್ ಕೈಲಿಂದ ಆಗಂಗಿಲ್ಲ, ಎಂದ ನೀ ನನ್ನ ಜಿಂವಾ ಉಳಸ್ದೋ ಅಂದೇ ಈ ಮೈ ಮನಸ್ಸು ಎಲ್ಲಾ ನಿಂದಾಗಿ ಬಿಟ್ಟು ಶಿವೂ... ಈ ಜಿಂವಾದ ಮ್ಯಾಲ ಈಗಿರಾದು ನಿಂದೊಬ್ಬಂದೇ ಅಧಿಕಾರ..."

ಒಂದು ಮುಸ್ಸಂಜೆ ತೋಟದ ಹಸುರಿಗೆ ಬಣ್ಣ ಎರಚಿದಾಗ ಗಂಗಾ ಯಾರಿಲ್ಲದ ತಾಣದಲ್ಲಿ ಕುಳಿತು ಸೀನಿಂಗನಿಗೆ ಹೇಳಿದಳು. ಹಕ್ಕಿಗಳು ಹಿಂಡುಗಟ್ಟಿಕೊಂಡು ಗೂಡುಗಳಿಗೆ ವಾಪಸ್ ಬರುತ್ತಿದ್ದುದ್ದನ್ನೇ ನೋಡುತ್ತಿದ್ದ ಸೀನಿಂಗ ಕುತ್ತಿಗೆ ತಿರುಗಿಸಿದ. ಅವನ ಕಣ್ಣು ತುಂಬ ಮಡುಗಟ್ಟಿ ನಿಂತ ನೀರು.

"ಗೋಡ್ತಿ...ನನಗೇನೂ ತಿಳೆಂಗಿಲ್ಲಾಗ್ಯಾದ್ರೀ... ಎಂಟು ದಿನದಲಿಂದ ನೀವು ಹಿಂಗೆಲ್ಲಾ ಹೇಳೋದು, ನನ್ ಮೈ ಕೈ ಮುಟ್ಟೋದು ನೋಡಿ ನನಗೆ ಗಾಬರ್ಯಾಗಿ ಎದಿ ಒಡದದರಿ... ನೀವು ನೋಡ್ದರ ಊರಾಳೋ ಗೋಡನ ಮಗಳು. ನಾ ಕೆಳಜಾತ್ಯಾಗ ಹುಟ್ಟಿದ ಆಳು. ನಿಮ್ ಚಪ್ಪಲಿ ಬಳಿ ನನ್ನ ಜಾಗಾರಿ... ಹಿಂತದರಾಗ ನೀವು ನನಗ ಪಿರೀತಿ ಮಾಡಾದು ಬಲೆ ಇಚಿತ್ತರ ಆದಾರಿ... ನಾಳಿಗಿ ನಿಮ್ಮನ್ಯಾಗ ತಿಳೀತಂದ್ರೆ ನಮ್ಮಿಬ್ಬರಿಗೆ ಕೊಡ್ಲಿ ತಗೊಂಡು ಕಡ್ದುಬಿಡ್ತಾರ ನಿಮ್ಮಣ್ಣದೇರು"

"ಹಂಗಾರ ನೀ ಆಂಜಿ ದೂರ ಇದ್ದಿಯೇನೋ ಶಿವೂ... ನಮ್ಮ ಪಿರೀತಿಕ್ಕಿಂತಾ ನಿನಗೆ ನಿನ್ ಜಿಂವದ ಅಂಜಿಕೆನೆ ಜಾಸ್ತಿ ಅದಾ ಅಲ್ಲ. ನಾ ಅಂತೂ ಸಾಯ್ಲಿಕ ತಯಾರು. ಒಮ್ಮ...ಒಮ್ಮ ನೀ ನನಗೆ ನಿನ್ನೆದಿಗಿ ವತ್ತಗೊಂಡು ಬಿಡು. ಅಲ್ಲೇ ನಾ ಹಾಯಾಗಿ ಜಿಂವಾ ಬಿಡ್ತೀನೆಂತ. ನಿನಕಿಂತಾ ನನಗ ಈ ಜಿಂವಾ ಹೆಚ್ಚಿಂದಲ್ಲ ಶಿವೂ...."

ಗಂಗಾ ಆತ್ತೇಬಿಟ್ಟಳು. ಮುಸ್ಸಂಜೆ ಸತ್ತು ಮುಗಿಲ ತುಂಬ ಕರಿಕತ್ತಲೆ ಗಡ್ಡೆ ಗಟ್ಟುತ್ತಿತ್ತು. ತೋಟದ ಹಸುರಿನಲ್ಲಿ ನಡುವೆ ಜಾರಿದ ಕತ್ತಲೆ ಆವರ ಸುತ್ತ ಕಪ್ಪನೆಯ ವರ್ತುಳ ಸೃಷ್ಟಿಸಿತು.

ಗಂಗಾ ಮುಖಕ್ಕೆ ಸೆರಗೊತ್ತಿ ಕಣ್ಣೀರೊರೆಸಿಕೊಂಡು ನಿಡಿದಾದ ಉಸಿರುಬಿಟ್ಟಳು. ಸೀಂಗನಿಗಿನ್ನೂ ತಡೆದುಕೊಳ್ಳಲಾಗಲಿಲ್ಲ. ತಟ್ಟನೆ ಅವಳನ್ನೆಳೆದುಕೊಂಡು ಎದೆಗೊತ್ತಿ ಕೊಂಡವನು ಹಣೆ, ಕೆನ್ನೆ, ಕಣ್ಣು, ಗದ್ದಗಳಿಗೆ ಲಟಲಟನೆ ರಭಸದ ಮುತ್ತಿಟ್ಟು ತುಟಿಗೆ ತುಟಿ ಬೆಸೆದ. ಅವನೆದೆಯಲ್ಲಿ ಹುದುಗಿದ ಗಂಗಾ ಅತ್ತಳು. ನಕ್ಕಳು. ಆಳುವು–ನಗುವುಗಳ ಸಮ್ಮಿಶ್ರ ಭಾವಗಳಲ್ಲಿ ತನ್ನನ್ನೇ ತಾನು 'ಆಳುಮಗ: ಸೀನಿಂಗನಿಗೆ ಒಪ್ಪಿಸಿಕೊಟ್ಟು ಸುಖವಾಗಿ ನರಳಿದಳು.'

ದಿನಕಳೆದಂತೆ ಇವರ ಪ್ರೇಮ ಬೆಳೆಯಿತು. ಬಲಿಯಿತು. ತೋಟ, ಹೊಲ, ಹೊಳೆ, ಗುಡ್ಡ, ಹುಣಸೆ ತೋಪು, ಮಾವಿನ ತೋಪುಗಳಲ್ಲಿ ಇಬ್ಬರ ಭೇಟಿ ನಿರಂತರವಾಯಿತು. ಹಕ್ಕಿಪಕ್ಕಿ, ಗಿಡಮರ, ಹುಲುಮಣ್ಣು, ಚಿಕ್ಕಿ ಚಂದ್ರಾಮ, ಹೊಳೆ ಹರಿಯುವ ಹೊಳೆಗಳೆಲ್ಲ ಇವರ ಪ್ರಣಯಕ್ಕೆ ಸಾಕ್ಷಿಯಾದವು. ಹಿಂದಿನ ಎಲ್ಲ ರೂಢಿ

ಸಂಪ್ರದಾಯಗಳನ್ನು, ರೀತಿ ರಿವಾಜುಗಳನ್ನು ಜಾತಿಕುಲಗಳನ್ನು ನಿರ್ಭಿಡೆಯಿಂದ, ಝಾಡಿಸಿ ಒದ್ದು ಗಂಗಾ ಸೀನಿಂಗರು ಮುಂದೆ ನಡೆದರು. ಹೃದಯ ಪ್ರೀತಿ, ಭಾವನೆಗಳ ಮೇಲೆ ಯಾರ ಜೋರು ಜಬರದಸ್ತಿ ನಡೆದೀತು? ಪ್ರಣಯಿಗಳಿಗೆ ಪ್ರಪಂಚದೆಡೆಗೆ ಕುರುಡು ನೋಟ.

ಆದರೆ ಪ್ರಪಂಚಕ್ಕೆ ಪ್ರಣಯಿಗಳೆಡೆಗೆ ಯಾವತ್ತೂ ಚೂಪುಗಣ್ಣು. ಅತ್ತಿಗೆಯರ ನಡುವೆ ಗಂಗೆ ಸೀನಿಂಗರ ಪ್ರೀತಿ ಬಹಳ ಗುಟ್ಟಾಗಿ ಉಳಿಯಲಿಲ್ಲ. ಅತ್ತಿಗೆಯರ ನಡುವೆ ಗುಸುಗುಸು ಶುರುವಾಯಿತು. ಅಣ್ಣಂದಿರ ಕಿವಿ ಸೇರಿತು. ತಂದೆಗೆ ತಿಳಿಸಿದ ಹಿರಿಮಗ ಬಸ್ರಾಜ ಗುಟ್ಟಾಗಿ ಹೇಳಿದ.

"ಯಪ್ಪಾ... ಇದು ಭಾಳ ನಾಜೂಕು ಆದಾ. ಮುಳ್ಳಬೇಲಿ ಮ್ಯಾಲ ನಮ್ ವಂಶದ ಮರ್ವಾದಿ ಅಂಬೋ ರೇಸಿಮಿ ಸೆರಗು ಸಿಗಬಿದ್ದಾದ. ಅದಕೆ ಭಾಳ ಹುಷಾರಿಲಿಂದ ಬಿಡಸ್ಕೋಬೇಕು..."

"ಹೆಂಗರೆ ಮಾಡು ಮಗಾ...ನಮ್ ಇಜ್ಜತ್‌ಕ್ಕ ಕುಂದ ಬರಬಾರ್ದು..."

"ನೀವೆಲ್ಲ ಸುಮ್ಕಿರ್ರಿ.... ನಮಗ ಇದೆಲ್ಲಾ ಗೊತ್ತಾಗ್ಯಾದಂಬಾದು ಗಂಗಾಗಾಗಲಿ ಸೀನಿಂಗ್ಯಾಗಾಗಲಿ ತಿಳಿಬಾರ್ದು. ನಾಯೆಲ್ಲಾ ನೋಡ್ಕೊತಿನಂತ."

ಮುಂದೆ ಒಂದೇ ತಿಂಗಳಲ್ಲಿ ನೆರೆಹಳ್ಳಿಯ ಗೋಡನ ಮಗ ಈರಣ್ಣನೊಂದಿಗೆ ಗಂಗೆಯ ಮದುವೆ ನಿಶ್ಚಯವಾಯಿತು. ಗಂಗಾ ಗೋಳಾಡಿದಳು. ಒಲ್ಲೆ ಎಂದು ಹಟ ಮಾಡಿದಳು. ಕೊನೆಗೆ ತಾನು ಸೀನಿಂಗನನ್ನು ಪ್ರೀತಿಸುತ್ತಿದ್ದೇನೆ ಎಂದೂ ಹೇಳಿದಳು. ಬಸ್ರಾಜ ನಕ್ಕುಬಿಟ್ಟ. "ನೋಡು ಗಂಗಾ... ನಮಗೆಲ್ಲಾ ಗೊತ್ತಾದಾ.. ನೀ ಸುಮ್ಮನ ಈ ಮದುವಿಗಿ ಒಪಗೊ. ಇಲ್ಲಂದ್ರ ನಿನಗೇನೂ ಮಾಡಂಗಿಲ್ಲ ನಾವು, ಆದರೆ ಸೀನಿಂಗಾ ಸೂಳ್ಯಾಮಗನಿಗೆ ಸಣ್ಣಾಗಿ ಕತ್ತರಿಸಿ ಮುಂದಿನ ಹೊಳ್ಯಾಗ ಎಸೀತೇವು. ಬರ್ಲಿ ಯಾ ನನ್ ಮಗಾ ಕೆಳ್ಲಕ್ಕೆ ಬರ್ತಾನ ನಮಗ..."

ಗಂಗಾ ನಡುಗಿದಳು. ಕಾಲಿನ ಕಿರುಬೆರಳಿನಿಂದ ಹಿಡಿದು ನೆತ್ತಿಯ ತುದಿಯವರೆಗೂ ಛಳ್ಳನೆ ಜಿಗಿದೇರಿದ ಚಳಿಯಲ್ಲಿ ಆವರ ಮೈಯೆಲ್ಲ ಸೆಟೆದಂತಾಗಿ ಜೀವ ಹೋಗುತ್ತಿದೆ ಎನ್ನಿಸಿತು. ಖಟ್ ಖಟ್ ಖಡಲ್ ಎಂದು ಅಬ್ಬರಿಸುತ್ತ ಸಾವಿರ ಸಿಡಿಲುಗಳು ಒಮ್ಮೆಲೆ ತಲೆಗಪ್ಪಳಿಸಿದಂತಾಗಿ ನಿಂತ ನೆಲ ಬಾಯ್ತೆರೆದು ಅವಳನ್ನು ಅನಾಮತ್ತಾಗಿ ಗುಳುಂ ಎಂದು ನುಂಗಿದಂತಾಯ್ತು.

"ಹೂಂ....ಏನು ಹೇಳು ಗಂಗಾ? ನಿನ್ನ ಇರಾದಾ ಏನದಾ?"

ಅಣ್ಣ ಬಸ್ರಾಜ ಅಬ್ಬರಿಸಿದಾಗಲೇ ಅವಳು ಎಚ್ಚೆತ್ತದ್ದು, ಭಯಂಕರವಾಗಿ ನಿಂತಿದ್ದ ಅಣ್ಣ, ಸಿಟ್ಟಿನಲ್ಲಿ ಉರಿಯುತ್ತಿದ್ದ ಅಪ್ಪ ಏನೂ ಮಾಡಬಲ್ಲರು ಎನ್ನಿಸಿತು. ತುಟಿ ಕಚ್ಚಿ ಕಣ್ಣೀರನ್ನು ಕಣ್ಣಲ್ಲೇ ಇಂಗಿಸುತ್ತ ಮದುವೆಗೆ ಒಪ್ಪಿದಳು.

ರಾತ್ರಿಯೆಂಬೋ ರಾತ್ರಿಯೆಲ್ಲ ಗಂಗಾ ಕಣ್ಣುರೆಪ್ಪೆ ಕೂಡಿಸಲಿಲ್ಲ. ಆಕಾಶದಲ್ಲಿಯ ಚಿಕ್ಕಿ ಚಂದ್ರಾಮರ ಜೋಡಿ ಕತ್ತಲೆಯ ಸುತ್ತ ಕಾವಲು ಕುಳಿತಳು. ಗವ್ವೆಂದು ಧಾವಿಸುತ್ತ ದೆವ್ವಿನಂತೆ ಬಂದು ಸುತ್ತಮುತ್ತ ಮುತ್ತಿ ಕಳ್ಳಾಮುಳ್ಳ್ಯಾ ಆಡುವ ಕರಿಕತ್ತಲೆಯೊಂದಿಗೆ ಕಣ್ಣು ತೆರೆದೇ ತುಟಿ ಬಿಗಿದಳು. ಎದೆಯೊಳಗಿಂದೆದ್ದು ಬಂದು ಗುದ್ದುವ, ಚುಚ್ಚುವ, ತಿವಿಯುವ ವಿಚಾರಗಳಿಗೆ ಮೈಸೆಟಿಸಿ ಜಾನಿಸಿಯೇ ಜಾನಿಸಿದಳು.

ಹೊಯಿಂದು...ತಾ ಮಾಡಿದ್ದೇ ಸರಿ. ತಾನು ಈ ಮದವಿಗೊಪ್ಪಿದ್ದೇ ಸರಿ. ಇಲ್ಲಂದ್ರ ಖರೇನೆ ಖರೆ ಈ ಅಣ್ಣ ತನ್ ಶಿವೂನ ಜಿಂವಾ ತಗೋತ್ತಿದ್ದ. ಹಿಂದಕ್ಕೆಲ್ಲಾ ತನ್ ಮನಿತನದ ಹಿರೇರು ಬೇಕಾದೋಟು ಬಡಮಂದಿ ಜಿಂವಾ ತಗೊಂಡಾರಂತೆ. ಕಟುಕರು ಅವರು. ಅದರ ಮ್ಯಾಲ ಶಿವೂ ಮಾಡಿದ ತೆಪ್ಪೆರೆ ಏನವಾ ಅಂತೀನಿ? ಅಂವಾ ಅಂದ ನಾಗರಪಂಚಮಿ ದಿನಾ ತನ್ನ ಜಿಂವಾ ಉಳಿದ್ದು ತೆಪ್ಪಾ? ತನ್ನ ಜಿಂವಾ ಕೊಟ್ಟು ನನ್ ಜಿಂವಾ ಉಳಸಿದವನಿಗೆ ನಾ ಮನಸ್ಸು ಕೊಟ್ಟಿದು ತೆಪ್ಪಾ? ಖರೇವಂದ್ರ ಇದರಾಗ ಶಿವೂಂದೇನೂ ಚಲಾಕಿಲ್ಲ. ನಾ ಎಂಟೆಂಟು ದಿನಾ ಅವನ ಮುಂದೆ ಕುಂತು ಪಿರೀತಿ ಮಾಡಂತ್ಹೇಳಿ ಗಂಟುಬಿದ್ದು ಅತ್ತೂ ಕರ್ರೂದ ಜುಲಮಿ ಮಾಡಿದ ಮ್ಯಾಲೆ ಅಲ್ಲ ಅಂವ ನನಗೆ ತನ್ನ ತೆಕ್ಕ್ಯಾಗ ಹಿಡ್ಕೊಂಡಿದ್ದು? 'ನಾ ಉಳೆಂಗಿಲ್ಲ ಸಾಯ್ತಿನಿ ನೋಡು' ಅಂತ ನಾ ಜೋರು ಮಾಡಿ ಅತ್ತಾಗೇ ಅಲ್ಲ ಅಂವಾ ನನ್ ಕಾಳಜಕ್ಕೆ ತನ್ನ ಕಾಳಜಾ ಬೆಸೆದದ್ದು? ನಾನೇ ಬಲವಂತ ಮಾಡ್ದೇ....ನಾನೇ ಜೋರಾ ಜುಲುಮಿ ಮಾಡಿದ್ದು, ಪಾಪ ಅಂವ ಹಸುಗೂಸಿನಂತಾವ. ಸೀದಾ ಸಾದಾ ಭೋಳ್ಯಾ ಮನಶ್ಯಾ ನನ್ ಶಿವೂ...ನಾ ಮಾಡಿದ ಪಾಪಕ್ಕ ಅಂವಾ ಯಾಕ ಜಿಂವಾ ಕುಡ್ಬೇಕು? ಈ ಕಟುಕ್ರು ಅವನ ಜಿಂವಾ ಯಾಕ ತಗೋಬೇಕು? ನಾ ಈ ಮದಿವಿಗಿ ಒಪ್ಪಿ ತೀರಾ ನರಕದಾಗ ಕೊಳ್ತು ನಾರಾದರನೂ ಪರವಾ ಇಲ್ಲ. ನನ್ ಶಿವೂ ಅರೆ ಸುಖದಾಗಿರ್ತಾನಲ್ಲ. ಆಟೇ ಸಾಕು ನನಗ ಈ ಮದವಿಗೆ ಒಪ್ಕೊಂಡಿದ್ದೇ ಬೇಸಾಯ್ತು. ಇದೇ ಚೆಂದಾಯ್ತು, ಇಂತವೇ ಹಲವು ಹದಿನೆಂಟು ವಿಚಾರಗಳಲ್ಲಿ ಗಂಗಾ ಹಾಸಿಗೆಯ ತುಂಬ ಕಣ್ಣೀರು ಚೆಲ್ಲುತ್ತ, ನಿಟ್ಟುಸಿರು ತುಂಬುತ್ತ ಕಳೆದಳು. ಅವಳ ಕಣ್ಣೀರಿಗೆ, ನಿಟ್ಟುಸಿರಿನ ಬಿಸಿಗೆ ಕರಾಳ ಕತ್ತಲೆ ಕರಗತೊಡಗಿತು.

ತಿಂಗಳೊಳಗಾಗಿ ಗಂಗಾ ಈರಣ್ಣಗೋಡನ ಹೆಂಡತಿಯಾಗಿ ಅಳುತ್ತ ಹಳ್ಳಿ ಬಿಟ್ಟು, ಗಂಡನ ಮನೆಗೆ ಹೋದಳು. ಮತ್ತೇನೂ ಗಡಬಡ ಆಗಲಾರದಂತೆ ಬಸ್ರಾಜಪ್ಪ ಹಗಲಿರುಳೂ ತಂಗಿಯ ಮೇಲೆ ಪಹರೆಯಿಟ್ಟ. ಯಾರಿಗೂ ಯಾವ ಗುಮಾನಿಯೂ ಬರಲಿಲ್ಲ.

ಆದರೆ ವಾರದ ಹಿಂದೆಯೇ ಗಂಗೆಯ ಕಿವಿಗೆ ಎದೆ ಬಿರಿಯುವಂತ ಭಯಂಕರ ಸುದ್ದಿ ಬಂದಪ್ಪಳಿಸಿತು.

"ಗಂಗೀ... ನಿಮ್ ತವರಮನಿ ಆಳಮಗಾ ಸೀನಿಂಗ ಅಂತ ಯಾರೋ... ಸೇರಿ ಕುಡ್ದು ಸತ್ತಾನಂತ ನೋಡು ಮನ್ನಿ..."

ಗಂಡ ಬಂದು ಹೇಳಿದಾಗ ಗಂಗಾ ಕುಳಿತಲ್ಲಿಯೇ ಮರಗಟ್ಟಿದಳು. ಎಂದೂ ಸೆರೆ ಕುಡಿಯದ ಸೀನಿಂಗ ಸೆರೆ ಕುಡಿದು ಸತ್ತ! ಅಣ್ಣ ಬಸ್ರಾಜನ ನೆತ್ತರಗಣ್ಣು, ವಿಕಾರ ಮುಖ, ಕಣ್ಣಮುಂದೆ ಬಂದು ರಕ್ಕಸದ, ವಿಜಯದ ನಗೆಯನ್ನು ಫಕಫಕನೆ ಹೊರದಬ್ಬಿದಾಗ ಅವಳೆದೆಯಲ್ಲಿ ಬೆಂಕಿ ಭುಗಿಲ್ಲೆಂದು ಸತ್ಯವನ್ನು ಬೆತ್ತಲು ಮಾಡಿತು.

ಮೈಮೇಲೆ ಖಬರಿಲ್ಲದವಳಂತೆ ಗಂಗಾ ಅಂದೇ ಗಂಡನನ್ನು ಕರೆದುಕೊಂಡು ತವರೂರಿಗೆ ಬಂದಳು. ಆಯಿಯ ಜೊತೆ ತೋಟಕ್ಕೆ ಹೋದಳು. ಆಯಿಯ ತೊಡೆಯಲ್ಲಿ ತಲೆಯಿಟ್ಟು ವಿಲವಿಲನೆ ಒದ್ದಾಡುತ್ತಾ, ಆಳುತ್ತ ಬಿಕ್ಕಳಿಸುತ್ತ, ನೀರಿನಿಂದ ಹೊರತಳ್ಳಿದ ಮೀನಿನ ಮರಿಯಂತೆ ಚಡಪಡಿದಳು. ಆಯಿಯ ಮಡಿಲು ತುಂಬ ಕಣ್ಣೀರನ್ನು ತುಂಬುತ್ತಲೇ ಸೀನಿಂಗನ ಸುದ್ದಿ ಕೇಳಿದಳು. ಮೊಮ್ಮಗಳ ಹಿಂದಿನದೆಲ್ಲ ಅರಿತಿದ್ದ ಆಯಿ ಗುಟ್ಟುಬಿಚ್ಚಿತು. "ಹಿಂಗ ಅಳಬಾರ್ದು ಕೂಸು, ನೀ ಮದ್ವಿ ಮಾಡ್ಕೊಂಡು ಹ್ವಾದಿನೋಡು. ಸೀನಿಂಗನೂ ಊರು ಬಿಡೋ ತಯಾರಿದಾಗ ಇದ್ದ. ಕುಂತರ ನಿಂತರ ಬಿಸಿಯುಸಿರ ಹಾಕ್ಕೋತ ಅನ್ನ ನೀರಾ ಬಿಟ್ಟು ಅಂವ ಮೂಕಾಗೇ ಇದ್ದ. ಯಾರ ಜೋಡಿಗೂ ಮಾತಿಲ್ಲ ಕತೆಯಿಲ್ಲ. ಹಿಂತದರಾಗೇ ಇಂದಿನಾ ಸೆರ್‍ಯಾಗ ಇಸಾ ಹಾಕಿ ನಮ್ಮ ಬಸ್ರಾಜ ಅವನಿಗೆ ಜಬರದಸ್ತಿಲಿಂದ ಕುಡ್ಸಿ ಬಿಟ್ಟ್ನಂತ. ಸೀನಿಂಗ ಸತ್ತನವ್ವಾ ಮಗಳೇ....ಮಂದಿಗೀ

ಗುಮಾನಿ ಬರಬಾರ್ದು ಅಂತ ನಮ್ ಖಾಸಾ ಆಳುಮಗನಿಗಿ ನಮ್ಮ ತ್ವಾಟದಾಗೆ ಹೂಳಿ ಮಣ್ಣ ಮಾಡಿದ್ರು. ಮ್ಯಾಲೊಂದು ಕಲ್ಲ ಚಪ್ಪಡಿ ಎಳ್ದು ಬಿಟ್ಟರು ಆಯ್ತು. ಅದ ನೋಡು, ಅದೇ ನಿನ್ ಸೀನಿಂಗನ ಗೋರಿ..."

ಮುದುಕಿ ಸೀನಿಂಗನ ಗೋರಿ ತೋರಿತು. ಗಂಗಾ ಹತ್ತಿರ ಬಂದಳು. ಇನ್ನೂ ಹಸಿ ಹಸಿಯಾದ ಗೋರಿ. ಗಂಗಾ ಅದರ ಮೇಲೆ ಹೊರಳಾಡುತ್ತ ಭೋರೆಂದು ಅತ್ತಳು, ಕರೆದಳು. ಆದರೆ ಗೋರಿಯ ತಳದಲ್ಲಿಯ ಸೀನಿಂಗ ಓಗೊಡಲಿಲ್ಲ, ಎದ್ದು ಮೇಲೆ ಬರಲಿಲ್ಲ.

"ಸೀನಿಂಗಂದೇನೂ ತೆಪ್ಪಿರಲಿಲ್ಲ ಆಯೀ... ತಪ್ಪೆಲ್ಲಾ ನಂದೆ ಇತ್ತು. ನಾನೇ ಮ್ಯಾಲೆ ಬಿದ್ದು ಅವನಿಗೆ ಪಿರೀತಿ ಮಾಡಿದ್ದು. ಅಣ್ಣ ನನಗೆ ಕೊಲ್ಲಬೇಕಾಗಿತ್ತು. ಅದರ ತನ್ನ ತಂಗೀಗ ಉಳಸಿ, ಏನೂ ತಪ್ಪಿಲ್ದ ಆಳುಮಗನ ಜಿಂವಾ ತಗೊಂಡು ಬಿಟ್ಟ.... ಇದು ಹಿಂಗೇ ಆಯಿ... ತಪ್ಪ ದೊಡ್ಡ ಕುಲದವ್ರು ಮಾಡಿದರನೂ ಸಾಯೋದು ಮಾತರ ಸಣ್ಣ ಕುಲದ ಸೂದ್ರ ಮಂದೀನೇ... ತೆಪ್ಪಿ ಯಾರದಿದ್ದರನೂ ಅದಕ್ಕೆ ತೆಲಿ ಕೊಟ್ಟು ಜಿಂವಾ ಕಳ್ಕೊವ್ರು ಈ ಕೆಳಜಾತಿ ಭೋಳಾಮಂದಿನೇ..."

ಗಂಗಾ ಆಯಿಯ ಕೊರಳು ತಬ್ಬಿ ಬಿಕ್ಕಳಿಸುತ್ತ ವಿವರಿದಳು.

"ಮಗಾ...ಭಾಳ ತೆಲಿಮಾರಗೋಳಲಿಂದ ಇದು ಹಿಂಗೇ ನಡ್ಕೋತ ಬಂದಾದ ಕೂಸು...ದೊಡ್ಡವರ ತಪ್ಪಿಗಿ ಸಣ್ಣವರ ತೆಲಿ ದಂಡಾ... ಸಾವ್ಕಾರರ ತಪ್ಪಿಗಿ ಬಡೂರ ಬಲಿ...ಹೂಂ.. ನಡಿಯಿನ್ನ, ಕತ್ತಲಾಯ್ತು...."

"ಸಣ್ಣ ಗೋಡ್ತೀ... ಕತ್ತಲ ಭಾಳಾಯ್ತು... ಆಯಿ ಕಲ್ಲಿಕ್ಹತ್ತಾಳೆ ಬರ್ರೀ ಯವ್ವಾ....ಮನೀಗಿ ಹೋಗಾಮೆಂತ್ರೀ...."

ಎನ್ನುತ್ತ ಅಳುಮಗ ಹತ್ತು ವರ್ಷದ ಬಚ್ಚ, ಓಡಿಬರುತ್ತ ಕರೆದಾಗ ಗಂಗೆಯ ನೆನಪುಗಳು ಧಬಧಬನೆ ಒಳಸರಿದು ಬಾಗಿಲು ಮುಚ್ಚಿಕೊಂಡವು. ಅವಳು ಸೀನಿಂಗನ ಗೋರಿಗೆ ಹಣೆಯಿಟ್ಟು, ತುಟಿಯೊತ್ತಿ ದೀರ್ಘಮುತ್ತಿಟ್ಟು ಕಣ್ಣೊರೊಸಿಕೊಂಡು ಎದ್ದು ಬಂದಳು. ಸೀನಿಂಗನನ್ನು ಕೊಂದಿದ್ದು ತನ್ನಣ್ಣ ಬಸ್ರಾಜ ಅಲ್ಲ. ತಾನೇ ಎನ್ನಿಸ ತೊಡಗಿದಾಗ ಅವಳ ಕಣ್ಣು ತುಂಬೆಲ್ಲ ಆಮಾವಾಸ್ಯೆಯ ಕತ್ತಲೆ ಮುತ್ತತೊಡಗಿತು.

## ಓದುಪತ್ಯ:

### ೩.೪. ತಂದೆ ತಾಯಿ ಮತ್ತು ಮಗುವಿನ ನಡುವಣ ಪ್ರೀತಿ

– ಎರಿಕ್ ಫ್ರಾಂ, ಅನುವಾದ: ಕೆ.ವಿ. ನಾರಾಯಣ
ಮತ್ತು ಎಚ್. ಎಸ್ ರಾಘವೇಂದ್ರರಾವ್

ಮಗುವಿಗೆ ಹುಟ್ಟಿದ ತಕ್ಷಣ ತಾನು ತಾಯಿಯಿಂದ, ಕರುಳಿನ ಒಳಬಳ್ಳಿಯಿಂದ ಬೇರ್ಪಟ್ಟು ಏಕಾಂಗಿಯಾಗಿದ್ದೇನೆಂಬ ಅರಿವು ಮೂಡದೇ ಇರುವುದರಿಂದಲೇ ಅದು ರಕ್ಷಿತ. ಹಾಗಿಲ್ಲದೆ ಹೋದರೆ ಅದು ಸಾವಿನ ಭಯವನ್ನು ಎದುರಿಸಬೇಕಾಗುತ್ತದೆ. ಹುಟ್ಟಿದ ಮೇಲೂ, ಹುಟ್ಟುವ ಮೊದಲು ಇದ್ದ ಸ್ಥಿತಿಗಿಂತ ಅದೇನೂ ಎದ್ದು ಕಾಣುವಂತೆ ಬದಲಾಗುವುದಿಲ್ಲ. ಅದು ವಸ್ತುಗಳನ್ನು ಗುರುತಿಸಲಾರದು. ತನ್ನ ಬಗೆಗೆ ಅರಿವು ಇರುವುದಿಲ್ಲ. ತನಗಿಂತ ಬೇರೆಯಾದ ಜಗತ್ತೊಂದಿದೆಯೆಂಬ ಅರಿವೂ ಇರುವುದಿಲ್ಲ. ಬೆಚ್ಚಗಿನ ಸ್ಪರ್ಶ ಮತ್ತು ಆಹಾರಗಳೆಂಬ ಪ್ರಚೋದಕಗಳಿಗೆ ಮಾತ್ರ ಪ್ರತಿಕ್ರಿಯೆ ನೀಡಬಲ್ಲುದು. ಅದರ ಪಾಲಿಗೆ ಸ್ಪರ್ಶ ಮತ್ತು ಆಹಾರಗಳಿಗೂ ಅವು ದೊರಕುವ ಮೂಲವಾದ ತಾಯಿಗೂ ಏನೇನೂ ವ್ಯತ್ಯಾಸವಿಲ್ಲ. ತಾಯಿಯೇ ಬೆಚ್ಚನೆಯ ಸ್ಪರ್ಶ, ತಾಯಿಯೇ ಆಹಾರ, ತಾಯಿಯೇ ತೃಪ್ತಿ ಮತ್ತು ರಕ್ಷಣೆಯ ಮಂಪರು ಸ್ಥಿತಿ. ಈ ಸ್ಥಿತಿಯು ಫ್ರಾಯ್ಡನ ಮಾತಿನಲ್ಲಿ ಹೇಳುವುದಾದರೆ ಸ್ವಮೋಹವುಳ್ಳದ್ದು. ಮನುಷ್ಯರಿರಲಿ, ಇಲ್ಲವೇ ವಸ್ತುಗಳಿರಲಿ ಹೊರಗಿನ ವಾಸ್ತವತೆಯು ದೇಹದ ಒಳಗಿನ ಬಯಕೆಯನ್ನು ತೃಪ್ತಿಗೊಳಿಸುವ ಇಲ್ಲವೇ ಕೆರಳಿಸುವ ನೆಲೆಯಲ್ಲಿ ಮಾತ್ರ ಅರ್ಥವನ್ನು ಪಡೆದಿರುತ್ತದೆ. ಒಳಗಿನದು ಮಾತ್ರ ನಿಜ; ಹೊರಗಿನದು ನನ್ನ ಅಗತ್ಯಗಳ ನೆಲೆಯಲ್ಲಿ ಮಾತ್ರ ನಿಜವೇ ಹೊರತು ಅದರದ್ದೇ ಆದ ಗುಣಗಳ ಇಲ್ಲವೆ ಅಗತ್ಯಗಳ ನೆಲೆಯಲ್ಲಲ್ಲ.

ಮಗು ಬೆಳೆದಂತೆ, ತುಂಬಿಕೊಂಡಂತೆ, ವಸ್ತುಗಳನ್ನು ಅವುಗಳ ನೆಲೆಯಲ್ಲೇ ಗ್ರಹಿಸಲು ಸಮರ್ಥವಾಗುತ್ತದೆ. ಆಹಾರ ದೊರಕಿದಾಗ ಸಿಗುವ ತೃಪ್ತಿಯನ್ನು ಮೊಲೆತೊಟ್ಟಿನಿಂದ ಬೇರ್ಪಡಿಸಬಲ್ಲದು. ಹಾಗೆಯೇ ಮೊಲೆಗಳನ್ನು ಮತ್ತು ತಾಯಿಯನ್ನು ಬೇರ್ಪಡಿಸಿ ನೋಡಬಲ್ಲುದು. ಕ್ರಮೇಣ ಮಗುವು ತನ್ನ ಬಾಯಾರಿಕೆ ಮತ್ತು ಅದನ್ನು ನಿವಾರಿಸುವ ಹಾಲು ಇವುಗಳ ಅನುಭವವನ್ನು ಬೇರೆ ಬೇರೆ ಎಂದು ತಿಳಿಯಬಲ್ಲುದಾಗುತ್ತದೆ. ಹೀಗೆ ಹಲವು ವಸ್ತುಗಳನ್ನು, ತಮ್ಮದೇ ಆದ ಅಸ್ತಿತ್ವವನ್ನು ಪ್ರತ್ಯೇಕ ಸಂಗತಿಗಳನ್ನಾಗಿ ನೋಡಲು ಕಲಿಯುತ್ತದೆ. ಈ ಹಂತದಲ್ಲಿ ಅವುಗಳಿಗೆ ಹೆಸರು ನೀಡುವುದನ್ನು ಪ್ರಾರಂಭಿಸುತ್ತದೆ. ಅದೇ ವೇಳೆಗೆ ಅವುಗಳನ್ನು ಉಪಯೋಗಿಸಲು ಕಲಿಯುತ್ತದೆ. ಬೆಂಕಿ ಸುಡುವುದೆಂದೂ, ನೋವು ತರುವುದೆಂದೂ ತಾಯಿಯ

ದೇಹವು ಬೆಚ್ಚಗೆ ಉಲ್ಲಾಸದಾಯಕವೆಂದೂ ಮರ ಗಟ್ಟಿಯೂ ಭಾರವಾದದ್ದು ಎಂದೂ, ಕಾಗದ ಹಗುರವಾಗಿದ್ದು, ಅದನ್ನು ಹರಿಯಬಹುದೆಂದೂ ಕಲಿಯುತ್ತದೆ. ಜನರೊಡನೆ ವರ್ತಿಸುವುದನ್ನು ಕಲಿಯುತ್ತದೆ. ತಾನು ತಿನ್ನುವಾಗ ತಾಯಿ ನಗುವಳೆಂದು, ನಾನು ಅತ್ತಾಗ ಅವಳು ತೋಳಲ್ಲಿ ಎತ್ತಿಕೊಳ್ಳುವಳೆಂದು ತಿಳಿಯುತ್ತದೆ. ಈ ಎಲ್ಲ ಅನುಭವಗಳು ಹರಳುಗೊಂಡು ಅನುಭವದಲ್ಲಿ ಆಳವಾಗಿ ಬೇರೂರುತ್ತವೆ. ಆ ಅನುಭವವೇ 'ನನ್ನನ್ನು ಪ್ರೀತಿಸುತ್ತಾರೆ' ಎಂಬುದು. ನಾನು ತಾಯಿಯ ಮಗುವಾದ್ದರಿಂದ ನನ್ನನ್ನು ಪ್ರೀತಿಸುತ್ತಾರೆ. ನಾನು ಅಸಹಾಯಕನಾದ್ದರಿಂದ ನನ್ನನ್ನು ಪ್ರೀತಿಸುತ್ತಾರೆ. ತಾಯಿಗೆ ನನ್ನ ಅಗತ್ಯವಿದೆಯಾಗಿ ನನ್ನನ್ನು ಪ್ರೀತಿಸಲಾಗುತ್ತದೆ. ನಾನು ಹೇಗಿರುವೆನೊ ಆ ಸ್ಥಿತಿಯನ್ನು ಪ್ರೀತಿಸಲಾಗುತ್ತದೆ ಎಂದು ಮೇಲಿನ ಮಾತುಗಳನ್ನು ಸಾಧಾರಣೀಕರಿಸಿ ಹೇಳಬಹುದು. ಇನ್ನೂ ಖಚಿತವಾಗಿ ಹೇಳುವುದಾದರೆ, ನಾನು ಇರುವುದರಿಂದ ನನ್ನನ್ನು ಯಾರಾದರೂ ಪ್ರೀತಿಸಬೇಕಾದರೆ ನಾನು ಮಾಡಬೇಕಾದದ್ದು ಏನೂ ಇಲ್ಲ. ತಾಯಿಯ ಪ್ರೀತಿ ಬೇಷರತ್ತಿನ ರೂಪದ್ದು, ನಾನು ಅವಳ ಮಗುವಾಗಿದ್ದರೆ ಅಷ್ಟೇ ಸಾಕು. ತಾಯಿಯ ಪ್ರೀತಿ ಆನಂದದಾಯಕ, ಶಾಂತಸ್ವರೂಪಿ– ಅದನ್ನು ಗಳಿಸಬೇಕಾಗಿಲ್ಲ. ಅದಕ್ಕಾಗಿ ಅರ್ಹತೆ ಗಳಿಸಬೇಕಿಲ್ಲ. ಇದಕ್ಕೆ ಇನ್ನೊಂದು ನೇತ್ಯಾತ್ಮಕ ರೂಪವೂ ಇದೆ. (ತಾಯಿಯ ಬೇಷರತ್ತಿನ ಪ್ರೀತಿಗೂ) ಆ ಪ್ರೀತಿಯನ್ನು ಬೇಕೆಂದು ಬಯಸಬೇಕಿಲ್ಲ ಮಾತ್ರವಲ್ಲ – ಬೇಕೆಂದಾಗ ಗಳಿಸಲು, ಮೂಡಿಸಲು ನಿಯಂತ್ರಿಸಲು ಸಾಧ್ಯವಿಲ್ಲ. ಅದು ತಾನೇ ಮೂಡಿದರೆ ಅದೊಂದು ವರ ಅದಿಲ್ಲದೆ ಹೋದರೆ ಜೀವನದಿಂದ ಸುಂದರವಾದೊಂದು ಅಂಶ ನಿರ್ಗಮಿಸಿದಂತೆ ಅದನ್ನು ಸೃಷ್ಟಿಸಲು ನಾನೇನನ್ನೂ ಮಾಡಲಾರೆ.

ಬಹುಪಾಲು ಮಕ್ಕಳು ಎಂಟರಿಂದ ಒಂಭತ್ತೂವರೆ ವಯಸ್ಸಿಗಿಂತ ಮುಂಚಿನ ಅವಧಿಯಲ್ಲಿ ಇತರರಿಂದ ಪ್ರೀತಿಯನ್ನು ಪಡೆಯುತ್ತಾರೆ ಅಷ್ಟೆ, ಅವರನ್ನು ಏನೂ ಷರತ್ತಿಲ್ಲದೆ ಇತರರು ಪ್ರೀತಿಸುತ್ತಾರೆ. ಆದರೆ ಆ ವಯಸ್ಸಿನ ಮಕ್ಕಳು ಪ್ರೀತಿಸಲಾರರು. ತಮ್ಮನ್ನು ಪ್ರೀತಿಸಿದರೆ ಕೃತಜ್ಞತೆಯಿಂದ ಸಂತೋಷದಿಂದ ಪ್ರತಿಕ್ರಿಯಿಸುತ್ತಾರೆ. ಮಗುವಿನ ಬೆಳವಣಿಗೆಯ ಈ ಘಟ್ಟದಲ್ಲಿ ಹೊಸದೊಂದು ಅಂಶ ಸೇರಿಕೊಳ್ಳುತ್ತದೆ. ಅದೊಂದು ಹೊಸ ಭಾವನೆ; ತನ್ನ ಕ್ರಿಯೆಗಳ ಮೂಲಕವೇ ಪ್ರೀತಿಯನ್ನು ಮೂಡಿಸಲು ಯತ್ನಿಸುವುದು. ಮೊದಲ ಬಾರಿಗೆ ಮಗು ತಾಯಿಗೆ (ಇಲ್ಲವೇ ತಂದೆಗೆ) ಏನನ್ನಾದರೂ ನೀಡಬೇಕೆಂದು ಯೋಚಿಸುತ್ತದೆ. ಅದೊಂದು ಕವನವೋ, ಚಿತ್ರವೋ ಏನಾದರೂ ಆಗಿರಬಹುದು ಮೊದಲ ಬಾರಿಗೆ ಮಗುವಿನ ಜೀವನದಲ್ಲಿ ಪ್ರೀತಿಯೆಂಬುದು ಇತರರಿಂದ ದೊರಕುವುದೇ ಆಗದೇ ತನ್ನಿಂದ ಕೊಡಲು ಸಾಧ್ಯವಿರುವಂಥದೂ ಆಗಿದೆಯೆಂಬ ಅನಿಸಿಕೆ ಮೂಡುತ್ತದೆ. ಪ್ರೀತಿಯನ್ನು ಮೂಡಿಸಲು ಸಾಧ್ಯವೆಂಬುದು ತಿಳಿಯುತ್ತದೆ. ಈ ಮೊದಲ ಹೆಜ್ಜೆಯಿಂದ ಪ್ರೀತಿಯು ಪಕ್ವಗೊಳ್ಳಲು ಹಲವು ವರ್ಷಗಳೇ ಹಿಡಿಯುತ್ತವೆ. ಈ ನಡುವೆ ಪ್ರೌಢ

ವಯಸ್ಸನ್ನು ತಲುಪಿದ ಮಗು ತನ್ನ ಮೋಹವನ್ನು ನಿವಾರಿಸಿಕೊಂಡಿರುತ್ತದೆ. ಇತರ ಮನುಷ್ಯರು ಮೂಲಭೂತವಾಗಿ ತನ್ನ ಬಯಕೆಗಳನ್ನು ತೃಪ್ತಿಗೊಳಿಸುವ ಸಾಧನಗಳಾಗಿ ಉಳಿಯುವುದಿಲ್ಲ. ಇತರರ ಅಗತ್ಯಗಳು ತನ್ನವಷ್ಟೇ ಪ್ರಾಮುಖ್ಯವಾದವುಗಳು. ಹಾಗೆ ನೋಡಿದರೆ, ಇತರರ ಅಗತ್ಯಗಳೇ ಒಂದು ಕೈ ಮಿಗಿಲಾಗುತ್ತವೆ. ಏನನ್ನಾದರೂ ಪಡೆಯುವುದಕ್ಕಿಂತ, ನೀಡುವುದು ಹೆಚ್ಚು ತೃಪ್ತಿಕರವೂ ಆನಂದದಾಯಕವೂ ಆಗಿರುತ್ತದೆ. ತನ್ನನ್ನು ಇತರರು ಪ್ರೀತಿಸುವುದಕ್ಕಿಂತ ಇತರರನ್ನು ತಾನು ಪ್ರೀತಿಸುವುದು ಮಿಗಿಲೆನಿಸುತ್ತದೆ. ಮನುಷ್ಯನು ಸ್ವಾರ್ಥ ಮತ್ತು ಸ್ವಮೋಹಗಳ ಸ್ಥಿತಿಯಲ್ಲಿ ರೂಪುಗೊಂಡಿದ್ದ, ಏಕಾಂಗಿತನದ, ತಬ್ಬಲಿತನದ ಜೈಲಿನಿಂದ, ಇತರರನ್ನು ಪ್ರೀತಿಸುವುದರ ಮೂಲಕ ಬಿಡುಗಡೆ ಪಡೆಯುತ್ತಾನೆ. ಇತರರೊಡನೆ ಬೆರೆಯುವ, ಹಂಚಿಕೊಳ್ಳುವ, ಒಂದಾಗುವ ಹೊಸ ಭಾವನೆಯನ್ನು ಅನುಭವಿಸುತ್ತಾನೆ. ಇತರರಿಂದ ಪ್ರೀತಿಯನ್ನು ಪಡೆಯುವಾಗ ಪರಾವಲಂಬಿಯಾಗಬೇಕಿತ್ತು. ಅದರಿಂದಾಗಿ ತಾನು ಅಲ್ಪನೂ ಅಸಹಾಯಕನೂ, ದುರ್ಬಲನೂ ಆಗಿರಬೇಕಿತ್ತು. ಈಗ ಪ್ರೀತಿಯನ್ನು ನೀಡುವ ಮೂಲಕ ಪ್ರೀತಿಯನ್ನು ಮೂಡಿಸಬಹುದಾದ ಸಾಮರ್ಥ್ಯವನ್ನು ಅನುಭವಿಸುತ್ತಾನೆ. ಶಿಶು ಪ್ರೀತಿಗೆ ನೆಲೆ ಇದು: 'ನನ್ನನ್ನು ಪ್ರೀತಿಸುವುದರಿಂದ ನಾನು ಪ್ರೀತಿಸುತ್ತೇನೆ'.– ಪಕ್ವ ಪ್ರೀತಿಯ ನೆಲೆ, 'ನಾನು ಪ್ರೀತಿಸುವುದರಿಂದ ನನ್ನನ್ನು ಪ್ರೀತಿಸುತ್ತಾರೆ.'– ಅಪಕ್ವ ಪ್ರೀತಿಯೆನ್ನುತ್ತದೆ. ಹೀಗೆ: 'ನೀನು ನನಗೆ ಅಗತ್ಯವೆಂದು ನಾನು ನಿನ್ನನ್ನು ಪ್ರೀತಿಸುವೆನು. ಪಕ್ವ ಪ್ರೀತಿಯೆನ್ನುತ್ತದೆ 'ನಾನು ನಿನ್ನನ್ನು ಪ್ರೀತಿಸುವವನಾಗಿ ನೀನು ನನಗೆ ಬೇಕು.'

ಪ್ರೀತಿಸುವ ಸಾಮರ್ಥ್ಯದ ಬೆಳವಣಿಗೆಯ ಜತೆಗೆ ಪ್ರೀತಿಸುವ ವಸ್ತುವಿನ ಬೆಳವಣಿಗೆಯೂ ಸಂಬಂಧ ಪಡೆದಿದೆ. ಮಗುವಿನ ಮೊದಲ ತಿಂಗಳು ಮತ್ತು ವರ್ಷಗಳಲ್ಲಿ ತಾಯಿಯ ಜತೆ ತುಂಬು ಸಂಪರ್ಕವಿರುತ್ತದೆ. ತಾಯಿಯನ್ನು ಹೀಗೆ ಮಗು ಹಚ್ಚಿಕೊಳ್ಳುವುದು ಹುಟ್ಟುವ ಮೊದಲೇ ಆರಂಭವಾಗುತ್ತದೆ. ಆಗ ತಾಯಿ ಮಗು ಎಂದು ಇಬ್ಬರಿದ್ದರೂ, ಅವರಿಬ್ಬರೂ ಒಂದೇ ಆಗಿರುತ್ತಾರೆ. ಹುಟ್ಟು ಈ ಪರಿಸ್ಥಿತಿಯನ್ನು ಕೊಂಚ ಬದಲಾಯಿಸಿದರೂ, ನಾವಂದುಕೊಂಡಷ್ಟೇನೂ ಅಲ್ಲ. ಗರ್ಭದ ಹೊರಗೆ ಬದುಕಿರುತ್ತಿರುವ ಮಗು ಈಗಲೂ ತಾಯಿಯನ್ನು ಅವಲಂಬಿಸಬೇಕು. ಅದರೆ ದಿನೇದಿನೇ ಸ್ವಾವಲಂಬಿಯಾಗಿರುತ್ತದೆ. ನಡೆಯಲೂ, ಮಾತನಾಡಲು ತಾನೇ ತನ್ನ ಸುತ್ತಣ ಜಗತ್ತನ್ನು ಕಂಡುಕೊಳ್ಳಲು ಕಲಿಯುತ್ತದೆ. ತಾಯಿಯ ಜತೆಗಿನ ಸಂಬಂಧ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತದೆ. ಬದಲಿಗೆ ತಂದೆಯ ಜತೆಗಿನ ಸಂಬಂಧ ಹೆಚ್ಚುಹೆಚ್ಚು ಮುಖ್ಯವಾಗುತ್ತದೆ.

ತಾಯಿಯಿಂದ ತಂದೆಯೆಡೆಗೆ ಮಗುವಿನ ಆಸಕ್ತಿ ಓಲುವುದನ್ನು ಅರಿಯಲು ನಾವು ತಾಯಿಯ ಮತ್ತು ತಂದೆಯ ಪ್ರೀತಿಯಲ್ಲಿ ಇರುವ ಮೂಲಭೂತ ವ್ಯತ್ಯಾಸಗಳನ್ನು ಗಮನಿಸಬೇಕು. ಈಗಾಗಲೇ ತಾಯಿಯ

ಪ್ರೀತಿಯನ್ನು ಕುರಿತು ಹೇಳಲಾಗಿದೆ. ತಾಯಿಯ ಪ್ರೀತಿ ತನ್ನ ಸ್ವರೂಪದಲ್ಲೇ ಬೇಷರತ್ತಿನದು. ತಾಯಿ ತನ್ನ ನವಜಾತ ಶಿಶುವನ್ನು ತನ್ನ ಮಗುವೆಂದು ಪ್ರೀತಿಸುತ್ತಾಳೆಯೇ ಹೊರತು ಅದು ತನ್ನ ಇಚ್ಛೆಯನ್ನು ಪೂರೈಸಿದೆಯೆಂದೂ, ತನ್ನ ಬಯಕೆಯನ್ನು ನೀಗಿದೆಯೆಂದೂ ಅಲ್ಲ. (ಅಂದಹಾಗೆ ತಾಯಿಯ ಮತ್ತು ತಂದೆಯ ಪ್ರೀತಿ ಎಂದಾಗ ನಾನು ಗಮನಿಸುವುದು ಮ್ಯಾಕ್‌ವೇಬರನು ಹೇಳಿದ ಆದರ್ಶೀಕೃತ ತಂದೆ ತಾಯಿಯರನ್ನು – ಅಥವಾ ಯಾಂಗ್ ಹೇಳಿದ ಮೂಲ ಪ್ರತೀಕಗಳಿಂದ ಅಷ್ಟೇ. ಹೊರತು ಎಲ್ಲ ತಾಯಿ ತಂದೆಯರು ಹೀಗೆ ವರ್ತಿಸುತ್ತಾರೆ. ಎಂದೇನೂ ಅಲ್ಲ. ತಾಯಿಯ ಇಲ್ಲವೇ ತಂದೆಯ ಪ್ರೀತಿಯೆಂಬುದು ಅವರ ಪಾತ್ರಗಳನ್ನು ನಿರ್ವಹಿಸುವ ಯಾವ ವ್ಯಕ್ತಿಯಲ್ಲಾದರೂ ಇರಬಹುದು.) ತನ್ನನ್ನು ಯಾವ ಆಪೇಕ್ಷೆಯೂ ಇಲ್ಲದೆ ಪ್ರೀತಿಸಬೇಕೆಂಬ ಆಳವಾದ ಬಯಕೆ ಮಗುವಿನ ಜಗತ್ತಿನದು ಮಾತ್ರವಲ್ಲ: ಅದು ಎಲ್ಲ ಮನುಷ್ಯರಲ್ಲೂ ಇರುವಂಥದು. ಅಲ್ಲದೆ ಅರ್ಹತೆಯನ್ನು ಮೆಚ್ಚಿಕೊಂಡು ಇಲ್ಲವೇ ನಾನು ತಕ್ಕವನೆಂದುಕೊಂಡು ನನ್ನನ್ನು ಪ್ರೀತಿಸುವುದು ಸದಾ ಸಂದೇಹದಲ್ಲಿ ತಳ್ಳುವುದು. ಏಕೆಂದರೆ ನನ್ನನ್ನು ಪ್ರೀತಿಸಬೇಕೆಂದು ನಾನು ಅಪೇಕ್ಷಿಸುವ ವ್ಯಕ್ತಿಯು ಮೆಚ್ಚುವಂತೆ ನಡೆದುಕೊಂಡನೋ ಇಲ್ಲವೋ, ಇದು ಸರಿಯೋ ತಪ್ಪೋ ಎಂಬ ಸಂದೇಹಗಳು ಇದ್ದೇ ಇರುತ್ತವೆ. ಇರುವ ಪ್ರೀತಿಯು ಮಾಯವಾಗುವ ಭಯವೂ ಯಾವಾಗಲೂ ಇರುತ್ತದೆ. ಇನ್ನೂ ಹೇಳುವುದಾದರೆ, 'ಇವನಿಗೆ ಪ್ರೀತಿ ಬೇಕಿದೆ' ಎಂದು ಯಾರಾದರೂ ಪ್ರೀತಿಸಿದರೆ ಆ ಪ್ರೀತಿ, ಒಂದು ಕಹಿ ಅನುಭವವೇ ಸರಿ. ಏಕೆಂದರೆ ನನ್ನನ್ನು ತಾನಿರುವ ಸ್ವರೂಪದಲ್ಲಿ ಅವರು ಪ್ರೀತಿಸುವುದಿಲ್ಲ. ನಾನು ಸಂತೋಷಪಡುವೆನೆಂಬ ಕಾರಣದಿಂದಾಗಿ ಪ್ರೀತಿಸುತ್ತಾರೆ. ಕೊನೆಗೆ ಹೇಳುವುದಾದರೆ ನನ್ನನ್ನು ಯಾರೂ ಪ್ರೀತಿಸುತ್ತಿರುವುದಿಲ್ಲ, ಬದಲಿಗೆ ಬಳಸಿಕೊಳ್ಳುತ್ತಿರುತ್ತಾರೆ. ಮಕ್ಕಳಾಗಿದ್ದಾಗ ಹಾಗೂ ದೊಡ್ಡವರಾದ ಮೇಲೂ ನಾವು ತಾಯಿಯ ಪ್ರೀತಿಯ ಬಯಕೆಗೆ ಅಂಟಿಕೊಂಡರೆ ಆಶ್ಚರ್ಯವಿಲ್ಲ. ಬಹುಪಾಲು ಮಕ್ಕಳು ತಾಯಿಯ ಪ್ರೀತಿಯನ್ನು ಪಡೆಯುವಷ್ಟು ಅದೃಷ್ಟವಂತರು. (ಎಷ್ಟರಮಟ್ಟಿನ ಪ್ರೀತಿ ಎಂಬುದನ್ನು ಮುಂದೆ ಚರ್ಚಿಸಲಾಗುತ್ತದೆ.) ದೊಡ್ಡವರಾದ ಮೇಲೂ ಈ ಬಯಕೆ ಪೂರ್ಣವಾಗುವುದು ಕಷ್ಟ ಸಾಮಾನ್ಯವಾಗಿ ಆರೋಗ್ಯಕರ ಬೆಳವಣಿಗೆಯಿದ್ದರೆ ಈ ಬಯಕೆಯು ದೈಹಿಕ ಕಾಮಪ್ರೇರಿತ ಅಂಗವಾಗಿ ಉಳಿಯುತ್ತದೆ. ಕೆಲವೊಮ್ಮೆ ಅದು ಧಾರ್ಮಿಕ ಸ್ವರೂಪವನ್ನು ಪಡೆಯಬಹುದು. ಇನ್ನೂ ಹೆಚ್ಚು ಸಂದರ್ಭಗಳಲ್ಲಿ ವಿಕ್ಷಿಪ್ತ ವರ್ತನೆಗಳಲ್ಲಿ ಸಂಭವಿಸಬಹುದು.

ತಂದೆಯ ಜತೆಯ ಸಂಬಂಧ ಬೇರೆ ರೀತಿಯದು. ತಾಯಿ ನಮ್ಮ ತವರು ಮನೆ. ಆಕೆ ಪ್ರಕೃತಿ, ಭೂಮಿ, ಸಾಗರ, ತಂದೆ ಇಂಥ ಯಾವ ಪ್ರಾಕೃತಿಕ ಆಶಯವನ್ನೂ ಪ್ರತಿನಿಧಿಸುವುದಿಲ್ಲ. ಮಗುವಿನ ಮೊದಲ ವರ್ಷಗಳಲ್ಲಿ ಅದರ ಜತೆಗೆ ತಂದೆಗಿರುವ ಸಂಪರ್ಕ ತುಂಬ ಕಡಿಮೆ. ಈ ಅವಧಿಯಲ್ಲಿ ಮಗುವು

ತಾಯಿಯನ್ನು ಬೇಕೆಂದು ಕೇಳುವಷ್ಟು ಈತನನ್ನು ಕೇಳುವುದಿಲ್ಲ. ತಂದೆಯು ಪ್ರಾಕೃತಿಕವಾಗದ ಆಶ್ರಯಕ್ಕೆ ಸಂಕೇತವಲ್ಲದಿದ್ದರೂ, ಆತ ಮನುಷ್ಯನ ಅಸ್ತಿತ್ವವಾಗಿರುವ ಆಲೋಚನೆಯ, ಮಾನವನಿರ್ಮಿತ ವಸ್ತುಗಳ, ನ್ಯಾಯ ವ್ಯವಸ್ಥೆಯ, ಶಿಸ್ತಿನ, ಪ್ರವಾಸ ಮತ್ತು ಸಾಹಸದ ಪ್ರಪಂಚವನ್ನು ಪ್ರತಿನಿಧಿಸುತ್ತಾನೆ. ತಂದೆಯೇ ಮಗುವಿಗೆ ಕಲಿಸುವವನು, ಜಗತ್ತಿಗೆ ದಾರಿ ತೋರಿಸುವವನು.

ತಂದೆಯ ಈ ಕರ್ತವ್ಯದ ಜತೆಯೇ ಸಂಬಂಧವುಳ್ಳ ಸಾಮಾಜಿಕ–ಆರ್ಥಿಕ ಬೆಳವಣಿಗೆಯೂ ಒಂದಿದೆ. ಸ್ವಂತ ಆಸ್ತಿಯ ಕಲ್ಪನೆ ಬೆಳೆಯಲು ಆರಂಭವಾಗಿ, ಈ ಸ್ವಂತ ಆಸ್ತಿಯನ್ನು ಮಗನು ಅನುವಂಶಿಕವಾಗಿ ಪಡೆಯುವ ಪದ್ದತಿ ಬೇರೂರುತ್ತ ಬಂದಂತೆ, ತಂದೆ ತನ್ನ ಆಸ್ತಿಯ ಹಕ್ಕುದಾರಿಕೆಗೆ ತಕ್ಕ ಮಗನನ್ನು ಹುಡುಕಲು ತೊಡಗಿದನು. ಸಹಜವಾಗಿಯೇ ತಂದೆಗೆ ಯಾವ ಮಗ ತನ್ನಂತೆ ಇದ್ದಾನೋ ಯಾವ ಮಗನನ್ನು ತಾನು ತುಂಬ ಇಷ್ಟಪಡುತ್ತೇನೋ ಆತನೇ ತನ್ನ ಉತ್ತರಾಧಿಕಾರಿಯಾಗಲು ತಕ್ಕವನೆಂದು ಅನಿಸಿತು. ಹೀಗಾಗಿ ತಂದೆಯ ಪ್ರೀತಿ ಷರತ್ತಿನಿಂದ ಕೂಡಿರುತ್ತದೆ. ಅದರ ತತ್ವವಿಷ್ಟು; 'ನಾನು ನಿನ್ನನ್ನು ಪ್ರೀತಿಸುವುದೇಕೆಂದರೆ, ನೀನು ನನ್ನ ಅಪೇಕ್ಷೆ (ನಿರೀಕ್ಷೆ)ಗಳನ್ನು ಪೂರೈಸುತ್ತೀಯೆ. ನೀನು ನಿನ್ನ ಕರ್ತವ್ಯವನ್ನು ನಿರ್ವಹಿಸುವೆ. ನೀನು ನನ್ನ ಹಾಗೆ ಇರುವೆ.' ತಂದೆಯ ಈ ಷರತ್ತಿನ ಪ್ರೀತಿಯಲ್ಲೂ (ತಾಯಿಯ ಆ ಬೇಷರತ್ತಿನ ಪ್ರೀತಿಯಂತೆ) ನಮಗೆ ನೇತ್ಯಾತ್ಮಕ ಮತ್ತು ಇತ್ಯಾತ್ಮಕ ಅಂಶಗಳು ಕಂಡುಬರುತ್ತವೆ. ನೇತ್ಯಾತ್ಮಕವೇಕೆಂದರೆ, ತಂದೆಯ ಪ್ರೀತಿಯನ್ನು ಗಳಿಸಲು ತಕ್ಕವನಾಗಬೇಕು. ನಿರೀಕ್ಷೆಗಳನ್ನು ಪೂರೈಸಲಾಗದಿದ್ದರೆ ಆ ಪ್ರೀತಿಯನ್ನು ನಾವು ಕಳೆದುಕೊಳ್ಳಲೂಬಹುದು. ತಂದೆಯ ಪ್ರೀತಿಯಲ್ಲಿ ವಿಧೇಯತೆಯೇ ಮೊದಲ ಗುಣ. ಅವಿಧೇಯತೆಯೇ ಮೊದಲ ಪಾಪ. ಪಾಪಕ್ಕೆ ಶಿಕ್ಷೆಯೆಂದರೆ ತಂದೆಯ ಪ್ರೀತಿಯನ್ನು ಕಳೆದುಕೊಳ್ಳುವುದು. ಇತ್ಯಾತ್ಮಕ ಅಂಶವೂ ಅಷ್ಟೇ ಮುಖ್ಯ. ಪ್ರೀತಿಯು ನಿರ್ದೇಶಿತವೂ ಬದ್ಧವೂ ಆಗಿರುವುದರಿಂದ ಅದನ್ನು ಗಳಿಸಲು ನಾನು ಏನನ್ನಾದರೂ ಮಾಡುತ್ತೇನೆ, ಅದಕ್ಕಾಗಿ ಶ್ರಮಿಸುತ್ತೇನೆ. ತಂದೆಯ ಪ್ರೀತಿಯು ತಾಯಿಯ ಪ್ರೀತಿಯಂತೆ ನನ್ನ ನಿಯಂತ್ರಣವನ್ನು ಮೀರಿದುದಲ್ಲ.

ಮಗುವಿನ ಬಗೆಗೆ ತಾಯಿ ಮತ್ತು ತಂದೆಯರ ದೃಷ್ಟಿ, ಮಗುವಿನ ಅಗತ್ಯಗಳನ್ನು ಅನುಸರಿಸುತ್ತದೆ. ಶಿಶುವಿಗೆ ತಾಯಿಯ ಷರತ್ತಿಲ್ಲದ ಪ್ರೀತಿ ಮತ್ತು ಆರೈಕೆಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಅವಶ್ಯ. ಆರು ವರ್ಷಗಳಾದ ಮೇಲೆ ಮಗು ತಂದೆಯ ಪ್ರೀತಿಯನ್ನೂ ಅವನ ಮಾರ್ಗದರ್ಶನವನ್ನೂ ಮತ್ತವನ ಅಧಿಕಾರವನ್ನೂ ಅಪೇಕ್ಷಿಸಲು ತೊಡಗುತ್ತದೆ. ತಾಯಿ ಮಗುವಿಗೆ ಜೀವನ ಸುರಕ್ಷಿತವಾಗುವಂತೆ ಮಾಡುತ್ತಾಳೆ. ತಂದೆ ಮಗುವಿಗೆ ಕಲಿಸುತ್ತಾನೆ. ಮಗು ಯಾವ ಸಮಾಜದಲ್ಲಿ ಹುಟ್ಟಿರುತ್ತದೋ, ಆ ಸಮಾಜದಲ್ಲಿ

ಎದುರಾಗುವ ಸಮಸ್ಯೆಗಳು, ಅವನ್ನು ಎದುರಿಸಲು ಬೇಕಾದ ಮಾರ್ಗದರ್ಶನ ನೀಡುವ ಕೆಲಸ ಮಾಡುತ್ತಾನೆ. ಆದರ್ಶವೆನ್ನಬಹುದಾದ ಸಂದರ್ಭದಲ್ಲಿ ತಾಯಿಯ ಪ್ರೀತಿ ಮಗುವಿನ ಬೆಳವಣಿಗೆಗೆ ತಡೆಯನ್ನೊಡ್ಡುವುದಿಲ್ಲ. ಅದರ ಅಸಹಾಯಕತೆಯೇ ಮುಂದುವರಿಯಬೇಕೆಂದು ಬಯಸುವುದಿಲ್ಲ. ತಾಯಿಗೆ ಜೀವನದಲ್ಲಿ ನಂಬಿಕೆ ಇರಬೇಕು, ಆದ್ದರಿಂದ ಅವಳು ಅತಿ ಆತಂಕಿತಳಾಗಬಾರದು.

ಅವಳು ತನ್ನ ಆತಂಕವನ್ನು ಮಗುವಿಗೂ ಅಂಟಿಸಬಾರದು. ತನ್ನ ಮಗು ಕ್ರಮೇಣ ತನ್ನಿಂದ ಬಿಡುಗಡೆ ಪಡೆದು ಸ್ವತಂತ್ರವಾಗಬೇಕೆನ್ನುವುದು ಅವಳ ಅಪೇಕ್ಷೆಗಳ ಅಂಗವಾಗಿರಬೇಕು; ತಂದೆಯ ಪ್ರೀತಿಯು ಕೆಲವು ತತ್ವಗಳು ಹಾಗೂ ನಿರೀಕ್ಷೆಗಳನ್ನು ಅವಲಂಬಿಸಿರಬೇಕು. ಅದು ಸಹನಶೀಲವೂ ಸಹಿಷ್ಣುವೂ ಆಗಿರಬೇಕು. ಅತಿ ಅಧಿಕಾರಯುತವೂ ಭಯಾವಹವೂ ಆಗಿರಕೂಡದು. ಅದು ಬೆಳೆಯುತ್ತಿರುವ ಮಗುವಿನಲ್ಲಿ ಕ್ರಮೇಣ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಒಂದಲ್ಲ ಒಂದು ದಿನ ಅವನು ತಂದೆಯ ಅಧಿಕಾರವನ್ನು ದಾಟಿ, ತನ್ನದೇ ಆದ ಅಧಿಕಾರಕೇಂದ್ರವನ್ನು ರೂಪಿಸಿಕೊಳ್ಳಲು ಸಾಧ್ಯವಾಗಬೇಕು.

ಕಾಲಕ್ರಮೇಣ ಪ್ರಬುದ್ಧ ವ್ಯಕ್ತಿಯು ತಾನೇ ತನ್ನ ತಂದೆ–ತಾಯಿ ಎನ್ನುವ ಸ್ಥಿತಿಯನ್ನು ತಲುಪುತ್ತಾನೆ. ಎಂದರೆ ಒಂದು ಅರ್ಥದಲ್ಲಿ ಅವನ ಅಂತರಂಗದಲ್ಲಿ ತಂದೆಯ ಪ್ರಜ್ಞೆಯೂ ಇದೆ ತಾಯಿಯ ಆತ್ಮಸಾಕ್ಷಿಯೂ ಇದೆ. ತಾಯಿಯು ನೀಡಿರುವ ತಿಳಿವಳಿಕೆಯು ಹೀಗೆ ಹೇಳುತ್ತದೆ: "ನೀನು ಮಾಡುವ ಯಾವುದೇ ಕೆಲಸ ಅಥವಾ ಅಪರಾಧವು, ನಿನ್ನನ್ನು ನನ್ನ ಪ್ರೀತಿಯಿಂದ ವಂಚಿತನಾಗಿ ಮಾಡುವುದಿಲ್ಲ. ನಾನು ಸದಾ ನಿನ್ನ ಸುಖಜೀವನಕ್ಕಾಗಿ ಹಂಬಲಿಸುತ್ತೇನೆ." ಆದರೆ ತಂದೆಯ ಕೊಡುಗೆಯಾದ ಆತ್ಮಸಾಕ್ಷಿಯು ಹೀಗೆ ಹೇಳುತ್ತದೆ: "ನೀನು ಮಾಡಿದ್ದು ತಪ್ಪು, ಆ ತಪ್ಪಿನ ಕೆಲವು ಪರಿಣಾಮಗಳನ್ನು ನೀನು ಅನುಭವಿಸುವುದು ಅನಿವಾರ್ಯ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ನನ್ನ ಪ್ರೀತಿಯು ಹೀಗೆಯೇ ಮುಂದುವರಿಯಬೇಕಾದರೆ ನಿನ್ನ ನಡೆ ನುಡಿಗಳಲ್ಲಿ ಬದಲಾವಣೆ ಮಾಡಿಕೊಳ್ಳುವುದು ಅತ್ಯಗತ್ಯ." ಹೀಗೆ ಪ್ರಬುದ್ಧ ಮಾನವನು ಹೊರಗೆ ಇರುವ ತಾಯಿತಂದೆಯರಿಂದ ಬಿಡುಗಡೆ ಪಡೆದಿದ್ದಾನೆ. ಆದರೆ ತನ್ನ ಒಳಗಡೆಯೇ ಅವರ ಪ್ರತಿರೂಪಗಳನ್ನು ಕಟ್ಟಿಕೊಂಡಿದ್ದಾನೆ. ಆದರೆ ಅವನು ಫ್ರಾಯ್ಡ್ ಹೇಳಿದಂತಹ ಸೂಪರ್ ಈಗೋವನ್ನು ರೂಪಿಸಿಕೊಂಡಿಲ್ಲ. ಎಂದರೆ ಅವನೊಳಗೆ ಸ್ವತಃ ತಾಯಿತಂದೆಯರೇ ತಮ್ಮ ಇಷ್ಟಾನಿಷ್ಟಗಳೊಂದಿಗೆ ಮನೆಮಾಡಿಲ್ಲ. ಬದಲಾಗಿ ಅವನ ಸ್ವಂತದ ಪ್ರೀತಿಸುವ ಸಾಮರ್ಥ್ಯವು ತಾಯಪ್ರಜ್ಞೆಯಿಂದ ಆಕಾರ ತಳೆದಿರುತ್ತದೆ. ಹಾಗೆಯೇ ಅವನ ತಾರ್ಕಿಕತೆ ಮತ್ತು ನಿರ್ಣಯ ಶಕ್ತಿಗಳು ಪಿತೃಪ್ರಜ್ಞೆಯ ರೂಪಗಳಾಗಿರುತ್ತವೆ. ಇನ್ನೂ ಮುಂದೆ ಹೋಗಿ ಹೇಳುವುದಾದರೆ ಈ ಎರಡು ಪ್ರಶ್ನೆಗಳು ಪರಸ್ಪರ ವಿರೋಧವೆನ್ನುವಂತೆ ಕಾಣುವುದು ಮೇಲುನೋಟಕ್ಕೆ

ಮಾತ್ರ. ವಾಸ್ತವವಾಗಿ ಅವನ ಪಿತೃಪ್ರಜ್ಞೆ ಮತ್ತು ಮಾತೃಪ್ರಜ್ಞೆಗ್ಳೆರಡರಿಂದಲೂ ಪ್ರೀತಿಸುತ್ತಾನೆ. ಅವನು ಕೇವಲ ತಂದೆಯ ನೆಲೆಯನ್ನು ಉಳಿಸಿಕೊಂಡರೆ ಅಮಾನವೀಯನೂ ಕಟುಸ್ವಭಾವದವನೂ ಆಗುತ್ತಾನೆ. ಹಾಗೆಯೇ ತಾಯಿ ನೀಡಿದ ತಿಳಿವಳಿಕೆಯಿಂದ ಮಾತ್ರವೇ ವರ್ತಿಸಿದರೆ ಅವನು ವಿವೇಚನಾರಹಿತನಾಗುತ್ತಾನೆ. ಉಳಿದವರ ಬೆಳವಣಿಗೆಗೆ ಮಾತ್ರವಲ್ಲ, ಸ್ವತಃ ತನ್ನ ಬೆಳವಣಿಗೆಗೂ ಅಡ್ಡಿಯಾಗುತ್ತಾನೆ.

ಹೀಗೆ ಮಾತೃಕೇಂದ್ರಿತ ಅವಲಂಬನೆಯಿಂದ ಪಿತೃಕೇಂದ್ರಿತ ಅವಲಂಬನೆಯ ಕಡೆಗಿನ ಚಲನೆ ಮತ್ತು ಅಂತಿಮವಾಗಿ ಅವೆರಡೂ ಸಂಯೋಜಿತವಾಗುವುದು ಮಾನಸಿಕ ಆರೋಗ್ಯ ಹಾಗೂ ಪ್ರಬುದ್ಧತೆಯ ದೃಷ್ಟಿಯಿಂದ ಅತ್ಯಗತ್ಯ. ಈ ಬೆಳವಣಿಗೆಯು ವಿಫಲವಾಗುವುದರಲ್ಲಿಯೇ ನ್ಯೂರೊಸಿಸ್‌ನ ಮೂಲಕಾರಣವಿದೆ. ಆಲೋಚನೆಯ ಈ ನೆಲೆಯನ್ನು ಇನ್ನಷ್ಟು ಬೆಳೆಸುವುದು ಪ್ರಸ್ತುತ ಕೃತಿಯ ವ್ಯಾಪ್ತಿಯನ್ನು ಮೀರಿದ್ದು, ಆದರೂ ಕೆಲವು ಸಂಗ್ರಹವಾದ ಅನಿಸಿಕೆಗಳು ಈ ಹೇಳಿಕೆಯನ್ನು ಸ್ಪಷ್ಟಪಡಿಸಬಹುದು.

ನ್ಯೂರಾಟಿಕ್ ಆದ ವ್ಯಕ್ತಿತ್ವದ ಬೆಳವಣಿಗೆಗೆ ಒಂದು ಕಾರಣವೆಂದರೆ ಒಬ್ಬ ಹುಡುಗನಿಗೆ ಪ್ರೀತಿಮಯಿಯಾದ ಆದರೆ ಕೇಳಿದ್ದನ್ನೆಲ್ಲ ಕೊಡುವವಳೋ ಅಥವಾ ಜಬರುದಸ್ತಿನವಳೋ ಆದ ತಾಯಿ ಇರುವುದು. ಅವನ ತಂದೆ ದುರ್ಬಲ ಹಾಗೂ ನಿರಾಸಕ್ತ. ಹೀಗಾದಾಗ ಆ ಹುಡುಗನು ತಾಯಿಯ ಮೇಲಿನ ಅವಲಂಬನೆಯಿಂದ ಹೊರಬರುವುದೇ ಇಲ್ಲ. ಸದಾ ಅವಳ ನೆರವನ್ನ ನಿರೀಕ್ಷಿಸುವ ಅಸಹಾಯಕನಾಗುತ್ತಾನೆ; ಉಳಿದವರಿಂದ "ಪಡೆದು" ಬಾಳುವ ವ್ಯಕ್ತಿಗೆ ಸಹಜವಾದ ತುಡಿತಗಳು ಅವನಲ್ಲಿ ಕಾಣಿಸಿಕೊಳ್ಳುತ್ತವೆ. ಯಾರಾದರು ಕೊಡಬೇಕು, ಕಾಪಾಡಬೇಕು, ಇವನ ಬಗ್ಗೆ ಕಾಳಜಿವಹಿಸಬೇಕು. ಇಂಥವನಲ್ಲಿ ತಂದೆಗೆ ಸಹಜವಾದ ಲಕ್ಷಣಗಳು ಕಡಿಮೆ, ಶಿಸ್ತು, ಸ್ವತಂತ್ರ ಮನೋಧರ್ಮ ಹಾಗೂ ಜೀವನವನ್ನು ತಾನೇ ರೂಪಿಸಿಕೊಳ್ಳುವ ಸಾಮರ್ಥ್ಯಗಳು ಗೈರುಹಾಜರಾಗುತ್ತವೆ. ಅವನು ಪ್ರತಿಯೊಬ್ಬರಲ್ಲಿಯೂ ತಾಯಿಗಾಗಿ ಅರಸಬಹುದು. ಕೆಲವು ಬಾರಿ ಹೆಣ್ಣು ಮಕ್ಕಳಲ್ಲಿ. ಬೇರೆ ಕೆಲವು ಸಲ ಅಧಿಕಾರಸ್ಥಾನದಲ್ಲಿರುವ ಸಮರ್ಥ ಪುರುಷರಲ್ಲಿ. ಬದಲಾಗಿ ತಾಯಿಯು ನಿರ್ಭಾವುಕಳೂ ಪ್ರತಿಸ್ಪಂದನೆಯಿಲ್ಲದವಳೂ, ದಬ್ಬಾಳಿಕೆ ನಡೆಸುವವಳೂ ಆದರೆ ಆಗ ಮಗನು ತಾಯ ಒಲವಿಗಾಗಿ ತಂದೆಯ ಕಡೆಗೆ ತಿರುಗುತ್ತಾನೆ. ಅಥವಾ ಪಿತೃಸಮ ವ್ಯಕ್ತಿಗಳಿಂದ ಅದನ್ನು ನಿರೀಕ್ಷಿಸುತ್ತಾನೆ. ಇಲ್ಲಿಯೂ ಅಂತಿಮ ಪರಿಣಾಮವು ಮೊದಲಿನಂತೆಯೇ ಇರುತ್ತದೆ ಅಥವಾ ಅವನು ತಂದೆತನವೇ ಪ್ರಧಾನನೆಲೆಯಾದ ಒಮ್ಮುಖದ ಮನುಷ್ಯನಾಗಿ ಬೆಳೆಯುತ್ತಾನೆ. ಅವನಿಗೆ ಕಾನೂನು ಕ್ರಮಬದ್ಧತೆ ಮತ್ತು ಅಧಿಕಾರಗಳೇ ಮುಖ್ಯ. ಅವನು ಬೇಷರತ್ತಾದ ಪ್ರೀತಿಯನ್ನು ನಿರೀಕ್ಷಿಸಲಾರ ಪಡೆಯಲಾರ. ತಂದೆಯು ತನ್ನ ಮಗನಿಗೆ ಬಹಳ ಅಂಟಿಕೊಂಡಿರುವ ಸರ್ವಾಧಿಕಾರೀ ಮನೋಭಾವದ ಮನುಷ್ಯನಾದರೆ ಇಂಥ

ಬೆಳವಣಿಗೆಯು ಸರಿಯಾಗಿ ನಡೆದಿರುವುದಿಲ್ಲ. ಇದಕ್ಕಿಂತ ಹೆಚ್ಚು ತೀವ್ರವಾದ ನ್ಯೂರಾಟಿಕ್ ಸನ್ನಿವೇಶಗಳಲ್ಲಿ ತಾಯಿ ತಂದೆಯರ ಪಾತ್ರಕ್ಕೆ ಸಂಬಂಧಿಸಿದಂತೆ ರೋಗಿಯಲ್ಲಿ ಗೊಂದಲವುಂಟಾಗುತ್ತದೆ. ಹೊರಗೆ ಇರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ, ಅವನ ಅಂತರಂಗದಲ್ಲಿರುವ ಆ ತತ್ವಗಳಿಗೆ ಸಂಬಂಧಿಸಿದಂತೆ, ಈ ಕ್ಷೇತ್ರದಲ್ಲಿ ನಡೆದಿರುವ ಅಧ್ಯಯನಗಳು ಇನ್ನೊಂದು ಸಂಗತಿಯನ್ನು ಸ್ಪಷ್ಟಪಡಿಸಿವೆ. ಅಬ್ ಸೆಷನಲ್ ನ್ಯೂರೊಸಿಸ್‌ನಂತಹ ಕೆಲವು ನ್ಯೂರಾಟಿಕ್ ಸಮಸ್ಯೆಗಳು ಒಮ್ಮುಖವಾದ ತಂದೆ ಹಂಬಲದ ಫಲವಾಗಿ ಮೂಡಿಬರುತ್ತವೆ. ಹಾಗೆಯೇ ಹಿಸ್ಟೀರಿಯಾ, ಆಲ್ಕೊಹಾಲಿಸಂ, ತನ್ನತನವನ್ನು ರೂಢಿಸಿಕೊಂಡು ಬದುಕನ್ನು ಎದುರಿಸುವ ಸ್ವಭಾವದ ಕೊರತೆ, ಡಿಪ್ರೆಷನ್ ಮುಂತಾದ ಸಮಸ್ಯೆಗಳು ಮಾತೃಕೇಂದ್ರಿತ ವ್ಯಕ್ತಿತ್ವದಲ್ಲಿ ಕಾಣಿಸಿಕೊಳ್ಳುತ್ತವೆ.

# ೪. ಸೃಜನ/ಸಂಕೀರ್ಣ

4.1. ಮೂರು ಮಂದಿ ಕುರುಡರು – ಎಚ್.ಎಸ್.ಶಿವಪ್ರಕಾಶ್
4.2. ರುದ್ರಪ್ಪನ ಖಡ್ಗ – ಕುಂ. ವೀರಭದ್ರಪ್ಪ
4.3. ಗಾದೆಗಳಲ್ಲಿ ಸಾಹಿತ್ಯ – ಎ.ಕೆ. ರಾಮಾನುಜನ್
4.4. ಮಾಧ್ಯಮಗಳಲ್ಲಿ ಅನುವಾದ ಸ್ವರೂಪ ಮತ್ತು ಭಾಷಾ ಆಧುನೀಕರಣದ ಪ್ರಕ್ರಿಯೆ – ಡಾ. ಬಸವರಾಜ ಕಲ್ಗುಡಿ

**ಆಶಯ:**

## ಸುಖ ದುಃಖಗಳು ಎಲ್ಲಿವೆ ?

**– ಸೂಫಿ ಕಥೆ**

–೧–

ಒಮ್ಮೆ ಒಬ್ಬ ಸೂಫಿ ಸಂತ ರಾಜನಿಗೆ, "ನಾವು ಸುಖ ದುಃಖಗಳನ್ನು ಬೇರೆಯವರಲ್ಲಿ ಹುಡುಕುತ್ತೇವೆ. ವಾಸ್ತವದಲ್ಲಿ ಅವೆಲ್ಲವೂ ನಮ್ಮೊಳಗೇ ಇದೆ" ಎಂದು ಬೋಧಿಸುತ್ತಿದ್ದ.

ರಾಜ ಅದನ್ನು ಒಪ್ಪಲಿಲ್ಲ. ಸಂತ ಅದನ್ನು ಸಾಬೀತುಪಡಿಸಲು ಮುಂದಾದ. "ನಿನ್ನ ರಾಜ್ಯದ ಆರೋಗ್ಯವಂತ ಯುವ ಗೃಹಸ್ಥನನ್ನು ಕರೆಸಿ, ಆರು ತಿಂಗಳು ಅವನನ್ನು ಒಂಟಿಯಾಗಿಡು, ಅನಂತರ ಮಾತಾಡೋಣ" ಅಂದ. ರಾಜ ಹಾಗೆಯೇ ಮಾಡಿದ.

ನಾಲ್ಕು ದಿನ ತಿಂದುಂಡು ಸುಖವಾಗಿದ್ದ ಯುವ ಗೃಹಸ್ಥ, ಐದನೇ ದಿನಕ್ಕೆ ಗೋಳಿಡತೊಡಗಿದ. ಅವನ ಒಳಗಿನದೇ ಚಿಂತೆಗಳು ಅವನನ್ನು ಮುತ್ತಿ ತಿನ್ನತೊಡಗಿದ್ದವು. ನನ್ನ ಹೆಂಡತಿ, ನನ್ನ ಮಗು ಎಂದೆಲ್ಲ ದುಃಖಿಸಿದ. ಅವರಿಗೆ ಎಲ್ಲ ರೀತಿಯ ಅನುಕೂಲ ಮಾಡಿಕೊಡಲಾಗಿದೆ, ಅವರು ಸುಖವಾಗಿದ್ದಾರೆ ಎಂದರೂ ಅವನಿಗೆ ಸಮಾಧಾನವಿಲ್ಲ. ಕೊನೆಗೂ ಯುವ ಗೃಹಸ್ಥ ಕಾಡಿಬೇಡಿ ರಾಜನ ಕೃಪೆ ಗಿಟ್ಟಿಸಿ ಹೊರಗೆ ಬಂದ.

ರಾಜನಿಗೆ ಸಂತನ ಮಾತು ಅರ್ಧದಷ್ಟು ಒಪ್ಪಿಗೆಯಾಯ್ತು. ಈಗ ಸಂತ, ಒಬ್ಬ ಸಾಧಕನನ್ನು ಕರೆಸಿ ಆರು ತಿಂಗಳು ಒಂಟಿಯಾಗಿ ಇರಿಸುವಂತೆ ಸೂಚಿಸಿದ. ಅದರಂತೆ ರಾಜ ಒಬ್ಬ ಸಾಧಕನನ್ನು ಕರೆಸಿದ. ಆ ಸಾಧಕ ಆರು ತಿಂಗಳಲ್ಲ, ವರ್ಷವಾಗುತ್ತಾ ಬಂದರೂ ಅಲ್ಲಿಂದ ಹೊರಡುವ ಬೇಡಿಕೆಯಲ್ಲೇ ಮುಂದಿಡಲಿಲ್ಲ! ತನ್ನ ಪಾಡಿಗೆ ತನ್ನ ಓದು, ಬರಹ, ಸಾಧನೆಗಳನ್ನು ಮಾಡಿಕೊಂಡು ಹಾಯಾಗಿದ್ದುಬಿಟ್ಟಿದ್ದ! ಏಕೆಂದರೆ ಅವನು ತನ್ನೊಳಗಿನ ಸುಖವನ್ನು, ಭಾವನೆಗಳನ್ನು ಕಂಡುಕೊಂಡಿದ್ದ. ಅವನು ಯಾರ ಮೇಲೂ ಅವಲಂಬಿತನಾಗಿರಲಿಲ್ಲ.

ರಾಜನಿಗೆ ಈಗ ಸಂತನ ಮಾತು ಸಂಪೂರ್ಣ ಒಪ್ಪಿತವಾಯಿತು.

ಒಮ್ಮೆ ಬಹಳ ತೊಂದರೆಗೆ ಸಿಕ್ಕಿಕೊಂಡ ಮನುಷ್ಯ ತನ್ನ ತೊಂದರೆಗಳೆಲ್ಲಾ ನಿವಾರಣೆಯಾದರೆ ಮನೆಯನ್ನು ಮಾರಿ ಅದರಿಂದ ಬಂದ ಹಣವನ್ನು ಬಡಬಗ್ಗರಿಗೆ ಹಂಚುವುದಾಗಿ ಪ್ರಮಾಣ ಮಾಡಿದ. ಕೊನೆಗೆ ಒಂದು ದಿನ ಅವನ ತೊಂದರೆಗಳೆಲ್ಲ ನಿವಾರಣೆಯಾದವು. ಅವನಿಗೆ ತಾನು ಮಾಡಿದ ಪ್ರಮಾಣವನ್ನು ನಡೆಸಿಕೊಡಬೇಕಾಗಿ ಬಂದಿತು. ಆದರೆ ಮನೆ ಮಾರಿ ಬಂದ ಹಣವನ್ನು ಬಡ ಬಗ್ಗರಿಗೆ ಹಂಚಲು ಅವನಿಗೆ ಮನಸ್ಸು ಬರಲಿಲ್ಲ. ಅದಕ್ಕಾಗಿ ಅವನೊಂದು ಉಪಾಯ ಮಾಡಿದ.

ತನ್ನ ಮನೆ ಹಾಗು ತನ್ನ ಬೆಕ್ಕನ್ನು ಆತ ಮಾರಾಟಕ್ಕೆ ಇಟ್ಟನು. ಮನೆಯ ಬೆಲೆ ಒಂದು ಬೆಳ್ಳಿಯ ನಾಣ್ಯ. ಬೆಕ್ಕಿನ ಬೆಲೆ ಒಂದು ಸಾವಿರ ನಾಣ್ಯ. ಆದರೆ ಕೊಳ್ಳುವವರು ಎರಡನ್ನು ಒಟ್ಟಿಗೆ ಕೊಂಡುಕೊಳ್ಳಬೇಕು.

ಯಾರೊ ಒಬ್ಬ ಎರಡನ್ನು ಕೊಂಡುಕೊಂಡ. ಈತ ಮನೆ ಮಾರಿ ಬಂದ ಒಂದು ಬೆಳ್ಳಿಯ ನಾಣ್ಯವನ್ನು ಬಡ ಬಗ್ಗರಿಗೆ ಹಂಚಿ ತಾನು ಮಾಡಿದ ಪ್ರಮಾಣ ಉಳಿಸಿಕೊಂಡ. ಬೆಕ್ಕು ಮಾರಿ ಬಂದ ಹಣದಿಂದ ಹೊಸ ಮನೆಯನ್ನು ಕೊಂಡುಕೊಂಡನು.

('ನಿಜವಾದ ಸೂಫಿ ಯಾವ ಧರ್ಮದ ಹಿಂಬಾಲಕನು ಅಲ್ಲ. ಯಾವ ಧರ್ಮದ ಕಟ್ಟು ಪಾಡುಗಳಿಗೂ ಆತ ಒಳಪಟ್ಟವನಲ್ಲ. ಸೂಫಿಸಂ ಎನ್ನುವುದು ಪ್ರೇಮದ ಅನುಭಾವದ ಹಾದಿ. ಆ ಹಾದಿಯ ಪಯಣ ಬೇರೆ ಎಲ್ಲಿಗೂ ಅಲ್ಲ. ಬದಲಿಗೆ ತನ್ನದೆ ಆತ್ಮದೆಡೆಗೆ. ಆ ಹಾದಿಯಲ್ಲಿ ಹೊರಟವನು ತನ್ನ ಹೃದಯದಲ್ಲೇ ಸತ್ಯ ಅಥವಾ ದೇವರನ್ನು ಕಂಡುಕೊಳ್ಳುತ್ತಾನೆ. ಆ ಸತ್ಯ ಅಥವಾ ದೇವರು ಬೇರೆ ಯಾರೂ ಅಲ್ಲ. 'ನೀನೇ ಎಂಬ ನಾನು')

**– ಜೆ.ಬಾಲಕೃಷ್ಣ**

# ೪.೧. ಮೂರು ಮಂದಿ ಕುರುಡರು

**- ಡಾ. ಎಚ್.ಎಸ್. ಶಿವಪ್ರಕಾಶ್**

**ಆಶಯ:** ಆದಿಯಿಂದ ಬಹಳಷ್ಟು ತತ್ವಜ್ಞಾನಿಗಳು, ಕವಿಗಳು ಮತ್ತು ಧಾರ್ಮಿಕ ಗುರುಗಳು ವಿವೇಚಿರುವ ನೆನ್ನೆ–ಇಂದು–ನಾಳೆಗಳ ಬಗ್ಗೆ ತಮ್ಮದೇ ಆದ ರೀತಿಯಲ್ಲಿ ಮಾತನಾಡುವುದು ಕಂಡುಬರುತ್ತದೆ. ವರ್ತಮಾನದ ಈ ಕುರುಡೇ ನಮ್ಮನ್ನು ಹೊಸ ಭವಿಷ್ಯಗಳ ಬಗ್ಗೆ ಯೋಚಿಸುವಂತೆ ಮಾಡುತ್ತದೆ. ತತ್ವಜ್ಞಾನದಲ್ಲಿ ಮುಂದುವರಿದು ನಾಲ್ಕು ಮತ್ತು ಐದನೆಯ ಅವಸ್ಥೆಗಳ ಬಗೆಯೂ ಈಗ ಚಿಂತನೆ ನಡೆದಿದೆ.

ಮೂರು ಜೀವದ ಗೆಳೆಯರು
ಮೂರು ಮಂದಿ ಕುರುಡರು
ಮೂರು ಕಾಲವ ಸೋಸಿನೋಡಲು
ಮೂರು ದಿಕ್ಕಿಗೆ ಹೋದರು

ಒಬ್ಬ ನಡೆದ ಹಿಂದೆ ಹಿಂದೆ
ದಾಟಿಹೋಗುತ ಹಿಂದೆ ಹಿಂದೆ
ತಾಯಿ ಬಸಿರಲಿ ಮರಳಿಹೊಕ್ಕು
ಕಲ್ಲಿನಲ್ಲಿ ಕಲ್ಲಾದನು;
ನೀರಿನಲ್ಲಿ ನೀರಾದನು;
ದಾರಿ ತಾನೂ ನೀರಾಯಿತು
ಆದಿ ಮೂಲಕ ಹರಿಯಿತು

ಒಬ್ಬ ನಡೆದ ಮುಂದೆ ಮುಂದೆ
ಉಕ್ಕು ರೆಕ್ಕೆ ಬಡಿದು ಮುಂದೆ
ಹಕ್ಕಿಗಿಂತ ವೇಗವಾಗಿ
ಭೂಮಿ ಸೀಮೆಯ ಮೇಲಾಸಿ

ಹಾರಿ ಹಾರಿ ಮುಂದೆ ಮುಂದೆ
ಇನ್ನೂ ಮುಂದೆ ಇನ್ನೂ ಮುಂದೆ
ದಿಕ್ಕು ತುದಿಯ ಮುಟ್ಟಿದವನೆ
ಚಿಕ್ಕೆಯಾಗಿ ಹೋದನು
ಹಾದಿ ಹಿಂದೆ ಉಳಿಯಿತು.

ಒಬ್ಬ ನಿಂತ ಕಡೆಯ ನಿಂತು
ಮಾಡುತ್ತಿದ್ದನು ಕವಾಯತು
ನೆಲವೇ ಸ್ಥಿರ ಅಂತ ಬಗೆದು
ನಲಿದು ತಾನೆ ಬುಗುರಿ ಹಾಗೆ
ಹಗಲ ಬಯಕೆ ಇರುಳಗಿತ್ತು
ಇರುಳ ಪ್ರೇಮ ಹಗಲಿಗಿತ್ತು
ತಿರುಗುತಿರುಗ ಕಂಡನು
ಆರಿಯದಂತೆ ಆದನು.

ಮೂರು ಮಂದಿ ಕುರುಡರು
ಮೂರು ಜೀವದ ಗೆಳೆಯರು
ನಾಲ್ಕನೆಯ ಹಾದಿಯಲ್ಲಿ
ಈಗ ಸಾಗುತಿರುವರು.

# ೪.೨. ರುದ್ರಪ್ಪನ ಖಡ್ಗ

**- ಕುಂ. ವೀರಭದ್ರಪ್ಪ**

**ಆಶಯ:** ಈ ಕಥೆಯು ಆಸ್ತಿಯಿಲ್ಲದಿದ್ದರೂ ಶ್ರೇಷ್ಠ ವಂಶದವನೆಂಬ ಒಣಜಂಬದಿಂದ ಬೀಗುತ್ತಾ ದುಡಿಯದೆ ಸೋಮಾರಿಯಾಗಿದ್ದ ರುದ್ರಪ್ಪನ ತುಕ್ಕು ಹಿಡಿದ ವ್ಯಕ್ತಿತ್ವದ ಪ್ರತೀಕವಾದ ಖಡ್ಗ ಅವನ ಪೊಳ್ಳು ಪ್ರತಿಷ್ಠೆಯ ಸಂಕೇತವಾಗಿ ಬಂದಿದೆ. ಪುರುಷ ಅಹಂ, ಹೆಣ್ಣಿನ ಅಳಲು ಇಲ್ಲಿ ಉದ್ದಕ್ಕೂ ಪ್ರವಹಿಸಿದೆಯಾದರೂ ಅನಕ್ಷರಸ್ಥೆಯಾದರೂ ಬುದ್ದಿಯಿಂದ ಧಾರ್ಮಿಕ ಚೌಕಟ್ಟಿನಲ್ಲೇ ರುದ್ರಪ್ಪನಿಗೆ ಬುದ್ದಿ ಕಲಿಸಿದ ನಿಂಗವ್ವ ನೆನಪಿನಲ್ಲುಳಿಯುತ್ತಾಳೆ. ಬಳ್ಳಾರಿಯ ಭಾಷಾ ಸೊಗಡು, ಪ್ರಾದೇಶಿಕತೆಯಿಂದಾಗಿ ಕುಂವೀ ಅವರ ರುದ್ರಪ್ಪನ ಖಡ್ಗ ವಿಶಿಷ್ಟವಾಗಿದೆ.

ಮಕ್ಕಳೊಂದಿಗ ರುದ್ರಪ್ಪನ ದಿನಚರಿ ಮೊನ್ನೆ ಇದ್ದಂತೆ ನಿನ್ನೆ ಇಲ್ಲ. ನಿನ್ನೆ ಇದ್ದಂತೆ ಇವತ್ತಿಲ್ಲ. ತುಂಬ ಬದಲಾಗಿದೆ. ಪೊಗದಸ್ತಾಗಿ ಊಟ ಮಾಡಿ ನೀಟಾಗಿ ಡ್ರೆಸ್ಸು ಮಾಡಿಕೊಂಡು ಅಂಗಳದ ಕಟ್ಟೆಗೆ ಕೂತು ಬೀದಿ ಉದ್ದಕ್ಕೂ ಕಣ್ಣು ಹರಿಬಿಟ್ಟು ಬೆಕ್ಕಿನಂತೆ ಹೊಂಚು ಹಾಕುತ್ತಾನೆ. ಆತನ ಕಣ್ಣಿಂದ ಯಾವುದೇ ಸಚರಾಚರ ತಪ್ಪಿಸುವುದು ಸಾಧ್ಯವಿಲ್ಲ. ಯಾರಾದರೂ ಸಿಕ್ಕರೆಂದರೆ ಮುಗಿಯಿತು. ಆಯಸ್ಕಾಂತ ಸೆಳವಿಗೆ ಸಿಕ್ಕ ಕಬ್ಬಿಣದ ಚೂರಿನಂತೆ ತನ್ನ ಬಳಿಗೆ ಬಂದವರನ್ನು ಬರಮಾಡಿಕೊಳ್ಳುತ್ತಾನೆ. ಅವರ ಯೋಗ್ಯತೆಗೆ ತಕ್ಕ ಕಡೆ ಕೂಡ್ರಿಸಿ ಒಂದು ಬೀಡಿ ಒಗೆದು, ಹಚ್ಚಿಕೊಳ್ಳಲು ಕಡ್ಡಿಪೊಟ್ಟಣವನ್ನೂ ಕೊಡುತ್ತಾನೆ. ಬುಸುಬುಸು ಹೊಗೆ ನಡುವೆ ಆತನ ದುಂಡು ಮುಖದ ನೀಳ ನಾಸಿಕ ಬೆಳ್ಳಿ ಚುಕ್ಕಿಯಂತೆ ಬೆಳಗಲಾರಂಭಿಸುತ್ತದೆ. ಅಪೂರ್ವ ಕಾಂತಿಯಿಂದ ಪೊದೆಹುಬ್ಬಿನ ಕೆಳಗಿನ ಕಣ್ಣುಗಳು ಫಳಫಳ ಹೊಳೆಯಲಾರಂಭಿಸುತ್ತವೆ. ವಿಶಿಷ್ಟ ನಗೆಯ ಧ್ವನಿಯ ಸ್ವರೂಪ ಪಡೆಯದೆ ತುಟಿಗಳ ನಡುವೆ ನಂದಿಕೋಲು ಕುಣಿಯಲಾರಂಭಿಸುತ್ತದೆ. ಆತನ ಎದೆಯ ಉಬ್ಬಿದ ಭಾಗ – ಶ್ರೋತೃವಿಗೆ ಕಾಣಿಸಲೆಂಬಂತೆ ತೆಳುಗಾಳಿ ಕಣಗಿಲೆಪೊದೆ ಕಡೆಯಿಂದ ಬೀಸುತ್ತದೆ. ಆತನ ಧ್ವನಿಯ ಸ್ವರಲಾಲಿತ್ಯವನ್ನೇ ಮಾಂಸದ ಚೂರೆಂದು ಭ್ರಮಿಸಿ ಟೊಳಪನಾಯಿ ಆತನ ಮುಂದೆ ಕೂತು ಬಾಲ ಅಲ್ಲಾಡಿಸಲಾರಂಭಿಸುತ್ತದೆ. ಒಬ್ಬರಿಗೊಬ್ಬರಿಗೊಬ್ಬರು ಎಂಥ ಅನ್ಯೋನ್ಯ.

ರುದ್ರಪ್ಪ ತನ್ನ ತಾತನ ಕಾಲದ ಸುದ್ದಿ ಎತ್ತುತ್ತಲೆ ದನದ ಕೊಟ್ಟಿಗೆಯಲ್ಲಿ ಎತ್ತುಗಳ ಕಾಲ ಸಂದಿಯಲ್ಲಿ ಸಗಣಿ ಎಕ್ಕುವ ಕೆಲಸದಲ್ಲಿ ನಿರತಳಾಗಿರುವ ಮುದುಕಿ ಅರ್ಥಾತ್ ಆತಗೆ ಹೆಣ್ಣುಕೊಟ್ಟ ನಿಂಗಜ್ಜಿ, 'ಅಲಲಲಾ

ಸೂರಾ ಪರಾಕ್ರಮಿ ಸುರು ಮಾಡಿಬಿಟ್ಟೆಯಾ ಪುರಾಣ, ಯೇಟುದಿನಾದ್ವು, ನೀನು ಹೊಲ್ದಾಗ ಕಾಲಿಡದೆ; ಯೇಟುದಿನಾದ್ವು, ನೀನು ಎತ್ತುಗಳ್ಗೆ ನೀರು ಕುಡಿಸದೆ...' ಎಂದು ವಟವಟ ಉದುರಿಸಲಾರಂಭಿಸುತ್ತದೆ. ಅದಕ್ಕೆ ಅನುಪಲ್ಲವಿಯಾಗಿ 'ಅಡುಗೆ ಮನೆಯಲ್ಲಿ ಗೌರವ್ವ ಅರ್ಥಾತ್ ಆತನ ಹೆಂಡತಿ ಪಾತ್ರೆ ಪಗಡ ಎತ್ತೆತ್ತಿ ಇಟ್ಟು ತಾಳ ಕುಟ್ಟಲಾರಂಭಿಸುತ್ತಾಳೆ. ಮುರುಕು ತೊಟ್ಟಲಲ್ಲಿ ನೆತ್ತಿಗೆ ತಕ್ಕುದಾದ ಎಣ್ಣೆ ಬೆಣ್ಣೆ ಕಾಣದ ಕಂದಮ್ಮ ಚಿಟಾರನೆ ಚೀರಿ ಆಳಲಾರಂಭಿಸಿಸುತ್ತದೆ. ಹತ್ತಂಕಣದ ಭಾರಿ ಮನೆಯ ಮಾಡನ್ನೆ ಸಾಮಾಜ್ಯವನ್ನಾಗಿ ಮಾಡಿಕೊಂಡು ದಿನಕ್ಕೆರಡು ಮೂರು ಇಲಿಗಳನ್ನಾದರೂ ಗಬಕಾಯಿಸುತ್ತಿರುವ ಬೆಕ್ಕು ಮ್ಯಾವ್‌ಗುಟ್ಟುತ್ತ ನಾಗಂದಿಗೆಯಿಂದ ಕೆಳಕ್ಕೆ ಜಿಗಿಯುತ್ತದೆ. ಆದರೂ ನೀರ ಮೇಲೆ ತೇಲುವ ತುಪ್ಪದಂಥ ರುದ್ರಪ್ಪ ತಾತನ ಪರಾಕ್ರಮಗಳಿಂದ ತನ್ನಪ್ಪನ ಪರಾಕ್ರಮಗಳಿಗೆ ಬಂದಿರುತ್ತಾನೆ. ಅಂಥ ಅಪ್ಪ ಯಾರಿಗೂ ಇರಲಿಕ್ಕಿಲ್ಲ ಎಂಬಂತೆ; ಆತನಿಗಿದ್ದ ಗಿರಿಜಾ ಮೀಸೆ ಯಾರಿಗೂ ಇರಲಿಕ್ಕಿಲ್ಲ ಎಂಬಂತೆ; ಆತನಿಗಿದ್ದ ಸೂಳೆಯರು ಅಮರಾವತಿಯ ಇಂದ್ರನಿಗೂ ಇರಲಿಕ್ಕಿಲ್ಲ ಎಂಬಂತೆ; ಆತನ ಗತ್ತು ಗೈರತ್ತುಗಳು ಗುಡೇಕೋಟೆ ಮಾರಾಜನಿಗೂ ಇರಲಿಕ್ಕಿಲ್ಲ ಎಂಬಂತೆ.... ಮಾತುಗಳ ಇಟ್ಟಿಗೆ ಪೇರಿಸಿಟ್ಟು ಶೋತೃವನ್ನು ಸಜೀವ ಸಮಾಧಿಗೆ ಸಿದ್ಧಗೊಳಿಸಿ ಅಪ್ಪಯ್ಯ ಮುಕ್ಕುಂದಿ ರಾಜಾರೆಡ್ಡಿಯನ್ನು ಹೆದರಿಸಿ ಓಡಿಸಿದ ಖಡ್ಗ ನೋಡೋ ಆಸೆ ಐತಾ ಎಂದು ಕೇಳುತ್ತಾನೆ. ಶೋತೃ ಹೂ ಎಂಬಂತೆ ತಲೆ ಅಲ್ಲಾಡಿಸುತ್ತದೆ. ತಪ್ಪಿಸಿಕೊಳ್ಳದಂತೆ ಕೊರಳಪಟ ಹಿಡಿದು ಪಡಸಾಲೆಗೆ ಕರೆದೊಯ್ಯುತ್ತಾನೆ. ಶೋತೃ ಇಲ್ಲಾಣ ಧೂಳು ಲೆಕ್ಕಿಸದೆ ಕಣ್ಣು ಬಾಯಿ ಏಕ ಕಾಲಕ್ಕೆ ತೆರೆದಿರಲು ರುದ್ರಪ್ಪ ತೊಲೆ ಜಂತಿ ಸಂದಿಯಿಂದ ತುಕ್ಕು ಹಿಡಿದು ಕಿಗ್ಗಲು ಮುಟ್ಟದ ಖಡ್ಗ ಹಿರಿದು ಹ್ಹ..... ಹ್ಹ.....ಹ್ಹ ಎಂದು ಗಹಗಹಿಸಿ ಮರುಕ್ಷಣ ಅದರ ದುರವಸ್ಥೆಗೆ ಮುಖ ಬಿಗಿದು 'ಯೇನೇ' ಎಂದು ಹೆಂಡತಿಯನ್ನು ಕೂಗುತ್ತಾನೆ. ಬಂದ ಹೆಂಡತಿಯ ತುರುಬನ್ನು ಗಬ್ಬಕ್ಕನ ಹಿಡಿದು ಇದನ್ನು ತಿಕ್ಕಿ ತೊಳ್ದಿಡು ಅಂದಿದ್ನೆಲ್ಲಾ ಯಾಕೆ ಮಾಡ್ತಿಲ್ಲಾ ಎಂದು ಅಲ್ಲಾಡಿಸಿ ಬಿಡುತ್ತಾನೆ. ಗೌರವ್ವ ಅಯ್ಯಯ್ಯಪ್ಪೋ ಎಂದು ಬಾಯಿಬಾಯಿ ಬಡಿದುಕೊಳ್ಳಲು, ಅಯ್ಯೋ ನಿನ್ ಕೈಯಿ ಸೇದಿಹೋಗ ಎಂದ ನಿಂಗಜ್ಜಿ ದನದ ಕೊಟ್ಟಿಗೆಯಿಂದ ಪಡಸಾಲೆಗೆ ಒಮ್ಮೆಗೆ ಕುಪ್ಪಳಿಸಿ ತನ್ನ ಮಗಳ ಸಹಾಯಕ್ಕೆ ಬರುತ್ತಾಳೆ. ಆಗ ಶೋತೃ ಒಮ್ಮೆಗೆ ವಾಸ್ತವಕ್ಕೆ ಮರಳಿ ಕಾಲಿಗೆ ಬುದ್ದಿ ಹೇಳುತ್ತಾನೆ.

ಯೋನ್ಲೋ ಬಾಡ್ಕಾವ್, ಅಳಿಯಲ್ಲ ಮಗ ಅಂತ ತಿಳ್ಕೊಂಡು ಬೆಳೆಸಿದ್ಕೆ ಮೈಗೆ ಕೈ ಹಚ್ಚಿಯಾ. ಈ ಸೊಟ್ ಖಡ್ಗ ಬಿಟ್ರೆ ಯೋನೈತೋ ನಿಮ್ಮಪ್ಪನಮನಿ ಆಸ್ತಿ? ದುಡೀಲಿಲ್ಲಾ ದುಕ್ ಪಡೀಲಿಲ್ಲ. ಬಂದೋರೆದೂಗೆ ಹೋಗೋರೆದೂಗೆ – ಖಡ್ಗಾನ ವರ್ಣಿಸ್ತಾ ಕುಂಡ್ರುತ್ತಿಯಲ್ಲಾ ನೀನೊಬ್ಬ ಗಂಡುಸ್ಸೇ ಎಂದದ್ದೇ ತಡ ಗಂಡನ ಬಿಗಿಮುಷ್ಟಿಯಿಂದ ತುರುಬು ಬಿಡಿಸಿಕೊಂಡವಳೆ ಗೌರವ್ವ, "ನನ್ನ ಗಂಡನ್ನ ಬಾಯ್ಗ ಬಂದಂಗ ಅಂದ್ರೆ ನಾನು

ಸುಮಿರಾಕಿಲ್ಲ ನೋಡು" ಎಂದು ಎದುರಿಗೆ ಕುಪ್ಪಳಿಸಿ ನಿಂತಳು. ಅವರೀರ್ವರನ್ನು ಜಗಳ ಆಡಲು ಬಿಟ್ಟು ರುದ್ರಪ್ಪ ಖಡ್ಗವನ್ನು ಮೂಲಸ್ಥಾನದಲ್ಲಿಟ್ಟು ಮತ್ತೊಬ್ಬ ಶೋತೃವನ್ನು ಹುಡುಕಿಕೊಂಡು ಹೊರಹೊಂಟ.

ರುದ್ರಪ್ಪ ಮೊದಲು ಹೀಗಿರಲಿಲ್ಲ ಎಂಬುದನ್ನು ತಾಯಿಮಗಳಿಬ್ಬರೂ ಒಪ್ಪುತ್ತಾರೆ. ಆತ ಬದಲಾಗಿರುವುದು ಈಗ್ಗೆರಡು ತಿಂಗಳಿಂದ. ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯಲು ಕುರುಕೋಡಿಗೆ ಹೋಗಿ ತಾನೂ ಅಪ್ಪಗೆ ಹುಟ್ಟಿದ ಮಗನೆಂದು ವಾದ ಮಂಡಿಸಿದ್ದ ಒಡಹುಟ್ಟಿದ ರಾಚಪ್ಪನೆದುರು. ಆಸ್ತಿ ಏನೈತಿ ಗೆಂಡಿ ಅಂದು ರಾಚಪ್ಪ ಮುಷ್ಟಿಯಲ್ಲಿ ಬೀಡಿ ಹಚ್ಚಿಕೊಂಡಿದ್ದ. ಊರು ನ್ಯಾಯ ಮಾಡುವ ಗೌಡ ರುದ್ರಪ್ಪನನ್ನು ಮನೆಗೆ ಕರೆದೊಯ್ದು ಹಾಗಲಕಾಯಿ ಪಲ್ಯ, ಬಿಳಿ ಜೋಳದ ರೊಟ್ಟಿ ಉಂಬಾಕಿಟ್ಟು 'ಲೇ ನಿಮ್ಮಪ್ಪ ನಾನೂ ಒಂದೇ ಗಂಗಾಳದಲ್ಲಿ ಉಂಬ್ತಿದ್ದಿ' ಎಂದು ಆರಂಭಿಸಿ ಆಸ್ತಿ ಹೇಗೆ ಸೂಳೆಯರಿಗೂ, ವಕೀಲರಿಗೂ ಸಮನಾಗಿ ಹಂಚಿಹೋಯ್ತು ಎಂದು ಸೋದಾರಣವಾಗಿ ವಿವರಿಸಿದ್ದ. ರುದ್ರಪ್ಪಗೆ ತನ್ನಪ್ಪನ ಬಗ್ಗೆ ಹೆಮ್ಮೆ ಮೂಡಿತು. ಎಂಥರಾದ್ರು ಅಪ್ಪನ ಗುರ್ತು ಕೊಡಿಸ್ರಿ ಎಂದು ದುಂಬಾಲು ಬಿದ್ದಿದ್ದ. ಗೌಡರು ರಾಚಪ್ಪಗೆ ತಿಳಿಹೇಳಿ ಖಡ್ಗ ಕೊಡಿಸಿ ಕಳಿಸಿದ್ದರು.

ಆ ಖಡ್ಗ ತಂದ ಮೇಲೆಯೇ ರುದ್ರಪ್ಪ ಸಂಪೂರ್ಣ ಬದಲಾಗಿದ್ದು. ಖಡ್ಗ ಕುರಿತು ಯಾರಾದರೊಬ್ಬರಿಗೆ ಹೇಳಿಕೊಳ್ಳದ ಹೊರತು ಊಟ ಮಾಡುತ್ತಿರಲಿಲ್ಲ. ಅಷ್ಟೇ ಅಲ್ಲ ಗ್ರಾಮದ ಕೆಲವು ಪ್ರತಿಷ್ಠರನ್ನು ಮನೆಗೆ ಕರೆತಂದು ಉಪ್ಪಿಟ್ಟು ಮಾಡು, ಚಾ ಮಾಡು ಎಂದು ಹೆಂಡತಿಯನ್ನು ಜೀವ ತಿನ್ನುವುದು ಮಾಮೂಲಾಗಿತ್ತು. ತಿನ್ನುವುದಕ್ಕೂ ಕುಡಿಯುವುದಕ್ಕೂ ಜೋಡಿಸಲು ತಾಯಿ ಮಗಳೂ ಗಂಡಸರಂತೆ ದುಡಿಯುತ್ತಿದ್ದರು.

ತಾಯಿ ಮಗಳು ಇಡೀ ರಾತ್ರಿ ಎಲೆ ಅಡಿಕೆ ಜಮಡುತ್ತ ಕೂತು ರುದ್ರಪ್ಪ ಮೊದಲಿನಂತಾಗಬೇಕಾದರೆ ಖಡ್ಗವನ್ನು ಮಾಯಮಾಡಬೇಕೆಂಬ ತೀರ್ಮಾನಕ್ಕೆ ಬಂದರು. ಅಲ್ಲದೆ ತೀರ್ಮಾನವನ್ನು ಬೆಳಗಿನ ಜಾವದಲ್ಲಿಯೇ ಕಾರ್ಯರೂಪಕ್ಕೆ ತಂದರು. ಕದದ ಹಿಂದೆ ನೆಲ ಅಗೆದು ಖಡ್ಗವನ್ನು ಹುಗಿದು ಅದರ ಮೇಲೆ ಜೋಳದ ಗುಮ್ಮಿಯನ್ನು ಸರಿಸಿಬಿಟ್ಟರು. ರುದ್ರಪ್ಪ ಉಡುಪಿ ಹೋಟ್ಲಲ್ಲಿ ದೋಸೆ ಹೊಯ್ಯುವ ಭಟ್ಟರನ್ನು ಮನೆಗೆ ಕರೆದುಕೊಂಡು ಬಂದು ನೋಡುತ್ತಾನೆ. ಖಡ್ಗ ಇಲ್ಲ. ಹೆಂಡತಿಯ ತುರುಬಿಗೆ ಕೈ ಹಚ್ಚಿ ಎಲ್ಲಿಟ್ರಿ... ಹೇಳ್ರಿ ಎಂದು ಎಳೆದಾಡಿದ. ಒಪ್ಪಂದದಂತೆ ಆಕೆ ಗಂಡನ ಯಾವ ಹಿಂಸೆಗೂ ಬಾಯಿ ಬಿಡಲಿಲ್ಲ. ಕೊನೆಗೆ ರುದ್ರಪ್ಪನೇ ಹೇಗೋ ಪತ್ತೆಮಾಡಿ ಖಡ್ಗವನ್ನು ಹೊರತೆಗೆದು ಖಬರ್ದಾರ್... ಎಂದು ಅತ್ತೆ ಮತ್ತು ಹೆಂಡತಿಯನ್ನು ಎಚ್ಚರಿಸುತ್ತಲೇ ಅವರು ಹಾಯ್ ಶಿವನೇ... ಎಂದು ಉದ್ಗರಿಸಿದರು.

ತಾಳಿ ಕಟ್ಟಿದ ಹೆಂಡತಿಗೆ ಸೋಡಾಚೀಟಿ ಕೊಟ್ಟವನಂತೆ ರುದ್ರಪ್ಪ ಕೆಲವು ದಿನ ಖಡ್ಗದೊಂದಿಗೇ ಇದ್ದ. ತಾನು ಯಾರನ್ನು ಹತ್ತಿರ ಬಿಟ್ಟುಕೊಳ್ಳುತ್ತಿಲ್ಲ ಎಂದು ಹೆಮ್ಮೆಯಿಂದ ಆತ ಎಷ್ಟು ದಿನ ಬೀಗುತ್ತಿರಲು ಸಾಧ್ಯ!

ಮನೆಯೊಳಗೇ ಖಡ್ಗಕ್ಕೊಂದು ಸ್ಥಾನ ಕಲ್ಪಿಸಿ ತನ್ನ ಕಣ್ಣುಗಳೆಂಬ ಏಳು ಹೆಡೆ ಸರ್ಪಗಳನ್ನು ಅದಕ್ಕೆ ಕಾವಲಿಟ್ಟು ನಿಶ್ಚಿಂತೆಯಿಂದ ಇದ್ದ.

"ಅಲಲಲಾ.... ಬಂಗಾರಂತ ನನ್ನಳೀಯ್ನೀಗೆ ಕಡ್ಗ ಕೊಟ್ಟೋನೆಂಥೋನು, ಕೊಡಿಸಿದೋನೆಂಥೋನು... ಕಡ್ಗ ನಂ ರುದ್ರನ್ನ ಅದೇನು ಮಳ್ಳು ಮಾಡ್ಯೆತೋ ಸಿವ್ನೆ... ಕಡ್ಗಕ್ಕೆ ಬೆಂಕಿ ಹಚ್ಚಾ: ಕಡ್ಗಕ್ಕೆ ಕರಿನಾಗ್ರಾವ್ ಕಡಿಯಾ" ಎಂದು ನಿಂಗಜ್ಜಿ ಅಂಗಲಕ್ಕೇಕಮೇವವಾಗಿ ನಿಂತು ಎದೆ ಎದೆ ಬಡಿದುಕೊಳ್ಳಲು ಓಣಿಯೇ ಬಂದಿದ್ರು.. ಗೊಳ್ಳನೆ ನಕ್ಕರು.

"ಬೇ ಮುದ್ಕಿ ಕಡ್ಗ ಮಳ್ಳು ಮಾಡಿರೋದು ರುದ್ರಪ್ಗಲ್ಲ..... ನಿನ್ಗೆ.... ಇನ್ನೆಂಟು ದಿನದಾಗೆ ನಿನ್ಗೆ ಉಂಡಕೂಳು ಹೊಟ್ಗೆ ಹತ್ತಾಕಿಲ್ಲ ನೋಡ್ತಿರು" ಅಮಟಿ ನಗಾಡಿದ ಕಾಲಜ್ಞಾನಿಯಂತೆ. ಆ ಮಾತು ಮೈಯ ತೊಗಲಿಗಿಂತ ಬಲವಾಗಿ ಅಂಟಿಕೊಂಡುಬಿಡಲು ನಿಂಗಜ್ಜಿ ಹಿಂಡನಗಲಿದ ಕರುವಿನಂತೆ ಒದ್ದಾಡಿತು. ಗೌರೀ "ಹಾಳಾದ ಕಡ್ಗಕ್ಕೆ ಗತಿ ಕಾಣಿಸದಾವರ್ತು ನನ್ ಜೀವಕ್ಕೆ ಸಮಾದಾನಿಲ್ಲಲೇ" ಎಂದು ಕಣ್ಣು ತುಂಬಿಕೊಂಡು ತಾಯಿಯನ್ನು ಅವುಚಿಕೊಂಡು "ಯವ್ವೋ... ನನ್ ಕಥಿಯ್ಯೇನು ಹೇಳ್ಲಿ.... ನನ್ಗಿಂತ ಆತ್ಗೆ ಕಡ್ಗನೆ ಯಚ್ಚಾಗೈತೆ ಯವ್ವೋ" ಎಂದು ಲಬ್ ಗುಟ್ಟಿ ಅತ್ತಳು.

ಅವರಿಬ್ಬರೂ ಹಗಲಿರುಳು ಯೋಚಿಸಿ ಒಂದು ತೀರ್ಮಾನಕ್ಕೆ ಬಂದರು. ತಮ್ಮಿಬ್ಬರನ್ನೂ ಆ ರುದ್ರಪ್ಪ ಕುತ್ಗೆ ಹಿಚುಕಿ ಸಾಯಿಸಿದರೂ ಸರಿಯೇ ಅದನ್ನೊಯ್ದು ಕನ್ನೀರವ್ವನ ಬಾವಿಗೆ ಹಾಕಿಬಿಡುವುದೆಂದು ನಿರ್ಧರಿಸಿದರು. ದೆವ್ವ, ಪಿಶಾಚಿ, ಭೇತಾಳ, ಕಾಳೋರಗಗಳಿಗೆ ಹೆಸರಾದ ಹಾಗೂ ತಳವೇ ಪತ್ತೆ ಇಲ್ಲದ ಪ್ರಾಚೀನ ಕಾಲದ ಕನ್ನೀರವ್ವನ ಬಾವಿ ಬಳಿಗೆ ರಾತೋರಾತ್ರಿ ಹೋಗಿ ಖಡ್ಗವನ್ನು ಹಾಕಲು ಬಾವಿಯ ಗಳುಂ ಎಂದು ನುಂಗಿತು.

ಮರುದಿನ ಬೆಳಗಾಗೆ ಖಡ್ಗ ಕಾಣದಿರಲು ರುದ್ರಪ್ಪ 'ಏನು ಮಾಡದಿರಬೇ ನಿಮ್ಮವ್ವ' ಎಂದು ತಾರಕ ಸ್ವರ ತೆಗೆಯಲು ಓಣಿಯೇ ಹೋಹೋ ಎಂದಿತು. "ನಮ್ ಪಿರಾಣ ಹೋದ್ರೂ ಹೇಳಾಕಿಲ್ಲ ಖೊಲ್ಲೋ...ಖೊಲ್ಲು ಎಂದು ಕಬುಸದ ಗುಂಡಿಬಿಚ್ಚಿ ಅವನಿಗಡ್ಡ ಮಲಗಿದರು." ಸಾಯಲಿಕ್ಕೆ ಸಿದ್ಧರಾದವರ ಮುಖಗಳಿಗೆ 'ಥೂ ನಿಮ್ ಬಾಯಾಕ.... ಎಂದು ಉಗುಳಿದ ರುದ್ರಪ್ಪ ಅತಳ ವಿತಳ ರಸಾತಳ ಪಾತಾಳದಲಿ ಬಚ್ಚಿಟ್ಟಿದ್ದರೂ ಪತ್ತೆ ಮಾಡದೆ ಬಿಡೆನು ಪ್ರತಿಜ್ಞೆ ಮಾಡಿದನು.

ಉಸಿರಾಟವನ್ನೂ ಮರೆತು ಪತ್ತೆ ಕಾರ್ಯಕ್ಕಿಳಿದ ರುದ್ರಪ್ಪನನ್ನು ಊರಮ್ಮನ ಗುಡಿಯ ಬಳಿ ಕೊಟ್ರನೆಂಬುವ ಚಾಡಿಕೋರ ಸಂದಿಸಿ ವಂದು ಸೀಕರೇಟು ಕ್ವಡಸ್ತೀಯಾ ವಂದ್, ಸುದ್ದಿ ಯೋಳ್ತಿನಿ ಎನ್ನಲು ಆತನಿಗೆ ನಿಧಿ ಸಿಕ್ಕಷ್ಟು ಸಂತಸವಾಯಿತು. ಅಲಲೇ ಒಂದ್ಯಾಕ ಒಂದು ಪ್ಯಾಕೇ ಕೊಡಿಸ್ತೀನಿ ಎಂದದ್ದಲ್ಲದೆ ಕೊಡಿಸಿಯೂಬಿಟ್ಟನು. ಇಡೀ ಒಂದು ಸೇದಿ ಆದ ಮೇಲೆ ಮೊನ್ನೆ ರಾತ್ರಿ ಮುದುಕಿ ಗವುರವ್ವನ ಸಂಗಾಟ ಕನ್ನೀರವ್ವನ ಬಾವಿಕಡೆ ವೋಗಿದ್ದು ನೋಡ್ದೆ ಎಂದವನೆ ಟಣಕೂ ಟಣಕೂ ಅಂತ ಜಿಕ್ಕೋತ ಓಡಿ ಮರೆಯಾದನು.

“ಹ್ಹಾ...... ಹ್ಹಾ...... ಕನ್ನೀರವ್ವನ ಬಾವ್ಯಾಗ ಹಾಕೀರೇನ್ತರೇSS ನನ ಖಡ್ಗಾನ” ಎಂದು ಅಂಗಳವನ್ನು ದೊಪ್ಪನೆ ತುಳಿದು ಕೂಗು ಹಾಕಲು ಗೌರವ್ವ ಹಡದವ್ವನನ್ನು ಗಟ್ಟಿಯಾಗಿ ಅವುಚಿಕೊಂಡುಬಿಟ್ಟಳು. ನಿಂಗಜ್ಜಿ ಆಕೆಯಿಂದ ಬಿಡಿಸಿಕೊಂಡು ಅಂಗಳಕ್ಕೆ ನೆಗೆದು ‘ಹಾಕೀವಲೋ ಹಾಕೀವಿ... ಅದೇನು ಹರ‍್ಕಂತೀಯೋ ಹರ‍್ಕ’ ಎಂದು ಪರಿಶೆಪ್ಯೆಕಿ ಪೈಲ್ವಾನಳಂತೆ ನಿಂತಿತು.

“ಸರೆ ಆ ಕನ್ನೀರವ್ವನ ಬಾವಿ ಅದೇಟು ಗಡುತರ ನೋಡೇಬಿಡ್ತೀನಿ” ಎಂದವನೇ ಅಂಗಿ ಬಿಚ್ಚಿ ಇಟ್ಟು ಬಾವಿಕಡೆ ಹೆಜ್ಜೆ ಹಾಕುತ್ತಲೆ ಓಣಿ ಎಂಬೋ ಓಣಿಯೇ ಅಯ್ಯೋ ಬ್ಯಾಡ, ಅಯ್ಯೋ ಬ್ಯಾಡ ಎಂದು ಆತನ ಹಿಂದೆ ಹೆಜ್ಜೆ ಹಾಕಿತು. ಅಯ್ಯೋ ನನಗಂಡ ಕನ್ನೀರವ್ನ ಬಾವಿಗೆ ಬೀಳಾಕ ವಂಟಾನ. ನನ ಸೋಬಾಗ್ಯ ವುಳಿಸ್ರಪ್ಪೋ ಎಂದು ಗೌರವ್ವನೂ, ಅಯ್ಯೋ ನನಮಗಳ ಸೋಬಾಗ್ಯವೇ ಎಂದು ನಿಂಗಜ್ಜಿಯೂ ಮುಂಚೂಣಿಯಲ್ಲಿದ್ದರು.

“ಬ್ಯಾಡವೋ ಬ್ಯಾಡ, ಅದರಲ್ಲೀಜಿದವರಾರು ಬದುಕಿ ಬಂದುದನ್ನು ಕಾಣೆ ನನ್ನ ನೂರು ವರುಷದ ಆಯಾಮದಾಗೆ” ಎಂದು ಶತಾಯುಷಿಯೂ ಒಂದು ಕಾಲದಲ್ಲಿ ನಿಂಗಜ್ಜಿಯ ಕಳ್ಳ ಪ್ರೇಮಿಯೂ ಆದ ಕಾಳಜ್ಜ ನೂರು ದೃಷ್ಟಾಂತಗಳ ಸಹಿತ ಹೇಳಿದರೂ ಕಿವಿ ಮೇಲೆ ಹಾಕಿಕೊಳ್ಳದೆ ರುದ್ರಪ್ಪ ಸಿಂಹ ವಿಗ್ರಹದ ನೆತ್ತಿ ಮೇಲೆ ಕಾಲೂರಿ ಹಸಿರು ಬಣ್ಣದ ನೀರಿಗೆ ದುಡುಮ್ಮನೆ ದುಮುಕಲು ಜನ ಹೋ ಹೋ ಎಂದಿತು.

“ಅಯ್ಯೋ ನನ್ನ ಮಾಂಗಲ್ಯದ ಋಣ ತೀರಿತೇ, ನನ್ನ ಕಂದಯ್ಯಗಿನ್ನಾರು ದಿಕ್ಕು” ಎಂದು ಗೌರವ್ವ ಎದೆಗೂ ನೆಲಕ್ಕೂ ಏಕಾಗಿ ಬಡಿದುಕೊಳ್ಳತೊಡಗಿದಳು. “ಅದಕ್ಯಾಕ ಅಳ್ತೀಯೇ..... ಹರೇದಾಗ ರಂಡ್ಯಾಗಿ ನಾನು ಬದುಕಿಲ್ಲೇನು” ಎಂದು ನಿಂಗಜ್ಜಿ ಮಗಳನ್ನು ಗಟ್ಟಿಯಾಗಿ ಅವುಚಿಕೊಂಡಿತು. ರುದ್ರಪ್ಪನ ಹೆಣ ಇನ್ನೊಂದು ಸ್ವಲ್ಪ ಹೊತ್ತಿನಲ್ಲಿ ತೇಲಬಹುದೆಂದು ಚಾತಕಪಕ್ಷಿಗಳಂತೆ ಓಣಿಯ ಸಮಸ್ತರೇ ಕಾಯುತ್ತಿರಲು, ಅಸೀಮ ಸಾಹಸಿ, ರುದ್ರಪ್ಪನು ತೇಲಿ ಈಜಿ ದಡ ತಲುಪಿದನು. ಏಕಮೇವ ಪಿತ್ರಾರ್ಜಿತ ಆಸ್ತಿಯಾದ

ಖಡ್ಗದೊಂದಿಗೆ. ಆಯ್ಯೋ ನನ ಸೋಬಾಗ್ಯವೇ ಮರಳಿ ಬಂದೆಯಾ ದೇವರು ದೊಡ್ಡವನೆಂದು ಗೌರವ್ವ ಓಡಿಹೋಗಿ ಗಂಡನನ್ನು ಗಟ್ಟಿಯಾಗಿ ಅವುಚಿಕೊಂಡಳು.

ಕನ್ನೀರವ್ವನ ಬಾವ್ಯಾಗ ಯ್ಯೋಳು ಕೊಪ್ಪರಿಗಿ ಬಂಗಾರೈತಲ್ಲಾ, ಕಂಡಿತೇನು ಎಂದು ಪ್ರಶ್ನೆಗಳ ಮಳೆ ಸುರಿಸಲಾರಂಭಿಸಿದವರಿಂದ ಬಿಡಿಸಿಕೊಂಡು ಮನೆ ತಲುಪುವಷ್ಟರಲ್ಲಿ ರುದ್ರಪ್ಪಗೆ ಸಾಕುಸಾಕಾಗಿ ಹೋಯಿತು.

ನಾನು ಮನಿ ಬಿಟ್ಟು ಹೊಂಟೋಗ್ತಿನೆಂದು ರುದ್ರಪ್ಪನೂ, ಆದೆಂಗ ಬಿಟ್ ಹೋಗ್ತಿ ನೋಡೇಬಿಡ್ತಿನಿ ಎಂದು ನಿಂಗಜ್ಜಿಯೂ – ಪಂಚಾಯ್ತಿ ಎರಡು ದಿನ ಪರ್ಯಂತರ ನಡೆಯಿತು. ಹೋದರೆ ಪಿತಾರ್ಜಿತ ಎಂಬುದು ಒಂಚೂರು ಹೊಲ ಉಂಟಾ, ನೆರಳುಂಟಾ ಕೊನಗೆ ಓಣಿ ದೈವಸ್ಥರ ಮಾತಿಗೆ ಮನ್ನಣೆ ಕೊಟ್ಟು ಅತ್ತೆಯ ನೆರಳಿಗೆ ಶರಣಾಗತನಾದನು.

ತನ್ನ ಪೂರ್ವಜರ ಪರಾಕ್ರಮಕ್ಕೆ ಕಿರೀಟವಿಟ್ಟಂತೆ ತಾನು ಅಜೇಯ ಕನ್ನೀರವ್ವನ ಬಾವಿಗೆ ಧುಮುಕಿ ಖಡ್ಗ ತಂದದ್ದು ಎಂದು ತನ್ನನ್ನು ತಾನೇ ಮೋಹಿಸಿಕೊಂಡುಬಿಟ್ಟ ರುದ್ರಪ್ಪ ತೆಪ್ಪಗೆ ಬಾಯಿ ಮುಚ್ಚಿಕೊಂಡು ಎಷ್ಟು ದಿನ ಪಡಸಾಲೆಯ ಮೂಲೆಯಲ್ಲಿ ಕೂತಿರಲು ಸಾಧ್ಯ? ವಾಕಿಂಗ್ ಹೋಗಿ ದಿನಕ್ಕೆ ಐದಾರು ಮಂದಿಯನ್ನಾದರೂ ಮನೆಗೆ ಕರೆದುತರಲಾಂಭಿಸಿದನಲ್ಲದೆ ತುಸು ಏರುದನಿಯಲ್ಲಿಯೇ ಹೆಂಡತಿಗೆ ಸತ್ಕಾರ ಕುರಿತು ಆಜ್ಞೆ ವಿಧಿಸತೊಡಗಿದನು. ಅವರೀರ್ವರೂ ನಂತರ ಅತಿಥಿಗಳು ಆತ್ತ ಹೋಗುತ್ತಲೇ ಇತ್ತ ನಿಂಗವ್ವ 'ಅಲಲಲಾ' ಎಂದು ಹೂಂಕರಿಸುವುದು ಮೊದಲಾಯಿತು.

ಯ್ಯೋನು ಮಾಡುವುದಪ್ಪಾ ಖಡ್ಗವನ್ನು ಎಂದು ನಿಂಗಜ್ಜಿ ಓಣಿಯ ಹಲವರ ಬಳಿ ಅಳಲು ತೋಡಿಕೊಂಡಳು. 'ಅಂಥಾ ಕನ್ನೀರವ್ವನ ಬಾವಿಗೆ ಹಾಕಿದ್ರೇ ಬಿಡ್ಲಿಲ್ಲ. ನಿನ್ನಳಿಯಾ' ಎಂದು ಸೋಗುಟ್ಟಿದರು.

ಮರುದಿನ ಬೆಳಗಾಗೆ ಕೊಟ್ಟೂರಿನ ಬೆಣ್ಣೆ ಬಸವರಾಜನ ತಂಡದ ಸಮಾಳವಾದನದ ಸದ್ದು ಕಿವಿಗೆ ಬೀಳುತ್ತಲೆ ಹೋಗಿ ನೋಡುತ್ತಾಳೆ ಗುಗ್ಗುಳ ಧಗಧಗ ಕೆನ್ನಾಲಿಗೆ ಚಾಚಿ ಹೊಂಟಿರುವುದೂ ಕಾಸಿ ಅಯ್ನೋರು ತಮ್ಮ ನಾಲಗೆಗಳಿಗೆ ಫಲಫಳ ಸೂತ್ರ ಸಿಕ್ಕಿಸಿಕೊಂಡು ವೀರಾವೇಶದಿಂದ ನರ್ತಿಸುತ್ತಿರುವುದೂ, ಸೂತ್ರಕ್ಕೆ ಮದುಮಗ ಗಡಗಡ ನಡುಗುತ್ತಿರುವುದೂ ಕಂಡಿತು.

ಹ್ಹಹ್ಹ ವೀರ ನಮ್ಮ ಕರಿವೀರಭದ್ರ ದೇವರು ಖಡ್ಗ ಹಿಡಿದುಕೊಂಡು ದಕ್ಷನನ್ನು ಕೊಲ್ಲಲು ಹ್ಯಾಗೆ ಬರುತ್ತಿದ್ದಾರೆಂದರೆ... ಹಿಂದೆಯೇ ಒಡಪು ಹೇಳುತ್ತಿರುವುದೂ ಕಿವಿಗೆ ಬಿತ್ತು. ಆ ಕ್ಷಣ ನಿಂಗಜ್ಜಿಗೆ ಏನು ಹೊಳೆಯಿತೋ ಏನೋ! ಸರಸರನೆ ಬಂದವಳೆ ಖಡ್ಗವನ್ನು ಸೀರೆಯಲ್ಲಿ ಬಚ್ಚಿಟ್ಟುಕೊಂಡು ಸರಸರನೆ ಕೋಟೆ

ವೀರಭದ್ರ ದೇವರ ಗುಡಿಗೆ ಹೋಗಿ ದೇವ್ರೆ ಈ ಖಡ್ಗ ನಿನ್ನತ್ರ ಇಟ್ಟಾ ಎಂದು ದೀರ್ಘ ಪ್ರಣಾಮ ಸಲ್ಲಿಸಿ ಮರಳಿದಳು.

ಖಡ್ಗ ಕಾಣದಾಗಲು, ರುದ್ರಪ್ಪಗೆ ಎಂದಿನಂತೆ ಸಿಟ್ಟು ಬಂದು 'ಏನ್ರೇ' ಎಂದು ಗರ್ಜಿಸಲು ನಿಂಗಜ್ಜಿ ಅದನ್ನೊಯ್ದು ಯೀರ್‌ಬದ್ರದ್ಯಾವ್ರು ಗುಡಿಗೆ ಕ್ವಟ್ ಬಂದೀನಿ. ಗಂಡಸಾಗಿದ್ರೆ ತಕ್ಕಂಬಾ ವೋಗೋ ಹ್ಹ... ಹ್ಹ.... ಹ್ಹ.... ಎಂದು ನಗಾಡಿತು. ಅತುಲ ಪರಾಕ್ರಮದಿಂದ ಗುಡಿಗೆ ಹೋದ ರುದ್ರಪ್ಪಗೆ ಖಡ್ಗ ತರಲು ಸಾಧ್ಯವಾಗಲೇ ಇಲ್ಲ. ಮಾತು, ಪಿತ್ರಾರ್ಜಿತ ಪರಾಕ್ರಮ ಕಳೆದುಕೊಂಡವನಂತೆ ಮನೆಯ ಕಟ್ಟೆಗೆ ಒರಗಿ ಕುಂತಿರುತ್ತಾನೆ.

# ೪.೩. ಗಾದೆಗಳಲ್ಲಿ ಸಾಹಿತ್ಯ

– ಎ.ಕೆ. ರಾಮಾನುಜನ್

ಆಶಯ: ಎ.ಕೆ ರಾಮಾನುಜನ್ ಅವರ ಪ್ರಥಮ ಕೃತಿ 'ಗಾದೆಗಳು' (೧೯೫೫) ಇದರಲ್ಲಿ ಗಾದೆಯ ರೂಪರಚನೆ, ಕನ್ನಡ ಗಾದೆಗಳ ವಿಶ್ಲೇಷಣೆ ಉಂಟು. ಕರ್ನಾಟಕದಲ್ಲಿ ಜಾನಪದ ಅಧ್ಯಯನದ ಬಗ್ಗೆ ವೈಜ್ಞಾನಿಕ ಮನೋಭಾವ ಅಷ್ಟಾಗಿ ಕಾಣಿಸಿಕೊಂಡಿರದ ಸಮಯದಲ್ಲಿ ಈ ಕೃತಿ ಪ್ರಕಟವಾಗಿ ಅನೇಕ ಹೊಸ ಸಂಗತಿಗಳನ್ನು ಬಿಂಬಿಸಿದ್ದು ಮಹತ್ವದ ವಿಚಾರ. ಅದುವರೆಗೆ ಹೆಚ್ಚಾಗಿ ಗ್ರಂಥಸ್ಥ ಹಾಗೂ ಜನಪದ ಗಾದೆಗಳ ಸಂಗ್ರಹಕಾರ್ಯ ನಡೆದಿತ್ತು. ಆದರೆ ಗಾದೆಗಳ ವಿಶ್ಲೇಷಣೆ ನಡೆದಿರಲಿಲ್ಲ. ಇಂದಿಗೂ ಗಾದೆಗಳನ್ನು ಕುರಿತ ಅಧ್ಯಯನಕ್ಕೆ ಈ ಕೃತಿ ಒಂದು ಉತ್ತಮ ಕೈಪಿಡಿ.

೧. ನನ್ನ ಮನಸ್ಸಿಗೆ 'ಗಾದೆ'ಯೂ ಒಂದು ಸಾಹಿತ್ಯ ಪ್ರಕಾರವೇ ಎನಿಸುತ್ತದೆ. ಒಂದು ಸಾಹಿತ್ಯಪ್ರಕಾರಕ್ಕೆ ಸಲ್ಲುವ ನಿರ್ದಿಷ್ಟ ಗುಣ ಲಕ್ಷಣಗಳೆಲ್ಲ ಗಾದೆಗಿವೆ. ಪ್ರಪಂಚದ ಮೂಲೆ ಮುರುಕುಗಳಲ್ಲಿ ಎಲ್ಲೆಲ್ಲೂ ಗಾದೆಯ ಹುಟ್ಟು, ವಸ್ತು, ಧೋರಣೆ, ಶೈಲಿ, ನೆಲೆ, ಬೆಲೆ ಇವೆಲ್ಲ ಒಂದೇ ರೀತಿಯವು. ವಸ್ತುವಿನಲ್ಲಿ ಸ್ಥಳವ್ಯತ್ಯಾಸಕ್ಕನು ಗುಣವಾದ ಹಲಕೆಲವು ಸಣ್ಣ ಪುಟ್ಟ ಮಾರ್ಪಾಟುಗಳಿದ್ದರೂ, ಶೈಲಿಯಲ್ಲಿ, ಅಲಂಕಾರ ವಿಶೇಷಗಳಲ್ಲಿ, ಸಾಹಿತ್ಯರೂಪದಲ್ಲಿ ಎಳ್ಳಷ್ಟೂ ವ್ಯತ್ಯಾಸವಿಲ್ಲ.

೨. ಇಂತಹ ವಿಶ್ವವ್ಯಾಪಿಯಾದ ಸಾಮಾನ್ಯತೆಗೆ ಕಾರಣವುಂಟು. ಹಿಂದೆ ಹೇಳಿದಂತೆ, ಗಾದೆ ಜನರ ಮಾತು, ಜನರ ಮನಸ್ಸಿಗೆ ನಾಟಿ ನೆನಪಿನಲ್ಲುಳಿಯತಕ್ಕ ಮಾತು. ಹಾಗೆ ನೆನಪಿನಲ್ಲುಳಿಯತಕ್ಕ ಮಾತು ಅರ್ಥವತ್ತಾಗಿರಬೇಕು, ಚಿತ್ರವಾಗಿರಬೇಕು, ಸಂಕ್ಷೇಪವಾಗಿರಬೇಕು, ಮೊನೆಯಾಗಿರಬೇಕು. ಹೆಚ್ಚಿನ ಅರ್ಥವನ್ನು ನಾಲ್ಕು ಮಾತಿನಲ್ಲಿ ಅಡಗಿಸಿಡಬೇಕಾದರೆ, ತಟ್ಟನೆ ಮನಸ್ಸನ್ನು ಚಾಟಿಯಂತೆ ಥಳಿಸುವ ಕೆಲವೇ ಅಲಂಕಾರಗಳಿಂದ ಸಾಧ್ಯ. ಪ್ರಾಸ–ಅನುಪ್ರಾಸ, ಒಂದನ್ನೊಂದು ಬಿಂಬಿಸಿ ಬೆನ್ನು ಕೊಡುವ ಎರಡು ಹೋಳಿನಂತಹ ಮಾತಿನ ಒಕ್ಕಣೆ, ಕೆಲವು ವ್ಯಂಜನಗಳ ಅನುರಣನ, ಪದ್ಯಧಾಟಿಯ ಲಯ– ಇವು ಮನಸ್ಸನ್ನು ಮೋಹಗೊಳಿಸಿ ನೆನಪನ್ನು ಲಗ್ಗೆ ಹತ್ತುತ್ತವೆ; ಗಾದೆ ಜನಮನದಲ್ಲಿ ಮನೆ ಮಾಡುತ್ತದೆ. ಇವು ಹೊರಮೈಯ ಲಕ್ಷಣಗಳು. ಇನ್ನು ಅರ್ಥದ ಒಳಕಟ್ಟಿನ ಲಕ್ಷಣಗಳು ಕೆಲವು, ಉಪಮೆ, ಎರಡು ಭಿನ್ನ ಪ್ರಪಂಚಗಳಿಂದ ಎತ್ತಿಕೊಂಡ ಚಿತ್ರಗಳನ್ನು ಒಂದನ್ನಾಗಿ ಲಗ್ನ ಮಾಡಿಸುತ್ತದೆ. ಒಂದು ಮೀಟಿದರೆ ಹಲವು ಧ್ವನಿಗಳು ಮೇಳವಿಸುತ್ತವೆ. ವಿರೋಧಾಭಾಸ ಮನಸ್ಸನ್ನು ಕೆಣಕಿ, ವಿಚಾರಿಸಿ ತನ್ನ ಬಾಹ್ಯ ಸಂಗತಿಯ ಹಿಂದಿರುವ ಸಮಂಜಸ, ಸತ್ಯವನ್ನು ಬಿಚ್ಚುತ್ತದೆ; ದೊಡ್ಡ ಅರ್ಥ ಕತ್ತರಿಯಂತಹ ಈ ಅಲಂಕಾರದಲ್ಲಿ

ಸಿಕ್ಕುವಂತಾಗುತ್ತದೆ. ಇನ್ನು ಒಗಟೆ, ಉತ್ಪ್ರೇಕ್ಷೆ, ಹಾಸ್ಯ, ಗಮನೀಯ ಕಾವ್ಯಧ್ವನಿ, ವ್ಯಂಗ್ಯ ಇವುಗಳೂ ಚಿತ್ರವನ್ನು ತಮ್ಮ ಸಾಮರ್ಥ್ಯದಲ್ಲಿ ಹಿಡಿದು ನಿಲ್ಲಿಸುತ್ತವೆ. ಸಣ್ಣ ಸಣ್ಣ ಚಿತ್ರಗಳು, ರಸಮಯ ಸನ್ನಿವೇಶಗಳ ಅಥವಾ ಸ್ವಾರಸ್ಯವಾದ ಮನುಷ್ಯ ಮಾದರಿಗಳ ನಾಟಕೀಯ ನುಡಿಚಿತ್ರಗಳು ಇವನ್ನೂ ಗಾದೆ ಒಳಗೊಂಡಿರುತ್ತದೆ. ಕಡೆಯದಾಗಿ ಒಗರಾದ ವ್ಯವಹಾರಜ್ಞಾನ, ಯುಕ್ತವಾದ ಬುದ್ಧಿವಾದ, ನಿರಸನದ ನಗೆಬೆರೆತ ವಸ್ತುದೃಷ್ಟಿ (realism) ಇವುಗಳನ್ನೆಲ್ಲ ಫಕ್ಕನೆ ಹೊಳೆಸಿ, ಹಾರುವ ಅನಿರೀಕ್ಷಿತ ಅಂಬುನುಡಿ, ಚಾಟು ನುಡಿ (epigram) ಇವುಗಳಂತೂ ಗಾದೆಮಾತಿನ ಮುಖ್ಯ ಸರಕು ಎನ್ನಬೇಕು. ಹೀಗೆ ಕೆಲವು ನಿರ್ದಿಷ್ಟ ಕಾವ್ಯಬಂಧ, ನೇಮ-ಲಕ್ಷಣಗಳುಳ್ಳ ಸ್ಮರಣೀಯವಾದ ಸಣ್ಣ ವಾಕ್ಯ 'ಗಾದೆ'.

ಇವುಗಳನ್ನೆಲ್ಲ ನಿರ್ಧರಿಸಿ ಹೇಳುವ ಉದಾಹರಣೆಗಳು ಪುಸ್ತಕದುದ್ದಕ್ಕೂ ಹಲವಾರು ಬಂದಿವೆ; ಓದುಗರ ಮನಸ್ಸಿಗೂ ನೂರಾರು ಬಂದಾವು. ಆದ್ದರಿಂದ ಇಲ್ಲಿ, ಕೈಗೆ ಸಿಕ್ಕಿದ ಕೆಲವೇ ಉದಾಹರಣೆಗಳಿಂದ ತೃಪ್ತನಾಗುತ್ತೇನೆ. ದ್ರಾಕ್ಷಾಪಾಕವಾದ್ದರಿಂದ ಅತಿ ವಿವರಣೆಯ ಅಪರಾಧವನ್ನೂ ಮಾಡುವುದಿಲ್ಲ.

೩. ಮಾತೆಂದಿಗೂ ಇಲ್ಲಿ ಒಂಟಿಯಾಗಿ ಬರುವುದಿಲ್ಲ. ಜತೆ ಜತೆಯಾಗಿ ಕಪೋತಗಳಂತೆ ಕುಪ್ಪಳಿಸುತ್ತ ಬರುತ್ತವೆ.

**ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ, ಎಮ್ಮೆಗೆ ಎರಡು ಕೋಡು, ಹೆಣ್ಣಿಗೆ ಎಂಟು ಕೋಡು, ಕುರುಡ ಹೆಣ್ಣಿಗೆ ಕುಂಟ ಗಂಡ: ಇತ್ಯಾದಿ.**

ಇವೆಲ್ಲ ಗಾದೆಗಳಲ್ಲೂ, ವಾಕ್ಯ ಇಬ್ಭಾಗವಾಗಿ ಒಡೆದಿರುವುದನ್ನೂ ಒಂದು ಭಾಗದ ಕೆಲವು ಪದಗಳು ಮತ್ತೊಂದು ಭಾಗದ ಕೆಲವು ಪದಗಳನ್ನು ಸಮತೂಕವಾಗಿ ತೂಗುವುದನ್ನೂ ಕಾಣಬಹುದು. ಮೊದಲನೆಯದರಲ್ಲಿ ಅತ್ತೆ-ಸೊಸೆ; ಎರಡನೆಯದರಲ್ಲಿ ಎಮ್ಮೆ–ಹೆಮ್ಮೆ, ಎರಡು-ಎಂಟು; ಮೂರನೆಯದರಲ್ಲಿ ಪ್ರತಿ ಭಾಗದ ಪ್ರತಿಪದವೂ ಈ ಸಮತೂಕದಲ್ಲಿ ಭಾಗಿಯಾಗುತ್ತದೆ; ಕುರುಡ-ಕುಂಟ, ಹೆಣ್ಣು-ಗಂಡ. ತಕ್ಕಡಿಯಂತಹ ಈ ಸಮತೂಕದ ಧಾಟಿ ಗಾದೆಯ ಬೆನ್ನೆಲುಬು.

**ಸತ್ತವರಿಗೆ ಅತ್ತರೆ ಅತ್ತವರು ಸಾಯರೇ** ? ಎಂಬ ಸೊಗಸಾದ ನುಡಿಯಲ್ಲಿ, ಮಾತುಗಳು ಬದಲಾಗಿ, ಪರ್ಯಾಯವಾದ ಒಂದು ಸಮತೋಲ ಬಂದಿರುವುದನ್ನೂ ಇಲ್ಲಿ ಹೇಳಬಹುದು.

೪. ಪ್ರಾಸ, ಅನುಪ್ರಾಸ, ಅನುರಣನ ಮುಂತಾದ ನಾದರೂಪಕಗಳಿಗಂತೂ ಹತ್ತರಲ್ಲಿ ಒಂಬತ್ತು ಗಾದೆ ಉದಾಹರಣೆಯಿಲ್ಲದ ಗಾದೆಯನ್ನು ಹುಡುಕುವುದೇ ಪ್ರಯಾಸದ ಕೆಲಸ.

**ವಿಜಾಪುರದಲ್ಲಿ ಇಜಾರದವರು ಹಜಾರ ಮಂದಿ; ಆಶ್ರಮಕ್ಕಿಂತ ಈ ಶ್ರಮ ಘೋಶ್ರಮ** (ಇಲ್ಲಿ ಆಶ್ರಮ – ಈ ಶ್ರಮ ಎಂಬ ಅಚ್ಚರಿಯ ಶ್ಲೇಷೆಯೂ ಸೇರಿಕೊಂಡಿದೆ); **ಮುಪ್ಪಿನ ಮುತ್ತೈದೆಯನ್ನು ಮೂಸಿ ಮುತ್ತಿಕ್ಕುವವರಾರು**? ಇತ್ಯಾದಿ ಪ್ರಾಸದ ಒತ್ತಡದಲ್ಲಿ ಹೊಸ ಹೊಸ ಪದಗಳೂ ಸೃಷ್ಟಿಯಾಗಬಹುದು– **'ಅಗ್ಗ ಸೂರೆ ಅನ್ನವೆಂದೂ ಬಿಗ್ಗ ಬಿರಿಯ ಉಂಡಳು'** ಇತ್ಯಾದಿ.

೫. ಉಪಮೆ ಭಾಷೆಯ ತಾಯಿಬೇರು ಎನ್ನಬಹುದು; ಅದರ ಶಕ್ತಿ ಇಲ್ಲದೆ, ಭಾಷೆಯ ಮಿಕ್ಕ ಅಂಗಗಳಾವವೂ ಪುಷ್ಟಿಗೊಳ್ಳಲಾರವು. ಎರಡು ಬೇರೆ ಬೇರೆ ಜಗತ್ತುಗಳಲ್ಲಿನ ಸಾಮಗ್ರಿಯ ಒಳನಂಟನ್ನು ಕಂಡುಕೊಳ್ಳುವುದೇ ಉಪಮೇಯ ರೀತಿ. ಈ ರೀತಿಯಲ್ಲಿ, ಈ ಎರಡು ಜಗತ್ತುಗಳ ಅರ್ಥಭಂಡಾರಕ್ಕೂ ಹೀಗೆ ಉದಿಸಿದ ಮಾತು ವಾರಸಾಗುತ್ತದೆ.

**"ಕುಲಕ್ಕೆ ಮೃತ್ಯು ಕೊಡಲಿಕಾವು'**– ಮರ ಕಡಿಯಬೇಕಾದರೆ ಕಬ್ಬಿಣದ ಅಲಗಾದರೆ ಸಾಲದು: ಮರದಲ್ಲೇ ಹುಟ್ಟಿ ಬಂದ ರೆಂಬೆ ಕಾವಾಗಬೇಕು. ಸಾವಿನ ಕೈಯಾಗಬೇಕು, ಮನುಷ್ಯ ಜೀವನದಲ್ಲೂ ಹೊಟ್ಟೆಯಲ್ಲಿ ಹುಟ್ಟಿದ ಮಗನೇ ಕುಲನಾಶ ಮಾಡುವಂತಾದರೆ, ಮರಗಳ ಜಗತ್ತಿನ ಈ ಮಾತು ಅನ್ವಯವಾಗುತ್ತದೆ. 'ಗಾದೆಯಲ್ಲಿ ಜ್ಞಾನ' ಎಂಬ ಪ್ರಕರಣದಲ್ಲಿ ಹೇಳಿದ ಗಾದೆಗಳೆಷ್ಟೋ ಇಂಥವೇ. ಗಾದೆಗಳು ಮುಖ್ಯವಾಗಿ ಜ್ಞಾನವನ್ನು ತಿಳಿಸಿ ಹೇಳಲು ಹುಟ್ಟಲಿಲ್ಲ. ಇತಿಹಾಸ, ದಂತಕತೆ, ಪ್ರಾಣಿಜೀವನ, ಕೃಷಿ ಇತ್ಯಾದಿ ಪ್ರಪಂಚಗಳಿಂದೆಲ್ಲ ಸರ್ವ ಜೀವನಕ್ಕನ್ವಯಿಸುವ ಉಪಮೆ, ದೃಷ್ಟಾಂತಗಳನ್ನೆತ್ತಿಕೊಂಡು ಅವುಗಳ ಅನ್ವಯದ ವ್ಯಾಪ್ತಿಯನ್ನು ವಿಸ್ತಾರವಾಗಿ ಹಬ್ಬಿಸಿದೆ. ಮಿಕ್ಕ ಕಾವ್ಯಪ್ರಕಾರಗಳಿಗಿಂತಲೂ ಗಾದೆಯಲ್ಲಿ ಅನನ್ಯ ಸದೃಶವಾದ ಮಹಿಮೆ ಇದು – ಇಡೀ ಪ್ರಪಂಚವನ್ನೇ ಸಸ್ಯ ಸಮಾಜ, ಇತಿಹಾಸ, ಪ್ರಾಣಿಜೀವನ ಇತ್ಯಾದಿ ಎಲ್ಲವನ್ನೂ ತನ್ನ ಪ್ರತಿಮಾಲೋಕವನ್ನಾಗಿ ಮಾಡಿಕೊಂಡು, ಎಲ್ಲ ಅನುಭವವನ್ನೂ ತನ್ನ ನುಡಿಗಟ್ಟನ್ನಾಗಿ ಬಳಸಿ, ಎಲ್ಲ ಅನುಭವದ ಒಳನಂಟನ್ನು ತೋರಿಸುತ್ತದೆ.

**'ಕಳವಿಗೆ ಹೋಗಿ ಕೆಮ್ಮಿದ ಹಾಗೆ**[*]**; ಅರಮನೆಗೆ ಸುಣ್ಣಕ್ಕೆ ಹೊಕ್ಕ ಹಾಗೆ'; ಕನ್ನಡಿ ಒಳಗಿನ ಗಂಟು; ಕಳ್ಳನ ಮನಸ್ಸು ಹುಳ್ಳುಳ್ಳಗೆ; ಅಂಗೈಲಿ ಆಕಾಶ ತೋರಿಸಿದ ಹಾಗೆ, 'ಅತ್ತೆ ಮನೇಲಿ ಹೇಗಿರುವೆ, ಮಗಳೇ' ಎಂದರೆ 'ಚಿಲುಕಕ್ಕೆ ಮೊಳಕೈ ತಗುಲಿದ ಹಾಗೆ'** ಇತ್ಯಾದಿ.

---

[*] ಇವುಗಳಲ್ಲಿ ಕೆಲವನ್ನು ಪೂರ್ಣಗಾದೆಗಳಲ್ಲವೆಂತಲೂ ಜನಜನಿತವಾದ ಸಾಮತಿ (adage)ಗಳೆಂತಲೂ ಎನ್ನುವವರಿದ್ದಾರೆ. ಹುಟ್ಟಿನಲ್ಲೂ ವಸ್ತುವಿನಲ್ಲೂ ಬಳಕೆಯಲ್ಲೂ ಇವೆರಡಕ್ಕೂ ಅಷ್ಟೇನೂ ವ್ಯತ್ಯಾಸ ನನಗೆ ಕಾಣಿಸಲಿಲ್ಲ, ಆದ್ದರಿಂದ ಇದನ್ನೂ ಗಾದೆಗಳೆಂದೇ ಪರಿಗಣಿಸಿದ್ದೇನೆ.

ಇಂತಹ, ಅನುದಿನದ ಮನೆಬಳಕೆಯ ಬಾಳಿನಿಂದೆತ್ತಿಕೊಂಡ ಉಪಮೆಗಳಿಂದ ಗಾದೆಗಳು ಮನೆಮಾತಾಗಿವೆ. ಮೇಲಿನ ಕೆಲವು ನುಡಿಗಳಲ್ಲಿ ಹೋಲಿಕೆಯ ಎರಡು ಹೋಳಿನಲ್ಲಿ ಒಂದನ್ನೇ ಕೊಟ್ಟಿರುವದರಿಂದ, ನೂರೆಂಟು ಸಂದರ್ಭಗಳಿಗೆ ಈ ಉಪಮೆಗಳನ್ನು ಜೋಡಿಸುವುದು ಸಾಧ್ಯ.

ಕೆಲವು ನಾಣ್ಣುಡಿಗಳಂತೂ ಉಪಮೆಗಳ ಚೆಲುವಿನಿಂದ ಏಕಪಂಕ್ತಿಯ ಕಾವ್ಯಗಳಾಗಿವೆ:

**ಭುವನೇಶ್ವರಿ ಸೆರಗು ಸರಿಸಿಕೊಂಡ ಹಾಗೆ: ನಕ್ಕರೆ ಮುತ್ತು ಸುರಿಯುತ್ತದೆ;**

ಬಾಳೆಗೆ ಗೊನೆ, ಚೇಳಿಗೆ ಬಸಿರು: ದೀಪದ ಕೆಳಗೆ ಕತ್ತಲೆ... ತಾಳ್ಮೆ ಇದ್ದರೆ, ಉಪ್ಪು ನೇರಳೆ ಎಲೆ ರೇಷ್ಮೆಯಾಗುತ್ತದೆ. **–ಚೀನಾ** ಬರಿದಾದ ಕಾಳತೆನೆ ತಲೆ ಎತ್ತಿ ನಿಲ್ಲುತ್ತದೆ; ತುಂಬಿದ ತೆನೆ ತಲೆ ಬಾಗುತ್ತದೆ. **–ಜರ್ಮನ್.**

ಬೆಳೆಯುವ ಬೆಳೆ ಸದ್ದು ಮಾಡುವುದಿಲ್ಲ. **–ಜರ್ಮನ್.**

ಯೌವನದ ಪ್ರೇಮ ಬೆಳ್ಳಿ ಮೊಗ್ಗಿನ ಗೊಂಚಲ ಹಾಗೆ; ಪ್ರಬುದ್ಧರ ಪ್ರೀತಿ ಅರಳಿದ ಸುವರ್ಣ ಕುಸುಮಗಳ ಹಾಗೆ**– ಜಪಾನ್.**

**ವಿರೋಧಾಭಾಸ–** ಒಂದು ಮಾತನ್ನು ಮತ್ತೊಂದಕ್ಕೆ ಎದುರಾಗಿ ಎತ್ತಿಕಟ್ಟಿ, ಅಸಂಗತವೆನಿಸುವ ನುಡಿಯಲ್ಲಿ ಅನಿರೀಕ್ಷಿತವಾದ ಸತ್ಯವನ್ನು ತೋರಿಸಿಕೊಡುತ್ತದೆ –

**ನೇಯ್ಗೆಯವನ ಮೈ ಬತ್ತಲೆ; ತಾವರೆಗೆ ಆಪ್ತನೇ ವೈರಿ; ಬೆಟ್ಟ ಅಗೆದು ಇಲಿ ಹಿಡಿದ; ರಾಜಯೋಗ, ದರಿದ್ರಜಾತಕ...** ಇತ್ಯಾದಿ.

**ಉಪ್ಪು ಸಕ್ಕರೆಗಿಂತ ಸಿಹಿ– ಐರ್ಲೆಂಡ್.**

**ಚಿನ್ನಕ್ಕಿಂತ ಉಕ್ಕು ಮೃದು– ಹಿಂದಿ.**

**ಕಲೆ ಕಲೆಯನ್ನು ಮರಸುವುದರಲ್ಲಿದೆ– ಲ್ಯಾಟಿನ್.**

**ಹೆಣ್ಣಿನ ಮೊದಲ ಪ್ರೇಮ, ನಿಜವಾಗಿ ಅವಳ ಎರಡನೇದು**

**(ಮೊಟ್ಟಮೊದಲು ತನ್ನನ್ನು ತಾನು ಪ್ರೀತಿಸಿಕೊಳ್ಳುತ್ತಾಳೆ) – ಐಲ್ಲೆಂಡ್.**

ಇಲ್ಲೆಲ್ಲ ನಾವೆಣಿಸುವುದೊಂದು; ಗಾದೆಮಾತು ಮುಗಿಸುವ ರೀತಿ ಮತ್ತೊಂದು. ಯುದ್ಧದಲ್ಲಿ ತಲ್ಲಣ ತಂತ್ರ (Shock tactics) ಇದ್ದ ಹಾಗೆ ಜಡಮನಸ್ಸನ್ನು ಬೆಚ್ಚಿಸುತ್ತದೆ ನಾಣ್ಣುಡಿ.

೬. ಉತ್ಪ್ರೇಕ್ಷೆ, ಅತ್ಯುಕ್ತಿ– ಅಚ್ಚರಿಯನ್ನೂ, ವಿಪರೀತವನ್ನೂ, ಅಸಾಧ್ಯವನ್ನೂ ಚಿತ್ರಿಸುವ ಕಲ್ಪನೆ ಉತ್ಪ್ರೇಕ್ಷೆ. ಅರ್ಥವನ್ನು ಒತ್ತಿಹೇಳುವದಕ್ಕೂ, ಹಾಸ್ಯಕ್ಕೂ ಇದೊಂದು ತಂತ್ರ.

**ಚಾಪೆ ಕೆಳಗೆ ನುಸಿದವನಿಗೆ ರಂಗೋಲಿ ಕೆಳಗೆ ನುಸಿಯೋನು ಸಿಕ್ಕಿದ.**

**ಅವಸರದಲ್ಲಿ ಅಜ್ಜಿ ಮೈ ನೆರೆದಳು; ಮನೆ ತಿನ್ನೋರಿಗೆ ಕದವೇ ಹಪ್ಪಳ ಸಂಡಿಗೆ;**

**ಗಡ್ಡ ಹತ್ತಿ ಉರಿಯೋವಾಗ ಬೀಡಿ ಹತ್ತಿಸಿಕೊಡತೀನಿ ತಡಿ ಅಂದ.**

**ಊರೆಲ್ಲ ಮಕ್ಕಳ ಹೆತ್ತರೆ, ಮಾರ್ಯಮ್ಮ ಹೆತ್ತಳಂತೆ ಮಣೇಕೊರಡ... ಇತ್ಯಾದಿ.**

೭. ಹಾಸ್ಯಮಯವಾದ ಗಾದೆಗಳಿಗಂತೂ ಲೆಕ್ಕವಿಲ್ಲ. ಮಾತಿನ ಚಮತ್ಕಾರ, ವ್ಯಂಗ್ಯ, ಉತ್ಪ್ರೇಕ್ಷೆ, ನಗೆಪಾಟಲಾದ ಸಂದರ್ಭಗಳ ಸೃಷ್ಟಿ, ದೇಸಿನುಡಿಯ ಸಂಭಾಷಣೆ, ಅಸಮಂಜಸ ಕಡೆಗೆ ಅಶ್ಲೀಲ– ಈ ಎಲ್ಲ ಉಪಾಯಗಳನ್ನೂ ಜನತೆ ತನ್ನ ಅಪಾರ ವ್ಯಾಪ್ತಿಯ ನಗೆಯಲ್ಲಿ ಬಳಸುತ್ತದೆ. ಈ ಕೆಳಗಿನ ಗಾದೆಗಳಲ್ಲಿರುವ ನಾಟಕೀಯ ಪ್ರಹಸನ ಸನ್ನಿವೇಶಗಳನ್ನೂ ಸಂಭಾಷಣೆಯ ದೇಸಿನುಡಿಯ ಧಾಟಿಯನ್ನೂ ನಿರೀಕ್ಷಿಸಿ–

ಅಜ್ಜಾ ಮದುವೆ ಅಂದರೆ, ಯಾರಿಗೆ ನಂಗಾ ಅಂದನಂತೆ; ಕದ್ದು ಮದುವೆ ಮಾಡಕೋತೀನಿ, ಬಗ್ಗಿ ಓಲಗ ಊದು, ಯಾವೂರೋ ಗೌಡ ಅಂದರೆ ಕಂಬಳಿಗೆ ಮೂರು ಹಣ ಅಂದ; ಅದೇ ಉಂಡೇನು ಕದ ತೆಗೀರಿ ಅತ್ತೆಮ್ಮನವರೇ **(ಮುನಿಸಿಕೊಂಡು ತೌರು ಮನೆಗೆ ಹೋಗಿ ಹಿಂದಿರುಗಿದ ಸೊಸೆಯ ಮಾತು)**; ಅವಳೇ ವಾಸಿ, ಎಬ್ಬಿಸಿದ್ದರೆ ಉಳ್ಳೋಳು **(ಎರಡನೆಯ ಹೆಂಡತಿಯ ಛಲವನ್ನು ಕಂಡು ಅಂದ ಮಾತಿದು; ಎಬ್ಬಿಸಿದರೆ ಉಣ್ಣುತ್ತಿದ್ದ ಮೊದಲನೆಯವಳ ಸ್ವಭಾವಚಿತ್ರ ಸೊಗಸಾಗಿ ಧ್ವನಿಸುತ್ತದೆ)**. ಮುತ್ತಿನಂಥಾ ಕೊಂಡಿಯಿಂದ ಮೆತ್ತಗೆ ಮುಟ್ಟಿದರೆ, ಕತ್ತೆಯ ಹಾಗೆ ಬಾಯಿ ಕಿಸಿದ **(ಚೇಳು ಅಂದ ಮಾತು)** ಮಣೆಯವರು ಮಣೆಗೆ ಬಂದರು, ಮಣೆ ಬಿಡಿ ಪುಟ್ಟಾಚಾರ್ರ; ಬಲ್ಲೆನೆ ಬಲ್ಲೆನೆ ನಿನ್ನ ಜಾಲ, ಎಲ್ಲಿಂದ ತಂದೆಯ ಹಸಿರಶಾಲ?; ಅಪ್ಪಾಭಟ್ಟರ ಮಗಳಾಗಿ, ತಿಪ್ಪಾಭಟ್ಟರ ಸೊಸೆಯಾಗಿ, ಲವಣಾಂದರೆ ಕಾಣೆನೆ ದೊಡ್ಡಮ್ಮ ಸೆಗಣಿ ?; ಲೇ ಅನ್ನೋದಕ್ಕೆ ಅವಳೇ ಇಲ್ಲ, ಮಗನ ಹೆಸರು ಮುದ್ದುರಂಗ ಇತ್ಯಾದಿ.

ಇಂತಹ ಏಕಾಂತ ನಾಟಕ ಚಿತ್ರ (dramatic monologues)ಗಳಲ್ಲಿ ಆಡುವವರ ಸ್ವಭಾವವೂ ಆಡುವಾಗಿನ ಸನ್ನಿವೇಶವೂ ವಾಕ್ಯವೊಂದರಲ್ಲಿ ಸ್ಫುರಿಸಿಹೋಗುತ್ತದೆ.

**'ಮೂರ್ಖನದೇ ಆದ ಒಂದು ಸೊಗಸಾದ ಪ್ರಪಂಚವುಂಟು'** ಎನ್ನುತ್ತಾರೆ ಯಹೂದಿಯರು.

ಗಾದೆ ಪುಸ್ತಕ ವಿಧವಿಧವಾದ ಹಾಸ್ಯ ಸಂದರ್ಭಗಳ, ತರಹಾವರಿ ಮಡ್ಡಿ ಮೂರ್ಖರ ಚಿತ್ರಶಾಲೆ ಎನ್ನಬಹುದು:

**ಮಹಾಪತಿವ್ರತೆ ಗಂಡನನ್ನು 'ಅಪ್ಪ' ಎಂದಳು; ಎಂದೂ ಏರದ ರಾಹುತ ಕುದುರೆ ಹಿಂದುಮುಂದಾಗಿ ಏರಿದ; ಅಶ್ವತ್ಥ ಪ್ರದಕ್ಷಿಣೆ ಮಾಡಿದರೆ ಮಕ್ಕಳಾಗುತ್ತೇಂದ್ರೆ, ಒಂದು ಸುತ್ತು ಸುತ್ತಿ ಹೊಟ್ಟೆ ಮುಟ್ಟಿ ನೋಡಿಕೊಂಡಳಂತೆ; ದುಡ್ಡಿನ ಆಶೆಗೆ ಬೆಲ್ಲ ಮಾರಿ ಗೋಣಿಚೀಲ ನೆಕ್ಕಿದ, ಹನ್ನೆರಡು ವರ್ಷ ಮಲ್ಲ ಯುದ್ಧಾಭ್ಯಾಸ ಮಾಡಿ ಅಜ್ಜೀನ ಯುದ್ಧಕ್ಕೆ ಕರೆದ; ಗಾಣಿಗನ ಸಂಗಡ ಗುದ್ದಾಡಿ ಒಣರೊಟ್ಟಿ ತಿಂದರು; ಎತ್ತು ಈಯಿತು ಅಂದರೆ ಕೊಟ್ಟಿಗೇಲಿ ಕಟ್ಟು ಎಂದ; ಮನೇದೀಪವೆಂದು ಮುದ್ದಿಟ್ಟರೆ ಗಡ್ಡ–ಮೀಸೆ ಸುಡದೆ? ಅಲ್ಪನಿಗೆ ಸಿರಿ ಬಂದರೆ ಅರ್ಧರಾತ್ರೀಲಿ ಕೊಡೆ ಹಿಡಿಸಿಕೊಂಡ ಇತ್ಯಾದಿ.**

**ಜರಡಿ ಸೂಜಿಗೆ ಹೇಳಿತಂತೆ– 'ನಿನ್ನ ಬಾಲದಲ್ಲಿ ತೂತು' ಅಂತ– ಬಿಹಾರಿ.**

**ಕೂದಲಿಲ್ಲದವಳಿಗೆ ತನ್ನ ಅತ್ತೆಯ ಮಗಳ ಕೇಶರಾಶಿಯ ಜಂಬ– ಪರ್ಶಿಯಾ.**

**ವೈದ್ಯನನ್ನು ವಾರಸು ಮಾಡಿಕೊಂಡವನೇ ಮೂರ್ಖ– ಫ್ರೆಂಚ್.**

(ದಾರುಣವಾದ ಸನ್ನಿವೇಶಗಳನ್ನೂ ಗಾದೆ ಇಣುಕು ಹಾಕಿಸುತ್ತದೆ– ಉದಾ : **'ಪಾದರಕ್ಷೆ ಇಲ್ಲವೆಂದು ಅಳುತ್ತಿದ್ದೆ– ಪಾದಗಳೇ ಇಲ್ಲದವನನ್ನು ನೋಡುವ ತನಕ'– ಅರಬಿ; ಗಂಡನೂ ಹೊಡೆದ, ಸೋಮವಾರ ಒಪ್ಪತ್ತು'** ಇತ್ಯಾದಿ ಕನ್ನಡ ಗಾದೆಗಳು ಹಿಂದೆಯೇ ಬಂದಿವೆ)

ಈ ಹಾಸ್ಯ ಪ್ರಕರಣದಲ್ಲೇ ಗಾದೆ ಜನರ ಹೆಸರುಗಳನ್ನು ಹಾಸ್ಯಕ್ಕೋ, ಮಾತನ್ನು ಪರಿಣಾಮಕಾರಿಯಾಗಿಸುವುದಕ್ಕೂ, ಸ್ವಾರಸ್ಯವಾಗಿ ಬಳಸಿಕೊಳ್ಳುವ ರೀತಿಯನ್ನೂ ಗಮನಿಸಬಹುದು.

**ಇಟ್ಟರೆ ತೊಟ್ಟರೆ ಪುಟಕ್ಕೆ ಚಂದ; ಇಣುಕಿ ಇಣುಕಿ ನೋಡಿದ ಒಣಕಲು ಗೌರೀನ; ಊರ ದನ ಕಾದು ದೊಡ್ಡ ಬೋರೆಗೌಡ ಎನಿಸಿಕೊಂಡ: ಊರ ಚಿಂತೆ ಕಟ್ಟಿಕೊಂಡು ವೀರಶೆಟ್ಟಿ ಬಡವಾದ: ಎಲೆ ತೆಗೆಯೋ ಗುಂಡಾ ಎಂದರೆ ಉಂಡೋರೆಷ್ಟು ಮಂದಿ ಎಂದ; ಕುರುಡೀನ ಚೆನ್ನಕ್ಕಾ ಅಂದರೆ ಅವಳಿಗೆ ಎಷ್ಟೋ ಹೆಚ್ಚಳ– ಇತ್ಯಾದಿ**

ಒಂದೊಂದು ದೇಶದ ಗಾದೆಯೂ ಆಯಾದೇಶದ ಬಳಕೆಯ ಹೆಸರುಗಳನ್ನು ಪ್ರಾಸಕ್ಕೆ ಅನುಗುಣವಾಗಿಯೋ, ಕಸಬು ಜಾತಿಗಳ ಸಾಮಾನ್ಯ ನಾಮಗಳನ್ನಾಗಿಯೋ, ಯುಕ್ತವಾಗಿ ಬಳಸಿಕೊಳ್ಳುತ್ತದೆ. ಇಂಗ್ಲೆಂಡಿನ ಮಿಲ್ಟನ್, ಮಾರ್ಲೋ ಕವಿಗಳೂ, ನಮ್ಮಲ್ಲಿ ಕುಮಾರವ್ಯಾಸ, ಪಂಪರೂ ಹೆಸರುಗಳನ್ನು ಕಾವ್ಯಮಯವಾಗಿಯೂ ಕಿವಿಗಿಂಪಾಗಿಯೂ ಉಪಯೋಗಿಸುವುದನ್ನು ಕಾಣಬಹುದು. ಈ

ಗಾದೆಗಳಲ್ಲೂ ತಕ್ಕ ಹೆಸರುಗಳನ್ನು ಹಾಸ್ಯಕ್ಕಾಗಿ, ಪ್ರಾಸಕ್ಕಾಗಿ, ಬೇರೆ ಯಾವ ಹೆಸರೂ ಒಪ್ಪಲಾರದೋ ಎನ್ನುವಂತೆ ರುಚಿರುಚಿಯಾಗಿ ಬಳಸಿಕೊಂಡಿದೆ. ಕೆಲವುಸಾರಿ, ಇಲ್ಲದ ಹೆಸರುಗಳೂ ಸಮಯಸ್ಫೂರ್ತಿಯಿಂದ ತಟ್ಟನೆ ಸೃಷ್ಟಿಯಾಗಿ ಅವುಗಳ ಹೊಸತನ, ಹಾಸ್ಯ, ಔಚಿತ್ಯಗಳಿಂದಾಗಿ ಉಳಿದುಕೊಳ್ಳುತ್ತದೆ.

**ಓದಿ ಓದಿ ಮರುಳಾದ ಕೂಚಂಭಟ್ಟ: ಕಟೆಪಟೆ ದೇವರಿಗೆ ಕಾಯಿಬಾಳೆಹಣ್ಣು; ಹೇಳಿದ್ದೇ ಹೇಳುತ್ತಾನೆ. ಕಿಸಿಬಾಯಿದಾಸಯ್ಯ ಇತ್ಯಾದಿ.**

ಹೀಗೆ ಗಾದೆಯಲ್ಲಿ ಬಂದ ಅಂಕಿತನಾಮಗಳು ಹಲವರ ಬಾಯಲ್ಲಿ ಹಾದು ಬಹುಬೇಗ ಸರ್ವನಾಮಗಳಾಗಿ ಬಿಡುತ್ತವೆ. ಗಾದೆಮಾತು ಭಾಷೆಗೆ ಹೊಸಪದ, ನುಡಿಗಟ್ಟುಗಳನ್ನು ತಯಾರಿಸಿಕೊಡುವ ಹಲವಾರು ರೀತಿಯಲ್ಲಿ ಇದೂ ಒಂದು. ಇಂಗ್ಲೀಷಿನ Jack of all trades, doubling Thomas, ಮುಂತಾದ ಪ್ರಯೋಗಗಳನ್ನೂ, ಕನ್ನಡದ ದೊಣ್ಣೆನಾಯಕ, ಬೋರೇಗೌಡ, ಕೂಚಂಭಟ್ಟ, ಕಿಸಿಬಾಯಿದಾಸಯ್ಯ ಇತ್ಯಾದಿ ಪದಗಳನ್ನೂ ಉದಾಹರಿಸಬಹುದು. ಕೆಲವೊಮ್ಮೆ ನಿರ್ಜಿವ ವಸ್ತುಗಳಿಗೂ ಪ್ರಾಣಿಗಳಿಗೂ ಹೆಸರು ಹುಟ್ಟಿಕೊಳ್ಳುತ್ತದೆ.

**'ಕಲ್ಲಪ್ಪನೂ ಗುಂಡಪ್ಪನೂ ಕೂಡಿದರೆ ಮಣಸಪ್ಪ ಪುಡಿ'** ಇವುಗಳನ್ನು ಮಕ್ಕಳ ಸಂತೋಷಕ್ಕೆ ಮಾಡಿದರೇನೊ ಎನಿಸುತ್ತದೆ. ಶಿಶು ಸಾಹಿತ್ಯದಲ್ಲಿ ಇಂತಹ ನಾಮಸೃಷ್ಟಿ ಸಾಮಾನ್ಯ ಹೆಸರುಗಳ ಪ್ರಯೋಗದಲ್ಲಿ ಮತ್ತೊಂದು ರೀತಿಯನ್ನು ಮಾತ್ರ ಸೂಚಿಸಿ ಮುಂದೆ ಹೋಗಬಹುದು. ಕೆಲವರ ಹೆಸರು ಗಂಭೀರವಾಗಿ ಬಾಯಿತುಂಬ ಬರುತ್ತದೆ. ಮನುಷ್ಯನ ಗುಣ, ರೂಪ, ಸ್ಥಿತಿ–ಗತಿ ಅದಕ್ಕೆ ನೇರ, ವಿರುದ್ಧವಾಗಿದ್ದು, ಹೆಸರಿನ ಗಾಂಭೀರ್ಯವನ್ನು ಹಾಸ್ಯಾಸ್ಪದವೆನಿಸಿಬಿಡುತ್ತವೆ. ವಿರೋಧಾಭಾಸ ಎಲ್ಲಿದ್ದರೂ ಹಿಡಿದುಹಾಕುವ ಕಣ್ಣು ಗಾದೆಯದು.

**ಟೆಂಟೆಬೋಳ, ಹೆಸರು ಮದನಗೋಪಾಲ; ದುಡ್ಡಿಲ್ಲ ಕಾಸಿಲ್ಲ, ಸಂಪತ್ತೈಯಂಗಾರ್ರು. ರೆಕ್ಕೆಯಿಲ್ಲ ಕೊಕ್ಕಿಲ್ಲ ಗರುಡಯ್ಯಂಗಾರ್ರು: ತೀಟೆಗೆ ಮಕ್ಕಳ ಹೆತ್ತು ತಿರುಮಲದೇವರ ಹೆಸರಿಟ್ಟರು. ಹೆಸರು ಕ್ಷೀರಸಾಗರಭಟ್ಟ, ಮಜ್ಜಿಗೆ ನೀರಿಗೆ ತತ್ವಾರ; ಅಪ್ಪಾಭಟ್ಟರ ಮಗಳಾಗಿ ತಿಪ್ಪಾಭಟ್ಟರ ಸೊಸೆಯಾಗಿ ಲವಣ ಅಂದರೆ ಕಾಣೆನೇ ದೊಡ್ಡಮ್ಮ ಸೆಗಣಿ ನಾಯಿ ಹೆಸರು ಸಂಪಿಗೆ...**

೯. ಗಾದೆಗಳು ಕಾವ್ಯಮಯವಾಗಿರುತ್ತವೆ. ನವರಸಗಳನ್ನೂ ಒಳಗೊಂಡಿರುತ್ತವೆ ಎನ್ನುವುದು ಎಲ್ಲರಿಗೂ ತಿಳಿದ ಸಂಗತಿ. ಹೇಳಿದ್ದೇ ಹೇಳುತ್ತಾನೆ ಈ ಕಿಸಿಬಾಯಿ ದಾಸಯ್ಯ ಎನಿಸಿಕೊಳ್ಳುವ ಮೊದಲು ಈ ಭಾಗವನ್ನು ಮುಗಿಸುವುದು ಉಚಿತ. ಏಕಪಂಕ್ತಿಯ ಕಾವ್ಯಗಳೆಂದೂ, ನವರಸದ ಸೀರ್ಪನಿಗಳೆಂದೂ,

ಎನಿಸುವ ಈ ಕಾಣದ ಕವಿಗಳ ಕೈವಾಡದಲ್ಲಿ ನಾಲ್ಕಾರನ್ನು ಮಾತ್ರ ಓದುಗರ ಕಣ್ಣ ಮುಂದಿಟ್ಟು ಮುಗಿಸುತ್ತೇನೆ.

**'ಮೊದಲೇ ಚೆಲುವೆ, ಇನ್ನು ಮುನಿದರೆ ಹೇಗೆ?'** ಎಂಬ ಒಂದು ಗಾದೆಯ ವಸ್ತುವಿನ ಬಗ್ಗೆ ಎಷ್ಟು ನುಡಿಗಳಲ್ಲಿ ಎಷ್ಟು ಭಾವಗೀತೆ ಮಿಡಿದಿದೆಯೋ ಎಣಿಸಬಲ್ಲವರಾರು ? ಇದ್ದರೂ, ಈ ಒಂದು ವಾಕ್ಯದ ತುಂಬು ಧ್ವನಿ, ಮುಗುಳಗೆಯ ಹಾಸ್ಯ, ಮುನಿಸಿನಲ್ಲಿ ಮೂಡಿದ ಚೆಲುವನ್ನು ಸೂಚಿಸುವ ರಸಿಕತನ ಬೇರಾವ ಕವಿಯಲ್ಲೂ ಕಾಣಲಿಲ್ಲ. ಅಮರು ಶತಕದಿಂದಲೋ ಇಂಗ್ಲೆಂಡಿನ ಹೆರಿಕ್ (Herrick) ಕವಿಯ ಪುಟಗಳಿಂದಲೋ ಎತ್ತಿಕೊಂಡ ಹಾಗೆ ಭಾಸವಾಗುತ್ತದೆ. ಅವರಲ್ಲೂ ಹೀಗೆ ಒಂದು ಪಂಕ್ತಿಯಲ್ಲಿ ಪೂರ್ಣ ಭಾವವೊಂದು ಪೂರ್ಣವಾಗಿ ವ್ಯಕ್ತವಾಗಿದೆ ಎನ್ನಲಾರೆ.

**'ನಾರುಬತ್ತಿ ನೀರೆಣ್ಣೆ ನನ್ನ ಸಂಸಾರ, ಸಣ್ಣ ಗುರಿಯೋ ಜಗಂಜ್ಯೋತಿ'** ಈ ವಾಕ್ಯದ ಕಣ್ಣಿಗೆ ಕಟ್ಟುವ ಚಿತ್ರವಾದ ಶೈಲಿ, ಜೋಗುಳದ ಹಾಡೊಂದರ ಪದವೋ ಎಂಬಂತಿರುವ ಮಧುರ ಗತಿ, ಸ–ನ–ಣ–ಜ–ಕಾರಗಳ ಅತ್ಯಂತ ಕುಶಲವಾದ ಅನುರಣನ, ಒತ್ತಿಬರುವ ಕರುಣರಸ ಇವೆಲ್ಲ ಮಾತನ್ನು ಮುತ್ತಾಗಿಸಿವೆ.[೨]

**ಪ್ರೀತಿ ಹುಡುಕುತ್ತ ಹೋಗಿ, ನನ್ನನ್ನೇ ಕಳೆದುಕೊಂಡ – (ಹಿಂದಿ). ಹೆಣ್ಣಿನ ತುಟಿ 'ಸಾಕು' ಎಂದಾಗ, ಅವಳ ಕಣ್ಣುಗಳು 'ಮತ್ತೊಮ್ಮೆ' ಎನ್ನುತ್ತವೆ – (ಚೀನಿ). ತರುಣಿಯರು ಹಸಿರುದ್ರಾಕ್ಷಿ, ವಯಸ್ಕ ರಮಣೀಯರು ಒಣದ್ರಾಕ್ಷಿ – (ಜರ್ಮನಿ).**

ಈ ನಾಣ್ಣುಡಿಗಳಲ್ಲಿನ ರಸಿಕತೆ, ಅಲಂಕಾರವಿಶೇಷ, ಭಾವಪುಷ್ಟಿಗಳನ್ನು ನೋಡಿದರೆ ಯಾವ ಪ್ರೇಮಕಾವ್ಯದ ಚುಂಬಕಕ್ಕೂ ಇವು ಕಡಿಮೆ ಇಲ್ಲ ಎನಿಸುತ್ತದೆ. ಪ್ರಕೃತಿ ಸೌಂದರ್ಯದ ಬಗ್ಗೆ ಸುಂದರವಾದ, ಕಣ್ಣು ತುಂಬುವ ಗಾದೆಗಳಲ್ಲಿ ಕೆಲವು ಇವು :

**ಕತ್ತಲಾದರೂ ಕಾಮನಬಿಲ್ಲು ಮರೆಯುವುದಿಲ್ಲ – ಚೀನಾ**

**ಹುಟ್ಟುವ ಮೊದಲು ಸೂರ್ಯ ಆಟವಾಡುತ್ತಾನೆ – ಸ್ಪೆಯಿನ್**

**ಮಿಂಚಿನ ತಾಯಿ ಪಾಪಾಸು ಕಳೆದುಕೊಂಡರೆ, ಮಂಜಿನಲ್ಲೋ ಮೋಡದಲ್ಲೋ ಕಾಣಸಿಗದು – ಮಂಗೋಲಿಯ**

---

[೨] * ಇಂತಹ ಗಾದೆಗಳನ್ನು ನೋಡಿಯೇ ಕೆಲವರು, ಗಾದೆಗಳು ಹಾಡಿನ ಪಂಕ್ತಿಯಾಗಿ ಹುಟ್ಟಿದುವು ಎನ್ನುತ್ತಾರೇನೋ.

ಇಂತಹ ಗಾದೆಗಳನ್ನು ಓದಿದಾಗ, **'ಪ್ರತಿಯೊಬ್ಬ ಸತ್ತಾಗಲೂ ಕವಿಯೊಬ್ಬ ಸಾಯುತ್ತಾನೆ'** ಎಂದು ಇಂಗ್ಲೀಷಿನವರು ಅನ್ನುವುದು ನೆನಪಾಗುತ್ತದೆ; 'ಕಾವ್ಯದಲ್ಲಿ ಚಿತ್ರಗಳುಂಟು, ಚಿತ್ರದಲ್ಲಿ ಕಾವ್ಯವುಂಟು', 'ಕಾವ್ಯದಲ್ಲಿ ಮಾತಿನ ಸದ್ದು ನಿಂತರೂ ಅರ್ಥ ಮುಂದೆ ಸಾಗುತ್ತದೆ' ಎಂಬ ಸೂಕ್ಷ್ಮವಾದ ಚೀನೀ ಗಾದೆಗಳನ್ನೇ ಇಲ್ಲಿ ವಿಮರ್ಶೆಯಾಗಿ ಬಳಸಬಹುದು.

೧೦. ಗಾದೆಗಳು ಕಟುವಾದ, ಒಗರಾದ, ಕೆಲಮಟ್ಟಿಗೆ ನಿಜವಾದ ಸತ್ಯಗಳಿಗೆ ಹೆಸರಾಗಿವೆ. ಯಾವ ವಿಡಂಬನಕಾರನೂ ಇಲ್ಲಿನ ಮೊನೆಮಾತು, ಕಟಕಿ, ವ್ಯಂಗ್ಯಗಳನ್ನೂ, ಮಾತನ್ನು ಝಳಪಿಸುವ ಪಟ್ಟುವರಸೆಗಳನ್ನೂ ನೋಡಿ ಅಸೂಯೆ ಪಡುವಂತಿದೆ. ಚಾಟುನುಡಿ (epigram) ಚಾಟಿನುಡಿ ಎನ್ನೋಣವೇ? ಚಾಟುನುಡಿಗಳಿಗಂತೂ ಗಾದೆ ಕೊರೆಬೀಳದ ಗಣಿ. ಇವುಗಳು ವಸ್ತುಜ್ಞಾನಕ್ಕಿಂತ ಅಭಿಪ್ರಾಯವನ್ನು ಒಳಗೊಳ್ಳುತ್ತವೆ. ಶೈಲಿಯ ಚಮತ್ಕಾರ ಇಲ್ಲಿ ಪ್ರಧಾನ ಎನಿಸಿದ್ದರಿಂದ ಇವನ್ನೂ ಸಾಹಿತ್ಯ ಪ್ರಕರಣಕ್ಕೇ ಸೇರಿಸಿದೆ.

ಈ ಚುರುಕು ನುಡಿಗಳೆಲ್ಲ ಅರ್ಧಸತ್ಯಗಳು–ಪೂರ್ಣ ಸತ್ಯಕ್ಕೆ ಬೇಕಾದ ತಾಳ್ಮೆ, ತರ್ಕ ಇವುಗಳಿಗಿಲ್ಲ. ಮನುಷ್ಯನ ಮನಸ್ಸಿಗೆ ಮೊನೆಯಾದ ಖಂಡಿತವಾದ ಅರ್ಧಸತ್ಯಗಳು ನಾಟುವಂತೆ, ಉದ್ದಮಾತಿನ ವಿವರವಾದ ಪೂರ್ಣಸತ್ಯಗಳು ನಾಟುವುದಿಲ್ಲ, ಏಕೋ ?

ಇವುಗಳಲ್ಲಿ ಎಷ್ಟೋ ಈಗಾಗಲೇ ಬಂದುಹೋಗಿವೆ. ಎಲ್ಲ ರೀತಿಯ ಉದಾಹರಣೆಗಳನ್ನೂ ಕೊಟ್ಟು ವಿವರಿಸುವುದಕ್ಕೆ ಅಗತ್ಯ, ಅವಕಾಶ ಎರಡೂ ಇಲ್ಲ. ಆದ್ದರಿಂದ, ಹೆಣ್ಣಿನ ಬಗ್ಗೆ ಸಿಕ್ಕುವ ಹೇರಳವಾದ ಕಿಡಿಮಾತುಗಳನ್ನು ಮಾತ್ರ ಉದಾಹರಿಸುತ್ತೇನೆ :

**ಒಲಿದರೆ ನಾರಿ, ಮುನಿದರೆ ಮಾರಿ; ಮಗಳು ಹುಟ್ಟಿದರೆ ಏಳೂರ ನೀರು ಕುಡಿಸುತ್ತಾಳೆ; ಮುದ್ದಾದನೇ ಮಗ ಮೂರನೇ ಹೆಂಡತಿಗೆ, ತಂದರೆ ಬಂದರೆ ತನ್ನ ಗಂಡ, ತರದೆ ಬಂದರೆ ತನ್ನ ತಂಗಿ ಗಂಡ: ಗಂಡ ಸತ್ತರೆ ಸಾಯಲಿ, ಕಿವಿಗೊಂದು ವಾಲೆಯಾದರೆ ಸೈ; ಅಗ್ಗ ಸೂರೆ ಅನ್ನವೆಂದು ಸೀರೆ ಬಿಚ್ಚಿ ('ಬಿಗ್ಗ ಬಿರಿಯ' – ಪಾಠಾಂತರ) ಉಂಡಳು** ಇತ್ಯಾದಿ.

ಹೀಗೆಯೇ ಹೆಣ್ಣಿನ ಮೂರ್ಖತನ, ಸಂಕುಚಿತ ಮನೋಭಾವ, ವಾಚಾಳಿತನ ಇತ್ಯಾದಿ ಸದ್ಗುಣಗಳ ಬಗ್ಗೆ ಗಾದೆ ಹಿಗ್ಗಿ ಹಿಗ್ಗಿ ನುಡಿಯುತ್ತದೆ. ಎಲ್ಲ ದೇಶದಲ್ಲೂ ಇದೇ ಕೊಂಕುದೃಷ್ಟಿ; ಹೆಣ್ಣಿನ ಗುಣಗಾನ ಮಾಡಿದರೆ ಗಾದೆ ಸಪ್ಪಗಾದೀತೆಂತಲೋ, ಎಲ್ಲ ಗಾದೆಗಳನ್ನೂ ಗಂಡುಗಳೇ ಸೃಷ್ಟಿಸಿದ್ದಾರೋ? ಅಂತೂ

ಗಾದೆಗಿಂತ ಸ್ತ್ರೀದ್ವೇಶಿಯಾದ ಹೆಣ್ಣಿನ ಕೊಂಕಿನ ಮೇಲೆ ಕಣ್ಣಾದ ಸಾಹಿತ್ಯ – ಯಾವ ವಿಡಂಬನಕಾರನಲ್ಲೂ ಸಿಕ್ಕಲಾರದು.[೩]

**ಅದೃಷ್ಟವಿದ್ದವನಿಗೆ ಸ್ನೇಹಿತ ಸಿಕ್ಕುತ್ತಾನೆ. ದುರದೃಷ್ಟ ಬಡಿದವನಿಗೆ ಸುಂದರಿ ಸಿಕ್ಕುತ್ತಾಳೆ – ಚೀನಾ**

**ಹೆಣ್ಣು ನೆರಳಿದ್ದ ಹಾಗೆ – ಬೆನ್ನು ಹತ್ತಿದರೆ ಓಡುತ್ತಾಳೆ; ಓಡಿದರೆ ಬೆನ್ನು ಹತ್ತುತ್ತಾಳೆ – ಸ್ಪೇಯಿನ್**

**ಹೆಣ್ಣಿನ ಕಣ್ಣು ಬೀಳದವನೇ ಭಾಗ್ಯವಂತ; ಹೆಣ್ಣಿಗೆ 'ನೀನು ಸುಂದರಿ' ಎಂದರೆ ಸೈತಾನ ಅವಳಿಗದನ್ನು ಹತ್ತು ಸಾರಿ ಒತ್ತಿ ಹೇಳುತ್ತಾನೆ... ಇತ್ಯಾದಿ – ಸ್ಪೇಯಿನ್**

**ಗಂಡು ಹೆಣ್ಣನ್ನು ಅಟ್ಟಿಸಿಕೊಂಡು ಹೋಗಿ ಅವಳ ಕೈಗೆ ಸಿಕ್ಕಿಬೀಳುತ್ತಾನೆ – ಇಂಗ್ಲಿಷ್**

**ಸಾವಿರ ಗಂಡಸರು ಶಾಂತವಾಗಿದ್ದಾರು, ಆದರೆ ಇಬ್ಬರು ಅಕ್ಕ–ತಂಗಿಯರು ಒಟ್ಟಿಗಿರಲಾರರು; – ತಮಿಳು**

**ಹೆಣ್ಣು ಈರುಳ್ಳಿ ಇದ್ದ ಹಾಗೆ – ನೋಡುವುದಕ್ಕೆ ತೆಳ್ಳಗೆ ಬೆಳ್ಳಗೆ, ಕತ್ತರಿಸಿದರೆ ತಿರುಳಿಲ್ಲ, ಹೃದಯವಿಲ್ಲ, ನಮ್ಮ ಕಣ್ಣಿನಲ್ಲಿ ಮಾತ್ರ ನೀರು – ಜರ್ಮನ್**

ಹೆಣ್ಣಿಗೂ ಸೈತಾನನಿಗೂ ಇರುವ ನಿಕಟವಾದ ನೆಂಟಸಿಕೆಯನ್ನು ಹಲವಾರು ಭಾಷೆಯ ಗಾದೆಗಳು ಬಿಸಿಬಿಸಿಯಾದ ಮಾತಿನಲ್ಲಿ ಸ್ಪಷ್ಟಪಡಿಸುತ್ತವೆ (ಇದು ಬೈಬಲ್ಲಿನ ಮೊದಲಧ್ಯಾಯದಿಂದ ಬಂದದ್ದೇನೋ!) : **'ಹೆಣ್ಣು ಸೈತಾನನ ಬಲೆ'** (ಅರಬಿ) **'ಸೈತಾನನಿಗೆ ಕೈಲಾಗದಿದ್ದರೆ ಹೆಣ್ಣನ್ನು ಕಳಿಸುತ್ತಾನೆ'** (ರಷ್ಯನ್).

ಹೆಂಡತಿಯೊಡನೆ ಹೇಗೆ ವ್ಯವಹರಿಸಬೇಕೆಂದು ಹಲವಾರು ನಿರಸನ ಗಾದೆಗಳು ಚುರುಕು ಮಾತಿನಲ್ಲಿ ಹೇಳಿಕೊಡುತ್ತವೆ: **'ಪ್ರಪಂಚಕ್ಕೆ ತಿಳಿಸಬೇಕಾದ ವಿಷಯವನ್ನು ಹೆಂಡತಿಗೆ ಹೇಳು' – ಐರಿಷ್, 'ಹೆಂಡತಿಯನ್ನು ಪ್ರೀತಿಸು, ಆದರೆ ಹಣ್ಣಿನ ಗಿಡದಂತೆ ಕುಲುಕು'– ರಷ್ಯನ್, 'ಹೆಂಡತಿಗೆ ಎಲ್ಲ ಗುಟ್ಟನ್ನೂ ಹೇಳಿದವನಿಗೆ ಈಚೀಚೆಗೆ ಮದುವೆಯಾಗಿರಬೇಕು'.– ಇಂಗ್ಲೀಷ್, 'ಹೆಂಡತಿಗೆ ಪ್ರೀತಿಯನ್ನೂ, ತಾಯಿಗೆ ಗುಟ್ಟನ್ನೂ ಕೊಡು' – ಐರಿಷ್, 'ದಿಂಬಿನ ಮೇಲೆ ಉಸಿರಿದ್ದನ್ನು ನಂಬಿ ಬಿಡಬೇಡ' – ಚೀನಾ** ಹೆಂಡತಿಯನ್ನು ನಾಗರಿಕ ಹೇಗೆ ಕಾಣಬೇಕೆಂದು ಒಂದೇ ಒಂದು ಯಹೂದಿ ಗಾದೆ ಹೇಳುತ್ತದೆ. **'ನಿನ್ನ ಹೆಂಡತಿ ಕುಳ್ಳಿಯಾದರೆ ಮೆಲ್ಲಗೆ**

---

[೩] * ಈ ಸಂದರ್ಭದಲ್ಲಿ ಜನಪದ ಸಾಹಿತ್ಯ ಎಲ್ಲದರಲ್ಲೂ ಹೆಣ್ಣಿನ ಬಗ್ಗೆ ಇಂತಹದೇ ಹೆಚ್ಚು (Stereolype) ಇರುವುದನ್ನು ಗಮನಿಸಬಹುದು. ಕಥಾಸರಿತ್ಸಾಗರವನ್ನೂ, ಪಂಚತಂತ್ರವನ್ನೂ, ಆರೇಬಿಯನ್ ನೈಟ್ಸ್, ಬೊಕೇಶಿಯೋಗಳನ್ನೂ ನೋಡಿದರೆ ಸಾಕು. ಋಗ್ವೇದ ಕೂಡ, **'ಹೆಂಗಸರಿಗೆ ಸ್ನೇಹವೆಂಬುದಿಲ್ಲ. ಅವರದು ಕತ್ತೆಕಿರುಬದ ಹೃದಯ'** ಎನ್ನುತ್ತದಂತೆ. ಜನಮನದಲ್ಲಿ ಬೇರೂರಿರುವ ಈ ವ್ಯಂಗ್ಯ ಸ್ವಭಾವಚಿತ್ರಗಳ ಬಗ್ಗೆ ಗಾದೆಗಳಲ್ಲಿ ಜ್ಞಾನ' ಎಂಬಲ್ಲಿನ ಜಾತಿಕಸಬುಗಳ ಚಿತ್ರಗಳನ್ನೂ ನೋಡಿ.

**ಬಾಗಿ ಕಿವಿಯಲ್ಲಿ ಪಿಸುಮಾತು ಉಸಿರು'** ಎಂದು. ಆದರೆ ಇದೇ ಯಹೂದಿಯರಲ್ಲಿ **'ಕತ್ತೆ ಏಣಿ ಹತ್ತಿದಂದು ಹೆಂಗಸರಲ್ಲಿ ವಿವೇಕ ದೊರೆತೀತು'** ಎಂಬ ಮಾತುಗಳೇ ಬಹಳ. ಅನಿರೀಕ್ಷಿತವಾದ ಐರಿಷ್ ಚಾಟುನುಡಿಯೊಂದನ್ನು ಹೇಳಿ ಈ ಭಾಗವನ್ನು ಕೊನೆಗಾಣಿಸಬಹುದು.

**'ಮೂರು ತರದ ಗಂಡನಿಗೆ ಹೆಣ್ಣು ಅರ್ಥವಾಗುವುದಿಲ್ಲ. ತರುಣನಿಗೆ, ಮಧ್ಯ ವಯಸ್ಕನಿಗೆ, ಮುದುಕನಿಗೆ'**

ಹೆಣ್ಣಿನ ಬಗ್ಗೆ ಇರುವ ಗಾದೆಗಳು, ಗಾದೆಯ ದೃಷ್ಟಿಕೋನಕ್ಕೆ ದೃಷ್ಟಾಂತ ಮಾತ್ರ. ಜನಸಾಮಾನ್ಯ ನಿಷ್ಠುರವಾದಿ, ವಾಸ್ತವ ದೃಷ್ಟಿಯನ್ನು ನಾಚದೆ, ಹೇಸದೆ, ಮುಚ್ಚು–ಮರೆ ಮಾಡದೆ, ಖಡಾಖಂಡಿತವಾಗಿ ಹೇಳಿಬಿಡುತ್ತದೆ. **'ರಾಯ ಸತ್ತರೂ ಹೆಣ, ನಾಯಿ ಸತ್ತರೂ ಹೆಣ,': 'ಮಗು ಸತ್ತರೂ ನಾತ ತಪ್ಪದು'** ಇತ್ಯಾದಿ (ಕನ್ನಡ), **'ಮನುಷ್ಯನಿಗೂ ಮಂಗನಿಗೂ ಮೂರು ಕೂದಲ ಅಂತರ'** (ಜಪಾನ್), **'ದೇವರು ಪಾಪಿಗಳನ್ನು ಕ್ಷಮಿಸುತ್ತಾನೆ. ಇಲ್ಲದಿದ್ದರೆ ಸ್ವರ್ಗ ಬರಿದಾದೀತು.' 'ರಾಜನ ನಾಯಿಗೂ ತೊಣಚಿ ಹೋಗುತ್ತದೆ'** (ಜರ್ಮನ್). **'ಕೈಗೆ ಸಿಕ್ಕಿದ ಹೂವನ್ನು ದೇವರಿಗೆ ಕೊಡುತ್ತೇವೆ.'** (ಅಸ್ಸಾಮಿ)– ಹೀಗೆಯೇ ನೂರಾರನ್ನು ನಿದರ್ಶನ ಕೊಡಬಹುದು.

೧೧. ಈ ಸಂದರ್ಭದಲ್ಲೇ, ಗಾದೆಗಳು ಹೇಳುವ ಬುದ್ಧಿವಾದವನ್ನೂ ಅವುಗಳಲ್ಲಿ ದೊರಕುವ ವ್ಯವಹಾರ ಜ್ಞಾನವನ್ನೂ ಸ್ವಲ್ಪ ಬೆದಕಿ ನೋಡಬಹುದು. ಬಹುಮಟ್ಟಿಗೆ, ಇಲ್ಲಿ (ಈಗಾಗಲೇ ಓದುಗರು ಕಂಡಿರುವಂತೆ), ಅಲೌಕಿಕವಾದ ದೊಡ್ಡ ಕನಸು ಆದರ್ಶಗಳು. **'ಎಲ್ಲವನ್ನೂ ಬಿಟ್ಟು ಜನರನ್ನು ಪ್ರೀತಿಸು'** ಎನ್ನುವಂತಹ ಮಾತುಗಳು ಸಿಕ್ಕುವುದಿಲ್ಲ.[೪]

ಕಥಾಸರಿತ್ಸಾಗರ, ಪಂಚತಂತ್ರ ಮುಂತಾದ ಜಾನಪದ ಕತೆಗಳಲ್ಲಿದ್ದ ಹಾಗೇ ಇಲ್ಲೂ ಧರ್ಮ, ಮೋಕ್ಷಗಳಿಗಿಂತ, ಅರ್ಥ, ಕಾಮಗಳಿಗೇ ಗಮನ. ಈ ಕೆಟ್ಟ ಲೋಕದಲ್ಲಿ ಬದುಕುವುದು ಹೇಗೆ? ಮುಂದಕ್ಕೆ ಬರುವುದು ಹೇಗೆ? ಎಂಬ ಪ್ರಶ್ನೆಗಳಿಗೆ ಬುದ್ಧಿವಂತಿಕೆಯ ಉತ್ತರಗಳನ್ನು ಕೊಡುತ್ತವೆ. ನೀತಿ–ಶೀಲಗಳಿಗಿಂತ ಲೋಕರೂಢಿ **'ಸಂದಿಯಲ್ಲಿ ಸಮಾರಾಧನೆ'** ಮಾಡುವ **'ಗುಂಪಿನಲ್ಲಿ ಗೋವಿಂದ'** ಎನ್ನುವ ಅನುಕೂಲವೇದಾಂತ ಇಲ್ಲಿ ವಿಶೇಷ. ಆಯಾ ಸಂದರ್ಭಕ್ಕೆ ತಕ್ಕಂತೆ ನುಸುಳಿ ನಡೆಯುವ ವಿದ್ಯೆಯನ್ನು ಹೇಳಿಕೊಡುವದರಿಂದ ಇವುಗಳಲ್ಲಿ ಒಂದು ತತ್ವವಿನ್ಯಾಸವಿಲ್ಲ. ವಿಚಾರದ ಒಕ್ಕಟ್ಟಿಲ್ಲ. **'ಮುಖ ನೋಡಿ ಮಣೆ ಹಾಕುತ್ತದೆ'. 'ಗಾಳಿ ಬಂದಂತೆ ತೂರಿಕೊಳ್ಳುತ್ತದೆ'. 'ಆರು ದೋಸೆ ಕೊಟ್ಟರೆ ಅತ್ತೆ ಕಡೆ, ಮೂರು ದೋಸೆ ಕೊಟ್ಟರೆ ಸೊಸೆ ಕಡೆ'** ಎಂದು ಬಿಡುತ್ತದೆ, ಈ ಸಮಯ ಸಂಜೀವಿನಿ. ಇದಕ್ಕೆ ಟ್ರೆಂಚ್ (Trench)

---

[೪] ***'ಊರ ಚಿಂತೆ ಕಟ್ಟಿಕೊಂಡು ವೀರಶೆಟ್ಟಿ, ಬಡವಾದ'; 'ಮನೆಗೆ ಮಾರಿ ಪರರಿಗುಪಕಾರಿ' 'ಕನ್ನಡಿಯೊಳಗಿನ ಗಂಟಿಗಿಂತ ಕೈಯೊಳಗಿನ ದಂಟು ಲೇಸು'** ಇತ್ಯಾದಿ... ಕೃಷಿಕರ ಪ್ರತಿಗಾಮಿ ಬುದ್ಧಿಯ ಬಗ್ಗೆ 'ಗಾದೆಯಲ್ಲಿ ಜ್ಞಾನ' ಪ್ರಕರಣ ನೋಡಿ.

ಎಂಬಾತ ಇಂತಹ ಮಾತನ್ನೆಲ್ಲ 'Scoundrel maxims' **'ಕಳ್ಳರಿಗೂ ಸುಳ್ಳರಿಗೂ ತಕ್ಕ ಉಪದೇಶ'** ಎನ್ನುತ್ತಾನೆ.

ಈಗಿನ ವಾಣಿಜ್ಯ ಪ್ರಧಾನವಾದ ಪೈಪೋಟಿಯ ಸಮಾಜದಲ್ಲಿ ಬದುಕುವ ಉಪಾಯಗಳೇನು, 'the art of getting on' 'ಮುಂದಕ್ಕೆ ಬರುವ' ಕುಟಿಲವಾದ ಕುಶಲಕಲೆ ಎಂಥದು ಎಂಬ ಬಗ್ಗೆ ಡೇಲ್ ಕಾರ್ನಗಿ (Dale Carnegie) ಮುಂತಾದವರು ಅನೇಕ ಜನಪ್ರಿಯವಾದ ಪುಸ್ತಕಗಳನ್ನು ಬರೆಯುತ್ತಿದ್ದಾರೆ. ಅವರಲ್ಲೆಲ್ಲೂ ವಿವಿಧ ದೇಶದ ಗಾದೆಗಳಲ್ಲಿನ ಚಾಣಕ್ಯ ತಂತ್ರ, ಸ್ವಾರ್ಥ ಸಾಧನೆಯ ಸುರಂಗಗಳು, 'ನೀತಿಗಿಂತ ಕಾರ್ಯ ಮೇಲು' ಎನ್ನುವ ಅನುಕೂಲವಾದ – ಮುಂತಾದುವೆಲ್ಲ ಇಷ್ಟು ಸ್ಮರಣೀಯವಾಗಿ ಸಿಕ್ಕಲಾರವು.

**'ಒಕ್ಕಣ್ಣಿನ ರಾಜ್ಯಕ್ಕೆ ಹೋದರೆ, ಒಕ್ಕಣ್ಣು ಮುಚ್ಚಿ ನಡೆ;' 'ಕಾರ್ಯ ವಾಸಿ ಕತ್ತೆ ಕಾಲು ಕಟ್ಟು' 'ಜಾರಿಬಿದ್ದು ಉಣ್ಣೆಯಂಥ ನೆಲ ಎಂದ;' 'ಎನಿತು ದಕ್ಷಿಣೆಯೋ ಅಷ್ಟು ಪ್ರದಕ್ಷಿಣೆ', 'ಎಕ್ಕಡದಲ್ಲಿ ಹೊಡೆದರೆ ಬಸವನ ಚಕ್ಕಳ ಎಂದ;' 'ಒಳ್ಳೇ ಮಾತಿಗೆ ಸುಳ್ಳೇ ಪ್ರಧಾನ;' 'ಕಂಕುಳಲ್ಲಿ ದೊಣ್ಣೆ ಕೈಯಲ್ಲಿ ಶರಣಾರ್ಥಿ', 'ಒಂದು ರೂಪಾಯಿದ್ದರೆ ಒಂದಾನೆ ಬಲ;' 'ಕಂಡೋರ ಮಕ್ಕಳನ್ನು ಕೈತುಂಬ ಹೊಡಿ;' 'ಹುಸಿ ಹೇಳಿದರೂ ಹಸನಾಗಿ ಹೇಳು;' 'ಮಾತು ಆಡ್ತಾ ಆಡ್ತಾ ಗೌಡ ಅವರೆಕಾಯಿ ಕೊಯಿದ', 'ತಲೆಬಾಗಿಲಲ್ಲಿ ತಾಯಿ ನೋಡಿದ ಮೇಲೆ ಒಳಬಾಗ್ಲಲ್ಲಿ ಮಗಳನ್ನು ನೋಡಬೇಡ'....** ಇತ್ಯಾದಿ.

**'ಹುತ್ತದಿಂದ ಸರ್ಪ ಎಳೆಯಬೇಕಾದರೆ ಮತ್ತೊಬ್ಬನ ಕೈಯನ್ನು ಉಪಯೋಗಿಸು'**–(ಮಲಯ); **ಅಣ್ಣ–ತಮ್ಮಂದಿರಾಗಿ ಬಾಳಿ, ಆದರೆ ಲೆಕ್ಕ ಮರೆಯಬೇಡಿ**– (ಅರಬಿ); **ನಡುಹಗಲಿನಲ್ಲಿ ಸುಲ್ತಾನ 'ಇದು ರಾತ್ರಿ' ಎಂದರೆ ಕತ್ತೆತ್ತಿ ನಕ್ಷತ್ರಗಳನ್ನು ನೋಡು'**– (ಅರಬಿ): **'ಚಕ್ರವರ್ತಿಗೆ ನೆಗಡಿಯಾದರೆ ರಷ್ಯವೆಲ್ಲ ಕೆಮ್ಮುತ್ತದೆ'** (ರಷ್ಯನ್); **ಇಷ್ಟನ್ನು ಇತರರಿಗೆ ತಿಳಿಸಬೇಡ – "ಐಶ್ವರ್ಯ, ನಿನ್ನ ಔಷಧಿಗಳು, ನಲ್ಲನ ಹೆಸರು, ಸಿಕ್ಕ ನಿಧಿ, ಸತ್ಕಾರ್ಯ ಮಾನಭಂಗ, ಮಾಡಿಕೊಂಡ ಸಾಲ" –** (ಬೆಂಗಾಳಿ ಇತ್ಯಾದಿ); **'ಕಳ್ಳ ಮುತ್ತಿಟ್ಟರೆ ಹಲ್ಲೆಷ್ಟಿದೆ ಎಣಿಸಿಕೋ'–** (ಯಹೂದಿ).

ಇಂತಹ ಪುಸ್ತಕಗಳಲ್ಲೂ ಇಂತಹ ಬುದ್ಧಿವಾದದಲ್ಲೂ ಲೋಕದ ಬಗ್ಗೆ ಒಂದು ನಿರಸನ ದೃಷ್ಟಿ, ಅಪನಂಬಿಕೆ, ಆದರ್ಶಗಳ ಬಗ್ಗೆ ಅನಾದರ ಇರುವುದನ್ನು ಕಾಣಬಹುದು. ಅಂತೆಯೇ, ಲೋಕದ ರೀತಿಯ ಬಗ್ಗೆಯೂ ಕಹಿಯಾದ ಚುಚ್ಚು ಮಾತುಗಳು, ಬಿರುಸಾದ ವಿಡಂಬನೆ ಬಳಕೆಯಲ್ಲಿವೆ. ಒಂದೆರಡು ಉದಾಹರಣೆ ಕೊಟ್ಟು ತೃಪ್ತಿಪಟ್ಟುಕೊಳ್ಳುವುದು ವಾಸಿ :

**‘ಮೆತ್ತಗಿದ್ದವನನ್ನು ಮೊಣಕೈಯಲ್ಲಿ ಗುದ್ದಿದರು;’ ‘ಬಡದೇವರ ಕಂಡ್ರೆ ಬಿಲಪತ್ರೆ ಕೂಡ ಬುಸ್ಸಂತು;’ ‘ಮುನಿಸಿಕೊಂಡು ಕೂತವರು ಮೂರು ಮುದ್ದೆ ಉಂಡರು, ನಾಚಿಕೊಂಡು ಕೂತವರು ನಾಕು ಮುದ್ದೆ ಉಂಡರು.’ ‘ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ ಎದ್ದು ಬಂದು ಎದೆಗೊದ್ದರು;’ ‘ಬಿಟ್ಟ ಹೆಣ್ಣು ಸಿಕ್ಕೊ ಹಾಗಿದ್ರೆ ನಂಗೊಂದು ನಮ್ಮಪ್ಪಂಗೊಂದು;’ ‘ತೆರಕೊಟ್ಟು ತರೋಹಾಗಿದ್ರೆ – ನಮ್ಮಪ್ಪ ಮುದುಕ, ನಾನಿನ್ನೂ ಹುಡುಗ’... ಇತ್ಯಾದಿ.**

ವ್ಯಾಪಾರ, ಅರಸನೋಲಗದ ನಡವಳಿಕೆ, ಕೋರ್ಟು ವ್ಯವಹಾರ, ಮನೆಮಂದಿಯೊಡನೆ ನಡೆದುಕೊಳ್ಳುವುದು ಹೇಗೆ, ನೆರೆ ಹೊರೆ, ಐಶ್ವರ್ಯ ಸಂಪಾದನೆ ಇತ್ಯಾದಿ ಜೀವನದ ಪ್ರತಿಯೊಂದು ಕಲೆ ಕೌಟಿಲ್ಯವನ್ನು ಇದೇ ದಾಟಿಯಲ್ಲಿ ಚುರುಕು ಮಾತಿನಲ್ಲಿ ಮನಮುಟ್ಟಿಸುತ್ತದೆ.[೫] **‘ಒಂದಲ್ಲ ಒಂದು ಗಾದೆ, ನಾವು ಮಾಡುವ ಪ್ರತಿತಪ್ಪಿಗೂ ಮದ್ದು ಹೇಳುತ್ತದೆ; ಅದು ತಿಳಿದಿದ್ದರೆ, ಆ ತಪ್ಪಿನಿಂದ ನಮ್ಮನ್ನು ತಪ್ಪಿಸುತ್ತದೆ’** ಎಂದು **ಆರ್ಚಬಿಷಪ್ ಟ್ರೆಂಚ್** ಒಂದು ಕಡೆ ಎಂದಿದ್ದಾನೆ.

೧೨, ಅಂದರೆ ಗಾದೆಗಳಲ್ಲಿ ವೇದಾಂತ, ಆದರ್ಶ ಇಲ್ಲವೇ ಇಲ್ಲವೆಂತಲ್ಲ; ಅವುಗಳ ಸಂಖ್ಯೆ ಬಹು ಕಡಿಮೆ ಎಂದಷ್ಟೇ ಇಲ್ಲಿನ ಸಿದ್ಧಾಂತ. ಎಷ್ಟೋ ಸಾರಿ ಇಂತಹ ತಾತ್ವಿಕವಾದ ಸೂಕ್ತಿಗಳು ಸಂಸ್ಕೃತ ಮುಂತಾದ ಪಂಡಿತಭಾಷೆಗಳಿಂದ ಜನತೆಗೆ ಭೆಟ್ಟಿಯಾಗಿರುವುದೂ ಸಾಧ್ಯ. ವೇದಾಂತ, ನೈತಿಕ ಆದರ್ಶ, ಮನಸ್ಸನ್ನು ಅರಳಿಸುವ ವಿಶಾಲ ಭಾವನೆ – ಇವುಗಳು, ಲೌಕಿಕವಾದ ವ್ಯವಹಾರ ಸೂತ್ರಗಳಷ್ಟು ಅಪಾರ ಸಂಖ್ಯೆಯಲ್ಲಿಲ್ಲದಿರುವುದು ಸಹಜವೇ.

**‘ಸ್ವರ್ಗದಲ್ಲಿ ಹೊಲಗೇರಿ ಇಲ್ಲ.’ ‘ಪ್ರೀತಿ ಇದ್ದರೂ ನೀತಿ ಬಿಡಬಾರದು;’ ‘ಬೆತ್ತಲೆ ಇರುವವನಿಗೆ ಎತ್ತಲೂ ಭಯವಿಲ್ಲ.’ ‘ತನುವರಿಯದ ನೋವಿಲ್ಲ, ಮನವರಿಯದ ಪಾಪವಿಲ್ಲ, ಶಿವನರಿಯದ ಸಾವಿಲ್ಲ’** ಇತ್ಯಾದಿ. **‘ಕೆಡದ ಸ್ನೇಹಿತನನ್ನು ಹುಡುಕಿದರೆ ದೇವರು ಸಿಕ್ಕುತ್ತಾನೆ.’** (ಅಸ್ಸಾಮಿ ಇತ್ಯಾದಿ); **‘ಸಿಂಹದಿಂದ ತಪ್ಪಿಸಿ ಓಡುವುದಕ್ಕಿಂತ, ನಿನ್ನಿಂದ ನೀನು ತಪ್ಪಿಸಿಕೋ’** (ಅರಬಿ); **‘ಜ್ಞಾನದ ಶಾಯಿ ವೀರರ ರಕ್ತಕ್ಕಿಂತ ಅಮೂಲ್ಯ’** (ಅರಬಿ); **‘ಪರಲೋಕವನ್ನು ಈ ಲೋಕ ಕೊಟ್ಟು ಕೊಂಡುಕೊ – ಹಾಗೆ ಮಾಡಿದರೆ ಎರಡೂ ನಿನ್ನದೇ’** (ಪರ್ಶಿಯಾ); **‘ಒಂದು ಮರದಲ್ಲಿರುವ ಹಣ್ಣನ್ನೆಣಿಸಬಹುದು, ಒಂದು ಹಣ್ಣಿನಲ್ಲಿರುವ ಮರಗಳನ್ನೆಣಿಸಲಾಗದು’** (ರೋಮನಿ ಜಿಪ್ಸಿ); **‘ಮುಚ್ಚಿದ ಮುಷ್ಟಿ ಸ್ವರ್ಗಕ್ಕೆ ಬೀಗ, ಬಿಚ್ಚುಗೈ ಕೃಪೆಯ ಕೀಲಿ’** (ಮಲಯ); **‘ಹಸುಗಳ ಬಣ್ಣ ಬೇರೆ, ಹಾಲು ಮಾತ್ರ ಒಂದೇ’–‘ಹೂಗಳ ಜಾತಿ ಬೇರೆ, ಪೂಜೆ ಒಂದೇ’ ‘ಮತಧರ್ಮ ಹಲವು, ದೇವರೊಬ್ಬನೇ’** (ಹಿಂದಿ)

---

[೫] *** ಎಂತಹ ಕಷ್ಟ ಬಂದರೂ ನೀಗಿಕೊಳ್ಳಬಹುದು – ಆತ್ಮಹತ್ಯೆಯಿಂದ, ಚಿನ್ನದ ಗಂಟಿನಿಂದ, ಕತ್ತಲೆಯ ರಾತ್ರಿಯಲ್ಲಿ ಹಗೆಯನ್ನು ಎತ್ತರದಿಂದ ಉರುಳಿಸುವುದರಿಂದ’** – ಚೀಣೀ ಗಾದೆ.

ಹೀಗೆಯೇ, ಬಾಳಿನ ಸ್ವರೂಪದ ಬಗ್ಗೆ ಹಲವು ಮಾತುಗಳಿವೆ :

**'ಹುಟ್ಟುವಾಗ ಬೆತ್ತಲೆ, ಸಾಯುವಾಗ ಕತ್ತಲೆ'** (ಕನ್ನಡ); **'ಬಾಳಿಗೆರಡು ಭಾಗ; ಮುಗಿದು ಹೋದದ್ದು – ಸ್ವಪ್ನ. ಬರಬೇಕಾದದ್ದು ಆಸೆ'** (ಅರಬಿ); **'ಬಾಳು ಅಮಲಿದ್ದ ಹಾಗೆ, ಸುಖ ಮರೆತು ತಲೆಶೂಲೆ ಉಳಿಯುತ್ತದೆ'** (ಪರ್ಶಿಯ); **'ಹುಟ್ಟಿದಾಗ ಅತ್ತೆ, ದಿನ ದಿನವೂ ಅದಕ್ಕೆ ಕಾರಣ ಗೊತ್ತಾಗುತ್ತಿದೆ.'** (ಇಂಗ್ಲೀಷ್); **'ಯೌವ್ವನ ಚಿಟ್ಟೆಯನ್ನು ಅರಸುತ್ತದೆ – ವೃದ್ಧಾಪ್ಯಕ್ಕೆ ಗೊತ್ತು ಅದು ಹುಳುವಾಗಿ ಹುಟ್ಟಿ ಗೋಡೆಯಲ್ಲಿ ಮುಗಿಯುತ್ತದೆ ಎಂದು'** (ಚೀನ)...

ಕಡೆಯದಾಗಿ, ಹಲವು ದೇಶದ ಗಾದೆಗಳಲ್ಲಿರುವ ರಸಿಕತೆಯ ಆದರ್ಶಗಳನ್ನೂ, ಒಳ್ಳೆಯ ಬಾಳಿನ ಬಯಕೆಯ ಕನಸುಗಳನ್ನೂ ಎತ್ತಿ ತೋರಿಸಬಹುದು. ಆಯಾ ದೇಶದ ಸಂಸ್ಕೃತಿಯ ವೈಶಿಷ್ಟ್ಯವನ್ನೂ ಈ ನುಡಿಗಳಲ್ಲಿ ಕಾಣುವವರು ಕಾಣಬಹುದು.

**'ಒಂದು ಗಂಟೆ ನಲ್ಲೆಗೆ, ಮತ್ತೊಂದು ದೇವರಿಗೆ'** (ಅರಬಿ); **'ಕುದುರೆ ಬೆನ್ನ ಮೇಲೆ ನಲ್ಲೆಯ ತೋಳಿನಲ್ಲಿ – ಸ್ವರ್ಗದರ್ಶನ'** (ಅರಬಿ) **'ಸ್ನೇಹಿತರೊಡನೆ ಸತ್ತರೆ ಸೋಬಾನ ಮಾಡಿಕೊಂಡ ಹಾಗೆ'** (ಪರ್ಶಿಯಾ), **ತಪಿಸುವ ಹೃದಯಕ್ಕೆ ಮೂರು ಮದ್ದು – ನೀರು, ಹಸಿರು ಹುಲ್ಲು, ಹೆಣ್ಣಿನ ಚೆಲುವು'** (ಅಸ್ಸಾಮಿ); **'ಹಳೆಯದನ್ನು ಒರೆಸಲು ಒಂದು ಸ್ಪಂಜು, ಇಂದನ್ನು ಸರಿಗೊಳಿಸಲೊಂದು ಗುಲಾಬಿ,' 'ಮುಂದಿನದೊಂದು ಕರೆಯಲೊಂದು ಮುತ್ತು'** (ಅರಬಿ); **'ಎಲ್ಲ ವಾಸನೆಗಿಂತ ರೊಟ್ಟಿಯ ವಾಸನೆ, ಎಲ್ಲ ರುಚಿಗಿಂತ ಉಪ್ಪಿನ ರುಚಿ'** (ಫ್ರೆಂಚ್);[೬]

**'ಒಂದು ತೋಟ, ಅದರಲ್ಲೊಂದು ಪಾರಿವಾಳದ ಮಚ್ಚು ಇದ್ದರೆ, ಭೂಮಿಗೆ ಸ್ವರ್ಗ ಬಂದ ಹಾಗೆ'** (ಸ್ಪೆಯಿನ್) ; **'ಎರಡು ರೊಟ್ಟಿ ಇದ್ದರೆ ಒಂದನ್ನು ಮಾರಿ ಲಿಲಿಹೂವನ್ನು ಕೊಂಡುಕೋ'** (ಚೀಣ); **'ಪ್ರಯಾಣಕ್ಕೆ ಸ್ನೇಹಿತ, ಪ್ರಪಂಚಕ್ಕೆ ದಯೆ'** (ಜಪಾನ್); **'ಒಂಟಿ ಹಾಸಿಗೆಗಿಂತ ಗುದ್ದುವ ಗೂಳಿ ಲೇಸು'** (ಪಂಜಾಬಿ); **'ಯಾರು ರಾಜನಾದರೂ ತೇಯಲೆಯೇ ರಾಣಿ'** (ಐರೆಂಡ್); **'ಎರಡರಿಂದ ಎಂದಿಗೂ ಬೇಸರವಿಲ್ಲ – ಬೆಳುದಿಂಗಳ ರಾತ್ರಿ, ಸೊಗಸಾದ ಅಕ್ಕಿ ಅನ್ನ'** (ಜಪಾನ್); **'ಜೀವನ ಚುಂಬನ ಇದ್ದ ಹಾಗೆ – ಹಂಚಿಕೊಡದಿದ್ದರೆ ಅದರಿಂದ ಏನೇನೂ ಉಪಯೋಗವಿಲ್ಲ'** (ರೋಮನಿ ಜಾತಿಯ ಲಂಬಾಣಿಗಳು).

ಈ ಸಾಹಿತ್ಯ ಪ್ರಕರಣ, ಈ ಪುಸ್ತಕದುದ್ದಕ್ಕೂ ಅಲ್ಲಲ್ಲಿ ಪರ್ಯಾಯವಾಗಿ ಒಳಬೇರು ಬಿಟ್ಟಿದೆ, ಇಲ್ಲಿ ಹೆಚ್ಚು ಕಡಿಮೆ ವಿವರವಾಗಿ ಬಿತ್ತರಿಸಿದೆ. ಆದರೂ ಇಷ್ಟಕ್ಕೇ ಮುಗಿಯುವಂತೆ ಕಾಣಲಿಲ್ಲ; ಆದ್ದರಿಂದ, ಇಷ್ಟಕ್ಕೇ ಮುಗಿಸುವುದು ಉಚಿತ. **"ವಿಠಲಭಟ್ಟರ ಪುರಾಣ ಬಿಟ್ಟಲ್ಲಿಗೇ ಮುಕ್ತಾಯ."**

---

[೬] * ಒಟ್ಟಿನಲ್ಲಿ ಮೇಲಿನ ಈ ಗಾದೆ ಎಲ್ಲಾ ಗಾದೆಗಳ ದೃಷ್ಟಿಕೋನವನ್ನು ಸೊಗಸಾಗಿ ಸಂಕೇತಿಸುತ್ತದೆ ಎನ್ನಬಹುದು

## ಓದುಪತ್ಯ:

# ೪.೪. ಮಾಧ್ಯಮಗಳಲ್ಲಿ ಅನುವಾದದ ಸ್ವರೂಪ ಮತ್ತು ಭಾಷಾ ಆಧುನೀಕರಣ ಪ್ರಕ್ರಿಯೆ

**– ಡಾ. ಬಸವರಾಜ ಕಲ್ಗುಡಿ**

ಮಾಧ್ಯಮಗಳು ಆಧುನಿಕ ಜಗತ್ತಿನ ಅವಿಭಾಜ್ಯ ಅಂಗಗಳಾಗಿವೆ. ಇಲೆಕ್ಟ್ರಾನಿಕ್ ತಂತ್ರಜ್ಞಾನದ ಕ್ರಾಂತಿಯ ಈ ದಿನಗಳಲ್ಲಿ ಒಂದು ಮಾಧ್ಯಮ ಇನ್ನೊಂದರ ಜತೆ ಬೆಸೆದುಕೊಂಡಿರುವಂತಹ ವಿಸ್ಮಯ ಜರುಗುತ್ತಲಿದೆ. ಇದಕ್ಕೆ ಉದಾಹರಣೆ ಈಚೆಗಷ್ಟೆ ಜನಪ್ರಿಯ ದಿನಪತ್ರಿಕೆ ಪ್ರಜಾವಾಣಿಯು ತನ್ನ ಮೊಬೈಲ್ ಫೋನ್ ಅವತರಣಿಕೆಯನ್ನು ಬಿಡುಗಡೆ ಮಾಡಿರುವುದು. ಅಂದರೆ ಇನ್ನು ಮುಂದೆ ಮೊಬೈಲ್‌ಗಳಲ್ಲಿಯೇ ಈ ಪತ್ರಿಕೆಯನ್ನು ಓದಬಹುದು. ಈಗಿನ ಅಂತರ್ಜಾಲಯುಗದಲ್ಲಿ ಯಾವೊಂದೇ ಭಾಷೆಯು ಇತರ ಭಾಷೆಗಳ ಸೋಂಕಿಲ್ಲದಂತೆ ದ್ವೀಪವಾಗಿರಲು ಸಾಧ್ಯವಿಲ್ಲ. ಅದರಲ್ಲೂ ನಿರಂತರ ಇಪ್ಪತ್ತನಾಲ್ಕು ಗಂಟೆಗಳ ಸುದ್ದಿ ಸರಕನ್ನು ಅಂತರ್ಜಾಲವೆಂಬ ಮಾಹಿತಿ ಸರಕು ಅಟ್ಟದಿಂದ ಕೆಳಗಿಳಿಸಿ (down load) ಕೊಳ್ಳುತ್ತಲೇ ಇರಬೇಕಾದ ಪ್ರಾದೇಶಿಕ ಭಾಷೆಯ ಮೀಡಿಯಾಗಳಿಗೆ ಅನುವಾದವೆನ್ನುವುದು ಅತ್ಯನಿವಾರ್ಯವಾದ್ದದ್ದು. ಈ ಹಿನ್ನೆಲೆಯಲ್ಲಿ ಪತ್ರಿಕೆಗಳಿಂದ ತೊಡಗಿ, ಅಂತರ್ಜಾಲದ ಬ್ಲಾಗ್‌ಗಳವರೆಗೂ ಭಾಷಾಂತರ ವಹಿಸುವ ಪಾತ್ರ ಹಾಗೂ ಅದರ ಭಾಷಿಕ ಆಯಾಮಗಳನ್ನು ಸ್ಥೂಲವಾಗಿ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

**ದಿನಪತ್ರಿಕೆಗಳು :**

**ದಿನಪತ್ರಿಕೆಗಳಲ್ಲಿ ಅನುವಾದ ಏಕೆ? :** ಕನ್ನಡ ಪತ್ರಿಕೆ ಎಂದ ಮಾತ್ರಕ್ಕೆ ಕನ್ನಡದಲ್ಲೇ ಎಲ್ಲಾ ಸುದ್ದಿಗಳು ಸಿದ್ಧವಾಗಿ ಸಿಗುವುದಿಲ್ಲವೆಂಬುದು ಎಲ್ಲರಿಗೂ ಗೊತ್ತು, ವಿಜ್ಞಾನ, ತಂತ್ರಜ್ಞಾನ, ವಾಣಿಜ್ಯ, ಕ್ರೀಡೆ ಮತ್ತಿತರ ಕ್ಷೇತ್ರಗಳ ಸುದ್ದಿಗಳು ಇಂಗ್ಲಿಷ್‌ನಲ್ಲಿ ಇರುತ್ತವೆ. ದೇಶ, ವಿದೇಶದ ನಿತ್ಯದ ವಿದ್ಯಮಾನಗಳನ್ನು ಪಿಟಿಐ, ಯುಎನ್‌ಐ, ಐಎಎನ್‌ಎಸ್, ಎಎನ್‌ಐ, ರಾಯ್ಟರ್ಸ್ ಮೊದಲಾದ ಸುದ್ದಿ ಸಂಸ್ಥೆಗಳು ಕಳುಹಿಸುವುದು ಆಂಗ್ಲ ಭಾಷೆಯಲ್ಲೇ. ಪತ್ರಿಕೆಯೊಂದು ನಾನಾ ಕ್ಷೇತ್ರಗಳ ಸುದ್ದಿಗಳನ್ನು ಸಮಗ್ರವಾಗಿ ಓದುಗರಿಗೆ ನೀಡಬೇಕಾದರೆ ಈ ಆಂಗ್ಲ ಕಾಪಿಗಳನ್ನು ಬಳಸಲೇ ಬೇಕಾಗುತ್ತದೆ. ಪತ್ರಿಕೆ ಕನ್ನಡದ್ದಾದ್ದರಿಂದ ಆಂಗ್ಲ ಸಾಲುಗಳು ಕನ್ನಡವಾಗಿ ಮೂಡಬೇಕಾಗುತ್ತದೆ. ಇಲ್ಲಿ ಕನ್ನಡ ಅಕ್ಷರಗಳನ್ನು ಮೂಡಿಸುವ ಕೆಲಸ ಅನುವಾದಕರದ್ದು. ಇಂಗ್ಲಿಷ್ ಪತ್ರಿಕೆಗಳಲ್ಲಿ ಈ ಸಮಸ್ಯೆ ಇಲ್ಲ. ಏಜೆನ್ಸಿ ಕಾಪಿಗಳನ್ನು ಅವರು ಎಡಿಟ್ ಮಾಡಿ ನೇರವಾಗಿ ಬಳಸುತ್ತಾರೆ. ಅವರಿಗೆ ಕನ್ನಡದ್ದನ್ನು ಇಂಗ್ಲಿಷ್‌ಗೆ ಅನುವಾದಿಸುವ ಕೆಲಸ. ಹೀಗಾಗಿ ಕನ್ನಡ ಪತ್ರಿಕೆಗಳಲ್ಲಿ ಪತ್ರಕರ್ತರ ಕೆಲಸವನ್ನರಸುವವರಿಗೆ ಇಂಗ್ಲಿಷ್ ಕುರಿತ ಕನಿಷ್ಟ ಜ್ಞಾನದೊಂದಿಗೆ, ಅನುವಾದ ಕೌಶಲದ ಬಗ್ಗೆಯೂ ತಿಳಿವಳಿಕೆ ಇರಬೇಕು.

ಕರ್ನಾಟಕದ ಜನಪ್ರಿಯ ದಿನಪತ್ರಿಕೆಗಳು ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಉದಯವಾಣಿ ಮುಂತಾದವುಗಳು. ಒಂದೆರಡು ವರ್ಷಗಳ ಹಿಂದಷ್ಟೆ ಆರಂಭವಾದ ಕನ್ನಡದ ಟೈಮ್ಸ್ ಆಫ್ ಇಂಡಿಯಾ, "ಅನುವಾದವನ್ನೇ ನೆಚ್ಚಿಕೊಂಡಿದೆ. ಇದು ಪತ್ರಿಕಾ ಸೃಜನಶೀಲತೆಗೆ ಧಕ್ಕೆಯುಂಟು ಮಾಡುವಂಥಾದು" ಎಂಬ ವಿವಾದ ಸೃಷ್ಟಿಯಾಗಿತ್ತು. ಬರವಣಿಗೆಯನ್ನೇ ದೇಹ ಹಾಗೂ ಆತ್ಮವಾಗಿಸಿಕೊಂಡಿರುವ ಪತ್ರಿಕೆಗಳು ಮೊದಲಿನಿಂದಲೂ ಭಾಷೆಯ ಬಳಕೆಯ ಸಾಧ್ಯತೆಗಳನ್ನು ವಿಸ್ತರಿಸುತ್ತಿರುವ ಪರಿ ವಿಶಿಷ್ಟವಾದದ್ದು. ಕನ್ನಡ ಹಾಗೂ ಭಾಷಾವಿಜ್ಞಾನದ ವಿದ್ಯಾರ್ಥಿಗಳಿಗೆ ಇವು ನಿರಂತರ ಅಧ್ಯಯನದ ಆಕರಗಳಾಗಿವೆ. ಹಿಂದೆಲ್ಲಾ ಸಂಸ್ಕೃತ ಭೂಯಿಷ್ಠ ಶಿಷ್ಟ ಕನ್ನಡವನ್ನು ಬಳಸುವತ್ತ ಪತ್ರಿಕೆಗಳ ಚಿತ್ತ ಇತ್ತು. ಈಗಿನ ಸ್ಥಿತಿ ಹಾಗಿಲ್ಲವೆನಿಸುತ್ತದೆ. ನುಡಿಮಿಶ್ರಣ (Code mixing) ಇಂಗ್ಲಿಷ್ ಹಾಗೂ ಇತರ ಭಾಷೆಗಳ ಜತೆಗೆ ಸಾಮಾನ್ಯವಾಗಿದೆ. ವಿಜಯ ಕರ್ನಾಟಕದಲ್ಲಿ ಕನ್ನಡಾಂಗ್ಲ ದ್ವಿಭಾಷಾಕ್ಷರಗಳನ್ನು ಕೋದುಮಾಡಿ 'ಲವ್‌ಲvk' ಎಂದು ಕಲೆಯಲ್ಲೂ ಭಾಷಾ ಆಧುನೀಕರಣವನ್ನು ಬಿಂಬಿಸುವ ಕೆಲಸವನ್ನು ಮಾಡುತ್ತಿದೆ. ಇದು ಯುವಜನತೆಯನ್ನು ಸೆಳೆಯುವ ಜಾಹಿರಾತು ತಂತ್ರವೂ ಇರಬಹುದು. ಈ ಎಲ್ಲಾ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯವು ಪದ, ವಾಕ್ಯಗಳಲ್ಲಿ ಭಾಷಾಂತರ ಪ್ರಕ್ರಿಯೆಯು ದಿನಪತ್ರಿಕೆಗಳಲ್ಲಿ ಹೇಗೆ ನಡೆದಿದೆ ಎಂದು ಸ್ಥೂಲವಾಗಿ ಗಮನಿಸುವ ಉದ್ದೇಶವನ್ನು ಹೊಂದಿದೆ.

ಮೊದಲೆಲ್ಲಾ ಬಹುಪಾಲು ಎಲ್ಲಾ ಪತ್ರಿಕೆಗಳು ಬೆಂಗಳೂರಿನಿಂದಲೇ ಹೊರಡುತ್ತಿದ್ದವು. ಈಗ ಹಾಗಿಲ್ಲ. ಮಂಗಳೂರು, ಹುಬ್ಬಳ್ಳಿ, ಧಾರವಾಡಗಳಿಂದಲೂ ಪ್ರಸಾರವಾಗುತ್ತಿವೆ. ಇವುಗಳ ಬೇರೆ ಬೇರೆ ಆವೃತ್ತಿಗಳು ಆಯಾ ಪ್ರಾದೇಶಿಕ ಉಪಭಾಷೆ ಅಥವಾ ಕನ್ನಡದ ಪ್ರಭೇದಗಳನ್ನು ಹೆಚ್ಚಾಗಿ ಬಳಸುತ್ತಿವೆಯೇ ಎನ್ನುವುದು ಸಹ ಕುತೂಹಲಕಾರಿ ವಿಷಯವಾಗಿದೆ. ಆದರೆ ಕನ್ನಡದ ಬರಹ ಭಾಷೆ ಇನ್ನು ಈ ಮಟ್ಟಕ್ಕೆ ತನ್ನ ಮಡಿವಂತಿಕೆಯನ್ನು ಸಡಿಲಿಸಿಲ್ಲವೆನಿಸುತ್ತದೆ. ಕೆಲವೇ ಕೆಲವೊಂದು ಸಾಹಿತ್ಯ ಕೃತಿಗಳು ಮಾತ್ರ ಅಪವಾದವೆಂಬಂತೆ ಪ್ರಾದೇಶಿಕ ಉಪಭಾಷೆಯಲ್ಲಿ ರಚಿತವಾಗಿರುವುದನ್ನು ಕಾಣಬಹುದು.

ಪತ್ರಿಕೆಗಳು, ಪತ್ರಕರ್ತರು ಹೊಸದಾಗಿ ಟಂಕಿಸಿದ (coin) ಒಂದು ಶಬ್ದ (ಹೊಸ ಅರ್ಥದಲ್ಲಿ ಹಳೆಯ ಶಬ್ದ, ಹೊಸ ಅರ್ಥದಲ್ಲಿ ಹೊಸ ಶಬ್ದ ಅಥವಾ ಹಳೆಯ ಅರ್ಥದಲ್ಲಿ ಹೊಸ ಶಬ್ದ) ಲಕ್ಷಾಂತರ ಜನರ ಗಮನಕ್ಕೆ ಬರುತ್ತದೆ. ಮತ್ತು ಅದನ್ನು ಮತ್ತೆ ಮತ್ತೆ ಬಳಸುತ್ತಾ ಹೋದಂತೆ ಆ ಜನರ ಶಬ್ದ ಭಂಡಾರಕ್ಕೆ ಅದು ಸೇರಿಬಿಡುತ್ತದೆ. ಪತ್ರಿಕೆಗಳಲ್ಲಿ ಬರುವ ಶಬ್ದ ಪಡೆಯುವ ವ್ಯಾಪ್ತಿಗೆ ಒಂದು ಉದಾಹರಣೆಯೆಂದರೆ ಡಾ.ಎಚ್.ಎಂ.ಮರಳುಸಿದ್ದಯ್ಯನವರು ಪ್ರಜಾವಾಣಿಯಲ್ಲಿ Slum ಪದಕ್ಕೆ 'ಕೊಳೆಗೇರಿ' ಎಂಬ ಅನುವಾದವನ್ನು ಬಳಸಿದರು. ಇದಕ್ಕೆ ಕೊಳಚೆ ಪ್ರದೇಶವೆಂತಲೂ ಕರೆಯುತ್ತಾರೆ. ಈಗ

ಕೊಳೆಗೇರಿ ಬಹಳ ಜನಜನಿತ. ಈ ಪದಕ್ಕೆ ತಳಪಾಯ ಹಿಂದೆ ಕನ್ನಡದ ಶಬ್ಧಭಂಡಾರದಲ್ಲಿದ್ದ ಹೊಲಗೇರಿ ಎನ್ನುವ ಪದ.

ಪತ್ರಿಕೆಗಳು ದಶಕದ ಹಿಂದೆ ಸುದ್ದಿಗಾಗಿ ಟೆಲಿಪ್ರಿಂಟರ್‌ನ್ನು ಅವಲಂಬಿಸಿದ್ದವು. ಈಗ ಇಂಟರ್‌ನೆಟ್ ಇದೆ. ಇಲ್ಲೆಲ್ಲಾ ರಾಶಿರಾಶಿ ಸುದ್ದಿಗಳು ಸಿಗುತ್ತವೆ. ಈ ಸುದ್ದಿಯನ್ನು 'ಸಂಪಾದಿಸ'(edit)ಬೇಕು. ಇಂಗ್ಲಿಶಿನಲ್ಲಿರುವ ಈ ಕಚ್ಚಾ ಸರಕನ್ನು ದೇಸಿಭಾಷೆಗೆ ಪಕ್ಕಾ ಸರಕಾಗಿ ಅನುವಾದಿಸಬೇಕು. ಈ ಅನುವಾದದ ಚಿಂತೆ ಇಂಗ್ಲಿಶ್ ಪತ್ರಿಕೆಗಳಿಗೆ ಅಷ್ಟಿಲ್ಲ. ಇಂಗ್ಲಿಶ್‌ನಲ್ಲಿ ಪಡೆದ ರಾಷ್ಟ್ರೀಯ, ಅಂತರಾಷ್ಟ್ರೀಯ ಸುದ್ದಿಯನ್ನು ಅನುವಾದಿಸುವ ಪತ್ರಿಕೋದ್ಯಮಿ ತನ್ನ ಸಂಸ್ಕೃತಿ, ತನ್ನ ಭಾಷೆ ಪರಿಸರಗಳಿಗೆ ಅಪರಿಚಿತವಾದ ಅನೇಕ ಪರಿಕಲ್ಪನೆಗಳನ್ನು ತನ್ನ ಭಾಷೆಗೆ ಅನುವಾದಿಸಿ, ಅವು ತಲುಪುವಂತೆ ಮಾಡುವ ಹೊಣೆಯನ್ನು ಹೊತ್ತಿರುತ್ತಾನೆ. ಇವನಿಗೆ ಹೆಚ್ಚು ಆಲೋಚನೆಗೆ ಸಮಯವೂ ಇರುವುದಿಲ್ಲ. ಆತ ತನಗೆ ಗೊತ್ತಿರುವ ಕೋಶವನ್ನು ತಿರುವಿ ಹಾಕಬಹುದು ಅಥವಾ ಇಂಗ್ಲಿಶ್ ಪದಕ್ಕೆ ಅನುಗುಣವಾದ ಒಂದು ದೇಶ್ಯಪದವನ್ನು ಬಳಸಬಹುದು; ಇಲ್ಲವೇ ಸರಿಯೋ ತಪ್ಪೋ ಆ ಸನ್ನಿವೇಶದಲ್ಲಿ ಹೊಳೆದ ಒಂದು ಪದವನ್ನು ಬರೆದು ಅಚ್ಚಿಗೆ ಕಳುಹಿಸಬಹುದು. ಒಮ್ಮೊಮ್ಮೆ ಮಕ್ಕಿಕಾಮಕ್ಕಿ (ಇದು ಸಂಸ್ಕೃತದ ಮಕ್ಷಿಕಾಮಕ್ಷಿ ನುಡಿಗಟ್ಟಿನಿಂದ ಬಂದಿದೆ. ಹಿಂದಿನ ಕಾಲದಲ್ಲಿ ತಾಳೆಗರಿಗಳಿಂದ ಪ್ರತಿಗಳನ್ನು ಸಿದ್ಧಪಡಿಸುತ್ತಿದ್ದ ಹಸ್ತಪ್ರತಿಗಾರರ ಅಚಾತುರ್ಯವನ್ನು ಇದು ಧ್ವನಿಸುತ್ತದೆ. ಒಮ್ಮೆ ಹಸ್ತಪ್ರತಿಯನ್ನು ನಕಲು ಮಾಡುತ್ತಿದ್ದವನೊಬ್ಬ ಆಯಾಸವಾಗಿ ತಾಳೆಗರಿಯ ಗ್ರಂಥವನ್ನು ಮುಚ್ಚಿದನಂತೆ. ಆಗ ಅದರ ಮೇಲೆ ಕುಳಿತಿದ್ದ ಮಕ್ಷಿಕ=ನೊಣವೊಂದು ಅಲ್ಲೇ ಸಿಲುಕಿ ಅಸುನೀಗಿತಂತೆ. ಮುಂದೆ ನಕಲು ಮಾಡಲು ಬಂದಾತ ಇದನ್ನು ತಪ್ಪಾಗಿ ಗ್ರಹಿಸಿ, ಒಂದು ಜೀವಂತ ನೊಣವನ್ನು ಹಿಡಿದು ತಂದು ಅದೇ ಜಾಗದಲ್ಲಿ ಸಿಲುಕಿಸಿ ಕೊಂದು ಅದೇ ರೀತಿಯ ಗುರುತು ಮೂಡುವಂತೆ ಮಾಡಿ, ತನ್ನ ಕಾರ್ಯದಲ್ಲಿ ಮುಂದುವರಿದನಂತೆ!) ಅನುವಾದ ಮಾಡಿ, ತನ್ನ ಜವಾಬ್ದಾರಿಯನ್ನು ನಿರ್ವಹಿಸಬಹುದು. ಹೀಗಾದರೆ ಅನುವಾದ ಅಪಹಾಸ್ಯವಾಗುವ ಸಾಧ್ಯತೆ ಹೆಚ್ಚು. ನಿದರ್ಶನಕ್ಕೆ ಗಮನಿಸಬಹುದು.

೧. ಇಂಗ್ಲಿಶಿನಲ್ಲಿ A storm in a tea cup ಎಂಬ ನುಡಿಗಟ್ಟಿದೆ. ಕನ್ನಡದ ಕೆಲವು ಪತ್ರಿಕೆಗಳಲ್ಲಿ ಇದನ್ನು ಯಥಾವತ್ ಅನುವಾದ ಮಾಡಿ "ಚಹಾ ಕಪ್ಪಿನಲ್ಲಿ ಬಿರುಗಾಳಿ" ಎಂದು ಬಳಸಿದ್ದಾರೆ. ಇಂಥ ಅನುವಾದಗಳು ಕನ್ನಡದ ಓದುಗರಿಗೆ ಯಾವುದೇ ಧ್ವನ್ಯಾರ್ಥವನ್ನು ಕೊಡಲಾರವು. ಕಾರಣಗಳು ಸಾಂಸ್ಕೃತಿಕವಾದವು. ಹಿಂದಿಯಲ್ಲಿ 'ಕಬಾಬ್ ಮೇ ಹಡ್ಡಿ' ಎಂಬ ನುಡಿಗಟ್ಟನ್ನು ಬಳಸುತ್ತಾರೆ. ಕನ್ನಡದಲ್ಲಿ ಇದನ್ನು ಯತಾವತ್ ಆಗಿ ಕಬಾಬಿನಲ್ಲಿನ ಕಡ್ಡಿಯಂತೆ ಎಂದು ಭಾಷಾಂತರಿಸುವುದಕ್ಕಿಂತ 'ಮೊಸರಿನೊಳಗಿನ ಕಲ್ಲು' ಎಂದು ಮಾಡಿಕೊಂಡರೆ ಹೆಚ್ಚು ಸೂಕ್ತವಾಗುತ್ತದೆ.

೨. Herculus effort ಎನ್ನುವುದನ್ನು "ಭಗೀರಥ ಯತ್ನ" ಎಂದು ಇಲ್ಲಿನ ಮಿತ್‌ಗೆ ಸಂವಾದಿಸಿಕೊಂಡು ಭಾವಾನುವಾದ ಮಾಡುವುದೂ ಇದೆ.

೩. A Skeleton in a almera ಎಂಬುದನ್ನು ಮಕ್ಕಿಕಾಮಕ್ಕಿಯಾಗಿ ಅಲ್ಮೇರಾದಲ್ಲಿನ ಅಸ್ತಿ ಪಂಜರ ಎಂದು ಅನುವಾದಿಸಿರುವುದಿದೆ. ಇಂತಹ ಅನುವಾದಗಳು ಓದುಗರ ಮೇಲೆ ಯಾವುದೇ ಬಗೆಯ ಪರಿಣಾಮವನ್ನು ಬೀರಲಾರವು.

೪. From dawn to dusk ಎನ್ನುವುದನ್ನು ಕನ್ನಡದಲ್ಲಿ ಒಬ್ಬರು ಡಾನ್‌ನಿಂದ ಡಸ್ಕ್ ಪಟ್ಟಣದವರೆಗೆ ಎಂದು ತಪ್ಪಾಗಿ ತರ್ಜುಮೆ ಮಾಡಿದ್ದರು. ಡಾನ್ ಮತ್ತು ಡಸ್ಕ ಎಂಬವು ಸ್ಥಳಗಳಲ್ಲ; ಕಾಲಸೂಚಕಗಳು. ಇದು ಆಗಬೇಕಿದದ್ದು ಬೆಳಗಿನಿಂದ ಬೈಗಿನ ತನಕ ಅಥವಾ ಬೆಳಗಿನಿಂದ ಸಂಜೆಯವರಗೆ ಎಂದು.

ಹೀಗೆ ಪತ್ರಿಕೆಗಳಲ್ಲಿ ಅನುವಾದ ಮಾಡುವಾಗ ಅರ್ಥ ಪಡೆದುಕೊಳ್ಳುವ ವಿವಿಧ ಆಯಾಮಗಳ ಕಡೆ ಗಮನ ಇರಬೇಕಾಗುತ್ತದೆ. ಇಲ್ಲದಿದ್ದರೆ ಹಿಂದೆ ವಿವರಿಸಲಾದ ನೊಣದ ಕತೆಯಂತಾಗುತ್ತದೆ.

**ಅನುವಾದ ಮತ್ತು ಭಾಷಾ ಆಧುನೀಕರಣ ಪ್ರಕ್ರಿಯೆ** : ಭಾಷೆಯೊಂದು ಯಾವುದೇ ಮುಜುಗರವಿಲ್ಲದೆ ಇತರ ಭಾಷೆಗಳಿಂದ ಪದಗಳನ್ನು ಸ್ವೀಕರಿಸಿ, ತನ್ನ ಪದಕೋಶದಲ್ಲಿ ಸೇರಿಸಿಕೊಂಡು ಅವುಗಳನ್ನು ಆಧುನಿಕ ಅಗತ್ಯಗಳಿಗೆ ಅನುಗುಣವಾಗಿ ಬಳಸಿಕೊಳ್ಳುವುದನ್ನು ಸ್ಥೂಲವಾಗಿ 'ಭಾಷಾ ಆಧುನೀಕರಣ'ವೆನ್ನಬಹುದು. ಇದು ಭಾಷೆಯೊಂದು ಇತರ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಈಗಾಗಲೇ ಸಾಧಿಸಿರುವ ಭಾಷೆಗಳಿಗೆ ಸರಿಸಮನಾಗಿ ಅಳವಡಿಸಿಕೊಂಡು ಬೆಳೆಯುವ ಪ್ರಕ್ರಿಯೆ. ಇಂಗ್ಲಿಶ್ ಪ್ರಪಂಚದಾದ್ಯಂತ ವ್ಯಾಪಕವಾಗಿ ಬೆಳೆಯಲು ಅದು ಆಧುನೀಕರಣ ಪ್ರಕ್ರಿಯೆಗೆ ಸದಾ ತನ್ನನ್ನು ತೆರೆದುಕೊಂಡಿರುವುದೇ ಪ್ರಮುಖ ಕಾರಣವಾಗಿದೆ. ಭಾಷೆಯ ಆಧುನೀಕರಣ ವಿಧಾನಗಳಲ್ಲೊಂದು ಅದರ ಶಬ್ದ ಭಂಡಾರ ವಿಕಾಸ. ಈ ವಿಕಾಸ ಎರಡು ಬಗೆಯಲ್ಲಿ ನಡೆಯುತ್ತದೆ.

೧. ಹೊರಗಿನಿಂದ ನಡೆಯುವ ಸ್ವೀಕರಣ ಅಥವಾ ನೇರ ಸ್ವೀಕರಣ
೨. ತನ್ನ ಸಾಮಗ್ರಿಯ ಮೂಲಕವೇ ನಡೆಯುವ ಹೊಸ ಸೃಷ್ಟಿ. ಇದನ್ನು ಹೀಗೂ ವಿವರಿಸಬಹುದು. ಹಿಂದೆ ಇದ್ದ ಕನ್ನಡದ (ಸಂಸ್ಕೃತ!) ಶಬ್ದಕ್ಕೆ ಇಂಗ್ಲಿಷ್ ಭಾಷೆಯ ಹೊಸ ಅರ್ಥವನ್ನು ಹೊಂದಿಸುವುದು. ಉದಾಹರಣೆಗೆ: ವಿದ್ಯುಚ್ಛಕ್ತಿ=electricity, ಕೈಗಾರಿಕೋದ್ಯಮ=industry, ಬೇಡಿಕೆ, ಕೋರಿಕೆ, ಹಕ್ಕೊತ್ತಾಯ=demand. ಇತ್ಯಾದಿ.

ಇಲ್ಲಿನ ಎರಡನೇ ಅಂಶವು ಭಾಷಾ ಪ್ರಮಾಣೀಕರಣ ಪ್ರಕ್ರಿಯೆಯ ವ್ಯಾಪ್ತಿಗೂ ಬರುತ್ತದೆ. ಪ್ರಮಾಣೀಕರಣವು ಭಾಷೆಯೊಂದರ ಶಿಷ್ಟ ಪ್ರಬೇಧದ ಕಡೆಗೆ ಹೆಚ್ಚು ಒಲವನ್ನು ಹೊಂದಿರುತ್ತದೆ. ಅದು ಉಪಭಾಷೆಗಳ ಅಥವಾ ಭಾಷಾ ಪ್ರಭೇದಗಳನ್ನು ಅಷ್ಟಾಗಿ ಪರಿಗಣಿಸುವುದಿಲ್ಲ. ಅನುವಾದ ಭಾಷೆಯು ಪ್ರಮಾಣೀಕರಣ ಪ್ರಕ್ರಿಯೆಗೆ ಹತ್ತಿರವಾದಂತೆಲ್ಲಾ ಅರ್ಥ ಸಂದಿಗ್ಧತೆ ಹೆಚ್ಚುತ್ತಾ ಹೋಗುತ್ತದೆ. ಮೇಲಿನ ಉದಾಹರಣೆಯನ್ನೆ, ಗಮನಿಸಿ, ಬೇಡಿಕೆ ಹಾಗೂ ಕೋರಿಕೆಗಳು ಒಂದೇ ಅರ್ಥದ ಪದಗಳಲ್ಲ. ಕೋರಿಕೆಯಲ್ಲಿ ವಿನಮ್ರತೆ ಇದೆ demandನಲ್ಲಿ ಪಡೆಯಬೇಕಾಗಿರುವುದು ತಮ್ಮ ಹಕ್ಕು ಎಂಬ ಭಾವವಿರುತ್ತದೆ. ಕನ್ನಡದಲ್ಲಿ ಇವೆರಡನ್ನು ಅರ್ಥ ಸಾಧ್ಯತೆಗಳೊಂದಿಗೆ ಬಳಸುವುದು ಕಷ್ಟ.

**ನೇರ ಸ್ವೀಕರಣ :** ಇದು ಹೆಚ್ಚಾಗಿ ಕ್ರೀಡಾ ಮತ್ತು ವಾಣಿಜ್ಯ ಪುರವಣಿಗಳಲ್ಲಿ, ವಿಜ್ಞಾನ ತಂತ್ರಜ್ಞಾನಕ್ಕೆ ಸಂಬಂಧಿಸಿದ ಅಂಕಣಗಳಲ್ಲಿ ಕಾಣಿಸುತ್ತದೆ. ಬಾಲ್, ಬ್ಯಾಟ್ ಮಿಂಟನ್, ಟೆನ್ನಿಸ್, ಗಾಲ್ಫ್, ಕ್ರಿಕೆಟ್ ಇತ್ಯಾದಿ ಆಟಗಳ ಬಗ್ಗೆ ಬರೆಯುವ ವರದಿಗಳಲ್ಲಿ ಹೇರಳವಾದ ಇಂಗ್ಲಿಶ್ ಪದಗಳನ್ನು ಗಮನಿಸಬಹುದು. ಸಿಂಗಲ್ಸ್, ಮಿಕ್ಸೆಡ್ ಡಬಲ್ಸ್ ಇತ್ಯಾದಿ ಪದಗಳನ್ನು ನಿತ್ಯ ಪತ್ರಿಕೆಗಳಲ್ಲಿ ನೋಡುತ್ತೇವೆ. ಹೈ ಜಂಪ್ (ಎತ್ತರ ಜಿಗಿತ), ಲಾಂಗ್ ಜಂಪ್ (ಉದ್ದ ಜಿಗಿತ) ಇಂತಹ ಅನುವಾದಗಳು ದೇಸಿ ಸ್ಪರ್ಶವನ್ನು ಹೊಂದಿರುವಂತವು ಹಾಗೂ ಸ್ವೀಕಾರಾರ್ಹವಾದವು. ಆದರೆ ಬ್ಯಾಟ್ಸ್‌ಮನ್=ಧಾಂಡಿಗ, ಬೌಲಿಂಗ್=ಚೆಂಡೆಸೆತ, ಫೀಲ್ಡರ್= ಕ್ಷೇತ್ರ ಪಾಲಕ ಇವೆಲ್ಲಾ ಸೂಕ್ತವಾದವೆನಿಸುವುದಿಲ್ಲ. ಕೆಲವೊಮ್ಮೆ ರೇಡಿಯೋದಲ್ಲಿ ಪ್ರಸಾರವಾಗುವ ಕ್ರಿಕೆಟ್ ಕಾಮೆಂಟರಿ (ವೀಕ್ಷಕ ವಿವರಣೆ) ಹಾಸ್ಯವನ್ನು ಉಕ್ಕಿಸುತ್ತಿದ್ದದ್ದು ಇದೇ ಕಾರಣಕ್ಕಾಗಿ. ಸಿಲ್ಲಿ ಪಾಯಿಂಟ್= ಹಾಸ್ಯ ಅಂಶ, ಗಲ್ಲಿ= ಸಂದಿ.. ಎಂದೂ, ಮಿಡಾನ್, ಮಿಡಾಫ್ಗಳನ್ನೆಲ್ಲಾ ಹೀಗೆಯೇ ಅನುವಾದಿಸ ಹೊರಟರೆ ಏನಾಗಬಹುದು?

ಹೀಗಾಗಿ ನೇರ ಸ್ವೀಕರಣ ಹಾಗೂ ಅನುವಾದಗಳಲ್ಲಿ ನೇರ ಸ್ವೀಕರಣಗಳೇ ಹೆಚ್ಚಾಗಿ ಭಾಷೆಯಲ್ಲಿ ಉಳಿಯುವ ಸಾಧ್ಯತೆಗಳೇ ಹೆಚ್ಚು. ಇದಕ್ಕೆ ಕಾರಣ ಇಂಗ್ಲಿಶ್ ಸ್ವೀಕರಣಗಳು ಆಗಲೇ ಆಡುಮಾತಿನಲ್ಲಿ ಬಳಕೆಗೆ ಬಂದಿರುತ್ತವೆ. ಅವಿದ್ಯಾವಂತರಾದವರೂ ನ್ಯೂಸ್ ಪೇಪರ್ ಎನ್ನುತ್ತಾರೆಯೇ ಹೊರತು ವೃತ್ತಪತ್ರಿಕೆ ಎನ್ನುವುದಿಲ್ಲ. ದೂರದರ್ಶನವನ್ನು 'ಟೀವಿ'ಯೆಂದೆ ಜನ ಗುರುತಿಸುವುದು, 'ಟಿವಿ ಚಾನಲ್‌ಗಳು' ಜನಜನಿತವೇ ಹೊರತು, 'ದೂರದರ್ಶನವಾಹಿನಿ'ಗಳಲ್ಲ. ಈ ದಿನಗಳಲ್ಲಿ ಇನ್ಶುರೆನ್ಸ್, ಕೋರ್ಟ, ಲಾಯರ್, ಕಂಡಕ್ಟರ್, ಸಬ್ಸಿಡಿ, ಸಿನಿಮಾ ಮುಂತಾದ ಪದಗಳು ಬಸ್ಸು, ಕಾರುಗಳಂತೆ ಕನ್ನಡ ಪದಗಳೇ ಆಗಿಬಿಟ್ಟಿವೆ. ಇವನ್ನು ಅನುವಾದಿಸುವಾಗ ಸಂಸ್ಕೃತಕ್ಕೆ ಮೊರೆಹೊಗುವುದು ಶುಷ್ಕಕ್ರಿಯೆಯೆಂದು ಆಧುನಿಕ ಭಾಷಾವಿಜ್ಞಾನಿಗಳ ಅಭಿಮತ. ಇದು ಸೂಕ್ತವಾದದ್ದು ಹೌದು. ನಿಮ್ಮ ಮಗ ಏನು ಮಾಡುತ್ತಿದ್ದಾನೆ? ಎಂಬ ಪ್ರಶ್ನೆಗೆ 'ಕನ್ನಡದ ಕಟ್ಟಾಭಿಮಾನಿಯೊಬ್ಬ' 'ಅಭಿಯಂತರ'ನಾಗಿದ್ದಾನೆ ಎಂದು ಉತ್ತರಿಸಿದರೆ

ಅರ್ಥಮಾಡಿಕೊಳ್ಳುವ ಮಂದಿ ಬಹಳ ಕಡಿಮೆ. ಇಂಜಿನಿಯರ್ ಎಂದರೆ ಎಂಥಾ ಅನಕ್ಷರಸ್ಥರಿಗೂ ಅರ್ಥವಾಗುತ್ತದೆ. ಭಾರತೀಯ ಭಾಷೆಗಳನ್ನಾಡುವ ಜನ ಜೀವಂತ ಸನ್ನಿವೇಶಗಳಲ್ಲಿ ಬಳಕೆಗೆ ಬಂದಿರುವ ಸ್ವೀಕರಣಗಳನ್ನು ಒಪ್ಪಿಕೊಳ್ಳಲು ಸಿದ್ಧರಿರುವಂತೆ ಪ್ರಾಚೀನ ಶಬ್ದಕೋಶದಿಂದ ತೆಗೆದುಕೊಂಡು ಟಂಕಿಸಿದ ಕೃತಕ ಪದಗಳನ್ನು ಒಪ್ಪಿಕೊಳ್ಳಲು ಸಿದ್ಧರಿರುವುದಿಲ್ಲ.

ಮೂಲ ಇಂಗ್ಲಿಶ್ ಶಬ್ದವನ್ನು ಕನ್ನಡಕ್ಕೆ ಸ್ವೀಕರಿಸಿದಾಗ ಅದರ ಉಚ್ಚಾರ ಕನ್ನಡದಲ್ಲಿ ಹಾಗೆ ಉಳಿದು ಬಂದಿರುವುದಿಲ್ಲ. ಅದನ್ನು ಸ್ವೀಕರಿಸಿದ ವಾರ್ತಾ ಉಚ್ಚಾರಣೆಯನ್ನದು ಅವಲಂಬಿಸಿರುತ್ತದೆ. ವೃತ್ತ ಪತ್ರಿಕೆಗಳಲ್ಲಿ ಇಂಗ್ಲಿಶ್ ಪದವನ್ನು ಹೇಗೆ ಕನ್ನಡ ಲಿಪಿಯಲ್ಲಿ ಬರೆದಿರುತ್ತಾರೆ ಎಂಬುದು ಆ ಇಂಗ್ಲಿಶ್ ಪದದ ಉಚ್ಚಾರಣೆಯನ್ನು ನಿರ್ಧರಿಸಬಹುದು. ಕನ್ನಡಿಗರ ಉಚ್ಚಾರಣೆ ಇಂಗ್ಲಿಶ್ ಕಾಗುಣಿತವನ್ನು ಬಹುಸಾರಿ ಅವಲಂಬಿಸಿರುವುದರಿಂದ, ಎಷ್ಟೋ ಶಬ್ದಗಳ ಕಾಗುಣಿತದ ಬಗ್ಗೆ ಅನಿರ್ದಿಷ್ಟತೆ ಕಾಣಿಸಿಕೊಳ್ಳಬಹುದು. ಥೇಟರ್, ಥಿಯೇಟರ್, ಅಫಿಡವಿಟ್–ಅಫಿಡಾವಿಟ್, ಅಕಾಡೆಮಿ–ಅಕಾದಮಿ–ಅಕಾಡಮಿ– ಅಕ್ಯಾಡಮಿ ಹೀಗೆ ಬಗೆಬಗೆಯಾಗಿ ಬರೆದು, ಬರೆದಂತೆಯೇ ಉಚ್ಚರಿಸುವುದನ್ನು ನಾವು ಕಾಣಬಹುದಾಗಿದೆ. ಇಂಗ್ಲಿಶ್–ಇಂಗ್ಲೀಶ್–ಇಂಗ್ಲಿಷ್ ಈ ಮೂರು ಬಗೆಯ ನಾವೀಗ ನೋಡುತ್ತಿದ್ದೇವೆ. ಈಗ ಬರಹವೆನ್ನುವುದು ಮನುಷ್ಯನಿಂದ ಯಂತ್ರಕ್ಕೆ ಹಸ್ತಾಂತರಗೊಂಡಿರುವುದರಿಂದ ಇಂತಹ ರೂಪಗಳಲ್ಲಿ ಯಾವುದೋ ಒಂದನ್ನು ಅಧಿಕೃತವೆಂದು ಉಳಿಸಿಕೊಳ್ಳಬೇಕಿದೆ. ಏಕೆಂದರೆ ಕಂಪ್ಯೂಟರಿನಲ್ಲಿ ಇಂಗ್ಲಿಶ್ ಬರಹಕ್ಕಿರುವ ಸ್ಪೆಲ್‌ಚೆಕ್ ಸೌಲಭ್ಯವಾದ ಕಾಗುಣಿತ ಪರೀಕ್ಷೆಯನ್ನು ಕನ್ನಡಕ್ಕೂ ಅಳವಡಿಸಬೇಕಾದರೆ ಇದು ಅನಿವಾರ್ಯ.

ಕನ್ನಡವು ಮೊದಲಿನಿಂದಲೂ ಸ್ವೀಕರಣ ಭಾಷೆಯೇ. ಅದು ಹಂಗೇರಿಯನ್ ಭಾಷೆಯಂತಲ್ಲ. ಆದರೂ ಕನ್ನಡಕ್ಕೆ ಸೃಜನ ಶಕ್ತಿ ಇದೆ. ಉದಾ–ಮೊಬೈಲ್ ಫೋನಿಗೆ ಸಂವಾದಿಯಾಗಿ ಜಂಗಮವಾಣಿ, ನೆಲುಲಿ ಮುಂತಾದ ಪದಗಳನ್ನು ಬಳಸಬಹುದೆಂದು ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಸಂವಾದ ನಡೆದಿತ್ತು. ಪ್ರಖ್ಯಾತ ಭಾಷಾವಿಜ್ಞಾನಿಗಳೂ, ಚಿಂತಕರೂ ಆದ ಡಾ.ಕೆ.ವಿ.ನಾರಾಯಣ ಅವರು ಪ್ರಜಾವಾಣಿಯ ಸಾಪ್ತಾಹಿಕ ಪುರವಣಿಗೆ ಬರೆಯುತ್ತಿರುವ ಪದಸಂಪದ ಅಂಕಣದಲ್ಲಿನ ಬರಹ ಶೈಲಿಯನ್ನು ಗಮನಿಸಬಹುದು. ಇದರಲ್ಲಿ ಅವರು ಸಂಸ್ಕೃತಾನುಕರಣದಿಂದ ಅರ್ಥಾತ್ ಪ್ರಮಾಣೀಕರಣದಿಂದ ಬಿಡಿಸಿ, ಸಹಜಾನುವಾದಗಳ ಆಯಾಮಗಳತ್ತ ಪ್ರಶ್ನಿಕರ ಗಮನವನ್ನು ಸೆಳೆಯುತ್ತಿದ್ದಾರೆ ಎನ್ನಿಸುತ್ತದೆ. ಉದಾಹರಣೆಗೆ ವ್ಯಾಕರಣದ ಬಗ್ಗೆ ಬರೆಯುವಾಗ ಸಂಸ್ಕೃತದ ನಾಮಪದಕ್ಕೆ ಬದಲಾಗಿ 'ಹೆಸರುಪದ'ವೆಂದೂ, ಕರ್ಮಪದಕ್ಕೆ ಬದಲಾಗಿ 'ಕೆಲಸಪದ'ವೆಂದೂ ಅವರು ಬಳಸುತ್ತಿರುವುದನ್ನು ಗಮನಿಸಬಹುದಾಗಿದೆ. ಅದೇ ರೀತಿ ಸಂಸ್ಕೃತದ ನಿಯಮವನ್ನು ಮೀರಿ ಕನ್ನಡದ 'ಕಟ್ಟನ್ನು' ಪಾಲಿಸಿದಂತೆ ತೋರುತ್ತದೆ.

‘ಅನ್ಯದೇಶ್ಯ’ ಪದಗಳನ್ನು ‘ದೇಶ್ಯ’ಕ್ಕೆ ಅನುವಾದಿಸುವಾಗ ಆ ‘ದೇಶ್ಯ’ಪದಗಳು ಅಚ್ಚಗನ್ನಡವಾಗಿರಬಹುದು. ಸಂಸ್ಕೃತವಾಗಿರಬಹುದು, ಪರ್ಸೋಅರೇಬಿಕ್ ಸಹ ಇರಬಹುದು. ಪರ್ಸೋಅರೇಬಿಕ್ ಪದಗಳು ಕನ್ನಡದ್ದೇ ಎಂಬಂತೆ ಸ್ವೀಕೃತವಾಗಿಬಿಟ್ಟಿವೆ. ಉದಾ. ಟೇಬಲ್=ಮೇಜು,

ಅನುವಾದವು ಶಬ್ದ ಮತ್ತು ಅರ್ಥ ಎರಡು ಸ್ತರಗಳಲ್ಲಿ ನಡೆಯುತ್ತದೆ. ಶಬ್ದದ ಮಟ್ಟದಲ್ಲಿ ಪದಶಃ ಅನುವಾದವಾಗಿರಬಹುದು ಅಥವಾ ಸ್ಥೂಲಾನುವಾದವಾಗಿರಬಹುದು. ಅರ್ಥದ ಮಟ್ಟದಲ್ಲಿ ಬರಿಯ ಭಾವವನ್ನು ತೆಗೆದುಕೊಂಡು, ದೇಶ್ಯ ಭಾಷೆಯಲ್ಲಿ ಅದನ್ನು ಅಭಿವ್ಯಕ್ತಪಡಿಸಿರಬಹುದು. ಕೆಳಗಿನವು ನೇರ ಅನುವಾದಕ್ಕೆ ಉದಾಹರಣೆಗಳು:

ಗೃಹಬಂಧನ– house arrest

ಬರಿಗಾಲು ವೈದ್ಯ– bare foot doctor

ಪತ್ರಿಕಾ ಸ್ವಾತಂತ್ರ್ಯ– freedom of press

ಅಜೇಯ ಶತಕ– unbeaten centuary

ಶೀತಲ ಸಮರ– cold war

ಪತ್ರಿಕೆಗಳಲ್ಲಿ ಕೆಲವು ಕಡೆ ‘ಗುದ್ದಿನ ಪರಿಣಾಮ’ (punch effect)ಕ್ಕಾಗಿ ಕೆಲವು ವಿಶಿಷ್ಟ ರಚನೆಗಳನ್ನು ಬಳಸುತ್ತಾರೆ. ಚೊಚ್ಚಲ ಶತಕ, ವಿಜಯದ ಹೊಸ್ತಿಲಲ್ಲಿ ಎಡವಿದ ಭಾರತ ಮುಂತಾದವು. ‘ಚೊಚ್ಚಲು’ ಅಚ್ಚಗನ್ನಡ ಪದ, ‘ಶತಕ’ ಸಂಸ್ಕೃತ ಪದ ಹೀಗಾಗಿ ಇದು ಅರಿಸಮಾಸ. ಹೀಗೆ ಭಾಷಾ ಆಧುನೀಕರಣ ಕೇಶಿರಾಜನ ವ್ಯಾಕರಣ ನಿಯಮಗಳಿಗೆ ವಿರುದ್ಧವಾಗಿ ಪ್ರವಹಿಸುತ್ತಿರುತ್ತದೆ.

**ಅಂಧಾನುವಾದ :** ಅಸಂಬದ್ಧವಾದ ಅರ್ಥವನ್ನು ಸ್ವೀಕರಣಭಾಷೆಯು ಹೊಮ್ಮಿಸುವುದನ್ನು ಹೀಗೆ ಕರೆಯಬಹುದು. ಇದು ಮೂಲಕ್ಕಿಂತ ಅನುವಾದವೇ ಕ್ಲಿಷ್ಟವೆನಿಸುವ ರೀತಿಯದು. ಮೂಲದ ಅರ್ಥ ಸ್ವಯಂವೇದ್ಯವಾಗುವಂತಿದ್ದರೂ ಅನುವಾದವನ್ನು ಅವರ ಇಂಗ್ಲಿಶ್ ಮೂಲಕ್ಕೆ ನಾವು ಅನುವಾದಿಸಿಕೊಂಡು ಅದರ ಇಂಗ್ಲಿಶ್ ಮೂಲಕ್ಕೂ ನಾವು ಅರ್ಥವೇನೆಂದು ಗ್ರಹಿಸಬೇಕಾಗುತ್ತದೆ. ಉದಾ–cabinet ಎಂಬ ಪದವನ್ನು ಗಮನಿಸಬಹುದು. ಇದಕ್ಕೆ ಎರಡು ಭಿನ್ನ ಅರ್ಥಗಳಿವೆ. ಒಂದು ಮಂತ್ರಿಗಳು ಸಮಾಲೋಚನೆಗೆ ಸೇರುತ್ತಿದ್ದ ಕೊಠಡಿ ಅಥವಾ ಮಂತ್ರಿ ಮಂಡಲ. ಇನ್ನೊಂದು ಪೆಟ್ಟಿಗೆಯಂತಹ ವಸ್ತು, a case, (ಟೀವಿ ಕ್ಯಾಬಿನೆಟ್ ಎಂಬ ಪದವನ್ನು ನೀವು ಕೇಳಿರುತ್ತೀರಿ) ಕನ್ನಡದಲ್ಲಿ ಈ ಪದವನ್ನು ಇಂಗ್ಲಿಶಿನ ಎರಡನೇ ಅರ್ಥವನ್ನು ಇಟ್ಟುಕೊಂಡು ಬಳಸಲಾಗಿದೆ. ಅಂದರೆ ಸಂಪುಟ ಎನ್ನುವ ಪದಕ್ಕೆ ಸಂಸ್ಕೃತ ಹಾಗೂ ಕನ್ನಡ ಎರಡೂ ಭಾಷೆಗಳಲ್ಲಿ ಇಲ್ಲದ ಹೊಸ ಅರ್ಥ ಈಗ

ಪ್ರಾಪ್ತವಾಗಿದೆ. ಖಾತೆ ಎನ್ನುವ ಪದ ಕುರಿತಂತೆಯೂ ಹೀಗೆ ಆಗಿದೆ. ಶ್ರೀ.ಯವರಿಗೆ ಗೃಹಖಾತೆ – ಈ ವಾಕ್ಯದಲ್ಲಿ ಖಾತೆ=cabinet ಅದೇ ಇನ್ನೂ ಖಾತೆ ತೆರೆಯದ ಸಚಿನ್, ಈ ವಾಕ್ಯದಲ್ಲಿ ಖಾತೆ=account. ಇದೆ ರೀತಿಯ ಹಲವು ಗೊಂದಲಗಳನ್ನು ನಾವು ಪತ್ರಿಕೆಗಳಲ್ಲಿ ಕಾಣಬಹುದು. ಈ ಗೊಂದಲಗಳನ್ನು ಆಯಾ ಸಂದರ್ಭಕ್ಕೆ ತಕ್ಕ ಹಾಗೆ ಅರ್ಥಮಾಡಿಕೊಳ್ಳುವ ಮೂಲಕ ಪರಿಹರಿಸಿಕೊಳ್ಳಲಾಗುತ್ತದೆ ಎಂಬುದು ಬೇರೆ ಮಾತು. ಆದರೂ ಭಾಷಾಂತರದಲ್ಲಿ ಆದಷ್ಟೂ ಖಚಿತತೆ ಇರುವುದು ಮುಖ್ಯ.

ಹೊಸಹೊಸ ಉಕ್ತಿಗಳ ಟಂಕೀಕರಣಕ್ಕೆ (coinage) ಸಂಸ್ಕೃತವೇ ನಮಗೆ ಮುಖ್ಯ ಆಕರವಾಗಿತ್ತು. ಇಂಧನ ಸಮಸ್ಯೆಗೆ ಅಣುವಿದ್ಯುತ್ ಶಾಶ್ವತ ಪರಿಹಾರ= (atomic power is the only permanent solution for fuel problem), ಮಧ್ಯಂತರಗಾಮಿ ಖಂಡಾಂತರ ಕ್ಷಿಪಣಿ = (ballistic intercontinenental missile) ಅಣುಶಕ್ತಿ = nuclear power, ಸ್ಥಾವರ=tower, ಇತ್ಯಾದಿ.

ಪತ್ರಿಕೆಗಳು ಅನೇಕ ಸಂದರ್ಭಗಳಲ್ಲಿ ಭಾವವನ್ನು ಅನುವಾದಿಸುತ್ತವೆ; ಪದವನ್ನಲ್ಲ. ದ್ವಿಪಕ್ಷೀಯ–bilateral, ವ್ಯಕ್ತಿಗಳ ಹಿತಾಸಕ್ತಿ=vested interest, ಅವಶೇಷಗಳು=debris, ಜರೂರು, ತುರ್ತು, ಆಪತ್ಕಾಲ, ವಿಷಮಕಾಲ= emergency ಹೀಗೆ ಇವಕ್ಕೆಲ್ಲಾ ಒಂದೇ ಅನುವಾದ ಸೂಕ್ತವಲ್ಲ. ಕ್ರಮವಾಗಿ haste, quick, difficult time, extreme ಇವು ಸಮಂಜಸ ಅನುವಾದಗಳೆನಿಸುತ್ತವೆ. ಕನ್ನಡದಲ್ಲಿ home and house ಗಳಿಗೆ ಸೂಕ್ತವಾದ ಅನುವಾದ ಪದಗಳು ಸಿಗುವುದು ಕಷ್ಟ. ಡಾ.ಎಂ.ಚಿದಾನಂದ ಮೂರ್ತಿಯವರು home= 'ಬಾಳ್ಮನೆ' ಎಂಬ ಪದವನ್ನು ಸೂಚಿಸಿದ್ದಾರೆ. ಆದರೆ ಇದೆಲ್ಲಾ ಸಾಹಿತ್ಯಕ ಪ್ರಯೋಗಗಳಾಗಿ ಕಾಣಿಸುವಂತವು. ಜನಬಳಕೆಯಲ್ಲಿ ಸಲೀಸಾಗಿ ಬೆರೆಯುವುದು ಸುಲಭವಲ್ಲ.

ಭಾವಾನುವಾದದದಲ್ಲಿ ಭಾವವನ್ನು, ಭೌತಿಕ ವಸ್ತುವನ್ನು ಕ್ರಿಯೆಯನ್ನು ವಿವರಿಸಲಾಗುತ್ತದೆ. writer ಎಂಬುದನ್ನು 'ಬೆರಳಚ್ಚು ಯಂತ್ರ', shorm hand= ಶೀಘ್ರಲಿಪಿ, air hostes=ಗಗನಸಖಿ, commentary=ವೀಕ್ಷಕ ವಿವರಣೆ, live relay=ನೇರಪ್ರಸಾರ (ಜೀವಂತ ಅಲ್ಲ) ಮುಂತಾಗಿ.

**ಕಸಿರೂಪಗಳು**: ಒಂದು ಭಾಗವನ್ನು ಮಾತ್ರ ಅನುವಾದಿಸಿ ಉಳಿದರ್ಧ ಭಾಗವನ್ನು ಹಾಗೆಯೇ ಉಳಿಸಿಕೊಳ್ಳುವುದರಿಂದ ಸೃಷ್ಟಿಯಾಗುವ ರೂಪಗಳಿವು. ಬೃಹತ್ ರ್‍ಯಾಲಿ= mammoth rally, ಅಗ್ನಿ ಶಾಮಕ ಇಂಜಿನ್ನು=fire brigade engine, ಕೈಪಂಪು=hand pump, ನಿಗದಿತ ಓವರ್= limited over. ಫಿಲ್ಮೋತ್ಸವ ಫಿಲ್ಮ+ಉತ್ಸವ= ಫಿಲ್ಮುತ್ಸವ ಆಗಬೇಕಿತ್ತು. ಇದು ಗುಣಸಂಧಿಯಾಗಿದೆ. ಇದು ತಪ್ಪು.

ಇಂಥ ತಪ್ಪಿಗೆ ಕಾರಣ ಅನುವಾದಕರ ಕಣ್ಣಮುಂದೆ ರಾಜ್ಯೋತ್ಸವದಂತಹ ಪದವಿರುವುದು. ಇಂತಹ ತಪ್ಪುಗಳು ಮಾನ್ಯವೇ ಆಗಿರುತ್ತವೆ. ಓದುಗರಿಗೆ ಸುಲಭವಾಗಿ ಬಳಸಲು, ಗ್ರಾಹ್ಯವಾಗುವುದಷ್ಟೆ ಮುಖ್ಯ.

ಈಗಾಗಲೇ ಬಳಕೆಯಲ್ಲಿರುವ ಹೊಸ ಅರ್ಥಗಳನ್ನು ಆರೋಪಿಸುವುದು ಇನ್ನೊಂದು ಇಲ್ಲಿ ಸಾಂಪ್ರದಾಯಿಕ ಅರ್ಥಗಳನ್ನು ಹೊಂದಿಸುವುದು ಮುಖ್ಯವಾಗಿರುತ್ತದೆ. ಮುಟ್ಟುಗೋಲು (confiscate) ಇದು ಅಚ್ಚಗನ್ನಡದ ಪದ. ಒಂದು ವಿವಾದ ಎದ್ದಾಗ ಆ ವಿವಾದವು ಪರಿಹಾರವಾಗುವ ತನಕ ಮನೆಯಿಂದ ಏನನ್ನೂ ಯಾರೂ ಕೊಂಡೊಯ್ಯುವಂತಿಲ್ಲ ಎಂದು ವಿಧಿಸಿ ಹಳ್ಳಿಯವರು ಅಡ್ಡಲಾಗಿ ಹಾಕುವ ಕೋಲೇ 'ಮುಟ್ಟುಗೋಲು' ಆದರೆ ಈಗ ಸರ್ಕಾರವು ವಶಕ್ಕೆ ತೆಗೆದುಕೊಳ್ಳುವುದು ಎನ್ನುವ ಅರ್ಥವನ್ನು ಪಡೆದುಕೊಂಡಿದೆ.

ಪಡಿತರ= A measure of grain, ಈಗ Ration ಎಂಬ ಅರ್ಥದಲ್ಲಿ ಬಳಸಲಾಗುತ್ತಿದೆ. ಹಿಂದೆ ಇದು ದೇವಾಲಯಗಳಿಗೆ ಕೊಡುತ್ತಿದ್ದ ನಿರ್ದಿಷ್ಟ ಪ್ರಮಾಣದ ಧಾನ್ಯವನ್ನು ಸೂಚಿಸುತ್ತಿತ್ತು.

**ಡೈಗ್ಲಾಸಿಯಾ:** ಔಪಚಾರಿಕ ಹಾಗೂ ಅನೌಪಚಾರಿಕ ಸಂದರ್ಭಗಳಿಗೆ ಬೇರೆ ಬೇರೆ ಪದಗಳು ಬಳಕೆಯಾಗುವ ಬಗೆಗೆ ಭಾಷಾವಿಜ್ಞಾನದಲ್ಲಿ ಹೀಗೆ ಕರೆಯುತ್ತಾರೆ. ಅಪ್ಪ, ಉಪ್ಪು, ಕೆಲಸ, ಎಲೆಅಡಿಕೆ (ಅನೌಪಚಾರಿಕ), ತಂದೆ, ಲವಣ, ಕಾರ್ಯ, ತಾಂಬೂಲ(ಔಪಚಾರಿಕ). ಪತ್ರಿಕೆಗಳಲ್ಲಿ ಹೆಚ್ಚಾಗಿ ಔಪಚಾರಿಕ ನೆಲೆ ಕಾಣಿಸಿಕೊಳ್ಳುತ್ತದೆ. ಏಕೆಂದರೆ ಬರಹವನ್ನು ಅವಲಂಬಿಸಿರುವುದರಿಂದ ಅಡುಮಾತು ಬಹುಪಾಲು ಅನೌಪಚಾರಿಕವಾಗಿರುತ್ತದೆ. ಸುದ್ದಿಗೆ ತೀವ್ರತೆಯನ್ನು ತಂದು ಕೊಡಲು ಕೆಲವೊಮ್ಮೆ ಭಾವನಾತ್ಮಕ ಭಾಷೆಯನ್ನು ಪತ್ರಿಕೆಗಳು ಬಳಸುತ್ತವೆ. ಉದಾ–

ಮಣ್ಣಿನ ಮಕ್ಕಳ ಮೇಲೆ ಪೋಲಿಸ್ ಪ್ರಹಾರ, ಇದನ್ನು ಇಂಗ್ಲಿಶಿನಲ್ಲಿ lotty charge on soil sons ಎಂದು ಅನುವಾದಿಸಲಾಗುವುದಿಲ್ಲ. ರೈತರು, ವ್ಯವಸಾಯಿಗಳು, ಅನ್ನದಾತ ಮುಂತಾದ ಪರ್ಯಾಯ ಪದಗಳು ಪತ್ರಿಕೆಗಳಲ್ಲಿ ಬಳಕೆಯಾಗುವ ಸಂದರ್ಭಗಳು ಈ ದೃಷ್ಟಿಯಿಂದ ಅಧ್ಯಯನ ಯೋಗ್ಯವಾಗಿವೆ.

ಒಮ್ಮೊಮ್ಮೆ ಪತ್ರಿಕೋದ್ಯಮಿ ಆಕಸ್ಮಿಕವಾಗಿ ಉಪಯುಕ್ತ(productive)ವಾದ ಪದವೊಂದನ್ನು ಸೃಷ್ಟಿಸಿ ಬಳಸಬಹುದು. ಉದಾ: grower=ಬೆಳೆಗಾರ, ಆದರೆ ಅದನ್ನು ಮತ್ತೆ ಮತ್ತೆ ಬಳಸದಿದ್ದಲ್ಲಿ ಮತ್ತು ಅದನ್ನು ಇತರ ಪತ್ರಿಕೆಯವರು ಅಳವಡಿಸಿಕೊಳ್ಳದಿದ್ದಲ್ಲಿ ಅದು ಹಾಗೆಯೇ ಸತ್ತು ಹೋಗಬಹುದು. ಇದಕ್ಕೆ ಉದಾ: ಮರಕಟುಗ ನಿರ್ದಯವಾಗಿ ಮರಗಳನ್ನು ಕಡಿಯುವವನು. ಆದರೆ ಕೆಲವೊಮ್ಮೆ ನವಪದ ನಿರ್ಮಾಣದಲ್ಲಿ ಯಾವುದನ್ನು ಸ್ವೀಕರಿಸಬೇಕು, ಮತ್ಯಾವುದನ್ನು ಬಿಡಬೇಕು ಎಂಬುದರ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ನಿದರ್ಶನಕ್ಕೆ ಇಂಗ್ಲಿಶಿನ handicapped ಪದಕ್ಕೆ ಸಂವಾದಿಯಾಗಿ ಕನ್ನಡದ ಪತ್ರಿಕೆಗಳು

'ಅಂಗವಿಕಲರು', 'ವಿಕಲಾಂಗರು' ಮತ್ತು 'ವಿಕಲ ಚೇತನರು' ಎಂಬ ಮೂರು ಪದಸಮುಚ್ಚಯಗಳನ್ನು ಬಳಸುವುದನ್ನು ಕಾಣಬಹುದು. ವಿಕಲ ಚೇತನ ಎನ್ನುವ ಪದ ಚೇತನಕ್ಕೆ ವೈಕಲ್ಯ ಅಂಟಿದೆ ಎಂಬ ಸಂಕುಚಿತ ಅರ್ಥದಿಂದ ಕೂಡಿದೆ. ಹೀಗಾಗಿ ಇಂತಹ ಪದಗಳನ್ನು ಟಂಕಿಸುವ ಮುನ್ನ ಅವು ಪಡೆದುಕೊಳ್ಳುವ ಅರ್ಥದ ಆಯಾಮಗಳ ಕಡೆ ಸೂಕ್ಷ್ಮ ಗಮನ ಅಗತ್ಯವಾಗಿರುತ್ತದೆ. ಇಂಗ್ಲಿಶಿನಲ್ಲಿ ಇನ್ನೊಂದು ಬಗೆಯಲ್ಲೂ ಅಂಗವಿಕಲತೆಯನ್ನು ಹೇಳುವುದಿದೆ. ಅದು physically challenged ಎಂದು. ಇದನ್ನು ದೈಹಿಕವಾಗಿ ಸವಾಲಿಗೆ ಒಳಗಾದವರು ಎಂದು ವಾಕ್ಯ ಮಾಡಿ ಅನುವಾದಿಸಲಾಗದು.

**ಶಬ್ದಾನುವಾದ (Literal translation or meta phrase)**: ಮೂಲದ ಶಬ್ದಕ್ಕೆ ಬದಲಾಗಿ ಸ್ವೀಕರಣ ಭಾಷೆಯ ಸಂವಾದಿ ಶಬ್ದಗಳನ್ನು ತರುವುದನ್ನು ಹೀಗೆನ್ನುತ್ತಾರೆ. ಇದನ್ನು word forword ಎಂತಲೂ ವ್ಯಾಖ್ಯಾನಿಸುತ್ತಾರೆ. ಎಲ್ಲಾ ಅನುವಾದಗಳ ಮೊದಲ ಕರಡು ಪ್ರತಿ ಇಂಥದೇ ಆಗಿರುತ್ತದೆ. ನುಡಿಗಟ್ಟುಗಳು, ಗಾದೆಗಳು ಮತ್ತು ಧಾರ್ಮಿಕ, ಸಾಮಾಜಿಕ ಅಂಶಗಳು ಅನುವಾದದ ಚೌಕಟ್ಟಿಗೆ ನಿಲುಕುವುದಿಲ್ಲ. ಸಹೃದಯನಿಗೆ ಇಂಗ್ಲಿಶಿನಲ್ಲಿ ಸಂವಾದಿ ಪದವಿಲ್ಲ. 'Heartful person' ಎನ್ನಬಹುದೇನೋ? ಆದರೆ ಇದು 'ಸಹೃದಯ' ಪದದ ಅರ್ಥಗಾಂಭಿರ್ಯ ಹೊಂದಿಲ್ಲ. ಸಾಹಿತಿಗೆ ಸಮಾನವಾದ ಸಂವೇದನಾಶೀಲ ಹೃದಯವನ್ನುಳ್ಳವನು ಎಂಬ ಅರ್ಥ ಇಂಗ್ಲಿಶಿನ ಈ ಪದ ಹೊರಹೊಮ್ಮಿಸಬಾರದು. ಈ ಎಲ್ಲ ದೃಷ್ಟಿಯಿಂದ ಪತ್ರಿಕೆಗಳಲ್ಲಿ ಬಳಕೆಯಾಗುವ ಪದಗಳ ಕೋಶವೊಂದನ್ನು ತಯಾರಿಸುವ ಅಗತ್ಯವಿದೆಯೆನಿಸುತ್ತದೆ.

ಆಧುನೀಕರಣವೆಂಬುದು ಒಂದು ಸಾಮಾಜಿಕ ಪ್ರಕ್ರಿಯೆ. ಸಮಾಜದ ಪ್ರಗತಿಯ ಜೊತೆ ಭಾಷೆಯೂ ತನ್ನ ಹೆಜ್ಜೆಯನ್ನು ಹಾಕಬೇಕು ಮತ್ತು ಸಂವಹನ ಸಾಮರ್ಥ್ಯ(communication effeciancy)ದಲ್ಲಿ ಸಮಾಜಕ್ಕೆ ಸಹಾಯವಾಗಿ ನಿಲ್ಲಬೇಕು. ಕನ್ನಡ ವೃತ್ತ ಪತ್ರಿಕೆಗಳು ಈ ನಿಟ್ಟಿನಲ್ಲಿ ದೊಡ್ಡ ಪಾತ್ರವನ್ನು ವಹಿಸಿವೆ. ಅದರ ಜತೆಗೆ ತಮ್ಮ ಭಾಷೆಗೆ ವೈವಿದ್ಯಮಯ ಉಪಭಾಷೆಗಳ ಹಿನ್ನೆಲೆಯಿದೆಯೆಂಬುದನ್ನು ಅವು ಸ್ವಲ್ಪಮಟ್ಟಿಗೆ ಮರೆತಂತೆ ಕಾಣುತ್ತದೆ. ಶಿಷ್ಟಭಾಷೆಗಳ ಮೂಲ ಪದರದಂತಿರುವ ಉಪಭಾಷೆಗಳೇ ಶಿಷ್ಟಭಾಷೆಗಳಿಗೆ ಜೀವನಾಡಿಗಳು. ಶಿಷ್ಟ ಭಾಷೆಗಳು ಬೆಳೆಯಬೇಕಾದರೆ ಉಪಭಾಷೆಗಳಿಂದ ಚೈತನ್ಯವನ್ನು ಪಡೆದುಕೊಳ್ಳಬೇಕು. ಅನ್ಯಭಾಷೆಗಳಿಂದಲ್ಲ.

ಫಿಲಿಫೈನ್ಸಿನ 'ತಲಿಬ' ಎಂಬ ಹೆಸರಿನ ವೃತ್ತ ಪತ್ರಿಕೆ ಸಾಮಾನ್ಯರ ಭಾಷೆಯನ್ನು ಬಳಸುವುದರ ಮೂಲಕ ತನ್ನ ಪ್ರಸಾರವನ್ನು ಹೆಚ್ಚಿಸಿಕೊಂಡ ನಿದರ್ಶನಗಳಿವೆ. ಡಿ.ಎನ್. ಶಂಕರಭಟ್ಟರ 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ', 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ' ಮುಂತಾದ ಕೃತಿಗಳನ್ನು ಈ ನಿಟ್ಟಿನಲ್ಲಿ ಗಮನಿಸಬಹುದು. ನಮ್ಮ ವೃತ್ತ ಪತ್ರಿಕೆಗಳು ಒಂದೆಡೆ ಅತಿಯಾದ ಸಂಸ್ಕೃತೀಕರಣ ಮಾಡುತ್ತಿವೆ.

ಇನ್ನೊಂದೆಡೆ ಆಂಗ್ಲೀಕರಣಕ್ಕೆ ತುತ್ತಾಗಿವೆ. ನಿದರ್ಶನಕ್ಕೆ ಇತ್ತೀಚೆಗಿನ ವಿಜಯಕರ್ನಾಟದ ಪತ್ರಿಕೆಯ ಈ ತಲೆಬರಹಗಳನ್ನು ಗಮನಿಸಬಹುದು.

೧. ಅಲರ್ಜಿ ಬಗ್ಗೆ ಅಲರ್ಟ್ ಆಗಿರಿ

೨. ಗಲ್ಲಿ ಗಾಸಿಪ್

೩. ಬ್ಲಾಗಾಕಾರ

೪. +ve ಥಿಂಕಿಂಗ್

ಈ ದಿನಗಳಲ್ಲಿ ಸಮೂಹ ಮಾಧ್ಯಮಗಳಲ್ಲಿ ಬಳಕೆಯಾಗುವ ಪದಕೋಶ ಅಗಾಧ ಪ್ರಮಾಣದ ಪಲ್ಲಟಗಳನ್ನು ಕಾಣುತ್ತಲಿದೆ. ಮುಖ್ಯವಾಗಿ ಕನ್ನಡದ ಪದಕೋಶದ ಜೊತೆಗೆ ಇಂಗ್ಲಿಶ್, ಸಂಸ್ಕೃತ, ಪರ್ಸೋ-ಆರೆಬಿಕ್ ಮತ್ತು ಕನ್ನಡದ ಇತರ ಉಪಭಾಷೆಗಳಿಂದ ಪದಗಳನ್ನು ಪಡೆದುಕೊಳ್ಳುತ್ತಿರುವುದನ್ನು ನೋಡಬಹುದು. ಸಾಮಾನ್ಯವಾಗಿ ಕನ್ನಡ ಮತ್ತು ಇಂಗ್ಲಿಷ್ ಪದಗಳ ಮಿಶ್ರಿತ ರೂಪಗಳನ್ನು ವಾಣಿಜ್ಯ, ಆಟೋಟ, ವೈದ್ಯಕೀಯ, ತಾಂತ್ರಿಕ ಭಾಷಾ ಬರಹಗಳಲ್ಲಿ ಕಾಣುತ್ತೇವೆ. ವರದಿ, ವ್ಯಾಖ್ಯಾನ ಮತ್ತು ವೈಚಾರಿಕ ಬರಹಗಳ ಸಂದರ್ಭದಲ್ಲಿ ಸಂಸ್ಕೃತ ಪದಗಳನ್ನು ಹೆಚ್ಚಾಗಿ ಬಳಸುತ್ತಾರೆ. ಇವಲ್ಲದೆ ಕನ್ನಡದ ಇತರ ಪ್ರದೇಶಗಳ ಬಳಕೆ ಹಾಸ್ಯ ಮತ್ತಿತರ ಲಘುಬರಹಗಳಲ್ಲಿ ಹೆಚ್ಚಾಗಿ ಬಳಕೆಯಾಗುತ್ತದೆ. ಈ ವಿಭಜನೆಗೆ ತರ್ಕಬದ್ಧವಾದ ಕಾರಣಗಳಿಲ್ಲ. ಆದರೆ ಹೀಗೆ ಮಾಡುತ್ತಿರುವುದು ಎಲ್ಲರಿಗೂ ಗೊತ್ತಾಗುವ ಒಪ್ಪಿಕೊಂಡಂತಿರುವ ಸಂಗತಿಯಾಗಿದೆ. ಮಾಧ್ಯಮಗಳು ಕನ್ನಡ ಬಳಕೆಯಲ್ಲಿ ಬರಹವನ್ನು ಆಧರಿಸಿರುವ ಮಾಧ್ಯಮಗಳು ಹೆಚ್ಚು ಶುದ್ಧತೆಯ ಕಡೆಗೆ ಒತ್ತನ್ನು ನೀಡುತ್ತವೆ. ಶುದ್ಧತೆ ಎಂದರೇನು? ಸಾಮಾನ್ಯವಾಗಿ ಮೂರು ನೆಲೆಗಳನ್ನು ಶುದ್ಧಭಾಷೆಯ ಲಕ್ಷಣಗಳನ್ನು ಹೇಳುವಾಗ ಬಳಸಿಕೊಳ್ಳಲಾಗುತ್ತದೆ.

೧. ಬರಹದಲ್ಲಿ ಕಾಗುಣಿತ ದೋಷ ಇಲ್ಲದಿರುವುದು.

೨. ಅಪಶಬ್ದಗಳ ಪ್ರಯೋಗ ಇಲ್ಲದಿರುವುದು

೩. ವ್ಯಾಕರಣ ಬದ್ಧವಾದ ಭಾಷೆಯನ್ನು ಬಳಸಬೇಕೆಂಬುದು

ಸಾಮಾನ್ಯವಾಗಿ ಮುದ್ರಿತ ಭಾಷೆಯನ್ನು ಅವಲಂಬಿಸಿರುವ ಮಾಧ್ಯಮಗಳೆಲ್ಲವೂ ಈ ಕಟ್ಟುಪಾಡನ್ನು ಎಡೆಬಿಡದೆ ಒಪ್ಪಿಕೊಂಡು ಅನುಸರಿಸುತ್ತವೆ. ಉಳಿದ ಕೆಲವು ವಿವರಣೆಗಳು ಅಪವಾದಗಳಷ್ಟೆ.

**ಕಂಪ್ಯೂಟರ್ ಮತ್ತು ಯಂತ್ರನುವಾದ :** ಅಂತರ್ಜಾಲದಲ್ಲಿ 'ಜಾಗತಿಕ ಹಳ್ಳಿ' ಎಂಬ ಪರಿಕಲ್ಪನೆ ಅತ್ಯಂತ ಸ್ಪಷ್ಟವಾಗಿ ಸಾಕಾರಗೊಂಡಿದೆ. ಆದರೆ ಇಲ್ಲೂ ಸಮಸ್ಯೆಗಳಿವೆ. ಇಂಗ್ಲಿಶ್ ಬಾರದವರು ಇಂಗ್ಲಿಶ್ ಪತ್ರಿಕೆಯಲ್ಲಿರುವ ವಿಷಯವೊಂದನ್ನು ತಿಳಿಯಬೇಕೆಂದರೆ ಹೇಗೆ? ಕನ್ನಡ ಬಾರದ ಜಪಾನಿಯನೊಬ್ಬ ಕನ್ನಡ ಪತ್ರಿಕೆಯೊಂದನ್ನು ಓದಬೇಕೆಂದರೆ ಏನು ಮಾಡಬೇಕು? ಹೀಗೆ ಅವರವರು ತಂತಮ್ಮ ಭಾಷೆಗಳಿಗೆ

ಅಂಟಿಕೊಳ್ಳುವುದಾದರೆ ಅಂತರ್ಜಾಲದಲ್ಲಿ ಜಾಗತೀಕರಣದ ಪರಿಕಲ್ಪನೆ ವಿಫಲವಾದಂತಲ್ಲವೇ? ಇದಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ಫೇಸ್‌ಬುಕ್ ಹಾಗೂ ಗೂಗಲ್ ವೆಬ್ ಸಂಸ್ಥೆಗಳು ನಡೆಸಿವೆ.

ಬ್ಲಾಗ್‌ಗಳ ಆರಂಭವಾದ ನಂತರ ಅಂತರ್ಜಾಲದಲ್ಲಿ ಪ್ರಾದೇಶಿಕ ಭಾಷೆಗಳ ಕಲರವ ದೊಡ್ಡ ಪ್ರಮಾಣದಲ್ಲಿಯೇ ಕಾಣಿಸಿಕೊಂಡಿದೆ. ಇಂಗ್ಲಿಶಿನ ಹಂಗಿಲ್ಲದೆ ತಮ್ಮ ತಮ್ಮ ಭಾಷೆಗಳಲ್ಲಿಯೇ ಬ್ಲಾಗುಗಳನ್ನು ಬರೆಯುವ ಈ–ಸಾಕ್ಷರರು ಸಾಕಷ್ಟು ಮಂದಿ ಇದ್ದಾರೆ. ಇದರಿಂದಾಗಿ ಭಾರತದ ಪ್ರಾದೇಶಿಕ ಭಾಷೆಯಲ್ಲಿನ ಮಾಹಿತಿಯನ್ನು ಅನುವಾದದ ಮೂಲಕ ವಿದೇಶಿಯನೊಬ್ಬ ಪಡೆಯಬಹುದಾಗಿದೆ. ಪರಿಸರ ಭಾಷೆಯಲ್ಲಿಯೇ ಮಾಹಿತಿಯನ್ನು ಒದಗಿಸುವ ಉಪಾಯವಿದು. ಹಿಂದಿ, ಮರಾಠಿ, ತಮಿಳು, ತೆಲುಗು.. ಹೀಗೆ ಈಗಾಗಲೇ ಇದರಲ್ಲಿ ೬೦ ಭಾಷೆಗಳಿಗೆ ಅನುವಾದಗೊಳ್ಳುವ ಸೌಲಭ್ಯವಿದೆ. ಕನ್ನಡಕ್ಕೆ ಈ ಲಾಭ ಇನ್ನೂ ದಕ್ಕಿಲ್ಲವೆನ್ನುವುದು ಖೇದದ ಸಂಗತಿ.

ಅನುವಾದ ಸಾಗರ ಸದೃಶ ಈ ಪ್ರಕ್ರಿಯೆಯಲ್ಲಿ ಸಾವಿರಾರು ಭಾಷಾಂತರಕಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿ ಇನ್ನೂ ಅಗತ್ಯಕ್ಕೆ ತಕ್ಕಷ್ಟು ಬಹುಭಾಷಾಕೋವಿದರು ಸಿಗುತ್ತಿಲ್ಲ. ಗೂಗಲ್ ನೆಚ್ಚಿಕೊಂಡಿರುವ ಕಂಪ್ಯೂಟರ್ ಆಧಾರಿತ ಅನುವಾದವನ್ನು. ಸಾಂಪ್ರದಾಯಿಕ ಅನುವಾದದ ಶೈಲಿಗಳನ್ನು, ಸಾಧ್ಯತೆಗಳನ್ನು ಕಂಪ್ಯೂಟರ್‌ಗೆ ಉಣಿಸಿ ಮಾಡುವ ಅನುವಾದವಿದು. ಕಂಪ್ಯೂಟರ್ ಆಧಾರಿತ ಅನುವಾದದಲ್ಲಿ ಮತ್ತೊಂದು ಸವಲತ್ತಿದೆ. ಓದುಗ ತನ್ನಿಷ್ಟದ ಸುದ್ದಿಯೊಂದನ್ನು ತನ್ನ ಭಾಷೆಗೆ ಅನುವಾದಿಸಿಕೊಂಡು ಓದಬಹುದಾಗಿದೆ.

ಪ್ರಸ್ತುತ ಇರುವ ಪ್ರಶ್ನೆ ಮನುಷ್ಯರ ಮೂಲಕ ನಡೆಯುವ ಸಾಂಪ್ರದಾಯಿಕ ಅನುವಾದ ಹೆಚ್ಚು ಪಕ್ವವೋ ಅಥವಾ ಕಂಪ್ಯೂಟರ್ ಅನುವಾದ ಹೆಚ್ಚು ಪರಿಪಕ್ವವೋ ಎನ್ನುವುದು. ಯಂತ್ರಾಧಾರಿತ ಈ ಅನುವಾದದಲ್ಲಿ ಪ್ರಾದೇಶಿಕ ಭಾವನೆ ತರಲು ಸಾಧ್ಯವಿದೆಯೇ? ಇಂತಹ ಆರೋಪಗಳನ್ನು ಪರಿಣಿತರ ಅನುವಾದ ಬರಹಗಳಲ್ಲಿಯೂ ಹುಡುಕಬಹುದಾಗಿದೆ ಎನ್ನುವುದು ಇದಕ್ಕೆ ವಿರುದ್ಧವಾದ ಒಂದು ವಾದ. ಈ ವಾದಕ್ಕೆ ಪೂರಕವಾಗಿ ಆಧುನಿಕ ಜಗತ್ತಿನ ಪ್ರಮುಖ ಲಕ್ಷಣಗಳಾದ ಗಾತ್ರ ಹಾಗೂ ವೇಗ ಯಂತ್ರಗಳಿಗಷ್ಟೇ ಸಾಧ್ಯವೆಂಬ ತರ್ಕವೂ ಇದೆ.

**ಅನುವಾದ ಹೇಗಿರಬೇಕು? :** ಬೇಕಾದಷ್ಟು ಆಂಗ್ಲ ಪುಸ್ತಕಗಳನ್ನು ಹಾಗೇ ಕನ್ನಡಕ್ಕೆ ಅಚ್ಚಳಿಸಿದ್ದೇನೆ. ಸುದ್ದಿ ಅನುವಾದ ಯಾವ ಲೆಕ್ಕ ಎಂಬ ಅತಿಯಾದ ಆತ್ಮವಿಶ್ವಾಸ ಸಲ್ಲದು. ಪುಸ್ತಕಗಳ ಲೈನ್ ಟು ಲೈನ್, ವರ್ಡ್ ಟು ವರ್ಡ್ ಟ್ರಾನ್ಸ್‌ಲೇಷನ್‌ಗೂ ಸುದ್ದಿಗಳ ಭಾಷಾಂತರಕ್ಕೂ ಕೊಂಚ ವ್ಯತ್ಯಾಸವಿದೆ. ಪುಸ್ತಕಗಳ ಗಾತ್ರ ಹಿರಿದು. ಹೀಗಾಗಿ ಪುಸ್ತಕದಲ್ಲಿರಬೇಕಾದ ವಿಷಯಗಳು ಸಂಪೂರ್ಣ ವಿವರಗಳೊಂದಿಗೆ ಅಡಕವಾಗಿರುತ್ತದೆ. ಅಷ್ಟರ ಮಟ್ಟಿನ ವಿವರಗಳು ಪುಸ್ತಕ ಓದುಗರಿಗೆ ಬೇಕಾಗುತ್ತವೆ. ಆದರೆ, ಪತ್ರಿಕಾಲಯದಲ್ಲಿ ಈ ರೀತಿ

ಬರೆಯುತ್ತಾ ಕೂತರೆ ಅದು ಸುದ್ದಿ ಎನಿಸಿಕೊಳ್ಳದು. ಜಾಹೀರಾತುಗಳು ಆಕ್ರಮಿಸಿಕೊಂಡು ಉಳಿದ ಸ್ಥಳದಲ್ಲಿ ಮುಖ್ಯ ಸುದ್ದಿಗಳನ್ನೆಲ್ಲಾ ತೂರಿಸುವ ಕೆಲಸವಾಗಬೇಕು. ಪತ್ರಿಕೆಗಳಲ್ಲಿ ಎಲ್ಲಾ ಸುದ್ದಿಗಳಿಗೂ ಕಾಲು ಚಾಚಿ ಮಲಗುವಷ್ಟು ಜಾಗವಿರುವುದಿಲ್ಲ. ಮಹತ್ವಕ್ಕನುಗುಣವಾಗಿ ಕೆಲವನ್ನು ಕಣ್ಣಿಗೆ ಕಾಣುವಂತೆ ಪತ್ರಿಕೆಯ ಪುಟಗಳ ಮೇಲೆ ಹಾಸಿದ್ದರೆ, ಕೆಲವು ಸುದ್ದಿಗಳು ಗರ್ಭದಲ್ಲಿನ ಮಗುವಿನಂತೆ ಕೈಕಾಲು ಮುದುರಿಕೊಂಡು ಕುಳಿತಿರುತ್ತವೆ. ಆದರೆ ಇವರಡೂ ಸಾಕಷ್ಟು ಮಾಹಿತಿಯನ್ನು ಓದುಗರಿಗೆ ರವಾನಿಸುತ್ತಿರುತ್ತವೆ. ಸಣ್ಣ, ಸಣ್ಣ ಸುದ್ದಿಗಳಲ್ಲೂ ಹತ್ತಾರು ಮಾಹಿತಿ ಅಡಕವಾಗಿರುವಂತೆ ಬರೆಯುವ ಸಾಮರ್ಥ್ಯ ಸುದ್ದಿ ಅನುವಾದಕನಿಗೆ ಬೇಕಾಗುತ್ತದೆ.

**ರೇಡಿಯೊ-ಟೀವಿ ಕನ್ನಡದಲ್ಲಿ ಅನುವಾದ-ನುಡಿಬೆರಕೆ :** ಇವೆರಡೂ ಇಲೆಕ್ಟ್ರಾನಿಕ್ ಮಾಧ್ಯಮಗಳು ಬಳಸುವುದು ಮಾತನ್ನು. ಬರಹವನ್ನು ಇವು ಅವಲಂಬಿಸಿದರೂ, ಅದು ಬಳಕೆಯಾಗುವುದು ವಾಕ್ ರೂಪದಲ್ಲೇ ಹೀಗೆ ಬರೆದುಕೊಂಡು ಓದುವ ಕಾರಣಕ್ಕೋ ಏನೋ ಅನೇಕ ಸಂದರ್ಭಗಳಲ್ಲಿ ಇಲ್ಲಿನ ನುಡಿ ಸಹಜವೆನಿಸದೆಯೂ ಇರಬಹುದು. ಕನ್ನಡದಲ್ಲಿ ಎರಡು ಮಾದರಿ ಇಂಗ್ಲಿಶ್ ಪದಗಳು ಬಳಕೆಯಲ್ಲಿವೆ. ಒಂದು ಕನ್ನಡ ಪದದ ಅರ್ಥದಲ್ಲೇ ಇಂಗ್ಲಿಶ್ ಪದಗಳ ಬಳಕೆ. ಎರಡು, ಇಂಗ್ಲಿಶ್ನಿಂದ ಕನ್ನಡಕ್ಕೆ ನೇರ ಅನುವಾದದ ಮಾದರಿಯ ವಾಕ್ಯಗಳು. ಕನ್ನಡದಲ್ಲಿ ಇಂಗ್ಲಿಶ್ ಪದಗಳು ಮೇಲಿನ ಎರಡು ಮಾದರಿಯಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಈ ಮಾದರಿಯ ಬಳಕೆ ಮಾತಿನಲ್ಲಿ ಮಾತ್ರ ಬರಹದಲ್ಲಿ ಕಡಿಮೆ, ಎಂತಹ ಅನಕ್ಷರಸ್ಥನ ಮಾತಿನಲ್ಲೂ ಇಂಗ್ಲಿಷ್ ಪದಗಳು ಸಲೀಸಾಗಿ ಬಳಕೆಯಾಗುತ್ತಿರುತ್ತವೆ. ಈ ಮಾದರಿಯ ಬಳಕೆ ಕನ್ನಡದ ಭಾಷಾಕಟ್ಟುಗಳ ವಿರುದ್ಧವಾಗಿಲ್ಲ. ನಮ್ಮ ಕನ್ನಡ ಟಿ.ವಿ., ರೇಡಿಯೊಗಳಲ್ಲಿ ನಿರೂಪಣೆ ಮಾಡುವವರ ಕನ್ನಡ ಮಾತಿನಲ್ಲಿ ಇಂಗ್ಲಿಶ್ ಬಳಕೆ ಹೆಚ್ಚಾಗಿದೆ. ಈ ಮಾದರಿ ಬಳಕೆಯ ಕನ್ನಡ, ಕನ್ನಡ ಬೆಳವಣಿಗೆಗೆ ಅಡ್ಡಿಯುಂಟುಮಾಡುತ್ತದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಈ ಮಾತನ್ನು ಆಡುತ್ತಿರುವವರು ಕನ್ನಡ ಭಾಷೆಯನ್ನು ಭಾವನಾತ್ಮಕವಾಗಿಯೂ, ಉದ್ವೇಗದಿಂದಲೂ ನೋಡುತ್ತಿದ್ದಾರೆ ಎಂದೆನಿಸುತ್ತದೆ. ಭಾಷೆಯ ಸೈದ್ಧಾಂತಿಕ ಚೌಕಟ್ಟಿನ ಹಿನ್ನೆಲೆಯಲ್ಲಿ ಬಂದಂತಹ ಅಭಿಪ್ರಾಯ ಇದಲ್ಲ. ಈ ಪ್ರಕ್ರಿಯೆಯನ್ನು ಒಂದು ನಿದರ್ಶನದ ಮೂಲಕ ನೋಡಬಹುದು. "ಇದು ಬಹಳ ಒಳ್ಳೆಯ ಸಾಂಗ್" ಎಂಬ ರಚನೆ ಅನಕ್ಷರಸ್ಥನಿಗೂ ಅರ್ಥವಾಗುತ್ತದೆ. ಈ ವಾಕ್ಯದಲ್ಲಿ ಸಾಂಗ್ ಇಂಗ್ಲಿಶ್ ಪದವಾಗಿದ್ದರೂ ಕನ್ನಡಿಗರೂ ಅದನ್ನು 'ಹಾಡು' ಎಂಬ ಮನಸ್ಥಿತಿಯಲ್ಲೇ ಸ್ವೀಕರಿಸುತ್ತಾರೆ. ಇಲ್ಲಿ ರಚನೆಯಲ್ಲಿ ಮಾತ್ರ ವ್ಯತ್ಯಾಸವಾಗಿದ್ದು, ಅರ್ಥದಲ್ಲಿ ಒಂದೇ ಆಗಿದೆ.

ಆದರೆ ಟಿ.ವಿ.ಕಾರ್ಯಕ್ರಮಗಳು ಬಹುಪಾಲು ಇಂಗ್ಲಿಶ್ ನಿರೂಪಣೆಯನ್ನು ಅಂಧಾನುವಾದ ಮಾಡುವುದರಿಂದ ಕೆಲವು ಅಚಾತುರ್ಯಗಳು ಸಂಭವಿಸುತ್ತವೆ. ನಮ್ಮ ವಾಹಿನಿಗಳಲ್ಲಿ ಬಹಳವಾಗಿ ಬಳಸುವ ವಾಕ್ಯ–

೧. ಈಗ ಒಂದು ಸ್ಮಾಲ್ ಬ್ರೇಕ್

೨. ಈಗ ಒಂದು ಚಿಕ್ಕ ಬ್ರೇಕ್

೩. ಈಗ ಒಂದು ಸಣ್ಣ ಬ್ರೇಕ್

೪. ಈಗ ಒಂದು ಪುಟ್ಟ ಬ್ರೇಕ್

ಈ ನಾಲ್ಕು ವಾಕ್ಯಗಳು 'ನೌ ಎ ಸ್ಮಾಲ್ ಬ್ರೇಕ್' ಎನ್ನುವುದಕ್ಕೆ ಸಂವಾದಿಯಾಗಿ ಬಳಕೆಯಾಗಿವೆ. ಆದರೆ ಈ ವಾಕ್ಯಗಳು ಕನ್ನಡದ ಸಂದರ್ಭದ ವಾಕ್ಯದ ರಚನೆಗೆ ಅನುಗುಣವಾಗಿ ರಚನೆಯಾಗಿಲ್ಲ. ಇವು ಇಂಗ್ಲಿಶ್ ವಾಕ್ಯರಚನೆಗೆ ಅನುಗುಣವಾಗಿವೆ. ಕನ್ನಡದಲ್ಲಿ 'ಚಿಕ್ಕ', 'ಪುಟ್ಟ' ಮತ್ತು 'ಸಣ್ಣ' ಪದಗಳಿಗೆ ಅರ್ಥಭೇದವಿದೆ. ಇವಳು ನಮ್ಮ 'ಚಿಕ್ಕ ಮಗಳು' ಎನ್ನುವಲ್ಲಿ 'ಚಿಕ್ಕ' ಪದದ ಜಾಗದಲ್ಲಿ 'ಸಣ್ಣ' ಎಂದು ಬಳಕೆ ಮಾಡುವುದಕ್ಕೆ ಬರುವುದಿಲ್ಲ. ನಮ್ಮ ಮಗಳು ತುಂಬಾ 'ಸಣ್ಣ' ಎನ್ನುವಲ್ಲಿ 'ಸಣ್ಣ' ಪದದ ಜಾಗದಲ್ಲಿ 'ಚಿಕ್ಕ' ಪದವನ್ನು ಬಳಕೆ ಮಾಡಲು ಬರುವುದಿಲ್ಲ. "ನಮ್ಮ ಮನೆಯಲೊಂದು ಪುಟ್ಟ ಪಾಪವಿರುವುದು" ಈ ವಾಕ್ಯದಲ್ಲಿನ 'ಪುಟ್ಟ' ಸ್ಥಳದಲ್ಲಿ ಸಣ್ಣ ಇಲ್ಲವೇ ಚಿಕ್ಕ ಪದಗಳು ಹೊಂದಿಕೆಯಾಗಲಾರವೆನ್ನುವುದನ್ನು ಗಮನಿಸಬಹುದು. ನಿರೂಪಕರು ಇಂಗ್ಲಿಶಿನ 'ಸ್ಮಾಲ್'ಗೆ ಸಂವಾದಿಯಾಗಿ ಕನ್ನಡದಲ್ಲಿ 'ಸಣ್ಣ' ಮತ್ತು 'ಚಿಕ್ಕ' ಹಾಗೂ 'ಪುಟ್ಟ' ಎಂಬ ರೂಪಗಳನ್ನು ಬಳಸುತ್ತಿದ್ದಾರೆ. 'ಸಣ್ಣ' ಎನ್ನುವುದನ್ನು ನಕಾರಾತ್ಮಕ ಅರ್ಥದಲ್ಲೂ ಕನ್ನಡದಲ್ಲಿ ಬಳಸುತ್ತಾರೆ. "ಅವನು ಬಹಳ ಸಣ್ಣ ಮನುಷ್ಯ" ಎಂದರೆ ಇದು ಗಾತ್ರಕ್ಕೆ ಸಂಬಂಧಿಸಿದ್ದಾಗುವುದಿಲ್ಲ. ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಪುಟ್ಟ ಎನ್ನುವುದನ್ನು ಮಕ್ಕಳಿಗೆ ಸಂಬಂಧಿಸಿದಂತೆ ಹೇಳುವಾಗ ಬಳಸುತ್ತೇವೆ. ಚಿಕ್ಕ ವಿಷಯ, ಸಣ್ಣ ವಿಷಯ ಎನ್ನುವ ಹಾಗೆ ಪುಟ್ಟವಿಷಯವೆಂದು ಬಳಸುವುದು ತಪ್ಪಾಗುತ್ತದೆ. ಇದು ಕನ್ನಡ ಭಾಷೆಯ ಜಾಯಮಾನ. ಹೀಗಾಗಿ ಅರ್ಥವ್ಯತ್ಯಾಸಗಳ ಬಗೆಗೆ ಅನುವಾದಕರಿಗೆ ಅರಿವಿರಬೇಕು. ಆಯಾ ಭಾಷೆಗಳ ಕಟ್ಟುಗಳ ಬಗೆಗೂ ತಿಳಿದಿರಬೇಕು. ಪ್ರತಿ ಭಾನುವಾರ ರಾತ್ರಿ ಈಟಿವಿ ಕನ್ನಡದಲ್ಲಿ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮವನ್ನು ಡಾ.ಎಸ್.ಪಿ.ಬಾಲಸುಬ್ರಮಣ್ಯಂ ಅವರು ನಡೆಸಿಕೊಡುತ್ತಿದ್ದರು. ಅವರು ಸಾಮಾನ್ಯವಾದ ವಿಚಾರಗಳನ್ನು ಮಾತನಾಡುವಾಗ ತಮಿಳುಭಾಷೆಯ ಉಚ್ಚಾರಣೆಯೊಂದಿಗೆ ಇಂಗ್ಲಿಶ್ ವಾಕ್ಯರಚನೆಯನ್ನು ಕನ್ನಡಕ್ಕೆ ಅನುವಾದ ಮಾಡುತ್ತಿದ್ದರು. ಉದಾಹರಣೆಗೆ; ಅವರು ಕಾರ್ಯಕ್ರಮದ ನಡುವೆ, "ಈಗ ನಾವು ಒಂದು ಸಣ್ಣ ವಿರಾಮ ತಕ್ಕೊಳ್ತೀವಿ", ಅಥವಾ "ಈಗ ನಾವು ಒಂದು ಚಿಕ್ಕ ವಿರಾಮ ತಕ್ಕೊಳ್ತೀವಿ" ಎನ್ನುತ್ತಿದ್ದರು. ಮೇಲಿನ ವಾಕ್ಯಗಳಲ್ಲಿ ಸಮಯವನ್ನು ಕುರಿತು

ಹೇಳಬೇಕಾಗಿರುವುದರಿಂದ 'ಚಿಕ್ಕ' ಮತ್ತು 'ಸಣ್ಣ' ಪದಗಳನ್ನು ಬಳಕೆ ಮಾಡುವುದರ ಬದಲು 'ಸ್ವಲ್ಪ' ಪದವನ್ನು ಬಳಕೆ ಮಾಡಿದರೆ ಹೇಗೆ? 'ಹಿಂದಿಯಲ್ಲಿ ತೋಡಿ ದೇರ್ ಬಾದ್' ಎಂದು ಬಳಸುವುದನ್ನು ಗಮನಿಸಿ. "ಸ್ವಲ್ಪ ಸಮಯದ ನಂತರ" ಎನ್ನುವುದು ಕನ್ನಡಕ್ಕೆ ಹೆಚ್ಚು ಹೊಂದಿಕೆಯಾಗಬಲ್ಲದು. ಇಲ್ಲಿ ತಪ್ಪು ಸರಿಯ ಪ್ರಶ್ನೆಗಿಂತ ಕನ್ನಡ ಬಳಕೆಯ ವಿಧಾನಗಳು ಹೇಗೆ ವಿಸ್ತರಿಸಿಕೊಳ್ಳುತ್ತಿವೆ ಎನ್ನುವುದನ್ನು ಗಮನಿಸುವುದು ಮುಖ್ಯವಾದದ್ದು.

ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಬಳಕೆಯಾಗುತ್ತಿರುವ ಕನ್ನಡ ಭಾಷೆಯ ಸ್ವರೂಪವು ಕೇವಲ ಭಾಷಿಕ ಬದಲಾವಣೆಯ ದೃಷ್ಟಿಯಿಂದಷ್ಟೇ ಮುಖ್ಯವಾದುದಲ್ಲ. ಅದು ಜಾಗತೀಕರಣದ ಈ ಸಂದರ್ಭದಲ್ಲಿನ ಸಾಮಾಜಿಕ–ಸಾಂಸ್ಕೃತಿಕ ಪಲ್ಲಟಗಳನ್ನು ಹೇಗೆ ಪ್ರತಿನಿಧಿಸುತ್ತದೆ ಎನ್ನುವ ದೃಷ್ಟಿಯಿಂದಲೂ ಗಮನಾರ್ಹವೆನಿಸುತ್ತದೆ. ನಮ್ಮ ಹೆಚ್ಚಿನ ಟಿ.ವಿ ಧಾರಾವಾಹಿಗಳು ನಗರದ ಮೇಲ್ಮಧ್ಯಮವರ್ಗವನ್ನು ಕೇಂದ್ರೀಕರಿಸಿಕೊಂಡಿರುತ್ತವೆ. ಗ್ರಾಮೀಣ ಬದುಕು, ಭಾಷೆಗಳು ಇಲ್ಲಿ ಬಹುಪಾಲು ಗೈರುಹಾಜರಾಗಿರುತ್ತದೆ. (ಇದಕ್ಕೆ ಅಲ್ಲೊಂದು ಇಲ್ಲೊಂದು ಅಪವಾದವೂ ಇರಬಹುದು) ವೀಕ್ಷಕರೂ ಸಹ ಶ್ರೀಮಂತವರ್ಗದವರೇ ಎನ್ನುವ ಗ್ರಹಿಕೆ ನಿರೂಪಣೆಗೆ ಬಳಸುವ ಭಾಷೆಯಲ್ಲಿ ಅಂತರ್ಗತವಾಗಿರುತ್ತದೆ. ನಿದರ್ಶನಕ್ಕೆ ಟೀವಿಗನ್ನಡದಲ್ಲಿ ಅಡುಗೆ ಕಾರ್ಯಕ್ರಮದಲ್ಲಿ ಬಳಕೆಯಾಗುವ ಭಾಷಾಸ್ವರೂಪವನ್ನು ಗಮನಿಸಬಹುದು. 'ಪ್ರಿಯ ವೀಕ್ಷಕರೆ ಇವತ್ತಿನ, ನಮ್ಮ ಅಡುಗೆಮನೆ ಗೆಸ್ಟ್ ಯಾರು ಗೊತ್ತಾ.... ಅವರು ಶ್ರೀಮತಿ... ಎಂದು ನಿರೂಪಕಿ ಪರಿಚಯಿಸುತ್ತಾರೆ. ಇವತ್ತು ಮಾಡೋ ಡಿಶ್ ಎನಾಪ್ಪಂದ್ರೆ ಗ್ರೀನ್ ವೆಜಿಟೆಬಲ್ ಮಸಾಲಾ. ಮೊದಲು ಸ್ಟವ್ ಆನ್ ಮಾಡಿ. ಅದರ ಮೇಲೆ ಕುಕ್ಕರ್ ಇರಿಸಿ, ಗ್ರೀನ್ ವೆಜಿಟೆಬಲ್ಸ್ ತಕೊಂಡು ಸ್ಮಾಲ್ ಸ್ಮಾಲ್ ಪೀಸ್‌ಗಳಾಗಿ ಕಟ್ ಮಾಡಿಕೊಳ್ಳಿ. ಆಯಿಲ್ನಲ್ಲಿ ಸ್ವಲ್ಪ ಫ್ರೈ ಮಾಡಿಕೊಳ್ಳಿ. ಕ್ಲೀನ್ ಆಗಿ ಮಿಕ್ಸ್ ಮಾಡ್ತಾ ಸರ್ವಿಂಗ್ ಬೌಲ್‌ಗೆ ಹಾಕಿ, ತಯಾರಾಗಿರುವ ರಾ ಟೋಮೋಟೋ ಪೀಸ್‌ಗಳಿಂದ ಡೆಕೊರೇಟ್ ಮಾಡಿ ಸರ್ವ್ ಮಾಡಬೇಕು. ಈಗ ನೋಡಿ ಗ್ರೀನ್ ವೆಜಿಟೆಬಲ್ ಮಸಾಲಾ ರೆಡಿ! ಓ ಸಾರಿ, ಮೊದ್ಲು ಇದರ ಟೇಸ್ಟ್ ನೋಡೋಣ. ಎಷ್ಟ್ ಲವ್ಲಿಯಾಗಿ ಇದೆಯಲ್ಲಾ ಫೆಂಟಾಸ್ಟಿಕ್! ಎಂದು ಪ್ರೇಕ್ಷಕರ ಬಾಯಲ್ಲಿ ನೀರೂರಿಸುತ್ತಾಳೆ. ಆದರೆ ಕನ್ನಡ ಭಾಷಾಭಿಮಾನಿಗಳಲ್ಲಿ ಆತಂಕ ಮೂಡಿಸುತ್ತಾಳೆ. ಈ ಮಾದರಿಯು ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವರಿಗೆ ಮಾತ್ರ ಎನಿಸುತ್ತದೆ ಕನ್ನಡ ಸಿನಿಮಾ ನಟಿಯರು ತಮಗೆ ಕನ್ನಡ ಬರುವುದಿಲ್ಲ ಎಂದು ತೋರಿಸಿಕೊಡುವಂತಹ ಕನ್ನಡಾಂಗ್ಲವನ್ನು ಸಂದರ್ಶನಗಳಲ್ಲಿ ಬಳಸುತ್ತಾರೆ. ಇದು ಕೀಳರಿಮೆಯ ಅಭಿವ್ಯಕ್ತಿ.

ಬದಲಾದ ಜೀವನ ಕ್ರಮದಲ್ಲಿ ಅಡುಗೆ ಮನೆಯಲ್ಲಿ ಬಳಕೆಯಾಗುತ್ತಿದ್ದ ಕನ್ನಡದ ಅನೇಕ ಕ್ರಿಯಾಪದಗಳಿಂದು ಕಣ್ಮರೆಯಾಗಿವೆ. 'ಡೈಲಿನೀಡ್ಸ್' ಮಾರುಕಟ್ಟೆ ಬರುವುದಕ್ಕಿಂತ ಮೊದಲು ದವಸ

ಧಾನ್ಯಗಳನ್ನೆಲ್ಲಾ ಮನೆಯಲ್ಲೇ ಹೆಂಗಸರು ಶುಚಿಮಾಡಿ ಒಂದು ಕಡೆ ಇರಿಸುತ್ತಿದ್ದರು. ಜತೆಗೆ ಒಂದೊಂದು ಶುಚಿಮಾಡುವ ಕ್ರಿಯೆಯನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದರು. ಹಗುರವಾದ ಮೊರದಲ್ಲಿ ಶುಚಿಮಾಡುವಾಗ ಹೊಟ್ಟುಗಳು ಮೊರದ ಮುಂದೆ ಬರುವ ಕ್ರಿಯೆಗೆ 'ಕೇರುವುದು' ಎಂದು ಬಳಕೆ ಮಾಡುತ್ತಿದ್ದರು. ಹಾಗೆಯೇ ಕಲ್ಲು ಮತ್ತಿತರ ಬೇಡವಾದ ಹೊಟ್ಟುಗಳನ್ನು ಮೊರದ ಹಿಂಬದಿಗೆ ಬರುವ ಕ್ರಿಯೆಗೆ ಕೆಲವು ಪ್ರದೇಶಗಳಲ್ಲಿ 'ವನೆಯುವುದು' ಎಂದು ಬಳಕೆಯಲ್ಲಿತ್ತು. ಅದೇ ರೀತಿ ಅಕ್ಕಿ, ಗಸಗಸೆ, ಎಳ್ಳು ಮುಂತಾದ ಪದಾರ್ಥಗಳನ್ನು ಶುಚಿ ಮಾಡಬೇಕಾದರೆ ಅದನ್ನು ಪಾತ್ರೆಯಲ್ಲಿ ಹಾಕಿ ಮುಳುಗುವಷ್ಟು ನೀರನ್ನು ಹಾಕಿ ಬೆರಳುಗಳಿಂದಲೇ ಪದಾರ್ಥವನ್ನು ನೀರಿನಲ್ಲಾಡಿಸುತ್ತಾ ಮೇಲೆ ತೆಗೆದು, ಕಲ್ಲನ್ನು ನೀರಿನಲ್ಲಿ ಪಾತ್ರೆ ತಳದಲ್ಲಿ ಉಳಿಯುವಂತೆ ಮಾಡುವುದಕ್ಕೆ 'ಜಾಲಿಸುವುದು' ಎಂದು ಕರೆಯುತ್ತಾರೆ. (ಅಡಿಗರ 'ಭೂಮಿಗೀತಾ'ದ "ಜಾಮೂನು ನಾದದಲಿ ಜಾಲಿಸಿದಳು" ನೆನಪಿಸಿಕೊಳ್ಳಿ) ಆದರೆ ಮೇಲಿನ ಎಲ್ಲಾ ಸಾಲುಗಳನ್ನು ಕನ್ನಡದ ಕ್ರಿಯಾಪದಗಳನ್ನು ಇಂಗ್ಲಿಶಿನ 'ಕ್ಲೀನ್' ಪದವು ಕ್ಲೀನ್ ಮಾಡಿಬಿಟ್ಟಿದೆ. ಇದೇ ರೀತಿ ತಿಕ್ಕು, ತೊಳೆ, ಬೆಳಗು ಮುಂತಾದ ಪದಗಳ ಬದಲಿಗೆ 'ವಾಶ್' ಬಂದಿದೆ. ಹುರಿಯುವುದು, ಕರಿಯುವುದು, ಬಾಡಿಸುವುದು ಮೊದಲಾದ ಪದಗಳ ಬದಲು ಫ್ರೈ ಅಷ್ಟೇ ಬಳಕೆಯಾಗುತ್ತಿದೆ. ಇಂತಹಾ ಭಾಷಾ ಪಲ್ಲಟಗಳ ಬಗ್ಗೆ ಇನ್ನಷ್ಟು ಗಮನಹರಿಸಬೇಕಿದೆ.

**ಎಫ್.ಎಂ. ಕನ್ನಡ – ಎರಡು ಅಭಿಪ್ರಾಯಗಳು :** ಎಫ್.ಎಂ. ವಾಹಿನಿಗಳಲ್ಲಿ ರೇಡಿಯೋ ಜಾಕಿಗಳು ಬಳಸುತ್ತಿರುವ ಕನ್ನಡ ಭಾಷೆಯನ್ನು ಕುಲಗೆಟ್ಟ ಕನ್ನಡ ಎಂದು ಬಣ್ಣಿಸುವುದು ವಾಡಿಕೆಯಾಗಿದೆ. ಈ ರೇಡಿಯೋ ಜಾಕಿಗಳು ತಾವು ಮಾತನಾಡುವ ಕನ್ನಡದಲ್ಲಿ ಹೆಚ್ಚಾಗಿ ಇಂಗ್ಲಿಶ್ ಭಾಷೆಯ ಪದಗಳನ್ನು ಬೆರೆಸುವುದು ಮತ್ತು 'ಅಷ್ಟು ಸಭ್ಯವಲ್ಲದ' ಪದಗಳನ್ನು ಬಳಸುವುದು ಕೆಲವರಿಗೆ ಅವರ ಭಾಷೆ ಕುಲಗೆಟ್ಟಂತೆ ತೋರಲು ಕಾರಣವಾಗಿದೆ. ಇಲ್ಲಿ ಇಂಗ್ಲಿಶ್ ಪದಗಳು ಬೆರೆತುಕೊಳ್ಳುವುದು ನಮಗೆ ಇಷ್ಟವಾಗದ ವಿಷಯ. ಹಾಗೆ 'ಬೆರೆಸದ ಕನ್ನಡ'ವನ್ನು ಬಳಸುವ ವಾಹಿನಿಗಳ ಕನ್ನಡವನ್ನು ಎಚ್ಚರದಿಂದ ಗಮನಿಸಿದರೆ ಅಲ್ಲಿ ಹೆಚ್ಚು ಸಂಸ್ಕೃತ ಪದಗಳು ಕನ್ನಡದಲ್ಲಿ ಬೆರೆತಿರುತ್ತವೆನ್ನುವುದು ಗೊತ್ತಾಗುತ್ತದೆ. ನಮಗೆ ಅದು 'ಶುದ್ಧ ಕನ್ನಡ' (ಕೆಲವರಿಗೆ ಅಚ್ಚಗನ್ನಡ)ದಂತೆ ತೋರುತ್ತದೆ. 'ಮೇಸೇಜ್ ಮಾಡಿ' ಎನ್ನುವುದರ ಬದಲು 'ಸಂದೇಶ ಕಳಿಸಿ' ಎನ್ನುವುದು ನಮಗೆ ಸರಿಯಾಗಿ ತೋರುವುದೇಕೆ? ನಮ್ಮ ವಿರೋಧ ಇಂಗ್ಲಿಶ್ ಬಗೆಗೆ ಇರುವಂತಿದೆ. ಹೀಗೆ ಕನ್ನಡವನ್ನು 'ಕುಲಗೆಡಿಸುತ್ತಿರುವವರು ನಾವೇನೇ ಹೇಳಲಿ ಕನ್ನಡವನ್ನೇ ಮಾತನಾಡುತ್ತಿರುತ್ತಾರೆ. ಕನ್ನಡದ ವ್ಯಾಕರಣದ ನಿಯಮಗಳನ್ನು ಅವರು ಮೀರುತ್ತಿರುವುದಿಲ್ಲ'. ಒಟ್ಟಾರೆ ಒಂದು ಮಾತಂತೂ ನಿಜ. ರೇಡಿಯೋ ಜಾಕಿಗಳ ಕನ್ನಡ ಕನ್ನಡದ ಒಂದು ಸಾಧ್ಯತೆಯೇ ಹೊರತು ಅದು 'ಕುಲಗೆಟ್ಟ ಕನ್ನಡ'ವಲ್ಲ.

**– ಡಾ. ಕೆ.ವಿ. ನಾರಾಯಣ**

ರೋಚಕವಾದ ಸಂಗತಿಗಳನ್ನು ಹೇಳಲು ಎಫ್.ಎಂ. ಜನ ಹಲವು ಭಾಷೆಗಳನ್ನು ಬಳಸುತ್ತಾರೆ. ಹೀಗೆ ಒಂದೇ ವಾಕ್ಯದಲ್ಲಿ ಹಲವು ಭಾಷೆಗಳನ್ನು ಬಳಸುವ ಅವರು, ಅದನ್ನೇ ಕನ್ನಡ ಅಂದು ಕೊಳ್ಳುತ್ತಿರುತ್ತಾರೆ. ಹೀಗಾಗಿ ನಮ್ಮ ಮಕ್ಕಳೆಲ್ಲ ಅದನ್ನೇ ರೂಢಿ ಮಾಡಿಕೊಳ್ಳುತ್ತಾರೆ. ನಂತರ ಅದೇ 'ಕರ್ನಾಟಕದ ಭಾಷೆ' ಆಗಿ ಬೆಳೆದು ಬಿಡುತ್ತೆ, ರೋಚಕತೆ ಇಟ್ಕೊಂಡು ಮಕ್ಕಳ ಮನಸ್ಸನ್ನು ಕೆಡಿಸುತ್ತಿರುವ ಇವರು ಹೀಗೆ ಕನ್ನಡವನ್ನು ಬಳಸುತ್ತಿದ್ದರೆ ಅದೇ ಒಂದು ಪ್ರಮಾಣೀಕರಿಸಲ್ಪಟ್ಟ ಭಾಷೆಯಾಗಿಬಿಡುತ್ತದೆ. ಇದು ದೊಡ್ಡ ಅಪಾಯ.

**– ಡಾ. ಚಂದ್ರಶೇಖರ ಕಂಬಾರ,**

ಈ ಎಲ್ಲಾ ನೆಲೆಗಳಿಂದ ಮಾಧ್ಯಮಗಳಲ್ಲಿ ಬಳಕೆಯಾಗುವ ಕನ್ನಡದ ಸ್ವರೂಪ ಹಾಗೂ ಅನುವಾದವು ಅಲ್ಲಿ ವಹಿಸುವ ಪಾತ್ರದ ನೆಲೆಗಳನ್ನು ನೋಡಬಹುದಾಗಿದೆ.